ಸಂವಾದ

ಸೆಪ್ಟೆಂಬರ್ 2003 ರೂ. 10/- ಮಾಸ ಪತ್ರಿಕೆ

ಮೀಸಲಾತಿ ಮಹಾಚರ್ಚೆ

- ಬ್ರಾಹ್ಮಣರಿಗೆ ಆತ್ಮ ಗೌರವವಿದೆಯೇ?
- ಲಿಂಗಾಯತ ಮಠಾಧೀಶರಿಗೊಂದು ಬಹಿರಂಗ ಪತ್ರ

ಪ್ರೊ. ರವಿವರ್ಮಕುಮಾರ್ ವರದಿ ಶಿಫಾರಸು

ಅಂತರ್ಜಾತಿ ವಿವಾಹಿತರಿಗೆ ಮೀಸಲಾತಿ

ಸಂವಾದ

ಮಾಸ ಪತ್ರಿಕೆ

ಸಂಪುಟ 1 ಸಂಚಿಕೆ 11

ಸೆಪ್ಟೆಂಬರ್ 2003

ಸಂಪಾದಕ :

ಇಂದೂಧರ ಹೊನ್ನಾಪುರ

ನೆರವು :

ಕೆಪಿ ದೊಡ್ಡಿ ಶಿವರಾಂ

ಹಾಲ್ಕುರಿಕೆ ಶಿವಶಂಕರ್

ಸುಬ್ಬು ಹೊಲೆಯಾರ್

ವಿಳಾಸ : ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿರಸ್ತೆ

ವಿಶ್ವನೀಡಂ ಅಂಚೆ

ಬೆಂಗಳೂರು - 560 091

ದೂರವಾಣಿ : 3287943 / 3281667

PRINTED AND PUBLISHED BY
S. R. GOVINDU
ON BEHALF OF SPOORTHIDHAMA
ANJANANAGARA, MAGADI ROAD
VISHWANEEDAM POST
BANGALORE - 560 091
PHONE : 3287943, 3281667

EDITOR :
INDUDHARA HONNAPURA

ಒಳ ಪುಟಗಳಲ್ಲಿ

- ಪತ್ರಗಳು 3
- ಮೇರಾ ಭಾರತ್ ಮಹಾನ್ 4
- ಅಂತರಂಗ 5
- ಬ್ರಾಹ್ಮಣರಿಗೆ ಆತ್ಮ ಗೌರವವಿದೆಯೇ?
  ○ ಅರವಿಂದ ಚೊಕ್ಕಾಡಿ 6
- ಮಹಿಳೆಯರ ಬದುಕು ಜಾಗತೀಕರಣ ಇತ್ಯಾದಿ 9
- ಲಿಂಗಾಯತ ಮಠಾಧೀಶರಿಗೆ ಬಹಿರಂಗ ಪತ್ರ 10
- ದಲಿತ್ ಡೈರಿ-ಮೀಸಲಾತಿಯ ಮಹಾ ಚರ್ಚೆ
  ○ ಚಂದ್ರಭಾನ್ ಪ್ರಸಾದ್ 14
- ಪುಸ್ತಕ ವಿಮರ್ಶೆ-ಭಾರತೀಯ ವಿಜ್ಞಾನದ ಹಾದಿ 18
- ಮೀಸಲಾತಿ ರಾಜಕಾರಣ
  ○ ಎಂ.ಆರ್. ಸತ್ಯಪ್ರಕಾಶ್ 20

- ಬುದ್ಧನ ಅನನ್ಯತೆ
  ○ ಡಾ॥ ಕೆ.ಎಸ್. ಭಗವಾನ್ 24
- ಸಮಕಾಲೀನ ಒತ್ತಡಗಳು ಮತ್ತು ದಲಿತರ ಹಕ್ಕುಗಳು
  ○ ಸನತ್‌ಕುಮಾರ್ ಬೆಳಗಲಿ 28
- ಅಂತರ್‌ಜಾತಿ ವಿವಾಹಿತರಿಗೆ ಮೀಸಲಾತಿ
  ○ ಪ್ರೊ. ರವಿವರ್ಮ ಕುಮಾರ್ 30
- ದೇಶದ ಅವನತಿಗೆ ಪುರೋಹಿತರೇ ಕಾರಣ
  ○ ಸ್ವಾಮಿ ವಿವೇಕಾನಂದ 32
- ಭಾರತದಲ್ಲೆಲ್ಲೂ ಭಾರತೀಯನಿಲ್ಲ!
  ○ ಶ್ರೀಶ ಉಡುಪ 35
- ದಲಿತರೆಂಬ ವಾಣಿಜ್ಯ ವಸ್ತುಗಳು
  ○ ಮರಿಯನಾದನ್ 36
- ಶಾಪವಾಗಿ ಕಾಡಿದ ಜಾತಿ ಭೂತ 38
  ○ ಡಾ॥ ಬಿ.ಆರ್. ಅಂಬೇಡ್ಕರ್
- ಬೌದ್ಧ ಧಮ್ಮ ಮತ್ತು ದೇವರ ಕಲ್ಪನೆ
  ○ ಭಿಕ್ಕು ಎಸ್. ಧಮ್ಮಿಕ 42



ಕವನಗಳು :

- ನಾವು ನಮ್ಮವರು 22
- ನನಗೆ - 22
- ಬುದ್ಧ ನೀಡಿದ ಬೆಳಕು 23
- ಇದು ನನ್ನ ಭಾರತ - 23

ಮುಖಪುಟ ಚಿತ್ರ : ಜಾನ್ ದೇವರಾಜ್   ವಿನ್ಯಾಸ : ರಾಥೋಡ್

ಸರಳ ಸುಂದರ ಸಂವಾದ ; ಚಿಂತನೆಗೆ ಒತ್ತು

ಆತ್ಮೀಯ ಇಂದೂಧರ ಹೊನ್ನಾಪುರ ಅವರಿಗೆ,

ನಿಮ್ಮ ಸಂವಾದ ಮಾಸ ಪತ್ರಿಕೆ ನನ್ನ ಪ್ರಗತಿಪರ ಚಿಂತನೆಗಳಿಗೆ ಒಂದು ಸಂಗಾತಿಯಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಪ್ರಾರಂಭವಾದಾಗಿನಿಂದಲೂ ನನ್ನ ಮನಸ್ಸಿನ ಜೊತೆ ಸದಾ ಸಂವಾದ ಮಾಡುತ್ತಲೇ ಇದೆ. ನನ್ನ ಗರಿಗೆದರುತ್ತಿರುವ ಚಿಂತನೆಗಳಿಗೆ ಸ್ಪಷ್ಟ ರೂಪಕೊಟ್ಟು, ಗುರಿಯೆಡೆಗೆ ದಾಪುಗಾಲು ಹಾಕಲು ಖಂಡಿತಾ ಇದು ಸಹಕಾರಿ.

ಇದರ ಒಂದೊಂದು ಲೇಖನಗಳೂ ಸಂಗ್ರಹ ಯೋಗ್ಯ. ಜಾಹೀರಾತಿಗೆ ಎಡೆಮಾಡಿಕೊಡದೆ ಜನ ಸಾಮಾನ್ಯನೂ ಓದಿ, ಅರ್ಥಮಾಡಿಕೊಂಡು, ಪ್ರಗತಿಪರ ಚಿಂತನೆಗೆ ಎಳೆದೊಯ್ಯುವ ಸರಳ, ಸುಂದರ ಪತ್ರಿಕೆ. ಇಂಥ'ದೊಂದು ಪತ್ರಿಕೆ ಹೊರತರುವುದರ ಮೂಲಕ ಜನರಿಗೆ ಕೋಮುವಾದಿಗಳ ಬಂಡವಾಳ, ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ದುಷ್ಪರಿಣಾಮವನ್ನು ಹೊರಗೆಳೆಯುವಲ್ಲಿ ಸಫಲವಾಗುತ್ತಿದೆ.

ಅತ್ಯುತ್ತಮವಾದ ಮಹಿಳಾ ಪರ ಲೇಖನಗಳು ಪ್ರಸಾರವಾಗಲಿ ಎಂದು ಆಶಿಸುವೆ.

ನಿಮ್ಮ ಈ ಪ್ರಯತ್ನಕ್ಕೆ ಶುಭ ಹಾರೈಸುವ,

ನಿಮ್ಮ ಅಭಿಮಾನಿ
ಮೀರಾ ಎಸ್. ಸ್ವಾಮಿ, ಬಂಗಾರಪೇಟೆ

ನೊಂದ ಜೀವಿಗಳ ಪರವಾದ ದನಿ

ಪ್ರಿಯ ಸಂವಾದ ಸಂಪಾದಕರೆ,.

ನಿಮ್ಮ ಇತ್ತೀಚಿನ 9ನೇ ಸಂಚಿಕೆಯಲ್ಲಿ ಪ್ರಕಟವಾಗಿರುವ "ಭಾರತದ ಅಸ್ಪೃಶ್ಯರು" (ನ್ಯಾಷನಲ್-ಜಿಯೋಗ್ರಫಿಕ್) ಲೇಖನವನ್ನು ಓದಿದೆ. ಭಾರತದ ಅಂತರಾಳದಲ್ಲಿ ಮನುಷ್ಯ ಮನುಷ್ಯನ ಮಧ್ಯೆ ನಡೆಯುತ್ತಿರುವ ಬೇಧ, ಭಾವ, ಜಾತಿ ನಿಂದನೆ ಬಗ್ಗೆ ಭಾರತದ ಕೆಲವಾರು ಪ್ರದೇಶಗಳನ್ನು ಸಮೀಕ್ಷೆ ಮಾಡಿ ಈ ದೇಶದ ಬಂಡವಾಳವನ್ನು ಮತ್ತು ಚೆಡ್ಡಿಗಳು (R.S.S.) ಮಾಡುತ್ತಿರುವ ಕುಚೇಷ್ಟೆಯನ್ನು ಪ್ರಪಂಚಕ್ಕೆಲ್ಲ ತಿಳಿಯಪಡಿಸಿದ ನ್ಯಾಷನಲ್ ಜಿಯೋಗ್ರಫಿಕ್ ವರದಿಗಾರ 'ಟಾಮ್ ಓನಿಲ್'ರಿಗೆ ಮತ್ತು ಈ ವರದಿಯ ವಿಷಯವನ್ನು ನಮ್ಮೆಲ್ಲರಿಗೂ ತಿಳಿಸಲು ಪ್ರಯತ್ನಿಸಿದ 'ಸಂವಾದ' ಪತ್ರಿಕಾ ಬಳಗಕ್ಕೆ ನೊಂದ ಜೀವಿಗಳ ಪರವಾಗಿ ನನ್ನ ಅನಂತ ನಮಸ್ಕಾರಗಳು.

ಇಂತಿ,
ಬೀರಮಾನಹಳ್ಳಿ ವಿಜಯಕುಮಾರ್,
ಕೋಲಾರ

ದಿಕ್ಕು ತಪ್ಪಿದವರಿಗೆ ದಾರಿದೀಪ

ಪ್ರಿಯ ಸಂವಾದದ ಸಂಪಾದಕರೆ,

ಶೋಷಿತ ಜನತೆಯ ಬದುಕನ್ನು ಬಿಂಬಿಸುವಂತಹ ಹರಿತವಾದ ಲೇಖನಗಳು ತಮ್ಮ ಸಂವಾದದಲ್ಲಿವೆ. ದಲಿತ ನಾಯಕರ ಅಧಿಕಾರ ದಾಹದ ಕಚ್ಚಾಟದಲ್ಲಿ ದಿಕ್ಕು ತಪ್ಪಿದ್ದ ದಲಿತರಿಗೆ ಸಂವಾದದಲ್ಲಿನ ಲೇಖನಗಳು ಸರಿದಾರಿ ತೋರಿಸುತ್ತವೆ. ನಿರಾಶೆಗೊಂಡು ತಣ್ಣಗಾಗಿದ್ದ ದಲಿತ ಯುವಶಕ್ತಿಯ ರಕ್ತವನ್ನು ಬಿಸಿಯಾಗಿಸಿ ಅನ್ಯಾಯದ ವಿರುದ್ಧ ಸಿಡಿದೇಳುವ ಕೆಚ್ಚನ್ನು ಸೃಷ್ಟಿಸುತ್ತವೆ ಅಷ್ಟೇ ಸಾಕು.

ಹಾಗೆಯೇ ನಾಡಿನಾದ್ಯಂತ ವಾಸವಾಗಿರುವ ನಮ್ಮ ದಲಿತ ಮಿತ್ರರಿಗೆ ದಲಿತ ಚಳುವಳಿಯ ಕುರಿತು ಸಾಕಷ್ಟು ಪ್ರಶ್ನೆಗಳು ಕಾಡುತ್ತಿರಬಹುದು. ಉತ್ತರ ಸಿಗದೆ ತಟಸ್ಥವಾಗಿರಬಹುದು. ಅಂತಹ ಮಿತ್ರರಿಗಾಗಿ ನಮ್ಮ "ಸಂವಾದ"ದಲ್ಲಿ ಪ್ರಶ್ನೋತ್ತರ ವಿಭಾಗ ಒಂದನ್ನು ಪ್ರಾರಂಭಿಸುವುದು ಅವಶ್ಯವೆಂದು ನನ್ನ ಅನಿಸಿಕೆಯಾಗಿದೆ.

ವಂದನೆಗಳೊಂದಿಗೆ,
ಮಡಿವಾಳಪ್ಪ ಎಸ್. ಕಟ್ಟಿಮನಿ,
ವಾಡಿ ಜೆಂಕ್ಷನ್, ಗುಲ್ಬರ್ಗಾ ಜಿಲ್ಲೆ

ಅಗತ್ಯವಿದ್ದ ಪತ್ರಿಕೆ

ಪ್ರಿಯ ಸಂಪಾದಕರೆ,

'ಸಂವಾದ' ಪತ್ರಿಕೆ ಬಹಳ ಚೆನ್ನಾಗಿ ಬರುತ್ತಿದೆ. ಇಂಥ'ದೊಂದು ಪತ್ರಿಕೆ ಅಗತ್ಯವಿತ್ತು. ಚಂದಾ ಹಣ ಕಳಿಸುವೆ.

ಶಂಕರ ಕಟಗಿ, ವಿಜಾಪುರ

ಎಲ್ಲರ ಪತ್ರಿಕೆಯಾಗಲಿ

ಪ್ರಿಯ ಇಂದೂಧರರೇ,

'ಸಂವಾದ' ಸಿಕ್ಕಿದೆ. ಪತ್ರಿಕೆಯ Format, ಲೇಖನ ಎಲ್ಲಾ ಚೆನ್ನಾಗಿದೆ. ಪತ್ರಿಕೆ ಕೇವಲ ಒಂದು ವರ್ಗದವರ ಕುರಿತಾಗಿಯೇ ಮೀಸಲಾಗುವ ಅಪಾಯವನ್ನು ಮೀರಿ ಎಲ್ಲಾ ಸಹೃದಯರ ಪತ್ರಿಕೆಯಾಗಲಿ. ಹಾಗೇ ತೀರಾ ಕೇಂಬ್ರಿಡ್ಜ್-ಹಾರ್ವರ್ಡ್ ಭಾಷೆಗೆ ಸೀಮಿತವಾಗದೇ ನಮ್ಮ ನಡುವಿನ ನಾಲ್ಕು ಜನ ಓದುವಂಥಾ ಭಾಷೆಯಲ್ಲಿ ಲೇಖನಗಳಿರುವಂತೆ ಯೋಜಿಸಿ.

ಪ್ರೀತಿಯಿಂದ,
ಶೈಲೇಂದ್ರ ಬಂದಗದ್ದೆ, ಕೆಳದಿ, ಸಾಗರ

ಚೆನ್ನಾಗಿದೆ

ಮಾನ್ಯರೇ,

'ಸಂವಾದ' ಚೆನ್ನಾಗಿದೆ. ಇಂಥ ವೈಚಾರಿಕ ಪತ್ರಿಕೆಗಳ ಅವಶ್ಯಕೆ ಇಂದು ಸಾಕಷ್ಟು ಇದೆ. ಕೃತಜ್ಞತೆಗಳು.

ಅಮೃತ ಸೋಮೇಶ್ವರ,
ಕೋಟೆಕಾರು (ದ.ಕ.)

ವ್ಯಾಪಾರಿ ಪತ್ರಿಕೆಗಳಿಗಿಂತ ಭಿನ್ನ

ಪ್ರಿಯ ಮಿತ್ರರಾದ ಇಂದೂಧರ ಹೊನ್ನಾಪುರ ಅವರಿಗೆ ಸಪ್ರೇಮ ವಂದನೆಗಳು.

'ಸಂವಾದ' ತುಂಬಾ ಆಸಕ್ತಿದಾಯಕವಾಗಿ ಬರುತ್ತಿದೆ. ವೈಚಾರಿಕತೆಯ ಹೆಸರಿನಲ್ಲಿ ವ್ಯಾಪಾರ ಮಾಡುತ್ತಿರುವ ಪತ್ರಿಕೆಗಳು ನಮಗೆ ಹಿಂಸೆ ಕೊಡುತ್ತಿವೆ. 'ಸಂವಾದ' ದಲಿತ ಚಿಂತನೆಯ ಮೂಲಕ ಇತರೆಲ್ಲ ಮಗ್ಗುಲುಗಳನ್ನು ಒಳಗೊಳ್ಳುವಂತಾಗಲಿ.

ಇಂತಿ,
ಡಾ|| ಹಿ.ಶಿ. ರಾಚಂದ್ರೇಗೌಡ,
ಮೈಸೂರು

ಒಡೆದ ಸಂಘಟನೆಗಳ ಬೆಸುಗೆ

ಶ್ರೀ ಇಂದೂಧರ ಹೊನ್ನಾಪುರರಿಗೆ ನಮಸ್ಕಾರಗಳು

ಜುಲೈ ತಿಂಗಳ ಸಂವಾದ ಪತ್ರಿಕೆ ನೋಡಿದೆ. ಅಸ್ಪೃಶ್ಯತೆ ಕುರಿತು ತಾವು ಸಂಪಾದಕೀಯದಲ್ಲಿ ಬರೆದಿರುವುದು ಓದಿದೆ. ಜಾತಿ ವಿಷ ಮತ್ತೆ ತಲೆ ಎತ್ತಿದೆ ದಲಿತರಿಗೆ ಉಳಿಗಾಲವಿಲ್ಲ. ಖಾಸಗೀಕರಣ ಜಾಗತೀಕರಣ, ಹೀಗೆ ಅನೇಕ ಕಾರಣಗಳು ನಮ್ಮ ಕಣ್ಣು ಕಿತ್ತುತ್ತಿದ್ದರೆ, ಅಸ್ಪೃಶ್ಯತೆ ಮತ್ತೆ ಹೃದಯವನ್ನೇ ನಡುಗಿಸಿದೆ. ಇಂತಹ ಹೃದಯವಿದ್ರಾವಕ ಸಮಸ್ಯೆಗಳ ನಡುವೆ ಒಳ ಮೀಸಲಾತಿ ಹೋರಾಟ ನಡೆದಿದೆ. ನಾವು ಮೂಲ ಸಮಸ್ಯೆಗಳನ್ನು ಬದಿಗಿಟ್ಟು ಅತ್ಯಲ್ಪವಾದ ವಿಷಯಗಳಿಗೆ ಹೆಚ್ಚು ಮಹತ್ವಕೊಡುತ್ತಿದ್ದೇವೆ ಎನಿಸುತ್ತದೆ.

ದಲಿತರನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದೆ ತಳ್ಳಲು ಹುನ್ನಾರ ನಡೆಸುತ್ತಿರುವ ಸಂಘ ಪರಿವಾರದ ಹಾಗೂ ಆ ಮನೋಭಾವನೆಯ ರಾಜಕೀಯ ಶಕ್ತಿಗಳು ಆ ನಿಟ್ಟಿನಲ್ಲಿ ಹೆಜ್ಜೆ ಹಾಕುತ್ತಲಿವೆ. ಈ ಹುನ್ನಾರಗಳನ್ನು ಭೇದಿಸುವಂತಹ ವಿಚಾರಗಳು ಪತ್ರಿಕೆಯಲ್ಲಿ ಮೂಡಿ ಬರುತ್ತಿರುವುದರಿಂದ ಯುವ ದಲಿತರನ್ನೂ ಚಿಂತನೆಗೆ ಹಚ್ಚುತ್ತಲಿವೆ. ಒಡೆದು ಹೋದ ಸಂಘಟನೆಯ ನಾಯಕರು ಒಂದೇ ವೇದಿಕೆಗೆ ಬರುವ ಹಾಗೆ ಬೆಸೆಯುವ ಲೇಖನಗಳು ಬರಲಿ.

ವಂದನೆಗಳೊಂದಿಗೆ,
ಡಾ.ಎಚ್.ಟಿ. ಪೋತೆ, ಗುಲ್ಬರ್ಗಾ

ಬಹುಮುಖಿಯಾಗಿರಲಿ

ಮಾನ್ಯರೆ,

'ಸಂವಾದ' ಮಾಸ ಪತ್ರಿಕೆ ಏಕಮುಖಿ ಸಂವಾದವಾಗದೆ, ದಲಿತ-ದಲಿತರ, ದಲಿತ-ಹಿಂದುಳಿದ ವರ್ಗಗಳ, ದಲಿತ-ಮುಸ್ಲಿಮರ, ದಲಿತ-ಕ್ರಿಶ್ಚಿಯನ್ನರ, ದಲಿತ-ಮೇಲ್ವರ್ಗಗಳ ನಡುವಣ ಸಂವಾದ ಮತ್ತಷ್ಟು ಪಾರದರ್ಶಕವೂ ಮತ್ತು ಮುಕ್ತವೂ ಆದರೆ 'ಸಂವಾದ' ಅರ್ಥವತ್ತಾಗುತ್ತದೆ.

ತಮ್ಮ ವಿಶ್ವಾಸಿ,
ಕೆ.ಜಿ. ನಾಗರಾಜಪ್ಪ, ಬೆಂಗಳೂರು

ಧ್ವಜಾರೋಹಣ : ದಲಿತ ನಾಯಕನಿಗೆ ಚಪ್ಪಲಿ ಏಟು

ಶಿವಾಂಗ (ತುಮಕೂರು), ಆ. 16 : ಸ್ವಾತಂತ್ರ್ಯೋತ್ಸವ ಅಂಗವಾಗಿ ತ್ರಿವರ್ಣ ಧ್ವಜ ಹಾರಿಸಿದರೆಂಬ ಕಾರಣಕ್ಕಾಗಿ ಪಂಚಾಯತ್‌ನ ದಲಿತ ಅಧ್ಯಕ್ಷರನ್ನು ಚಪ್ಪಲಿಯಿಂದ ಹೊಡೆದು ಗಾಯಗೊಳಿಸಿದ ಘಟನೆ ನಿನ್ನೆ ಇಲ್ಲಿ ಸಂಭವಿಸಿದೆ.

ತುಮಕೂರು ತಾಲ್ಲೂಕು ಸೊಟ್ಟಾತಾಟಿ ಪಂಚಾಯತ್‌ನ ಅಧ್ಯಕ್ಷ ಕೆ. ರಾಜು ಅವರು ಶಾಲೆಯೊಂದರಲ್ಲಿ ಧ್ವಜಾರೋಹಣ ಗೈದರು. ಆ ಬಳಿಕ ಗ್ರಾಮಸಭೆ ನಡೆಯಿತು.

ಈ ಸಂದರ್ಭದಲ್ಲಿ ಗ್ರಾಮದ ಗುಂಪೊಂದು ಜಾತಿಯ ಹಿನ್ನೆಲೆಯಲ್ಲಿ ಅವರ ಮೇಲೆ ಹಲ್ಲೆ ನಡೆಸಿದರು ಎಂದು ಪೊಲೀಸರು ಘಟನೆಯ ವಿವರ ನೀಡಿದರು.

ರಾಜು ಅವರು ಸಭೆ ಮುಗಿಸಿ ಹೊರಬರುತ್ತಿದ್ದಂತೆ ಸುಬ್ಬಯ್ಯ ಎನ್ನುವವರು ಚಪ್ಪಲಿಯಿಂದ ಹೊಡೆದರು. ಪತಿಯನ್ನು ರಕ್ಷಿಸಲು ಬಂದ ರಾಜು ಅವರ ಪತ್ನಿಯ ಮೇಲೂ ಹಲ್ಲೆ ನಡೆಸಿದರು ಎಂದು ಪೊಲೀಸರು ತಿಳಿಸಿದರು.

(ಸಂಯುಕ್ತ ಕರ್ನಾಟಕ)

ಭೂವಿವಾದ : 48 ದಲಿತರಿಗೆ ಗಾಯ

ಲಖನೌ, ಆ. 13 : ಭೂವಿವಾದಕ್ಕೆ ಸಂಬಂಧಿಸಿದಂತೆ ಗ್ರಾಮವೊಂದರಲ್ಲಿ ಠಾಕೂರ್ ಸಮುದಾಯ್ದವರು ದಲಿತರ ಮೇಲೆ ಗುಂಡು ಹಾರಿಸಿದಾಗ, 48 ಮಂದಿ ಗಾಯಗೊಂಡ ಘಟನೆ ಇಂದು ವರದಿಯಾಗಿದೆ. ಮಾವು ಜಿಲ್ಲೆ ತಾಜೋಪುರ ಗ್ರಾಮದಲ್ಲಿ ಈ ಘಟನೆ ನಡೆದಿದೆ.

(ಪ್ರಜಾವಾಣಿ)

ಬಾಲಕಿ ಬಲಿ

ಚಳ್ಳಕೆರೆ, ಆ. 13 : ತಂದೆ-ತಾಯಿಗಳ ಒಬ್ಬಳೇ ಮಗಳನ್ನು ಭೀಮನ ಅಮಾವಾಸ್ಯೆ ದಿನ ದೇವಿಗೆ ಬಲಿ ನೀಡಿದರೆ ಇಷ್ಟಾರ್ಥಗಳು ಸಿದ್ಧಿಸುತ್ತವೆ ಎಂಬ ಮೂಢನಂಬಿಕೆಗೆ ಚಳ್ಳಕೆರೆಯ ಚಿತ್ರಯ್ಯನಹಟ್ಟಿಯ ತಿಪ್ಪೇಸ್ವಾಮಿ ಅವರ 10 ವರ್ಷದ ಮಗಳು ನೇತ್ರಾವತಿ ಜುಲೈ 30ರಂದು ಬಲಿಯಾಗಿರುವುದನ್ನು ಪೊಲೀಸರು ಪತ್ತೆ ಮಾಡಿದ್ದಾರೆ.

(ಪ್ರಜಾವಾಣಿ)



ದಲಿತ ಅಧಿಕಾರಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ ಸಚಿವ

ಕೊಳ್ಳೇಗಾಲ, ಆ. 3 : ದಲಿತ ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಬಸವಲಿಂಗಯ್ಯನವರನ್ನು ಅವಾಚ್ಯ ಶಬ್ದಗಳಿಂದ ಕೃಷಿ ಸಂಸ್ಕರಣೆ ಖಾತೆ ರಾಜ್ಯ ಸಚಿವ ಜಿ. ರಾಜುಗೌಡರು ನಿಂದಿಸಿದ ಘಟನೆಯೊಂದು ತಾಲ್ಲೂಕು ಪಂಚಾಯಿತಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಡೆದಿದೆ.

ಪಶು ಸಂಗೋಪನಾ ಇಲಾಖೆಯ ಪ್ರಗತಿಯ ಬಗ್ಗೆ ವಿವರಣೆ ನೀಡುತ್ತಿದ್ದ ಅಧಿಕಾರಿ ಬಸವಲಿಂಗಯ್ಯನವರ ಮಾತಿನ ಮಧ್ಯೆ ಪ್ರವೇಶಿಸಿದ ಸಚಿವ ರಾಜುಗೌಡರು ನೀವು ಕೆಲವು ಚುನಾಯಿತ ರಾಜಕೀಯ ಪ್ರತಿನಿಧಿಗಳನ್ನು ಕಡೆ ಗಣಿಸಿದ್ದೀರ, ಹಾಗೂ ಇಷ್ಟ ಬಂದಂತೆ ಸವಲತ್ತು ವಿತರಿಸಿ ಭ್ರಷ್ಟಾಚಾರ ನಡೆಸಿದ್ದೀರಾ ಎಂದು ಕೆಂಡ ಮಂಡಲವಾದರು.

ಸಚಿವರ ಮಾತಿಗೆ ಆಕ್ರೋಶಗೊಂಡ ಪಶು ಸಂಗೋಪನಾಧಿಕಾರಿ ಬಸವಲಿಂಗಯ್ಯ ನಾನು ಓರ್ವ ದಲಿತ ಅಧಿಕಾರಿ ಹಾಗೂ ಸಚಿವರ ಸ್ವಗ್ರಾಮದವನೆಂಬ ಕಾರಣಕ್ಕೆ ನನ್ನ ಮೇಲೆ ಇಲ್ಲ ಸಲ್ಲದ ಆರೋಪ ಎಸಗುತ್ತೀರಿ ನಾನು-ಪ್ರಾಮಾಣಿಕ ಕೆಲಸ ಮಾಡಿದ್ದೇನೆ ಇಲಾಖೆಯಲ್ಲಿ ಭ್ರಷ್ಟತೆ ನಡೆದಿದ್ದರೆ ತನಿಖೆ ನಡೆಸಿ ತನಿಖೆಯಲ್ಲಿ ಸಾಬೀತು ಆದರೆ ನನ್ನ ಮೇಲೆ ಕಾನೂನು ಕ್ರಮ ಜರುಗಿಸಿ ಎಂದ ಬಸವಲಿಂಗಯ್ಯನವರು ಸಭೆಯಲ್ಲಿ ಅವಾಚ್ಯ ಶಬ್ದ ಕೇಳಿ ಹೊರ ಹೋಗುವ ಪ್ರಮೇಯವೇನು? ಎಂದು ಸಚಿವರನ್ನು ಪ್ರಶ್ನಿಸಿದಾಗ ಸಭೆ ಸ್ವಲ್ಪ ಹೊತ್ತು ಸ್ತಬ್ಧಗೊಂಡಿತು.

(ಜನವಾಹಿನಿ)

ನಿಂಬರ್ಗಾದಲ್ಲಿ ಗುಂಪು ಘರ್ಷಣೆ

ಕಲಬುರ್ಗಿ, 12 : ಹಳೆಯ ಜಾತಿ ದ್ವೇಷದ ಘಟನೆಗಳಿಂದ ಕೆರಳಿದ ಗ್ರಾಮಸ್ಥರು ಪರಸ್ಪರ ಕಲ್ಲು ತೂರಾಟ ಮತ್ತು ಹಿಂಸಾಚಾರಕ್ಕೆ ತಿರುಗಿದಾಗ, ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮತ್ತು 4 ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿದಾಗ, ಪೊಲೀಸರೂ ಸೇರಿದಂತೆ ಹಲವರು ಗಾಯಗೊಂಡ ಘಟನೆ ಆಳಂದ ತಾಲ್ಲೂಕಿನ ನಿಂಬರ್ಗಾದಲ್ಲಿ ನಡೆದಿರುವುದು ವರದಿಯಾಗಿದೆ. ಕಲ್ಲು ತೂರಾಟದಲ್ಲಿ ಪಿ.ಎಸ್.ಐ. ಶ್ರೀಧರ ದಡ್ಡಿ ಅವರಿಗೆ ತಲೆಗೆ ಪೆಟ್ಟು ಬಿದ್ದಿದ್ದು, ನಾಲ್ವರು ಪೇದೆಗಳಿಗೆ ಸಣ್ಣ ಪುಟ್ಟಗಾಯಗಳಾಗಿವೆ. ಉದ್ರಿಕ್ತ ಸವರ್ಣೀಯ ಗುಂಪು, ದಲಿತರ ಕೇರಿಗೆ ನುಗ್ಗಿ ಹಲ್ಲೆ ನಡೆಸಿದ್ದರಿಂದ ಹಲವಾರು ಜನ ಗಾಯಗೊಂಡಿದ್ದಾರೆ. ಓರ್ವನ ಸ್ಥಿತಿ ಗಂಭೀರವಾಗಿದ್ದು, ಅವರನ್ನು ಕಲಬುರ್ಗಿ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಗಾಯಗೊಂಡಿದ್ದ ಮೂವರು ನಿಂಬರ್ಗಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಲ್ಲು ತೂರಾಟ ಘಟನೆ ನಡೆಯುತ್ತಿದ್ದಂತೆ ಗ್ರಾಮದ ಅಂಗಡಿಗಳೆಲ್ಲ ತರಾತುರಿಯಲ್ಲಿ ಮುಚ್ಚಿಕೊಂಡು ಎಲ್ಲ ವ್ಯವಹಾರ ಸ್ಥಗಿತಗೊಂಡಿತು. ಸಂಚಾರವೂ ಸ್ಥಗಿತಗೊಂಡು, ಗ್ರಾಮದಲ್ಲಿ ಅಘೋಷಿತ ನಿಷೇಧಾಜ್ಞೆಯ ವಾತಾವರಣ ಮೂಡಿತೆಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

(ಸಂಯುಕ್ತ ಕರ್ನಾಟಕ)

ದಲಿತನ ಕೊಲೆ : 26 ಮಂದಿಗೆ ಜೀವಾವಧಿ ಶಿಕ್ಷೆ

ಶಾಜಾಪುರ, ಆ. 5 : ನೆರೆಯ ರಾಜಗಢ ಜಿಲ್ಲೆಯ ಲಾತಾಹೆದಿ ಗ್ರಾಮದಲ್ಲಿ ಭೂವಿವಾದದ ಕಾರಣ ದಲಿತನೊಬ್ಬನನ್ನು ಕೊಲೆ ಮಾಡಿದ ಕಾರಣಕ್ಕಾಗಿ ವಿಶೇಷ ನ್ಯಾಯಾಲಯವು 26 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ.

ದನ ಮೇಯಿಸಲು ಕೃಷಿ ಭೂಮಿ ಒತ್ತುವರಿ ಮಾಡಿದ ಕಾರಣಕ್ಕಾಗಿ 28 ಮಂದಿ ಇತರರಿಗೆ ವಿಶೇಷ ನ್ಯಾಯಾಧೀಶ ಜಿ.ಕೆ. ಜೈನ್ ಒಂದು ವರ್ಷ ಜೈಲುವಾಸ ವಿಧಿಸಿದ್ದಾರೆ.

ಆರೋಪಿಗಳು ಕಳುಹಿಸಿದ ಜಾನುವಾರುಗಳು ತನ್ನ ಬೆಳೆಯನ್ನು ನಾಶ ಮಾಡಲು ಕಳುಹಿಸಿದ ಮತ್ತು ಭೂವಿವಾದಕ್ಕೆ ಸಂಬಂಧಿಸಿದ ಘರ್ಷಣೆ ವೇಳೆ ಫಿಶಾಲಾಲ್ ಎಂಬ ದಲಿತನನ್ನು ಕೊಲೆ ಮಾಡಲಾಗಿತ್ತು.

(ಸಂಯುಕ್ತ ಕರ್ನಾಟಕ)

ಆಹಾರ ಕದಿಯುತ್ತಿದ್ದ ಮುಖ್ಯ ಶಿಕ್ಷಕಿ !

ಹಳೇಬೂದನೂರು, ಆ. 22: ಶಾಲೆಯ ಮುಖ್ಯ ಶಿಕ್ಷಕಿಯೇ ಮಧ್ಯಾಹ್ನದ ಬಿಸಿಯೂಟದ ಆಹಾರ ಪದಾರ್ಥ ಕಳವು ಮಾಡಲು ಯತ್ನಿಸಿದ ಘಟನೆ ಬುಧವಾರ ರಾತ್ರಿ ಇಲ್ಲಿ ನಡೆದಿದೆ.

ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಗೀತಮ್ಮ ಎಂಬುವರು ರಾತ್ರಿ 11ರ ವೇಳೆಯಲ್ಲಿ ಶಾಲೆಗೆ ಬಂದು ಆಹಾರ ಪದಾರ್ಥ ಕಳವು ಮಾಡಲು ಯತ್ನಿಸಿದರೆಂದು ಹೇಳಲಾಗಿದೆ.

ಮುಖ್ಯ ಶಿಕ್ಷಕಿ ಗೀತಮ್ಮ ಮತ್ತು ಆಕೆಯ ಸಂಬಂಧಿ ಎನ್ನಲಾದ ಶಿಕ್ಷಕ ಸಿ. ವೆಂಕಟೇಶ್ ಎಂಬುವರು ಆಹಾರ ಪದಾರ್ಥ ಕದಿಯಲು ಯತ್ನಿಸಿದ್ದನ್ನು ನಾವು ನೋಡಿರುವುದಾಗಿ ಗ್ರಾಮಸ್ಥರು ತಿಳಿಸಿದ್ದಾರೆ.

(ಜನವಾಹಿನಿ)

ಅಂತರಂಗ

ಸಾವಿಗೆ ಶರಣಾಗುವ ರೈತರನ್ನು ಕುರಿತು...



ನಿತ್ಯ ರೈತರ ಸಾವಿನ ವರದಿಗಳು ಬರುತ್ತಿವೆ. ದೂರದ ಬೀದರ್‌ನಿಂದ ಹಿಡಿದು ಪಕ್ಕದ ಚನ್ನಪಟ್ಟಣದವರೆಗೆ ರೈತರು ನೇಣಿಗೆ ಕೊರಳೊಡ್ಡುತ್ತಿದ್ದಾರೆ. ಬದುಕುವ ಆಸೆಗಾಗಿ ಮಾಡಿದ ಹತ್ತೋ ಇಪ್ಪತ್ತೋ ಸಾವಿರ ಸಾಲ, ಎಪ್ಪತ್ತು ಎಂಭತ್ತಕ್ಕೇರಿ, ಸಾಲವನ್ನೂ ತೀರಸಲಾಗದೆ, ಜೀವನವನ್ನು ಸಾಗಿಸಲಾರದೆ ಅಸಾಹಯಕತೆಯಿಂದ ಸಾವಿಗೆ ಶರಣಾಗುತ್ತಿದ್ದಾರೆ. ಇಡೀ ರೈತ ಸಮುದಾಯ ಸಮೂಹ ಸನ್ನಿಗೊಳಗಾದವರಂತೆ ತಮ್ಮ ಸಮಸ್ಯೆಗಳಿಗೆ ಸಾವಿನಲ್ಲಿ ಉತ್ತರ ಕಂಡುಕೊಳ್ಳುತ್ತಿದ್ದಾರೆ.

ಬೆಳೆದ ಬೆಳೆಯನ್ನೇ ನಂಬಿ ಬದುಕುವ ನಮ್ಮ ರೈತ ಎಂದೂ ಹೊಟ್ಟೆ ತುಂಬ ಉಂಡವನಲ್ಲ. ಕೈಗೆ-ಬಾಯಿಗೆ ನೇರವಿದ್ದರೆ ಅವನೇ ಭಾಗ್ಯವಂತ. ವರ್ಷವಿಡೀ ಮನೆ ಮಂದಿಯೆಲ್ಲಾ ದುಡಿದರೂ ಅವನ ಹೊಟ್ಟೆ ಅರೆ ಹೊಟ್ಟೆಯೆ! ಉತ್ತಮ ಮಳೆ ಬಂದು ಬೆಳೆ ತೆಗೆದರೆ ಮಾತ್ರ ಅವನಿಗೆ ಕೊಂಚ ನೆಮ್ಮದಿ. ಉತ್ತಮ ಬೆಳೆ ಬಂದರೂ ಬಹುತೇಕ ಉತ್ತಮ ಬೆಲೆ ಸಿಗದೆ ರೈತ ತತ್ತರಿಸಿದ ದಿನಗಳೇ ಹೆಚ್ಚು. ಆದರೆ ಮಳೆಯೇ ಬಾರದಿದ್ದರೆ ಅವನ ಗತಿ ಏನು?

ಈ ಪಶ್ನೆಗೆ ಉತ್ತರ ಹೇಳಬೇಕಾದ ಸರ್ಕಾರ-ಕೃಷಿ ಹಾಗೂ ಆರ್ಥಿಕ ತಜ್ಞರು ಈ ಕುರಿತು ಜಾಣ ಮೌನ ವಹಿಸಿದ್ದಾರೆ. ನಾಡಿನಾದ್ಯಂತ ರೈತ ಸಮುದಾಯ ಅಸಹಾಯಕತೆಯಿಂದ ಬೇಯುತ್ತಿದ್ದರೂ ನೆರವಿನ ಹಸ್ತ ಚಾಚಲು ಯಾರೂ ಮುಂದೆ ಬರುತ್ತಿಲ್ಲ. ಕಳೆದ ಮೂರು ವರ್ಷಗಳಿಂದಲೂ ರಾಜ್ಯ ಮಳೆ ಕೊರತೆಯಿಂದ ನಲುಗುತ್ತಿದೆ. ಬರ ಎದುರಿಸುವ ಶಾಶ್ವತ ಪರಿಹಾರದ ಬಗ್ಗೆ ಆಗಾಗ್ಗೆ ಮಾತನಾಡುವ ಸರ್ಕಾರ ಈ ಬಗ್ಗೆ ಮಾಡಿದ್ದಾದರೂ ಏನು? ಅಬಕಾರಿ ದೊರೆಗಳಿಗೆ ನೂರಾರು ಕೋಟಿ ರೂಪಾಯಿಗಳ ಬಾಕಿಯನ್ನು ಮನ್ನಾ ಮಾಡುವ ಸರ್ಕಾರ, ಕೋಲಾಕಂಪೆನಿಗಳಿಗೆ ನೂರಾರು ಕೋಟಿ ರೂ.ಗಳ ತೆರಿಗೆ ವಿನಾಯ್ತಿ ನೀಡುವ ಸರ್ಕಾರ, ದೊಡ್ಡ ದೊಡ್ಡ ಉದ್ದಿಮೆದಾರರಿಗೆ ಸಾವಿರಾರು ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡುವ ಸರ್ಕಾರ, ರೈತರನ್ನೇಕೆ ಹೀಗೆ ಸತಾಯಿಸುತ್ತಿದೆ? ಸಾಯಲು ಪ್ರೇರೇಪಿಸುತ್ತಿದೆ?

ರೈತನನ್ನು ದೇಶದ ಬೆನ್ನೆಲುಬು ಎನ್ನುತ್ತಾರೆ. ಅಂದರೆ ಭಾರ ಹೊರುವ ಕತ್ತೆ. ಕತ್ತೆಯ ಬೆನ್ನೆಲುಬು ತುಂಬಾ ಗಟ್ಟಿಯಂತೆ. ಹಾಗಾಗಿಯೇ ರೈತ ಇಷ್ಟು ವರ್ಷಗಳ ಕಾಲವೂ ಹೊರೆಯನ್ನು ಹೊತ್ತೇ ನಿಂತಿದ್ದ. ಹೊತ್ತ ಹೊರೆಯನ್ನು ಬೇರೆಯವರಿಗೆ ವರ್ಗಾಯಿಸುವ ಬಗ್ಗೆ ಅವನು ಯೋಚಿಸಲಿಲ್ಲ. ಅವನ ಹೊರೆ ಕಡಿಮೆ ಮಾಡುವ ಬಗೆಗೆ ಸರ್ಕಾರವೂ ಚಿಂತಿಸಲಿಲ್ಲ. ಭಾರ ಹೆಚ್ಚಿದಂತೆಲ್ಲ ಬೆನ್ನು ಬಾಗಿ, ನಡು ಕುಸಿದು ಈಗ ನೆಲ ಕಚ್ಚಿದ್ದಾನೆ.

ರೈತನ ಆರ್ಥಿಕ ಸ್ಥಿತಿಯೇ ಅತಂತ್ರದ್ದು. ಯಾವುದೂ ನಿಶ್ಚಿತವಲ್ಲ. ಇಷ್ಟೆಲ್ಲಾ ವೈಜ್ಞಾನಿಕ ಪ್ರಗತಿ ಸಾಧಿಸಿದ್ದರೂ, ಆತ ಹನಿ ನೀರಿಗಾಗಿ ಈಗಲೂ ಆಕಾಶಕ್ಕೆ ಮುಖ ಮಾಡಿ ನಿಲ್ಲಬೇಕು. ಹನಿ ಬಿದ್ದರೆ ಬದುಕು. ಇಲ್ಲದಿದ್ದರೆ ನರಕ. ಗ್ರಾಮೀಣ ಪ್ರದೇಶದಲ್ಲಿ ಈಗಲೂ ಎರಡು ಹೊತ್ತು ಉಂಡು ನೆಮ್ಮದಿಯಾಗಿರುವ ರೈತರು ಸಿಗುವುದು ಅಪರೂಪ. ಹಾಗೊಮ್ಮೆ ಇರುವುದಾದರೆ ಅವರು ವ್ಯವಸಾಯದೊಟ್ಟಿಗೆ ಬೇರೇನೋ ಮಾಡುತ್ತಿದ್ದಾರೆಂದೇ ಅರ್ಥ. ಸಣ್ಣಪುಟ್ಟ ವ್ಯಾಪಾರವೋ, ಕೈಕಸುಬೋ ಇತ್ಯಾದಿ.

ನಮ್ಮ ಸಾಮಾಜಿಕ ಸ್ಥಿತಿಯೇ ಇಂಥ ಅಸಹಜ ಹಾಗೂ ಅಮಾನವೀಯ ಅವ್ಯವಸ್ಥೆಯಿಂದ ಕೂಡಿದೆ. ಇಡೀ ದೇಶದ ದಲಿತರು, ಕೆಳವರ್ಗದ ಜನ ಒಂದು ರೀತಿ ಶೋಷಿತರಾದರೆ ರೈತರು ಮತ್ತೊಂದು ರೀತಿಯ ಶೋಷಣೆಗೆ ಗುರಿಯಾಗಿದ್ದಾರೆ. ಅವರಿಗೆ ಅರಿವಿನ ಕೊರತೆ ಇದೆ. ಸಮಾಜದ ಅವಕಾಶಗಳನ್ನು ಬಳಸಿ ಮುಂದೆ ಬರುವ ಆಲೋಚನೆ ಅವರಿಗೆ ದಕ್ಕುತ್ತಿಲ್ಲ. ಶಿಕ್ಷಣ ಇನ್ನೂ ಅವರಿಗೆ ಹಗಲು ಗನಸು. ಕೆರೆ ಕಟ್ಟೆಗಳು ಮುಚ್ಚಿ ಹೋಗುತ್ತಿರುವುದು ಅವರಿಗೆ ಕಾಣಿಸುತ್ತಿಲ್ಲ. ಮಳೆ ನೀರನ್ನು ಬಳಸಿಕೊಳ್ಳುವ-ಉಳಿಸಿಕೊಳ್ಳುವ ಕಲೆ ಗೊತ್ತಾಗುತ್ತಿಲ್ಲ. ತಾವು ಬೆಳೆದ ಬೆಳೆಗೆ ಸೂಕ್ತ ಬೆಲೆ ದಕ್ಕಿಸಿಕೊಳ್ಳುವುದೂ ಅವರಿಗೆ ಸಾಧ್ಯವಾಗುತ್ತಿಲ್ಲ.

ಸರ್ಕಾರ ಈಗ ಸಾಯುವ ರೈತರ ಸಂಕಷ್ಟ ಪರಿಹರಿಸಲು 886 ಕೋಟಿ ರೂಪಾಯಿಗಳ ಕಾರ್ಯಕ್ರಮ ಪ್ರಕಟಿಸಿದೆ. ಮೇಲ್ನೋಟಕ್ಕೆ ಈ ಕಾರ್ಯಕ್ರಮ ಆಕರ್ಷಕವಾಗಿ ಕಂಡರೂ ಅದು ಸಮರ್ಥವಾಗಿ ಜಾರಿಯಾಗುವ ಬಗೆಗೆ ಯಾವುದೇ ಖಾತ್ರಿ ಇಲ್ಲ. ಸಾಮಾನ್ಯವಾಗಿ ಎಲ್ಲಾ ಸರ್ಕಾರಿ ಯೋಜನೆಗಳ ಲಾಭವೂ ನೇರವಾಗಿ ಉದ್ದಿಮೆದಾರರು, ದಳ್ಳಾಳಿಗಳು ಹಾಗೂ ಸರ್ಕಾರಿ ನೌಕರರ ಜೇಬಿಗೆ ಸೇರುವುದು ಎಲ್ಲರಿಗೂ ತಿಳಿದದ್ದೇ. ಇದು ಹತಾಷೆಯ ಮಾತಲ್ಲ. ವಸ್ತು ಸ್ಥಿತಿ. ಇಂಥಲ್ಲಿ ಸರ್ಕಾರಕ್ಕೆ ನಿಜವಾಗಿಯೂ ರೈತರ ನೆರವಿಗೆ ಬರುವ ಇಚ್ಛಾಶಕ್ತಿ ಇದ್ದಲ್ಲಿ ನೇರವಾಗಿ ರೈತರ ಸಾಲ ಮನ್ನಾ ಮಾಡುವ ತೀರ್ಮಾನವನ್ನು ಕೈಗೊಳ್ಳಬೇಕು. ವಸ್ತು ಸ್ಥಿತಿಯ ಆಧಾರದ ಮೇಲೆ ಸಮೀಕ್ಷೆ ನಡೆಸಿ, ಸಂಕಷ್ಟದಲ್ಲಿರುವ ರೈತರನ್ನು ಗುರುತಿಸಿ ಅವರನ್ನು ಋಣಮುಕ್ತರನ್ನಾಗಿಸಬೇಕು.

ಇದರೊಂದಿಗೆ ಗ್ರಾಮ ಕೇಂದ್ರಿತ ಕಾರ್ಯಕ್ರಮಗಳನ್ನು ಆರಂಭಿಸಬೇಕು. ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಆರಂಭಿಸಿ ಬಂಡವಾಳಗಾರರು ಹಾಗೂ ರಾಜಕಾರಣಿಗಳ ಹೊಟ್ಟೆ ತುಂಬಿಸುವ ಕೆಲಸ ಕೈಬಿಟ್ಟು, ಕಿರು ನೀರಾವರಿ ಯೋಜನೆ, ಕೆರೆ ಕಟ್ಟೆಗಳಿಗೆ ಮರು ಜೀವ ತುಂಬುವ ಕೆಲಸ ಆರಂಭಿಸಬೇಕು. ಪ್ರತಿ ಹಳ್ಳಿಯಲ್ಲಿ ಮಳೆ ನೀರಿಗೆ ತಡೆ ಒಡ್ಡಿ ನೀರು ಭೂಮಿಗೆ ಇಂಗುವ ವ್ಯವಸ್ಥೆ ಮಾಡಬೇಕು. ರಾಜ್ಯಾದ್ಯಂತ ಇವೆ ಎಂದು ಹೇಳಲಾಗುವ ಸುಮಾರು ಐದು ಸಾವಿರ ಕೆರೆಗಳ ಹೂಳೆತ್ತಿ ಅಲ್ಲಿ ಜೀವ ಜಲ ಸ್ಥಿರಗೊಳಿಸುವ ಕೆಲಸ ಮಾಡಿದರೆ ಬರದ ಬೇಗೆಯಿಂದ ಸ್ವಲ್ಪವಾದರೂ ನೆಮ್ಮದಿ ಕಾಣಬಹುದು.

ಗ್ರಾಮೀಣ ಪ್ರದೇಶದ ಜನ ವ್ಯವಸಾಯವನ್ನೇ ಪೂರ್ಣವಾಗಿ ಅವಲಂಬಿಸುವ ಪರಿಪಾಠವೂ ಹೋಗಬೇಕು. ಅದಕ್ಕೆ ಕುಶಲಕಲೆ, ಕೈಕಸುಬುಗಳು ಮತ್ತೆ ಗ್ರಾಮೀಣ ಬದುಕಿನಲ್ಲಿ ಒಡಮೂಡಲು ಸರ್ಕಾರ ಪ್ರೇರೇಪಣೆ ನೀಡಬೇಕು. ಮಧ್ಯಪ್ರದೇಶ ಸರ್ಕಾರ ಈ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದೆ. ಗ್ರಾಮೀಣ ಪ್ರದೇಶದ ಜನ ಸಿದ್ಧಪಡಿಸಿದ ಕುಶಲಕಲಾ ಉತ್ಪನ್ನಗಳಿಗೆ ಸರ್ಕಾರವೇ ನೇರವಾಗಿ ಮಾರುಕಟ್ಟೆ ಒದಗಿಸುವ ಕೆಲಸವನ್ನು ಆರಂಭಿಸಬೇಕು. ಕೃಷಿಗಾಗಿ ಬಳಸುತ್ತಿರುವ ಹತ್ತು ಹಲವು ಉಪಕರಣಗಳು ಆಯಾ ಗ್ರಾಮಗಳಲ್ಲೇ ಉತ್ಪತ್ತಿಯಾಗುವಂತೆ ನೋಡಿಕೊಳ್ಳಬೇಕು. ರಾಸಾಯನಿಕ ಗೊಬ್ಬರಗಳ ಬಳಕೆಗೆ ಕಡಿವಾಣ ಹಾಕಿ ಜೈವಿಕ ಗೊಬ್ಬರದ ಬಳಕೆಗೆ ಪ್ರೋತ್ಸಾಹ ನೀಡಬೇಕು.

ಇವೆಲ್ಲ ಕೇವಲ ಕಾಗದದ ಮೇಲಿನ ಪ್ರತಾಪಗಳಾಗಬಾರದು. ಮುಖ್ಯಮಂತ್ರಿ ಕೃಷ್ಣ ಅವರಿಗೆ ನಿಜವಾಗಿಯೂ ರೈತರ ಬಗ್ಗೆ ಕಾಳಜಿ ಇದ್ದರೆ, ಇತ್ತ ಕೂಡಲೇ ಗಮನಹರಿಸಿ ಕಾರ್ಯತತ್ಪರರಾಗಬೇಕು.

O ಇಂದೂಧರ ಹೊನ್ನಾಪುರ
ಸಂಪಾದಕ

ಪ್ರತಿಕ್ರಿಯೆ

ಬ್ರಾಹ್ಮಣರಿಗೆ ಆತ್ಮ ಗೌರವವಿದೆಯೆ?

ಆಗಸ್ಟ್ ತಿಂಗಳ 'ಸಂವಾದ'ದಲ್ಲಿ ಪ್ರಕಟವಾದ ಸಿ.ಎನ್. ಕೃಷ್ಣಮಾಚಾರ್ ಹಾಗೂ ಸುಬ್ಬು ಹೊಲೆಯಾರ್ ಅವರ ಬರಹಗಳನ್ನು ಓದಿ ಇಲ್ಲಿ ಕೆಲ ಅಂಶಗಳನ್ನು ಪ್ರಸ್ತಾಪಿಸುವ ಉದ್ದೇಶವಿದೆ.

ಬ್ರಾಹ್ಮಣರು ಜೀವನೋಪಾಯ ನಡೆಸುವ ಕೆಲ ಕ್ಷೇತ್ರಗಳನ್ನು ಪ್ರಸ್ತಾಪಿಸಿರುವ ಆಚಾರ್ ಅವರು ಅಲ್ಲಿಗೂ ಮೀಸಲಾತಿ ತಂದಾಗ ಹಾರುವರು ಹೆಂಡ ಮಾರಿ ಶ್ರೀಮಂತರಾಗುತ್ತಾರೆ...ಇತ್ಯಾದಿ ಅಂದಿದ್ದಾರೆ. ಅಂದರೆ ಶ್ರೀಮಂತರಾಗಬೇಕಿದ್ದರೆ ಹೆಂಡ ಹೊರುವ ಮತ್ತು ಅದೇ ಧಾಟಿಯ ಹಲವಾರು ಉದ್ಯೋಗ ಕೈಗೊಳ್ಳಬೇಕೆಂದಾಯಿತು. ಹಾಗಿದ್ದರೆ ಇವತ್ತು ಶ್ರೀಮಂತರಾಗಿರುವ ಬ್ರಾಹ್ಮಣರೆಲ್ಲ ನೀಚಜಾತಿ ನೀಚ ಕಾರ್ಯಗಳಿಂದಲೇ ಶ್ರೀಮಂತ ರಾಗಿರಬಹುದೇ? ಆಚಾರ್ ಅವರೇ ಹೇಳಬೇಕು. ಬ್ರಾಹ್ಮಣರು ಉಳುಮೆ ಮಾಡಿ ಫಾರ್ಮ್ ಹೌಸ್‌ಗಳಲ್ಲಿ ಐಷಾರಾಮಿ ಜೀವನ ನಡೆಸಲು ಸಾಧ್ಯವಿದೆಯೇ? ನಿಜ ಅರ್ಥದಲ್ಲಿ ತನ್ನ ಸ್ವಂತ ಪರಿಶ್ರಮದಿಂದ, ಯಾರಿಗೂ ಅನ್ಯಾಯ ಮಾಡದೆ ಉಳುಮೆ ಮಾಡಿದ ಬ್ರಾಹ್ಮಣನಿರಲಿ, ಯಾರೇ ಇರಲಿ ಐಷಾರಾಮಿ ಜೀವನ ನಡೆಸಬಲ್ಲರೇ? ಆಚಾರ್ ಅವರ ಮನಸು ದುಡಿಮೆಯ ಬದುಕಿನತ್ತ ಹೊರಳದೆ ಐಷಾರಾಮಿ ಬದುಕಿನತ್ತ ಹೊರಳಿರುವುದನ್ನು ಕಾಣಬಹುದು. ಇನ್‌ಫೋಸಿಸ್‌ನಂತಹ ಸಂಸ್ಥೆಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಆಚಾರ್ ದರಿದ್ರ ಬ್ರಾಹ್ಮಣರ ವಾರಾನ್ನ, ದೈವ ಭೀರು ಬ್ರಾಹ್ಮಣರ ಇಹ ಪದಾರ್ಥ ಸೇವೆ ಬಗ್ಗೆಯೂ ಹೇಳುತ್ತಾರೆ. ಸರಿಯೇ, ಆದರೆ ಅವರು ಗಮನಿಸಬೇಕು. ಪ್ರಾಯಶಃ ಯಾವ ದಲಿತನೂ ಬ್ರಾಹ್ಮಣ ಹುಡುಗರ ವಾರಾನ್ನವನ್ನು ಕಿತ್ತುಕೊಂಡಿಲ್ಲ. ಅದನ್ನು ತಮಗೆ ಕೊಡಿ ಎಂದೂ ಕೇಳುತ್ತಿಲ್ಲ. ಇಂಥಲ್ಲಿ ಕೇವಲ ಮನುಷ್ಯರಾಗಿ ಯೋಚಿಸಬೇಕು. ಬ್ರಾಹ್ಮಣ ಹುಡುಗನೊಬ್ಬ ವಾರಾನ್ನ ಉಂಡಾದರೂ ಉಸಿರಾಡಬಲ್ಲ. ಆದರೆ ದರಿದ್ರ ದಲಿತನೊಬ್ಬ ಜೀವಿಸಲು ನಮ್ಮ ವ್ಯವಸ್ಥೆಯಲ್ಲಿ ಅಂತಹ ಯಾವ ಪರ್ಯಾಯ ಮಾರ್ಗವಿದೆ? ಅಂತಹ ಒಂದು ಪರ್ಯಾಯವನ್ನು ಹುಡುಕಿಕೊಡದೆ ಮೀಸಲಾತಿಗೆ ಜೋತು ಬೀಳುವುದು ದಲಿತರ ಆತ್ಮಗೌರವಕ್ಕೆ ಕುಂದು ಎನ್ನುವಂಥದ್ದು ಸರಿ ಎನಿಸೀತೇ? ಈ ಆತ್ಮ ಗೌರವ ಬ್ರಾಹ್ಮಣರಿಗಿದೆಯೇನು? ಆತ್ಮಸಾಕ್ಷಿ ಇದೆಯೇನು? ನನ್ನ ಈ ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಈ ಕಡೆ ಗಮನಹರಿಸಿ.

ಒಂದಾನೊಂದು ಕಾಲದಲ್ಲಿ ನಾನೂ ಕೂಡ ಬ್ರಾಹ್ಮಣನಾಗಿದ್ದ ಕಾಲವಿತ್ತು. ಹೈಸ್ಕೂಲಿಗೆ ಸೇರಲು ಹಣ ಕೊಡಿ ಎಂದರೆ ಬಂಡವಾಳಶಾಹಿ ಬ್ರಾಹ್ಮಣರಿಗೆ ಕಿವಿ ಕೇಳಿಸಲಿಲ್ಲ. ಅಮ್ಮ ತನ್ನ ಚಿನ್ನದ 'ತಾಳಿ' ಮಾರಿ ಶಾಲೆಗೆ ಸೇರಿಸಿದರು. ಪುಸ್ತಕಕ್ಕೆ ಹಣವಿಲ್ಲ. ಎಲ್ಲರ ಮನೆಯಲ್ಲಿ ಕೂಲಿ ಮಾಡಿದೆ. ಮಣ್ಣು ತೆಗೆದೆ, ಕಸ ಹೊಡೆದೆ, ಗೊಬ್ಬರ

> ದಲಿತರು ಬ್ರಾಹ್ಮಣರು ಎಲ್ಲರೂ ಈ ನಾಡಿನ ಪ್ರಜೆಗಳೇ. ಹಾಗಿರುವಾಗ ಬಡ ಬ್ರಾಹ್ಮಣನಿಗೆ ಬದುಕಿ ಉಳಿಯಲು ಇರುವ ಅವಕಾಶಗಳು ದಲಿತರಿಗೂ ವಿಸ್ತರಣೆ ಆಗಬೇಕು. ಆದರೆ ದಲಿತರು ಅಡುಗೆ ಮಾಡಿ ಬಡಿಸಿದರೆ ಬಿಸಿಯೂಟ ಒಲ್ಲದ ಸಮಾಜದಲ್ಲಿ ಇದೆಲ್ಲ ಸಾಧ್ಯವೇ? ಇದಕ್ಕೆಲ್ಲ ಅವಕಾಶವಿಲ್ಲವೆಂದ ಮೇಲೆ ಮೀಸಲಾತಿಯ ಹೊರತು ಬೇರೆಲ್ಲಿಂದ ಬದುಕುಳಿಯಲು ಸಾಧ್ಯ?
>
> ○ ಅರವಿಂದ ಚೊಕ್ಕಾಡಿ

ಎತ್ತಿದೆ. ಬ್ರಾಹ್ಮಣರಲ್ಲಿ ಕೆಲಸ ಮಾಡಲಿಲ್ಲ. ಯಾಕೆಂದರೆ ಅವರು ಸರಿಯಾಗಿ ಸಂಬಳ ಕೊಡುವುದಿಲ್ಲ. ಬಿಟ್ಟಿ ಚಾಕರಿಯೇ ಅಧಿಕ. ದಲಿತರ ಮನೆಯಲ್ಲಿ ಕೆಲಸ ಮಾಡಿ ಶಾಲೆಗೆ ಹೋಗುವ 13-14 ವರ್ಷದ ಬ್ರಾಹ್ಮಣ ಹುಡುಗನನ್ನು ಕಂಡೂ ಬ್ರಾಹ್ಮಣರ ಆತ್ಮಗೌರವಕ್ಕೆ ಚ್ಯುತಿ ಬರಲಿಲ್ಲವೇ? ಎಲ್ಲ ಮಕ್ಕಳು ಹೋಗುವಂತೆ ನಾನೂ ಕೂಡ ಸಾಂಪ್ರದಾಯಿಕ ಬ್ರಾಹ್ಮಣರ ಮನೆಯ ಕಾರ್ಯಕ್ರಮಗಳಿಗೆ ಹೋಗಬೇಕೆಂದು ಆಸೆಯಿಂದಿದ್ದರೆ ಯಾರೂ ಕರೆಯಲಿಲ್ಲ. ಗತಿಗೆಟ್ಟ ಬ್ರಾಹ್ಮಣನಿಗೆ ಬ್ರಾಹ್ಮಣ ಸಮುದಾಯವೇ ಬಹಿಷ್ಕಾರವಿಲ್ಲದ ಬಹಿಷ್ಕಾರ ಹಾಕುತ್ತದೆ. ಇದೇ ಏನು ಆತ್ಮಸಾಕ್ಷಿ? ಇನ್ನೂ ಮುಂದಕ್ಕೆ ಬನ್ನಿ. ನಾನಾಗ ಹದಿನಾರು ವರ್ಷದ ಹುಡುಗ. ಕಛೇರಿ ಕೆಲಸವೆಂದು ಮೋಸದಿಂದ ಕರೆದೊಯ್ದ ಬ್ರಾಹ್ಮಣರೊಬ್ಬರು ನೆಲ ತೊಳೆಸಿದರು. ಪಾತ್ರೆ ತೊಳೆಸಿದರು. ಇನ್ನೂ ಮುಗಿದಿಲ್ಲ. ಎಲ್ಲರೂ ಮೇಲು ಅಂತಸ್ತಿನಲ್ಲಿ ಊಟ ಮಾಡುತ್ತಿದ್ದರೆ ನನಗೆ ಜಗಲಿ ಮೂಲೆಯಲ್ಲಿ ಊಟ. ನಿನ್ನೆಯದೋ ಮೊನ್ನೆಯದೋ; ಇಂದಿನದಂತೂ ಅಲ್ಲ. ಬೇಕಾದರೆ ಆ ಪದಾರ್ಥ ತಿನ್ನಬೇಕು. ಮಲಗಲು ಜಾಗವೆಲ್ಲಿ ಗೊತ್ತೆ? ಏಳೆಂಟು ರೂಮುಗಳಿರುವ ವಿಶಾಲ ಬಂಗಲೆಯಲ್ಲಿ ಪೋರ್ಟಿಕೋದ ಒಂದು ಮೂಲೆಯಲ್ಲಿ ನಾಯಿಕಟ್ಟುವ ಸ್ಥಳ. ಧನಿಗಳ ಚಪ್ಪಲಿ, ಶೂ, ತೋಟಕ್ಕೆ ಔಷಧಿ ಸಿಂಪಡಿಸುವ ಮದ್ದು, ಅದರ ಘಮಟು ವಾಸನೆ ತುಂಬಿದ ಸ್ಥಳವಿದೆ. ಅಲ್ಲಿ ಮಲಗಬೇಕು. ಬೆಳಗೆದ್ದು ನಾಯಿಯ ಸ್ನಾನ ಮಾಡಿಸಬೇಕು. ಲ್ಯಾಟ್ರೀನ್ ತೊಳೆಯಬೇಕು. ಜೀಪು-ಕಾರು ತಿಕ್ಕಬೇಕು. ರಾತ್ರಿ 12-1 ಗಂಟೆಗೆ ಟಾರ್ಚ್ ಹಿಡಿದು 25-30 ಎಕ್ರೆ ತೋಟ ಸುತ್ತಬೇಕು, ಕಳ್ಳರು ಬಾರದಂತೆ! ಬೇಕಾದ್ದಕ್ಕೆಲ್ಲ ಚಾತಿಯವನು, ಬೇಡದ್ದಕ್ಕೆಲ್ಲ ನಿಕೃಷ್ಟ ಜೀವಿಯಾದವ ನಾನು. ಈ ಅನ್ಯಾಯ ಮಾಡಿದ್ದು ದಲಿತರಲ್ಲ; ಶೂದ್ರರಲ್ಲ. ಸ್ವಜಾತಿಯ ಜನರೇ. ಇನ್ನೂ ಮುಗಿದಿಲ್ಲ, ಪಿಯುಸಿಯಲ್ಲಿ ನಾನು ರಾಜ್ಯ ಮಟ್ಟದ ರ್‍ಯಾಂಕ್ ಹೋಲ್ಡರ್; ಡಿಗ್ರಿ ಕಲಿಯಲು ದುಡ್ಡಿಲ್ಲ; ಸಹಾಯ ಮಾಡಿ ಎಂದು ಬ್ರಾಹ್ಮಣ ಸಂಘಕ್ಕೆ ಬರೆದರೆ ಪ್ರತಿಕ್ರಿಯೆ ಇಲ್ಲ. ಕೊನೆಗೂ ಸಿಕ್ಕಿತು ಸ್ಕಾಲರ್‌ಶಿಪ್ 140ರೂ., ವರ್ಷಕ್ಕೆ ಡಿಗ್ರಿ ವ್ಯಾಸಂಗಕ್ಕೆ! ಇವತ್ತು ಅದೇ ಸಂಘ ಮೇಲೆ ಮೇಲೆ ಸದಸ್ಯನಾಗು ಅಂತ ನನಗೆ ಪತ್ರ ಬರೆಯುತ್ತದೆ. ಬ್ರಾಹ್ಮಣ ಸಂಸ್ಕೃತಿಯ ಉಳಿವಿನ ಬಗ್ಗೆ ಮಠಾಧೀಶರು ಕೊರೆಯುತ್ತಾರೆ. ಬ್ರಾಹ್ಮಣರೆಲ್ಲ ಒಂದಾಗಬೇಕು, ಬ್ರಾಹ್ಮಣನೊಬ್ಬ ಕಮ್ಯುನಿಸ್ಟ್ ಆಗಬಾರದು ಎನ್ನುವವರಿದ್ದಾರೆ. ಸ್ವಾಮಿ, ಬ್ರಾಹ್ಮಣರೆಲ್ಲ ಏಕೆ ಒಂದಾಗಬೇಕು? ಹೈಟೆಕ್ ಬ್ರಾಹ್ಮಣರ ಲ್ಯಾಟ್ರೀನ್ ತೊಳೆಯುವುದಕ್ಕೇನು? ಆಚಾರ್ ಅವರಾಗಲಿ, ಯಾರೇ ಆಗಲಿ ನನ್ನ ಈ ಪ್ರಶ್ನೆಗೆ ಏನೆಂದು ಉತ್ತರಿಸುತ್ತಾರೆ ಎಂಬ ಕುತೂಹಲವಿದೆ. ಮೊತ್ತಮೊದಲು ಬ್ರಾಹ್ಮಣರು ತಮ್ಮ ಆತ್ಮಗೌರವ ಎಷ್ಟಿದೆ ಎಂದು ನೋಡಿಕೊಳ್ಳಲಿ ಆ ಬಳಿಕ ಇತರರಿಗೆ ಬೋಧಿಸಲಿ ಅಲ್ಲವೇ?

ಆಚಾರ್ ಅವರು ವ್ಯಂಗ್ಯಕ್ಕಾಗಿ ಹೇಳಿದ ವಿಚಾರ ನಿಜಕ್ಕೂ ವಾಸ್ತವವಾಗಬೇಕು. ವಾರಾನ್ನ, ಪೂಜೆ, ಅದೇ ಇಹ ಪದಾರ್ಥ (ಅದೇನು ಪದಾರ್ಥವೋ? ಮಣ್ಣು?) ವೃತ್ತಿಗಳು ದಲಿತರಿಗೂ ಪ್ರಾಪ್ತವಾಗಬೇಕು. ದಲಿತರು ಬ್ರಾಹ್ಮಣರು ಎಲ್ಲರೂ ಈ ನಾಡಿನ ಪ್ರಜೆಗಳೇ. ಹಾಗಿರುವಾಗ ಬಡ ಬ್ರಾಹ್ಮಣನಿಗೆ ಬದುಕಿ ಉಳಿಯಲು ಇರುವ ಅವಕಾಶಗಳು ದಲಿತರಿಗೂ ವಿಸ್ತರಣೆ ಆಗಬೇಕು. ಆದರೆ ದಲಿತರು ಅಡುಗೆ ಮಾಡಿ ಬಡಿಸಿದರೆ ಬಿಸಿ ಊಟ ಒಲ್ಲದ ಸಮಾಜದಲ್ಲಿ ಇದೆಲ್ಲ ಸಾಧ್ಯವೇ? ಇದಕ್ಕೆಲ್ಲ

ಅವಕಾಶವಿಲ್ಲವೆಂದ ಮೇಲೆ ಮೀಸಲಾತಿಯ ಹೊರತು ಬೇರೆಲ್ಲಿಂದ ಬದುಕುಳಿಯಲು ಸಾಧ್ಯ? ಆದರೆ ನಮ್ಮ ದುರಂತ. ಹೇಗು ಹೇಗೋ ಮೇಲು ವರ್ಗ ಸೇರಿದ ಕೆಲವೇ ಕೆಲವು ಮಂದಿ ದಲಿತರು ನಮ್ಮಲ್ಲಿದ್ದಾರೆ. ಶಿಕ್ಷಣ, ಹಣಕಾಸು ಸೌಕರ್ಯ ಅವರನ್ನು ಜಾಗೃತರನ್ನಾಗಿ ಮಾಡಿದೆ. ಅದು ಸಂತೋಷವೇ. ಆದರೆ ಅವರೊಂದಿಗೆ ನಮ್ಮೂರಿನಲ್ಲಿ ಅಡಿಕೆ ತೆಗೆಯುವ ದಲಿತನೊಬ್ಬ ಸ್ಪರ್ಧಿಸಲಾರ. ನಿಜಕ್ಕೂ ಮೀಸಲಾತಿ ಬೇಕಾಗಿರುವುದು ಅಡಿಕೆ ತೆಗೆಯುವ ದಲಿತರ ಮಕ್ಕಳಿಗೇ ಹೊರತು ಮೇಲು ವರ್ಗದ ದಲಿತರಿಗಲ್ಲ. ಸುಬ್ಬು ಹೊಲೆಯಾರ್ ಅವರೂ ಗಮನಿಸಬೇಕು, ಮೇಲು ವರ್ಗಕ್ಕೆ ಸೇರುತ್ತಾ ಹೋದ ಕೆಲ ದಲಿತರಲ್ಲೂ ಬಂಡವಾಳ ಶಾಹಿ ಧೋರಣೆ ಬೆಳೆಯುತ್ತಿದೆ. ಅಲ್ಲಿಯೂ ಸ್ವಜಾತೀಯ ದುರ್ಬಲರ ಶೋಷಣೆ, ಅನ್ಯ ಜಾತಿಯ (ಮೇಲು ಜಾತಿಯ) ದುರ್ಬಲರ ಮೇಲೆ ಆಕ್ರಮಣಕಾರಿ ಪ್ರವೃತ್ತಿ ಬೆಳೆಯುತ್ತಿದೆ. ಅದೂ ಸಹ ಖಂಡನಾರ್ಹವೇ. ಹಾಗೆಯೇ ದಲಿತ ದೌರ್ಜನ್ಯದ ನಾನಾ ಅಂಶಗಳನ್ನು ಪರಿಚಯಿಸಿರುವ ಸುಬ್ಬು ಹೊಲೆಯಾರ್ ಹೇಳಿರುವುದೆಲ್ಲ ಸತ್ಯ. ಆದರೆ ಇನ್ನೂ ಸತ್ಯವಿದೆ. ಸುದ್ದಿಯೇ ಆಗದೆ ಮೇಲು ಜಾತಿಯ ದುರ್ಬಲರ ಮೇಲೂ ಕೆಳಜಾತಿಯ ಕೆಲವರು ಆಕ್ರಮಣ ವೆಸಗುವುದುಂಟು. ಮೇಲು ಜಾತಿಯ ಮೇಲು ವರ್ಗದಿಂದ ತಮಗಾಗುವ ನೋವನ್ನು, ತಮಗಾದ ದೌರ್ಜನ್ಯವನ್ನು ಅದೇ ಜಾತಿಯ ದುರ್ಬಲರ ಮೇಲೆ ಪ್ರಯೋಗಿಸುವುದು ಸಲ್ಲ. ಮೇಲು ಜಾತಿಯ ಮೇಲು ವರ್ಗವನ್ನು ಮಟ್ಟಹಾಕಲಾಗದ ಅಸಹಾಯಕ ಸ್ಥಿತಿಯಲ್ಲಿ ಇದು ತಾತ್ಕಾಲಿಕ ಸಾಂತ್ವನ ಕೊಡಬಲ್ಲುದಾದರೂ ಶುದ್ಧ ಮಾನವೀಯ ದೃಷ್ಟಿಯಲ್ಲಿ ಉಚಿತವೆನಿಸದು.

ರಾಷ್ಟ್ರಾಧ್ಯಕ್ಷರಾಗಿದ್ದಾಗ ಕೆ.ಆರ್. ನಾರಾಯಣನ್ ಅವರ ಫ್ರಾನ್ಸ್ ಭೇಟಿಯನ್ನು ಸುಬ್ಬು ಹೊಲೆಯಾರ್ ಅವರು ಪ್ರಸ್ತಾಪಿಸಿದ್ದಾರೆ. ನನಗೆ ನೆನಪಿರುವಂತೆ ನಾರಾಯಣನ್‌ರನ್ನು ಅಸ್ಪೃಶ್ಯ ದಲಿತ ಎಂದುದು ಈ ನಾಡಿನ ಪತ್ರಿಕೆಯಲ್ಲ. ಫ್ರಾನ್ಸ್ ದೇಶದ ಪತ್ರಿಕೆ. (ಖಚಿತವಾಗಿ ಹೇಳಲಾರೆ). ಇಲ್ಲಿಯೂ ಒಂದು ದುರಂತವೇನೆಂದರೆ ಯಾವ ಪಾಶ್ಚಾತ್ಯ ಸಮಾಜ 'ಅಸ್ಪೃಶ್ಯತೆ'ಯನ್ನು ಗುರುತಿಸುತ್ತದೋ ಅದೇ ವ್ಯವಸ್ಥೆ ತರುತ್ತಿರುವ ಜಾಗತೀಕರಣವನ್ನು ದಲಿತರೇ ಸಮರ್ಥಿಸಿಬಿಡುವುದು! ಅದಕ್ಕೆ ಡಾ|| ಮೊಗಳ್ಳಿ ಗಣೇಶ್ ಅವರ 'ದಲಿತರು ಮತ್ತು ಜಾಗತೀಕರಣ' ಕೃತಿ ಓದಬೇಕು. ಜಾಗತೀಕರಣವನ್ನು ವಿರೋಧಿಸುವ ಬಹುತೇಕರು ಮೇಲುಜಾತಿಯವರಾಗಿದ್ದು ಅವರೆಲ್ಲ ದಲಿತರಿಗೆ ಒಳ್ಳೆಯದಾಗದಿರಲಿ' ಎಂದು ಅದನ್ನು ವಿರೋಧಿಸುತ್ತಾರೆ ಎಂಬುದು ಮೊಗಳ್ಳಿಯವರ ವಾದ. ನನಗೇನೋ ಹಾಗನ್ನಿಸುತ್ತಿಲ್ಲ. ಜಾಗತೀಕರಣದ ಬಗ್ಗೆ ಅತೃಪ್ತರಾಗಿರುವ ಅಮರ್ತ್ಯಸೇನ್, ದಿ|| ಡಾ|| ಪಿ.ಆರ್. ಬ್ರಹ್ಮಾನಂದ, ಡಾ|| ಜಿ. ರಾಮಕೃಷ್ಣ ಮುಂತಾದವರೆಲ್ಲ ದಲಿತರಿಗೆ ಒಳಿತಾಗಬಾರದೆಂದು ಭಾವಿಸುತ್ತಿದ್ದಾರೆ ಎಂದರೆ ನಂಬುವುದು ಕಷ್ಟ. ಸ್ವತಃ ಕೆ.ಆರ್. ನಾರಾಯಣನ್ ಅವರೇ

(8ನೇ ಪುಟಕ್ಕೆ)

ಕೆಂಡಾಮಂಡಲವಾಗುವ ಕೆನೆಪದರ !

ಏನೋ ಮಾಡುವುದಕ್ಕೆ ಹೋಗಿ ಅದೇನೋ ಮಾಡಿದಂತಾಯಿತು, ನಾನು ಖಾಸಗಿರಂಗದಲ್ಲಿ ಮೀಸಲಾತಿಯ ಬಗ್ಗೆ ಬರೆದದ್ದು. ಕೋಪ, ತಿರಸ್ಕಾರ, ಪ್ರತಿಭಟನೆ, ವ್ಯಂಗ್ಯ ಎಲ್ಲವೂ ಬಂತು!

ಈಗ ಅದಕ್ಕೇ ಸಂಬಂಧಿಸಿದಂತೆ ಇನ್ನೊಂದು ವಿಷಯವನ್ನು ವಾಚಕರ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಓದುವಾಗ ಯಾವುದೇ ಬಣ್ಣದ ಕನ್ನಡಕ ಹಾಕಿಕೊಳ್ಳಬಾರದು.

ನಿರ್ಮಲ ಎಂಬ ಹೆಣ್ಣು ಮಗಳು ನಮ್ಮ ಆಫೀಸಿನಲ್ಲಿ ಕಸ ಗುಡಿಸುವ ಕೆಲಸ ಮಾಡುತ್ತಾರೆ. ಈಕೆಯದು ದಿನಗೂಲಿ ಕೆಲಸ. ಈಕೆಯ ವರಮಾನ ತಿಂಗಳಿಗೆ 1300 ರೂಪಾಯಿ. ರಜಾ ಹಾಕಿದರೆ ಸಂಬಳ ಕಟ್.

ಇವರು ಕಳೆದ ತಿಂಗಳು ನಮಗೆಲ್ಲಾ ಸ್ವೀಟ್ ಕೊಟ್ಟರು. ಕಾರಣ, ಈಕೆಯ ಮಗ ಸಿಇಟಿ ಪರೀಕ್ಷೆಯಲ್ಲಿ ಮೆಡಿಕಲ್ ವಿಭಾಗದಲ್ಲಿ 3000ನೇ ರ್‍ಯಾಂಕ್‌ಗಳಿಸಿ ಬೆಂಗಳೂರಿನ ಪ್ರತಿಷ್ಠಿತ ಎಂ.ಎಸ್. ರಾಮಯ್ಯ ಕಾಲೇಜಿನಲ್ಲಿ ಪ್ರವೇಶ ಪಡೆದದ್ದು. ಈ ತಾಯಿ, ತುಂಬ ಸಂಕೋಚದಿಂದಲೇ ಸಿಹಿಯನ್ನು ಹಂಚಿದರು.

ನಿರ್ಮಲ, ದಲಿತರು. ಈಕೆಯ ಗಂಡ ರಾಜ್ಯ ಸರಕಾರದ ಆರೋಗ್ಯ ಇಲಾಖೆಯಲ್ಲಿ ಜವಾನ ಅಥವಾ ಆ ಥರದೆಯ ಕೆಲಸದಲ್ಲಿದ್ದಾರೆ. ಅತ್ಯಂತ ಸಣ್ಣಮನೆಯಲ್ಲಿ ಈಕೆಯ ವಾಸ. ಇಬ್ಬರು ಮಕ್ಕಳು-ಹೆಣ್ಣು ಮತ್ತು ಗಂಡು. ಮಗಳು ಬಿ.ಕಾಂ.ನ ಅಂತಿಮ ವರ್ಷದಲ್ಲಿದ್ದಾಳೆ. ಎಂ.ಕಾಂ. ಮಾಡುವ ಆಸೆಯನ್ನು ಈ ಹುಡುಗಿ ಇಟ್ಟುಕೊಂಡಿದ್ದಾಳೆ.

ನಿರ್ಮಲರ ಮಗ ಎಸ್.ಎಸ್.ಎಲ್.ಸಿ.ಯಲ್ಲಿ ಶೇ. 89 ಮತ್ತು ಪಿ.ಯು.ಸಿ.ಯಲ್ಲೂ ಸಹ ಶೇ. 89ರಷ್ಟು ಅಂಕಗಳನ್ನು ಪಡೆದಿದ್ದಾನೆ. ಓದಿದ್ದು-ಆದರ್ಶ ಹೈಸ್ಕೂಲು ಮತ್ತು ಸೆಂಟ್ ಜೋಸೆಫ್ ಕಾಲೇಜಿನಲ್ಲಿ. ಆರೋಗ್ಯ ಇಲಾಖೆಯ ಜವಾನನ ಮಗ ವೈದ್ಯನಾಗುತ್ತಾನೆ.

ಈ ಹುಡುಗ ಎಂ.ಎಸ್. ರಾಮಯ್ಯ ಕಾಲೇಜಿನಲ್ಲಿ 15-20 ಲಕ್ಷ ರೂ. ಕೊಟ್ಟು ಸೀಟು ಪಡೆದಿರುವವರ ಮಧ್ಯೆ ಓದುತ್ತಾನೆ. ಇದು ಸಂತೋಷದ ವಿಷಯ. ಈ ಬಾರಿಯ ಸಿಇಟಿ ಪ್ರವೇಶದಲ್ಲಿ ಒಂದು ಬಹು ಮುಖ್ಯ ಸುದ್ದಿ. ಮಾಧ್ಯಮಗಳ ಕಣ್ಣಿಗೆ ಬೀಳಲಿಲ್ಲ. ಇದು ಜಾಣ ಕುರುಡೇ ಇರಬೇಕು.

ಸಿಇಟಿಯ ಮೆಡಿಕಲ್ ಪ್ರವೇಶದಲ್ಲಿ ದಲಿತರ ಕೋಟ ಐದು ಸಾವಿರ ರ್‍ಯಾಂಕ್‌ಗಳಲ್ಲೇ ಮುಗಿದು ಹೋಯಿತು. ಮೇಲೆ ಹೇಳಿದ ನಿರ್ಮಲ ಅವರ ಮಗ ಶೇ. 89ರಷ್ಟು ತೆಗೆದುಕೊಂಡು 3000 ಸಾವಿರ ರ್‍ಯಾಂಕ್ ಪಡೆದಿರುವುದರಿಂದ, ಐದು ಸಾವಿರ ರ್‍ಯಾಂಕ್ ಪಡೆದ ವಿದ್ಯಾರ್ಥಿಯು ಕನಿಷ್ಠ ಶೇ. 85 ಅಂಕಗಳನ್ನು ಗಳಿಸಿರುತ್ತಾನೆ. ಅಂದರೆ ದಲಿತರಲ್ಲೂ ಶೇ. 85ಕ್ಕಿಂತ ಕಡಿಮೆ ಪಡೆದವನಿಗೆ ಮೆಡಿಕಲ್ ಸೀಟು ಸಿಗುವುದಿಲ್ಲ ಎಂಬುದು ಸ್ಪಷ್ಟವಾಯಿತು. ಜೊತೆಗೆ ಸಾಮಾನ್ಯ ವರ್ಗಕ್ಕೆ ಮೆಡಿಕಲ್ ಪ್ರವೇಶ ಒಂದು ಸಾವಿರ ರ್‍ಯಾಂಕ್‌ಗೆ ನಿಂತಿದ್ದರೆ, ದಲಿತರ ಕೋಟಾದಲ್ಲಿ ಸುಮಾರು 20 ಸಾವಿರ ರ್‍ಯಾಂಕ್ ಪಡೆದ ವಿದ್ಯಾರ್ಥಿ ಮೆಡಿಕಲ್ ಸೀಟು ಪಡೆದದ್ದು "ಇಂಡಿಯನ್ ಎಕ್ಸ್‌ಪ್ರೆಸ್"ನಲ್ಲಿ ದೊಡ್ಡ ಸುದ್ದಿಯಾಗಿ ಪ್ರಕಟವಾಗಿತ್ತು. ರಾಷ್ಟ್ರಾದ್ಯಂತ-ಭೀಕರವಾದ ಚರ್ಚೆಯೂ ನಡೆಯಿತು. ಆದರೆ ನಮ್ಮ ಸಿಇಟಿ ಪ್ರವೇಶದ ಅತಿ ಮುಖ್ಯ ಸುದ್ದಿ ಬೆಳಕು ಕಾಣಲೇ ಇಲ್ಲ.

ಆಗಸ್ಟ್ 2003ರ 'ಸಂವಾದ'ದಲ್ಲಿ ಎಚ್.ಎಸ್. ದೊರೆಸ್ವಾಮಿಯವರು, ಮೀಸಲಾತಿಯ ಲಾಭವನ್ನು ದಲಿತರಲ್ಲೇ ಇತ್ತೀಚೆಗೆ ಹುಟ್ಟಿರುವ ಮೇಲು ವರ್ಗದ ಅಥವಾ ಶ್ರೀಮಂತರ ಅಥವಾ ಪಟ್ಟಭದ್ರರೇ ಕಬಳಿಸುತ್ತಿದ್ದಾರೆ ಎಂಬ ಸುದ್ದಿ ಇದೆ. ನಾನೂ ಇದನ್ನೇ ಹೇಳುತ್ತಿದ್ದೇನೆ.

ಈ ಹಿನ್ನಲೆಯಲ್ಲಿ ಈಗ ಒಂದು ಸಣ್ಣ ಅಧ್ಯಯನ ಆಗಬೇಕಿದೆ. ಈ ಬಾರಿಯ ಸಿಇಟಿ ಪ್ರವೇಶದಲ್ಲಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಮೀಸಲಾತಿಯಲ್ಲಿ ಪ್ರವೇಶ ಪಡೆದ ದಲಿತ ವಿದ್ಯಾರ್ಥಿಗಳ ಆರ್ಥಿಕ ಮತ್ತು ಸಾಮಾಜಿಕ ಹಿನ್ನಲೆಯ ಬಗ್ಗೆ ಅಧ್ಯಯನ ನಡೆಸಬೇಕಿದೆ. ಆಗ ಮಾತ್ರ ಅಪವಾದದ ಸತ್ಯಾಸತ್ಯತೆ ಬಹಿರಂಗವಾಗುತ್ತದೆ. ಈ ಅಧ್ಯಯನವನ್ನು 'ಸಂವಾದ' ಪತ್ರಿಕೆಯ ಗೆಳೆಯರು ನಡೆಸಬೇಕಿದೆ.

ಮೀಸಲಾತಿಯ ಶೇಕಡಾವಾರು ಒಂದಿಷ್ಟೂ ಕಡಿಮೆಯಾಗುವುದು ಬೇಡ. ಜನಗಣತಿಯ ಆಧಾರದ ಮೇಲೆ ಇನ್ನೂ ಜಾಸ್ತಿಯಾದರೂ ಅದಕ್ಕೆ ಸ್ವಾಗತವಿದೆ. ಜೊತೆಗೆ ಮೀಸಲಾತಿ ಇನ್ನೂ ಸಾಕಷ್ಟು ವರ್ಷ ಇರಬೇಕಿದೆ.

ಆದರೆ ಆಗಸ್ಟ್-2003ರ 'ಸಂವಾದ'ದ ಮುಖಪುಟದಲ್ಲಿರುವ ಹುಡುಗನಿಗೆ ಮೀಸಲಾತಿಯ ಸೌಲಭ್ಯದ ಬಗ್ಗೆ ಚಿಂತನೆ ನಡೆಸಬೇಕಿದೆ. ಈ ಹಿನ್ನಲೆಯಲ್ಲಿ ದಲಿತರಲ್ಲಿ ಕೆನೆ ಪದರದವರಿಗೆ ಮೀಸಲಾತಿ ದೊರಕುವುದು ಬೇಡ ಎಂದು ಅಭಿಪ್ರಾಯ ಪಟ್ಟರೆ, ದಲಿತ ಗೆಳೆಯರು ಏಕೆ ಕೆಂಡಾಮಂಡಲವಾಗುತ್ತಾರೆ, ಎಂಬುದು ನನಗೆ ಅರ್ಥವಾಗುವುದಿಲ್ಲ.

ನನಗೆ ತಿಳಿದಂತೆ ಸಚಿವ ಶ್ರೀನಿವಾಸ ಪ್ರಸಾದ್, ಪೊಲೀಸ್ ಅಧಿಕಾರಿ ಎಸ್. ಮರಿಸ್ವಾಮಿ, ಲೇಖಕ ದೇವನೂರು ಮಹಾದೇವರಂಥವರು ತಮ್ಮ ಮಕ್ಕಳಿಗೆ ಮೀಸಲಾತಿ ಬೇಡ ಎಂದು ಹೇಳಿದ್ದಾರೆ. ಇದನ್ನೇ ಈಗಗಾಲೇ ಮೀಸಲಾತಿಯ ಅನುಕೂಲ ಅನುಭವಿಸಿ ಆರ್ಥಿಕ-ಸಾಮಾಜಿಕವಾಗಿ ಸ್ಥಿತಿವಂತರಾಗಿರುವ ದಲಿತರು ತಾವಾಗಿಯೇ ಮುಂದೆ ಬಂದು ಉಳಿದವರಿಗೆ ಅನುಕೂಲ ಮಾಡಿಕೊಡಬೇಕು. ಇದು ಕಾನೂನಿನ ಮೂಲಕ ಆಗಲಾರದು. ತೆರೆದ ಹೃದಯದ ಚಳುವಳಿ ಆಗಬೇಕು. 'ಸಂವಾದ' ದಸಂಸ ಗೆಳೆಯರು ಮಾಡಬೇಕು. ಹಾಗಾದಾಗಲೇ, ಆ ಹುಡುಗನ ಎದೆಯ ಎಲುಬುಗಳು ಮರೆಯಾಗಲು ಸಾಧ್ಯ.

○ ಎನ್.ಕೆ. ಮೋಹನ್‌ರಾಂ

ಝೆನ್ ಅವಲೋಕನ ಕಥೆ ಪ್ರಸಂಗ ಸಂವಾದ ಒಗಟು ಮುಂದಿಗೆಗಳು

ಂ ಕೆ.ವಿ. ಸುಬ್ಬಣ್ಣ



ಕಂಬ ಮತ್ತು ಆಕಾಶ

ಸೆಕಿಸೊ ಹೀಗೆ ಒಂದು ಪ್ರಶ್ನೆಯನ್ನು ಮುಂದಿಟ್ಟ-

'ಒಬ್ಬ ಮನುಷ್ಯ, ಒಂದು ನೂರು ಅಡಿ ಎತ್ತರವಿರುವ ಕಂಬ ಹತ್ತಿ ಅದರ ತುತ್ತ ತುದಿಯಲ್ಲಿ ಕೂತುಕೊಂಡಿದ್ದಾನೆ. ಅವನು ಇನ್ನೂ ಎತ್ತರಕ್ಕೇರಬೇಕು. ಹೇಗೆ?'

ಅದಕ್ಕೆ ಒಬ್ಬ ಗುರು ಕೊಟ್ಟ ಉತ್ತರ ಇದು -

'ಜ್ಞಾನೋದಯ ಪಡೆಯಬೇಕು. ಆಗ ಆತ, ಏಕಕಾಲದಲ್ಲಿ ಆಕಾಶದ ನಾಲ್ಕೂ ಮೂಲೆ ತುಂಬಿ ನಿಲ್ಲಬಲ್ಲ'.

ತಟ್ಟೆಯ ಮಾತು

ಹೊಸಬನಾದ ಒಬ್ಬ ಭಿಕ್ಷು, ಗುರು ಜೋಶುನ ಹತ್ತಿರ ಬಂದ. ಹೇಳಿದ-

'ಈಗಷ್ಟೇ ನಾನು ಸಂಘದಲ್ಲಿ ಸೇರಿಕೊಂಡಿದ್ದೇನೆ. ಝೆನ್‌ನ ಪ್ರಥಮ ತತ್ತ್ವವನ್ನು ಅರಿತುಕೊಳ್ಳಲು ತುಂಬ ಕಾತರನಾಗಿದ್ದೇನೆ. ನನಗೆ ಅದನ್ನು ಬೋಧಿಸುತ್ತೀರಾ, ಗುರುವೇ?'

'ಸಂಜೆ ಊಟ ಮಾಡಿದೆಯಾ?' ಎಂದು ಜೋಶು ಅವನನ್ನು ಪ್ರಶ್ನಿಸಿದ.

'ಮಾಡಿದ್ದೇನೆ' ಎಂದ, ಆತ.

ಆಗ ಜೋಶು ಹೇಳಿದ-

'ಈಗ, ನಿನ್ನ ತಟ್ಟೆಯನ್ನು ತೊಳೆದು ಸ್ವಚ್ಛಮಾಡು'.

ಶೂನ್ಯದ ಕೋಪ

ಯಮಓಕ, ಆಗ ವಿದ್ಯಾರ್ಥಿಯಾಗಿದ್ದ. ಹೊಸ ಹುರುಪಿನ ತರುಣ ವಿದ್ಯಾರ್ಥಿ. ಆತ ಒಮ್ಮೆ, ಗುರು ಡೊಕುಓನ್‌ನ ದರ್ಶನಕ್ಕಾಗಿ ಹೋದ. ಗುರುವಿನ ದರ್ಶನವಾದ ಕೂಡಲೇ ಆತನಿಗೆ ತನ್ನ ಜ್ಞಾನಾರ್ಜನೆಯನ್ನು ಕಾಣಿಸಿಬಿಡಬೇಕೆಂಬ ಉಮೇದಿನಿಂದ ಹೀಗೆ ಹೇಳತೊಡಗಿದ-

'ಗುರುವೆ, ಅಭಿವಾದಿಸುತ್ತೇನೆ...ಮತ್ತು ವಿಜ್ಞಾಪಿಸುತ್ತೇನೆ. ಮನಸ್ಸೆಂಬುದಿಲ್ಲ, ದೇಹವೆಂಬುದಿಲ್ಲ, ಬುದ್ಧನೆಂಬುದಿಲ್ಲ, ಒಳ್ಳೆಯದೆಂಬುದಿಲ್ಲ, ಕೆಟ್ಟದೆಂಬುದಿಲ್ಲ. ಗುರುವಿಲ್ಲ, ಶಿಷ್ಯನಿಲ್ಲ, ದಾನವಿಲ್ಲ, ಪರಿಗ್ರಹವಿಲ್ಲ, ನಾವು ನೋಡುತ್ತೇವೆನ್ನುವುದು ಅನುಭವಿಸುತ್ತೇವೆನ್ನುವುದು ಸತ್ಯವಲ್ಲ ಗ್ರಹಿಕೆಗೆ ಕಾಣುವ ವಸ್ತುಗಳಾವುದಕ್ಕೂ ಅಸ್ತಿತ್ವವೆಂಬುದೇ ಇಲ್ಲ. ಸತ್ಯವಾದ್ದೆಂದರೆ ಮಹಾಶೂನ್ಯವೊಂದೇ'.

ಗುರು, ಗುಡಗುಡಿ ಸೇದುತ್ತ ಶಾಂತನಾಗಿ ಕೂತುಕೊಂಡಿದ್ದ. ಶಿಷ್ಯನ ಬಡಬಡಿಕೆಗಳನ್ನೆಲ್ಲ ಶಾಂತನಾಗಿ ಕೇಳಿದ ತಟ್ಟನೆ, ತನ್ನ ದಂಡವನ್ನೆತ್ತಿಕೊಂಡು ಆತನ ಕಡೆ ಬಲವಾಗಿ ಬೀಸಿದ. ಬೀಸಿ ಬಂದು ಅಪ್ಪಳಿಸಿದ ದಂಡದ ಏಟಿಗೆ ಯಮಓಕ ತಲ್ಲಣಿಸಿ ಹೋದ. ನೋವು ತಡೆಯಲಾಗದೆ ಅರಚಿಕೊಂಡ. ಕಣ್ಣುಗಳಲ್ಲಿ ಕೋಪ ಉರಿಯುತ್ತಿತ್ತು.

ಗುರು ಡೊಕುಓನ್ ಆಗ, ಹೀಗೆ ಹೇಳಿದ-

'ಅಪ್ಪಾ, ಈ ಯಾವುದೇ ಕೂಡ ಸತ್ಯವಾದ ಅಸ್ತಿತ್ವವುಳ್ಳದ್ದಲ್ಲ. ನಿಜವಾಗಿ ಇರುವುದು ಮಹಾಶೂನ್ಯ ಮಾತ್ರ, ಹಾಗಿದ್ದರೂ ಈಗ ನಿನಗೆ ಸಿಟ್ಟು ಬಂತು ನೋಡು, ಅದು ಎಲ್ಲಿಂದ ಬಂದಿತು? ಚಿಂತಿಸು'. ●

ಬ್ರಾಹ್ಮಣರಿಗೆ ಆತ್ಮ ಗೌರವವಿದೆಯೆ?

(7ನೇ ಪುಟದಿಂದ)

ಜಾಗತೀಕರಣದ ಬಗ್ಗೆ ಅತೃಪ್ತರು ಎಂಬುದು ಗಮನಾರ್ಹ ಸಂಗತಿ. ಪ್ರಾಯಶಃ ಮೇಲು ಜಾತಿಗಳವರ ದೌರ್ಜನ್ಯದ ಬಗೆಗಿನ ಮೊಗಳ್ಳಿಯವರ ಅಸಹನೆ ಅವರಿಂದ ಹೀಗೆ ಹೇಳಿಸಿರಬೇಕು. ಆದರೆ ದೇಶೀಯ ಬ್ರಾಹ್ಮಣರ (ಅಥವಾ ಇತರ ಮೇಲುಜಾತಿಗಳ) ಮೇಲಿನ ಅಸಹನೆಗಾಗಿ ಅಂತಾರಾಷ್ಟ್ರೀಯ ಬ್ರಾಹ್ಮಣರನ್ನು ಪುಷ್ಟೀಕರಿಸ ಬೇಕಾಗಿರಲಿಲ್ಲ. ಅವರ ಅಸಹನೆ ಏನಿದೆಯೋ ಅದನ್ನು ಜಾಗತೀಕರಣವನ್ನು ಸಮರ್ಥಿಸದೆಯೂ ಹೇಳಬಹುದಿತ್ತು. ಅಥವಾ ಜಾಗತೀಕರಣದ ಅಗತ್ಯವಿಲ್ಲದೆಯೂ ಹೇಳಬಹುದಿತ್ತು. ಅದು ಬಿಟ್ಟು ಅವರ ಕೃತಿಯಲ್ಲಿ ಜಾಗತೀಕರಣ ಮತ್ತು ಆಧುನೀಕರಣ ಒಂದೇ ಎಂಬ ಧ್ವನಿ ಇದೆ. ಆದರೆ ಅದಲ್ಲ. ಅದರ ಬಗ್ಗೆ ವಿಸ್ತೃತ ಚರ್ಚೆ ಇಲ್ಲಿ ಅಗತ್ಯವಿಲ್ಲವಾದರೂ ಸೂಕ್ಷ್ಮವಾಗಿ ಹೇಳುತ್ತೇನೆ.

ಆಧುನೀಕರಣ ಎನ್ನುವುದು ಅನಿವಾರ್ಯ ಪ್ರಕ್ರಿಯೆ. ಯಾಕೆಂದರೆ ನಮಗೆ ಆಧುನಿಕತೆ ಬೇಡವೆಂದು ಬಟ್ಟೆಹಾಕದ ಓಡಾಡಲು ಬರುವುದಿಲ್ಲ. ಆದರೆ ಜಾಗತೀಕರಣ ಅನಿವಾರ್ಯವೇನಲ್ಲ. ಆಧುನೀಕರಣದ ತೀವ್ರ ಪ್ರಕ್ರಿಯೆ ಕೈಗಾರಿಕಾ ಕ್ರಾಂತಿಯಿಂದ ಆರಂಭವಾಗಿದ್ದು ಅದಕ್ಕೆ ತತ್ವಜ್ಞಾನಿಗಳ, ರಾಜಕೀಯ, ಆರ್ಥಿಕ, ಚಿಂತಕರ ಎಲ್ಲ ಜನವರ್ಗದ ಬೆಂಬಲವಿದೆ. ಸೈದ್ಧಾಂತಿಕವಾಗಿ ವಿರುದ್ಧವಿರುವ ಕಾರ್ಲ್‌ಮಾರ್ಕ್ಸ್‌ರೂ, ಆಡಂಸ್ಮಿತ್‌ರು ಆಧುನಿಕತೆಯನ್ನು ಬೆಂಬಲಿಸುತ್ತಾರೆ. ಆದರೆ ಜಾಗತೀಕರಣಕ್ಕೆ ಇಂಥ ವಿಶಾಲ ನೆಲೆಗಟ್ಟು ಇಲ್ಲ. ಅದರಲ್ಲಿ ತಾಂತ್ರಿಕತೆ ಇದೆಯೇ ಹೊರತು ವೈಜ್ಞಾನಿಕ ದೃಷ್ಟಿ ಇಲ್ಲ. ಸೃಜನಶೀಲತೆ ಇಲ್ಲ. ಶೋಧಕ ದೃಷ್ಟಿ ಇಲ್ಲ. ಅದು ತೀರ ಸಂಕುಚಿತವಾದ ಆಡಂಸ್ಮಿತ್‌ರ ಥಿಯರಿಯನ್ನು ತಳಹದಿಯಾಗಿ ಇಟ್ಟುಕೊಂಡಿದ್ದು ಬಂಡವಾಳಶಾಹಿ ಹಿತ ಮತ್ತು ಸ್ವಾರ್ಥ, ಪ್ರಬಲಶಕ್ತಿಯ ಉಳಿವು ಇಷ್ಟೇ ಅದರಲ್ಲಿದೆ. ಮೂಲತಃ ಜಾಗತೀಕರಣ ಪಾಶ್ಚಾತ್ಯ ಸಮಾಜವನ್ನು ಊಳಿಗಮಾನ್ಯ ಯೂರೋಪ್‌ನೆಡೆಗೆ ಕೊಂಡೊಯ್ಯುವಲ್ಲಿ ಸಮರ್ಥವಾಗುವಂಥದು. ಅದೇ ಕಾಲಚಕ್ರದ ಹಿಂದಿರುಗುವಿಕೆ ಭಾರತದಲ್ಲಿ ದಲಿತ ಶೋಷಣೆಯ ಪರಮಾವಧಿ ಎಡೆಗೆ ಸಾಗಿಸಬಲ್ಲುದು. ಅಂತಲೇ ಆಧುನಿಕತೆಯನ್ನು ಆಕ್ಷೇಪಿಸುವ ಕೋಮುವಾದಿಗಳು ಜಾಗತೀಕರಣದ ಪ್ರಭುಗಳಿಗೆ ಹಾಸು ಮಣೆ ಹಾಕಿ ಕರೆಯುತ್ತಾರೆ. ಏಕೆಂದೇ? ಅದು ಬೋಧಿಸುವ ಖಾಸಗೀಕರಣ, ಶಿಕ್ಷಣದ ಖಾಸಗಿ ಒಡೆತನ ಲಾಭ ನಿರ್ದೇಶಿತವಾಗಿ ಸಾಗಿ ದಲಿತರೂ ಸೇರಿದಂತೆ ದುರ್ಬಲರು ಶಿಕ್ಷಣವಂಚಿತರಾಗುವಂತೆ ಮಾಡುತ್ತದೆ. ಪರಿಣಾಮ? ದುರ್ಬಲರ ಶೋಷಣೆ. ಈ ದೇಶದಲ್ಲಿನ್ನೂ ಬಹುಸಂಖ್ಯಾತ ದಲಿತರು ದುರ್ಬಲರಿರುವಾಗ ಅವರ ಶೋಷಣೆಗೆ ಜಾಗತೀಕರಣದಲ್ಲಿ ವಿಪುಲ ಅವಕಾಶವಿದೆ. ಬಹುತೇಕ ಮೇಲು ಜಾತಿಗಳು ಬಂಡವಾಳಶಾಹಿಗಳಿರುವಲ್ಲಿ ಜಾಗತೀಕರಣವು, ಆಧುನಿಕತೆ ಕೊಟ್ಟಂಥ ಸೆಕ್ಯುಲರ್ ದೃಷ್ಟಿಯನ್ನೇ ತೊಡೆದುಹಾಕಬಲ್ಲುದು. ಅಂತಲೇ ಮೊಗಳ್ಳಿಯವರ ವಾದ ಒಪ್ಪಿಕೊಳ್ಳುವಂಥದಲ್ಲ. ಹಾಗೆಂದ ಕೂಡಲೇ ಮೊಗಳ್ಳಿಯವರ ಮೇಲೆ ಗೌರವವಿಲ್ಲವೆಂದಾಗಲಿ, ದಲಿತ ವಿರೋಧಿ ಎಂದಾಗಲಿ ಅರ್ಥವಲ್ಲ. ತಾತ್ವಿಕ ಚರ್ಚೆಯಷ್ಟೇ. ಅದನ್ನೇ ಸಿ.ಎಂ. ಕೃಷ್ಣರಂಥವರು ಪುರೋಹಿತಶಾಹಿ ಧೋರಣೆ ಎಂದರೆ (ಗಮನಿಸಿ: ಪ್ರಜಾವಾಣಿ-ಸಾಹಿತ್ಯ ಸಂವಾದ) ಏನೂ ಮಾಡುವಂತಿಲ್ಲ. ಏನು ಮಾಡಬಹುದೆಂದರೆ ದಲಿತ ಸಮುದಾಯದ ಕೃತಿಗೆ ಪ್ರತಿಕ್ರಿಯೆ ಕೊಡದೆ ಇರಬಹುದು ಅಷ್ಟೇ.

ಇದನ್ನೆಲ್ಲ ಇಲ್ಲಿ ಹೇಳಿದ್ದೇಕೆಂದರೆ ಸುಬ್ಬು ಹೊಳೆಯಾರ್ ಅವರಂತೆ ಪ್ರಾಮಾಣಿಕ ವಾದವನ್ನು ಮುಂದಿಡುವವರು ಜನಾಂಗೀಯ ಅಸಹನೆ ಎನ್ನುವಂಥದ್ದು ಉದ್ವಿಗ್ನ ಮನಸ್ಥಿತಿಗೊಳಪಟ್ಟಾಗ ತನ್ನನ್ನು ತಾನೇ ಶೋಷಣೆಗೆ ಒಳಪಡಿಸಿಕೊಳ್ಳುವಂಥ ಅಭಿಪ್ರಾಯವನ್ನು ಸೃಷ್ಟಿಸುತ್ತದೆ ಎಂಬುದಕ್ಕಾಗಿ. ●

ಮಹಿಳೆಯರ ಬದುಕು, ಜಾಗತೀಕರಣ ಇತ್ಯಾದಿ.

ಬದುಕುವ ಬಗೆ ಹೇಗೆ ಇರಲಿ ಬದುಕಬೇಕು ಎನ್ನುವ ಜಾಗತಿಕ ಜೀವನದಲ್ಲಿ ಮಹಿಳಾ ಪ್ರಪಂಚವೆನ್ನುವುದು ಕೈಗಾರಿಕಾ ಸಗಟು ವ್ಯಾಪಾರವಾಗಿದೆ. ಎಲ್ಲಾ ಕಾಲದಲ್ಲೂ ಎಲ್ಲಾ ತರದಲ್ಲೂ ಎಲ್ಲಾ ವರ್ಗದ ಸ್ತ್ರೀಯರನ್ನು ಕಡೆಗಣಿಸುತ್ತಲೇ ಆರಾಧಿಸುತ್ತಾ ಬಂದಿರುವುದು ಇತಿಹಾಸ. ಆದರೆ ಇಂದಿನ ಕೈಗಾರಿಕಾ ಯುಗದಲ್ಲಿ ತಾಂತ್ರಿಕವಾದ ಜೀವನದಲ್ಲಿ ಸ್ತ್ರೀಯರಿಗೆ ಸ್ವತಂತ್ರ ಕೊಡುತ್ತಲೇ, ಸಮಾನತೆ ತೋರಿಸುತ್ತಲೇ ಮೀಸಲಾತಿ ನೀಡುವುದರಲ್ಲಿ ಹತ್ತು ಹಲವು ನೆಪಗಳೊಡ್ಡಿ ಸ್ತ್ರೀಯರನ್ನು ಜಾಗತಿಕ ವಿನ್ಯಾಸ ವಸ್ತುಗಳಾಗಿ ಸೃಷ್ಟಿಸುತ್ತಿರುವುದು ಒಂದು ಕಡೆಯಾದರೆ, ಹಳ್ಳಿಯ ಬಡ ಮಹಿಳೆಯರ ಸ್ಥಿತಿ ನೀವೇ ಊಹಿಸಿ. ಇಂಥ ಮಹಿಳೆಯರ ಬದುಕು ವೇಶ್ಯಾವಾಟಿಕೆ, ಜಾಗತೀಕರಣ ಮುಂತಾದ ಹಲವು ವಿಚಾರಗಳನ್ನು ಸಂವಾದ ನಿಮ್ಮೊಂದಿಗಿಟ್ಟಿದೆ.

○ ನಾವಂಡ ಎಂ. ಮುದ್ದಪ್ಪ

ಜಾಗತೀಕರಣ ಮತ್ತು ಕೋಮುವಾದದ ಸಂದರ್ಭದಲ್ಲಿ ವೇಶ್ಯೆಯರ ಒಟ್ಟಾರೆ ಬದುಕು ಮತ್ತು ಮಹಿಳೆಯರ ಲೈಂಗಿಕತೆಯ ಆಯ್ಕೆಯ ಪ್ರಶ್ನೆಯು ಹೆಚ್ಚು ಮಹತ್ವದ ಪ್ರಶ್ನೆಯಾಗಿದೆ. ಪುರುಷ ಪ್ರಧಾನ ಸಮಾಜದ ವ್ಯವಸ್ಥೆಯಲ್ಲಿ ಮಹಿಳೆಯ ಲೈಂಗಿಕ ಆಯ್ಕೆಯೆನ್ನುವುದು ಹಾಸ್ಯಾಸ್ಪದ ಎನಿಸಿಬಿಡುತ್ತದೆ. ಜಾಗತೀಕರಣ, ಕೋಮುವಾದಗಳು ಶೋಷಣೆಯ ಆಧುನಿಕ ರೂಪಗಳಾಗಿರುವಾಗ ಮತ್ತು ಪರಸ್ಪರರಲ್ಲಿ ಗಾಢ ಸಂಬಂಧವನ್ನು ಹೊಂದಿರುವಾಗ, ಎರಡೂ ಪರಸ್ಪರ ಪೂರಕವಾಗಿ ಕೆಲಸ ಮಾಡುವುದರಲ್ಲಿ ಆಶ್ಚರ್ಯವಿಲ್ಲ. ಆರ್ಥಿಕ ಶೋಷಣೆಗೋಸ್ಕರ ರಾಜಕೀಯ ಪ್ರಭುತ್ವದ ಉದ್ದೇಶದಿಂದ ಕೂಡಿರುವ ಜಾಗತೀಕರಣದ ಉದ್ದೇಶ್ಯ ಸಾಧನೆಗೆ ಕೋಮುವಾದದ ಬೆಂಬಲವೂ ಅತ್ಯಗತ್ಯವಾಗಿರುವುದರಿಂದ ಎರಡೂ ಏಕಕಾಲದಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡು ವಿಜೃಂಭಿಸುತ್ತಿವೆ.

ಪ್ರಪಂಚದೆಲ್ಲೆಡೆ ನೈತಿಕತೆಯ ಹೆಸರಿನಲ್ಲಿ, ಧರ್ಮ, ದೇವರ ಹೆಸರಿನಲ್ಲಿ ಅಸಂಖ್ಯಾತ ಜನರನ್ನು ಆರ್ಥಿಕವಾಗಿ ಶೋಷಿಸಲಾಗುತ್ತಿದೆ. ಶೋಷಿತರ ಪಟ್ಟಿಯಲ್ಲಿ ಅಗ್ರಮಾನ್ಯರೆಂದರೆ ಮಹಿಳೆಯರು, ವಿವಿಧ ಧರ್ಮಗಳ ಪ್ರತಿಪಾದಕರಾದವರು ಸಂತ ಮಹಿಳೆಯರ ಶೋಷಣೆಯನ್ನು ಪ್ರತಿಪಾದಿಸಿರುವುದು ದುರಂತ. ಭಾರತದ ಜನರ ಪಾಲಿನ ಶಾಪವೆಂದೇ ಪರಿಗಣಿಸಲಾಗಿರುವ ಮನುಧರ್ಮ ಶಾಸ್ತ್ರವೆಂಬ ಕೃತಿಯಂತೂ ಹೆಣ್ಣನ್ನು ಭೋಗದ ವಸ್ತುವೆಂದು ಸ್ಪಷ್ಟವಾಗಿ ಕರೆದಿರುವುದರ ಬೆನ್ನ ಹಿಂದೆಯೇ ಈ ಕೃತಿಯ ಅನುಯಾಯಿಗಳು ಅದನ್ನು ಚಾಚೂ ತಪ್ಪದೆ ದಲಿತ ಹಿಂದುಳಿದ, ಬುಡಕಟ್ಟು ಜನ ಸಮುದಾಯಗಳ ಮೇಲೆ ಹೇರುತ್ತಾ ಬಂದಿವೆ. ಅವಿದ್ಯಾವಂತ ಜನರನ್ನು ಬಗ್ಗುಬಡಿಯಲು ವೇದಶಾಸ್ತ್ರ, ಪುರಾಣದೇವರುಗಳೆಂಬ ಗಂಟೆಗಳನ್ನು ಸೃಷ್ಟಿಸಿ ಭಯವನ್ನು ಬಿತ್ತುವುದರ ಮೂಲಕ ಜನರನ್ನು ಹದ್ದುಬಸ್ತಿನಲ್ಲಿಟ್ಟಿದ್ದನ್ನು, ಈಗಲೂ ಇಟ್ಟಿರುವುದನ್ನು ನಾವು ಕಾಣುತ್ತಿದ್ದೇವೆ, ಮಹಿಳೆಯ ಮೇಲೆ ಬಲವಂತದ ನೈತಿಕತೆಯನ್ನು ಹೇರಿದ ಪುರುಷ ಸಮುದಾಯ ಅಥವಾ ಮೇಲ್ಜಾತಿಯ ಪುರುಷ ಸಮುದಾಯ ತಾನು ಮಾತ್ರ ಅದನ್ನು ಪಾಲಿಸದೇ ಇರುವುದು ಬಹು ದೊಡ್ಡ ವ್ಯಂಗ್ಯ. ತನ್ನ ಮನೆಯ ಹೆಂಗಸರು ಪತಿವ್ರತೆಯರಾಗಿರಬೇಕೆಂದು ಬಯಸುವ ಪುರುಷ ಪರಸ್ತ್ರೀಯನ್ನು ಮೋಹಿಸಿ ಅವಳನ್ನು ಕಾಮಿಸುವುದು ಮಾತ್ರ ವಿಪರ್ಯಾಸ.

ಪ್ರಸ್ತುತ ಭಾರತದ ಲಕ್ಷಾಂತರ ಮಂದಿ ಬಡ ವೇಶ್ಯೆಯರ ಬದುಕಿನ ಮೇಲೆ ಜಾಗತೀಕರಣ, ಮತ್ತು ಕೋಮುವಾದದ ಪರಿಣಾಮವು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಾಗುತ್ತಿದೆ. ಜಾಗತೀಕರಣದಿಂದಾಗುವ ಪರಿಣಾಮದ ವಿರುದ್ಧ ಜನ ಬಂಡೇಳುವುದನ್ನು ತಡೆಗಟ್ಟಲು ಕೋಮುವಾದದ ವಿಷಬೀಜವನ್ನು, ಬಂಡವಾಳಶಾಹಿಗಳ, ಬೆಂಬಲದೊಂದಿಗೆ ವ್ಯಾಪಕವಾಗಿ ಬಿತ್ತಲಾಗುತ್ತಿದೆ. ಮುಕ್ತ ಮಾರುಕಟ್ಟೆ ಮತ್ತು ವ್ಯಾಪಾರದ ಧಾಳಿಗೆ ಸಿಲುಕಿರುವ ಕೋಟ್ಯಾಂತರ ಬಡರೈತರು, ಕೂಲಿ ಕಾರ್ಮಿಕರು, ಸಣ್ಣ ರಸ್ತೆಬದಿ ವ್ಯಾಪಾರಿಗಳು, ಕೈಗಾರಿಕಾ ಕಾರ್ಮಿಕರು, ಇಂದು ದುಡಿಯುವ ಕೈಗಳಿಗೆ ಕೆಲಸವಿಲ್ಲದೆ ಅತಂತ್ರರಾಗಿದ್ದಾರೆ. ಹಸಿವಿನಿಂದ ಕಂಗೆಟ್ಟಿದ್ದಾರೆ, ಅನಿವಾರ್ಯವಾಗಿ ಸಾವಿರ, ಸಾವಿರ ಸಂಖ್ಯೆಯಲ್ಲಿ ಕೆಲಸವನ್ನರಿಸಿ, ನಗರಗಳತ್ತ ವಲಸೆಹೊರಟಿದ್ದಾರೆ. ಕೆಲಸಕ್ಕಾಗಿ ಅಲೆದು ಬೇಸತ್ತ ಯುವಕ, ಯುವತಿಯರು ತಕ್ಷಣದ ಪರಿಹಾರವಾಗಿ ತೋಚಿದ ಕೆಲಸ ಕಾರ್ಯಗಳಲ್ಲಿ ತೊಡಗುತ್ತಿದ್ದರೆ, ತಮ್ಮ ದೇಹವನ್ನೇ ಮಾರಾಟಕ್ಕಿಟ್ಟು ಬದುಕಬೇಕಾಗಿದೆ. ಎಣಿಸಲಾಗದ ಸಂಖ್ಯೆಯಲ್ಲಿ ಯುವಕ, ಯುವತಿಯರು ವೇಶ್ಯಾವೃತ್ತಿಗೆ ಧಾವಿಸುತ್ತಿದ್ದಾರೆ. ಇದರಿಂದಾಗಿ ಈಗಾಗಲೇ ಈ ವೃತ್ತಿಯಲ್ಲಿರುವ ಯುವಕರು ತೀವ್ರ ಪೈಪೋಟಿಯನ್ನು ಎದುರಿಸಬೇಕಾಗಿದೆ. ಅಧಿಕ ಸಂಖ್ಯೆಯಲ್ಲಿರುವ ವೇಶ್ಯೆಯರು ಗಿರಾಕಿಗಳ ಕೊರತೆಯಿಂದಾಗಿ ತುತ್ತು ಊಟಕ್ಕಾಗಿ ಪರದಾಡುವಂತಾಗಿದೆ. ಅಧಿಕ ಸಂಖ್ಯೆಯಲ್ಲಿ ಯುವಕರು ಕೂಡ ವೇಶ್ಯಾವೃತ್ತಿಯಲ್ಲಿ ತೊಡಗಿಕೊಳ್ಳುತ್ತಿರುವುದು ಮಹಿಳೆಯರ ಬದುಕಿನಲ್ಲಿ ಕೆಟ್ಟ ಪರಿಣಾಮವನ್ನು ಬೀರಿದೆ.

ವೇಶ್ಯಾವೃತ್ತಿಯಲ್ಲಿ ಕೂಡ ಮಹಿಳೆಯರು ಪುರುಷರಿಂದ ಸ್ಪರ್ಧೆ ಎದುರಿಸಬೇಕಾಗಿದೆ. ಇದೆಲ್ಲದರ ನಡುವೆಯೇ ಜಾಗತೀಕರಣದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ವ್ಯಾಪಾರದ ಉದ್ದೇಶ್ಯದಿಂದ ನೆಲಸುತ್ತಿರುವ ವಿದೇಶಿಯರನ್ನು ಸಂತೃಪ್ತರನ್ನಾಗಿಸಲು ನಗರವನ್ನು ಸ್ವಚ್ಛಗೊಳಿಸುವ ಕಾರ್ಯದಲ್ಲಿ ಪ್ರಭುತ್ವತೊಡಗಿದೆ. ಪೊಲೀಸರು ವೇಶ್ಯಾವೃತ್ತಿಯ ಮಹಿಳೆಯರು ನಗರದಲ್ಲಿ ಇರಬಾರದು ಎಂಬ ನಿಲುವನ್ನು ತಳೆದಿದ್ದಾರೆ. ಅಂದರೆ ಅವರು ಎಲ್ಲಿರಬೇಕು, ಅವರ ಬದುಕಿನ ಪ್ರಶ್ನೆಯೇನು ಎಂಬುದರ ಬಗ್ಗೆ ಅವರಲ್ಲಿ ಉತ್ತರವಿಲ್ಲ. ನಿರುದ್ಯೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವಾಗ ವೇಶ್ಯೆಯರ ಪುನರ್ವಸತಿಯ ಮಾತು ಕೇವಲ ಮರೀಚಿಕೆಯಾಗಿದೆ. ಪುನರ್ವಸತಿಯ ಅರ್ಥ ಸಂಪೂರ್ಣ ವೇಶ್ಯಾವೃತ್ತಿಯನ್ನು ನಿರ್ಮೂಲನಗೊಳಿಸಿ ಅಲ್ಲಿರುವ ಎಲ್ಲಾ ಮಹಿಳೆಯರನ್ನು ಸ್ಥಳಾಂತರಿಸುವುದು. ಇದು ಪ್ರಸ್ತುತ ಇರುವ ಆರ್ಥಿಕ ಪರಿಸ್ಥಿತಿಯಲ್ಲಿ ಅಸಾಧ್ಯದ ಮಾತು. ಒಂದಿಷ್ಟು ಜನರನ್ನು ಪುನರ್ವಸತಿ ಮಾಡಿದರೆ ಅಷ್ಟೇ ಪ್ರಮಾಣದ ಜನರು ಮತ್ತೆ ಅಲ್ಲಿ ಕಾಣಿಸಿಕೊಳ್ಳುತ್ತಾರೆ. ಈ ನಡುವೆ ನೈತಿಕತೆ, ಧಾರ್ಮಿಕ ಮೌಲ್ಯದ ಹೆಸರಿನಲ್ಲಿ ಮಹಿಳೆಯರನ್ನು, ಮತ್ತೆ ಮತ್ತೆ ಅಧಿಕಾರದಲ್ಲಿಡಲು ಪ್ರಯತ್ನಿಸುತ್ತಿರುವ ಕೋಮುವಾದಿಗೆ ಸಂಘ ಪರಿವಾರದ ವ್ಯಕ್ತಿಗಳೆ ಮಹಿಳೆಯರಿಂದ ಬಲವಂತವಾಗಿ ಹಣ ವಸೂಲಿ ಮಾಡುತ್ತಿದ್ದಾರೆ.

ಈ ಮಹಿಳೆಯರ ಸಮಸ್ಯೆ ತೀವ್ರತೆಯನ್ನು ಕಡಿಮೆಗೊಳಿಸಬೇಕೆಂದರೆ ಜಾಗತೀಕರಣ ಮತ್ತು ಕೋಮುವಾದವನ್ನು ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸಬೇಕಾಗಿದೆ. ಮಹಿಳೆಯರು ಜಾಗತೀಕರಣ ಮತ್ತು ಕೋಮುವಾದದ ರಾಜಕೀಯವನ್ನು ಅರ್ಥೈಸಿಕೊಂಡು ಸಶಕ್ತರಾದಾಗ ಮಾತ್ರ ಈ ವೃತ್ತಿಯಲ್ಲಿರುವ ಎಲ್ಲ ಮಹಿಳೆಯರ ಹಕ್ಕುಗಳ ರಕ್ಷಣೆ ಸಾಧ್ಯ. ಪುನರ್ವಸತಿ ಎಂಬುದನ್ನು ಈ ಮಹಿಳೆಯರ ಮೇಲೆ ಬಲವಂತವಾಗಿ ಹೇರಲು ಕೆಲವು ಶಕ್ತಿಗಳು ಹವಣಿಸುತ್ತಿವೆ. ಇದರ ಹಿಂದೆ ಕೂಡ ಈ ಪುರೋಹಿತಶಾಹಿಯ ಕೋಮುವಾದಿ ಮನೋಭಾವನೆ ಇರುವುದು ಕಂಡು ಬರುತ್ತಿದೆ. ಸ್ವ ಇಚ್ಛೆಯಿಂದ ಕೂಡಿರದ ಪುನರ್ವಸತಿಯು ವ್ಯರ್ಥ ಪ್ರಯತ್ನವಲ್ಲದೆ ಮತ್ತೇನೂ ಅಲ್ಲ. ಈ ಮಹಿಳೆಯರಿಂದ ನಿರಂತರವಾಗಿ ಹಣವನ್ನು ಹೀರುತ್ತಿದ್ದ ಪೊಲೀಸರನ್ನು ಎಚ್ಚೆತ್ತ ಮಹಿಳೆಯರು ಕಾನೂನಿನ ಹೋರಾಟದ ಮುಖಾಂತರ ಪ್ರತಿಬಂಧಿಸುತ್ತಿರುವಾಗಲೇ, ನೀತಿಗೆಟ್ಟ ಪೊಲೀಸರು ರೌಡಿಗಳನ್ನು ಛೂಬಿಟ್ಟು ಮಹಿಳೆಯರನ್ನು ಹಿಂಸಿಸುತ್ತಾ, ತಮ್ಮ ಹಣದ ದಾಹವನ್ನು ತೀರಿಸಿಕೊಳ್ಳುತ್ತಿದ್ದಾರೆ. ಬೆಂಗಳೂರಿನ ಲೈಂಗಿಕ ವೃತ್ತಿಯ ಮಹಿಳೆಯರು ಪೋಲೀಸರ ಈ ಕುತಂತ್ರವನ್ನು ಬಹಿರಂಗವಾಗಿಯೇ ಪ್ರತಿಭಟಿಸಲು ಸಜ್ಜಾಗುತ್ತಿದ್ದಾರೆ. ಪೊಲೀಸರೆಂದರೆ ಸರ್ಕಾರೀ ದರೋಡೆಕೋರರೆಂಬ ಪರಿಸ್ಥಿತಿಯಿರುವ ಈ ಪರಿಸ್ಥಿತಿಯಲ್ಲಿ, ಬಡಮಹಿಳೆಯರ ಕೂಗು ಕೇವಲ ಅರಣ್ಯರೋಧನವಾಗದಂತೆ ಸ್ಪಂದಿಸುವುದು ನಾಗರೀಕ ಸಮಾಜದ ಕರ್ತವ್ಯ ಕೂಡ ಆಗಿದೆ. ●

ಲಿಂಗಾಯತ ಮಠಾಧೀಶರಿಗೊಂದು ಬಹಿರಂಗ ಪತ್ರ

> ಇವತ್ತಿನ ವೈಜ್ಞಾನಿಕ ಜಗತ್ತು ಒಪ್ಪುವಂಥ ಸಾಹಿತ್ಯವನ್ನು ಹಾಗೂ ಬದುಕನ್ನು ಕಟ್ಟಿಕೊಟ್ಟವರು ಯಾರಾದರೂ ಇದ್ದರೆ ಅವರು ಬಸವಾದಿ ಶರಣರು. ಅವರ ಜಿಜ್ಞಾಸೆಯಲ್ಲಿ ಅಂದು ಹೊಳೆದ ಜಾತ್ಯಾತೀತ ತತ್ವವೇ ಲಿಂಗಾಯತ. ಇದು ಅತ್ಯಂತ ವಿನೂತನ ಹಾಗೂ ವೈಜ್ಞಾನಿಕ ಪಥವೇ ಆಗಿತ್ತು. ಆದರೆ ಬಸವಣ್ಣನವರ ತರುವಾಯ ಬಂದ ಕೆಲವು ಕುಯುಕ್ತಿಯ ಜನಗಳಿಂದ ಇದು ಅಪಮೌಲ್ಯಗೊಳ್ಳುತ್ತಾ ಸಾಗಿ ಬಂದಿದೆ. ಇಂದಿನ ಗುರುಗಳೆಂಬುವವರಿಂದಲಂತೂ ಇಂದಿನ ಲಿಂಗಾಯತ ಸಮುದಾಯ ಹಳ್ಳದ ದಾರಿ ಹಿಡಿಯುತ್ತಿದೆ. ಜಾಗದ ಗುರುಗಳಾದ ಈ ಜಗದ್ಗುರುಗಳಿಂದಲಂತೂ ಲಿಂಗಾಯತ ಎಂಬ ಪದವೇ ಪದಭ್ರಷ್ಟಗೊಳ್ಳುತ್ತಿದೆ. ಇಂಥ ಸಂದರ್ಭದಲ್ಲಿ ಈ ಗುರು ವರ್ಗದ ಜನಗಳನ್ನು ಎಚ್ಚರಿಸದೇ ಹೋದರೆ ಮುಂದೊಂದು ದಿನ ಅನ್ಯ ಸಮುದಾಯಗಳು ಲಿಂಗಾಯತರನ್ನು ಕ್ಷಮಿಸಲಾರರು. ಈ ಗುರುಗಳು ಮಾಡಿದ ತಪ್ಪಿಗೆ, ಅವರ ಶಿಷ್ಯ ಸಮುದಾಯವೆಲ್ಲ ಶಿಕ್ಷೆ ಅನುಭವಿಸಬೇಕಾಗಿ ಬರುತ್ತದೆ.
>
> ○ ವಿಶ್ವಾರಾಧ್ಯ ಸತ್ಯಂಪೇಟೆ

ಪೂಜ್ಯರೆ,

ತಮ್ಮನ್ನು 'ಪೂಜ್ಯರೇ' ಎಂದು ಕರೆಯುವುದಕ್ಕೂ ಮನಸ್ಸು ಹಿಂದೇಟು ಹಾಕುತ್ತಿದೆ. ಯಾಕೆಂದರೆ ನಿಮ್ಮಲ್ಲಿ ಬಹುತೇಕರೂ ಈ ಪದಕ್ಕೆ ಅನರ್ಹರಾಗಿದ್ದೀರಿ. ಆದರೆ ನಿಮ್ಮಲ್ಲಿಯೂ ಇರುವ ಕೆಲವು ಜನ ಅರ್ಹ ಸ್ವಾಮೀಜಿಗಳಿಗೆ ನನ್ನ ಈ ಸಂಬೋಧನೆಯಿಂದ ನೋವಾಗಬಹುದು ಎಂಬ ಕಾರಣದಿಂದ ಅನಿವಾರ್ಯವಾಗಿ ಈ ಪದ ಬಳಸಿದ್ದೇನೆ. ತಮ್ಮ ಮೇಲೆ ನನಗೆ ಯಾವುದೇ ರೀತಿಯ ಹಗೆತನವಿಲ್ಲ. ಅಥವಾ ಕಾಮಾಲೆ ಕಣ್ಣಿನಿಂದಲೂ ತಮ್ಮ ಕಾರ್ಯ ಚಟುವಟಿಕೆಗಳನ್ನೂ ನೋಡಿಲ್ಲ. ಇಷ್ಟು ಮಾತ್ರ ಸತ್ಯ. ಬಸವಾದಿ ಶರಣರ ವಚನ ಸಾಹಿತ್ಯದ ತಾಯಿಯನ್ನು ಎದುರಿನಲ್ಲಿರಿಸಿಕೊಂಡು ನಿಮ್ಮನ್ನು/ಹಾಗೂ ನೀವು ದಿಕ್ಕು ತಪ್ಪಿಸುತ್ತಿರುವ ಇಂದಿನ ಲಿಂಗಾಯತ ಸಮುದಾಯವನ್ನು ನೋಡಿ ಖಚಿತಗೊಂಡಿದ್ದೇನೆ. ಬಸವಾದಿ ಶರಣರ ವಿಚಾರಗಳಿಗೆ ಬಹಿರಂಗವಾಗಿಯೇ ದ್ರೋಹ ಬಗೆಯುತ್ತ ನಡೆದಿರುವ ತಮ್ಮ ನಡಾವಳಿಯನ್ನು ನೋಡಿ ವಿಪರೀತ ನೋವು ಅನುಭವಿಸುತ್ತಿದ್ದೇನೆ. ಆ ಕಾರಣಕ್ಕಾಗಿಯೇ ಈ ಪತ್ರ ಬರೆಯುತ್ತಿದ್ದೇನೆ. ನಾನೆಷ್ಟೇ ಸಂಯಮ ಇಟ್ಟುಕೊಂಡರೂ, ನೀವು ಸಮಾಜದ ಜನಗಳಿಗೆ ಮಾಡುತ್ತಿರುವ ಅನ್ಯಾಯವನ್ನು ಕಂಡು ಸಿಡಿಮಿಡಿಗೊಂಡಿದ್ದೇನೆ. ಅದು ಏನಿದ್ದರೂ ಗುಣಕ್ಕೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ ಎಂಬ ಮಟ್ಟಿನ ಸಾತ್ವಿಕ ಸಿಟ್ಟು ನನ್ನ ಈ ಬರವಣಿಗೆಯಲ್ಲಿ ಇದೆ. ಇದನ್ನು ಸಾವಧಾನವಾಗಿ ಓದಿ, ಅರ್ಥಮಾಡಿಕೊಂಡು ಸ್ಪಂದಿಸಿದರಾದರೆ ನಿಮಗೆ ಸಾವಿರ ಸಾವಿರ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಬಸವಾದಿ ಶರಣರ ಕಾಲಕ್ಕೆ ಇಡೀ ಶೋಷಿತ ಜನ ಸಮುದಾಯವನ್ನು ಪ್ರತಿನಿಧಿಸುವ ಸಂಸ್ಥೆಯಾಗಿದ್ದ 'ಲಿಂಗಾಯತ' ಇಂದು ಒಂದು ಜಾತಿಯಾಗಿದೆ. ಪುರೋಹಿತ ಶಾಹಿ ಜನಗಳ ವಿರುದ್ಧ ಸಂಘಟಿತಗೊಂಡಿದ್ದ ಜಾಗೃತ ಭಕ್ತರ ಗುಂಪಿನ ಹೆಸರೇ ಲಿಂಗಾಯತವಾಗಿತ್ತು. ಅಂದರೆ ಜಾತ್ಯಾತೀತ ಸಂಸ್ಥೆಯ ಸದಸ್ಯರೇ ಆ ಗುಂಪಿನಲ್ಲಿದ್ದರು. ಅದೊಂದು ಪ್ರಜಾ ಸಮೂಹವಾಗಿತ್ತು. ಈ ಮಾತುಗಳನ್ನು ನಾನೇನು ಕಲ್ಪಿಸಿಕೊಂಡು ಹೇಳುತ್ತಿಲ್ಲ. ಬಸವಾದಿ ಶರಣರ ಹನ್ನೆರಡನೆ ಶತಮಾನದ ಚಳುವಳಿಯನ್ನು ಒಮ್ಮೆ ಸುಮ್ಮನೆ ಕಣ್ಮುಂದೆ ತಂದುಕೊಳ್ಳಿ. ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಹೊಲೆಯರ ನಾಗಿದೇವ, ಅಂಬಿಗರ ಚೌಡಯ್ಯ, ಕಿನ್ನರಿ ಬ್ರಹ್ಮಯ್ಯ, ನೂಲಿಯ ಚೆಂದಯ್ಯ, ಸೂಳೆ ಸಂಕವ್ವೆ, ಕದಿರೆ ರೆಮ್ಮವ್ವೆ, ಮೇದಾರ ಕೇತಯ್ಯ, ಸೊನ್ನಲಿಗೆ ಸಿದ್ಧರಾಮ, ಅನುಭವ ಮಂಟಪದ ಅಧ್ಯಕ್ಷರೇ ಆಗಿದ್ದ ಅಲ್ಲಮಪ್ರಭು ಇವರಲ್ಲಿ ಯಾರು ಲಿಂಗಾಯತರಾಗಿದ್ದರು? ಹೋಗಲಿ ಬಸವಣ್ಣವರೇನು ಮೂಲತಃ ಲಿಂಗಾಯತರಾಗಿದ್ದರೆ? ಇಲ್ಲ.

ಮಹಾತ್ಮ ಬುದ್ಧನ ನಂತರ ಬಂದ ಬಸವಣ್ಣನವರು ಅತ್ಯಂತ ಜಾಗರೂಕವಾಗಿ ಒಂದೊಂದೇ ಹೆಜ್ಜೆ ಇಡುತ್ತ ಮುನ್ನಡೆದರು. ಅದುವರೆಗೆ ಗೋತ್ರ ನಾಮವ ಬೆಸಗೊಂಡರೆ ತಲೆಯ ತಗ್ಗಿಸಿ ನೆಲನ ಬರೆಯುತ್ತಿದ್ದ ಜನಗಳಲ್ಲಿ ಆತ್ಮಸ್ಥೈರ್ಯವನ್ನು ತುಂಬಿದವರು ಬಸವಣ್ಣನವರು. ಎಮ್ಮವ್ವ ನಿಂಬೆವ್ವ ನೀರನೆರೆದುಂಬಳು. ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು ಎಂದು ನಿಮ್ನ ವರ್ಗದೊಂದಿಗೆ ಬಸವಣ್ಣನವರು ತಮ್ಮನ್ನು ಗುರುತಿಸಿಕೊಂಡರು. ಮಾದಾರ ಚೆನ್ನಯ್ಯ ಗೋತ್ರವೆಂದು ಹೇಳಿ, ಡೋಹಾರ ಕಕ್ಕಯ್ಯನ ಗೋತ್ರವೆಂದು ಹೇಳಿ ಎಂಬ ಆತ್ಮಸ್ಥೈರ್ಯದ ಮಾತುಗಳನ್ನಾಡಿ ದಲಿತವರ್ಗದ ಜನಗಳಲ್ಲಿಯ ಕೀಳರಿಮೆಯನ್ನು ತೊಡೆದು ಹಾಕಿದರು. ಕಾಶಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ....ಎಂಬ ಜಾತಿಯ ಮೂಲ ಹುಟ್ಟನ್ನು ಅತ್ಯಂತ ಸರಳವಾಗಿ ಬಿಚ್ಚಿರಿಸಿದವರೇ ಶರಣರು. ಕುಲವನರಸದಿರಿಂಬೋಂ. ಬೊಬ್ಬಿಡದಿರಿಂಬೋಂ ಎಂದು ಘಂಟಾಘೋಷವಾಗಿ ಶರಣರು ಸಾರಿ ಸಾರಿ ಹೇಳಿದರು. ಇಷ್ಟೇ ಅಲ್ಲದೆ ಬಸವಣ್ಣನವರೇ ಸ್ವತಃ ಚೆನ್ನಯ್ಯನ ಮನೆಯ ದಾಸಿಯ ಮಗಳು/ಕಕ್ಕಯ್ಯನ ಮನೆಯ ದಾಸಿಯ ಮಗ ಬೆರಣಿಯನಾಯಲು ಹೋಗಿ ಸಂಗವ ಮಾಡಿದರು/ಅವರಿಗೆ ಹುಟ್ಟಿದ ಮಗ ನಾನು/ಕೂಡಲ ಸಂಗಮದೇವ ಸಾಕ್ಷಿಯಾಗಿ. ಎಂದೆಲ್ಲ ಹೇಳಿ ಜಾತಿ ಎಂಬುದು ಸಮಾಜದಲ್ಲಿ ಅನಂತರ ಮಾಡಿಕೊಂಡ ಕುತಂತ್ರವೇ ವಿನಃ ಅದೇನು ಹುಟ್ಟಿನೊಂದಿಗೆ ಅಂಟಿ ಬರುವುದಿಲ್ಲ ಎಂದು ಹೇಳಿದರು. ಅದುವರೆಗೂ ಪುರೋಹಿತ ಶಾಹಿ ವ್ಯವಸ್ಥೆ ಸಮಾಜದ ಜನಗಳಲ್ಲಿ ಭಯವನ್ನು ತುಂಬಿತ್ತು. ಸ್ವರ್ಗ-ನರಕ, ದೇವರು-ದೆವ್ವ, ಮೇಲ್ಜಾತಿ-ಕೆಳಜಾತಿ, ಕರ್ಮ-ಹಣೆಬರಹ, ಹೀಗೆ ಏನೆಲ್ಲವನ್ನು ತುಂಬಿ ಬದುಕನ್ನು ಗೋಜಲು-ಗೋಜಲಾಗಿ ಮಾಡಿತ್ತು. ಅಸಮಾನತೆ, ಅನ್ಯಾಯ, ಅತ್ಯಾಚಾರ, ಧೂರ್ತ ನಡವಳಿಕೆಯನ್ನು ಎದುರಿಸುವ ಎದೆಗಾರಿಕೆಯಿಲ್ಲದೆ ಜೀವಚ್ಛವಗಳಾಗಿದ್ದ ಎಲ್ಲ ಶೋಷಿತ ಜನ ಸಮುದಾಯದ ಜನಗಳಲ್ಲಿ ಪ್ರಜ್ಞೆ ತುಂಬಿದರು. ಸ್ವರ್ಗ ಲೋಕ, ಮರ್ತ್ಯಲೋಕ ಬೇರಿಲ್ಲ ಕಾಣಿರೊ. ಸತ್ಯ ನುಡಿವುದೇ ಸ್ವರ್ಗ ಲೋಕ. ಮಿಥ್ಯ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ. ಅನಾಚಾರವೇ ನರಕ/ ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ ಇಲ್ಲಿ ಸಲ್ಲುವವರೂ ಅಲ್ಲಿಯೂ ಸಲ್ಲುವರಯ್ಯ/ ಕೈಲಾಸವೆಂಬುದೊಂದು ಹಾಳು ಬೆಟ್ಟ ಅಲ್ಲಿರುವ ಶಿವನೊಬ್ಬ ಹೆಡ್ಡ. ಅಲ್ಲಿರುವ ಮುನಿಗಳೆಲ್ಲರೂ ಜೀವಗಳ್ಳರು...ಹೀಗೆ ಪುರೋಹಿತ ಶಾಹಿ ವ್ಯವಸ್ಥೆ ಎಲ್ಲರ ತಲೆಯ ಮೇಲೆ ಹಾಕಿದ್ದ ಕಲ್ಲು ಚಪ್ಪಡಿಯನ್ನು ಹಗುರವಾಗಿ ಸರಿಸಿದರು.

ಇದರ ಪ್ರತಿಫಲವಾಗಿ ಬೆಳೆದ ಬೆಳೆ, ಅದನ್ನೊಂದು ಬರೀ ಬೆಳೆ ಎನ್ನಲು ಸಾಧ್ಯವೆ? ಅದೊಂದು ಅದ್ಭುತವಾದ, ಸುವರ್ಣಾಕ್ಷರಗಳಿಂದ ಬರೆಯಲ್ಪಟ್ಟ ಪ್ರಜ್ಞೆಯಾಗಿತ್ತು. ಈ ಪ್ರಜ್ಞೆಯ ಹೆಸರೇ ಲಿಂಗಾಯತವಾಗಿತ್ತು. ಈ ಚಳುವಳಿಯಲ್ಲಿ ಭಾಗವಹಿಸಿದ ಜನರೆಲ್ಲ ಕಡ್ಡಾಯವಾಗಿ ಲಿಂಗವನ್ನು ಧರಿಸಲೇಬೇಕಿತ್ತು. ಈ ಲಿಂಗವಾದರೂ ಅರಿವಿನ ಕುರುಹು ಮಾತ್ರ. ಒಪ್ಪಂದದಲ್ಲಿ ಲಿಂಗ ಆ ಚಳುವಳಿಯ ಸಂಕೇತ ಲಿಂಗವಾಗಿತ್ತು. ಈ ಲಿಂಗವನ್ನು ಯಾರು

ಧರಿಸುತ್ತಾರೋ ಅವರೆಲ್ಲ ಲಿಂಗಾಯತರೇ ಆಗಿದ್ದರು. ಬ್ರಾಹ್ಮಣ್ಯದ ಗಾಳಕ್ಕೆ ಸಿಕ್ಕು ನುಗ್ಗು ನುಸಿಯಾಗಿದ್ದ ಜನ ಸಮೂಹವೆಲ್ಲ ಆಗ ಅವರಿವರೆನ್ನದೆ, ಗಂಡು-ಹೆಣ್ಣು ಎಂಬ ತರತಮವನೆಣಿಸದೇ, ಬಡವ ಬಲ್ಲಿದ ಎಂಬ ಸಾಮಾಜಿಕ ಕಟ್ಟುಪಾಡುಗಳನ್ನು ದೂರ ತಳ್ಳಿ ಸ್ವಚ್ಛಂದ ಹಕ್ಕಿಯಾಗಿ ಹಾರಲು ಸಾಲು ಸಾಲಾಗಿ ಹರಿದು ಬಂದರು. ಆಗ ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು ಆಚಾರವೆಂಬ ಜ್ಯೋತಿಯು ಮುಟ್ಟಿಸಲು ತೊಳಗಿ ಬೆಳಗಿತು. ಇದು ಕಲ್ಯಾಣದ ಅಂದಿನ ಪ್ರಭೆ.

ಆದರೆ ಇಂದು ಪರಿಸ್ಥಿತಿ ಏನಾಗಿದೆ? ಲಿಂಗಾಯತರೆಂದು ಕರೆಯಿಸಿಕೊಳ್ಳುತ್ತಿರುವ ಜನಗಳೇ ಬ್ರಾಹ್ಮಣ್ಯಕ್ಕೆ ಅಂಟಿಕೊಳ್ಳುತ್ತಿದ್ದಾರೆ. ಮಡಿ-ಮೈಲಿಗೆ, ಸ್ವರ್ಗ-ನರಕ, ಮುಟ್ಟು-ತಟ್ಟು, ಮೇಲ್ಜಾತಿ-ಕೆಳಜಾತಿ, ಕರ್ಮ-ಪ್ರಾರಬ್ಧ ಶುರುವಾಗಿವೆ. ರಾಹುಕಾಲ, ಗುಳಿಕ ಕಾಲವಂತೂ ನೋಡದವರೇ ಇಲ್ಲ ಎನ್ನುವಂತಾಗುತ್ತಿದೆ. ವಾಸ್ತುವಿಗಾಗಿಯಂತೂ ಬಹುತೇಕರೂ ಪಿಗ್ಗಿ ಬಿದ್ದಿದ್ದಾರೆ. ನಿಮ್ಮಗಳ ಕುತಂತ್ರಕ್ಕೆ ಒಳಗಾದ ಇಂದಿನ ಲಿಂಗಾಯತ ಸಮುದಾಯ ತಮ್ಮ ಮೂಲವನ್ನು ಮರೆತು, ತಮ್ಮ ಸಹೋದರ ಬಂಧುಗಳಾದ ದಲಿತರ ಮೇಲೆ ಬರ್ಬರವಾಗಿ ಮೇಲೆರಗುತ್ತಿದ್ದಾರೆ. ಅವರ ಅನ್ನ, ಬಟ್ಟೆ, ವಸತಿಗಳ ಮೇಲೂ ತಮ್ಮ ಕಾಕದೃಷ್ಟಿ ಬೀರತೊಡಗಿದ್ದಾರೆ. ಕೆಲವು ಕಡೆಗಳಲ್ಲಿ ಇಡೀ ಊರಿಗೇ ಊರೇ ಶೋಷಿತ ಸಮುದಾಯಕ್ಕೆ ಬಹಿಷ್ಕಾರ ಹಾಕುತ್ತಿದೆ. ಮತ್ತೆ ಹಲವೆಡೆ ಅವರಿಗೆ ಅಮೇಧ್ಯವನ್ನು ತಿನ್ನಿಸುವ ಕೀಳು ಕೆಲಸಕ್ಕೂ ಅದು ಕೈ ಹಾಕುತ್ತಿದೆ. ಜೀವಂತವಾಗಿ ದಲಿತರ ದೇಹಗಳನ್ನು ಸುಡುವಷ್ಟು ನೀಚ ಪ್ರವೃತ್ತಿ ಬೆಳೆಸಿಕೊಳ್ಳುತ್ತಿದೆ. ದಲಿತರ ಹಾಗೂ ತಮ್ಮ ನಡುವೆ ಸಮಾನಾಂತರವಾದ ಅಂತರವನ್ನು ಬಹು ಜಾಗೃತಿಯಿಂದ ಕಾಯ್ದುಕೊಂಡೇ ಬರತೊಡಗಿದೆ. ಅವರ ನಡುವೆ ಈಗ ಕಂದಕ ಉಂಟಾಗಿದೆ. ಒಬ್ಬರು ಮತ್ತೊಬ್ಬರನ್ನು ನೋಡಿದರೆ ಗುರುಗುಟ್ಟುವಂತಾಗಿದೆ. ಒಟ್ಟಿನಲ್ಲಿ ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಗೌರವದಿಂದ ಕಾಣುವಷ್ಟು ಸೌಜನ್ಯವನ್ನೂ ಉಳಿಸಿಕೊಂಡಿಲ್ಲ.

ಇದಕ್ಕೆಲ್ಲ ಬಹುತೇಕ ಕಾರಣರು ತಾವೇ ಎಂದು ನಾನಿಲ್ಲಿ ನೇರವಾಗಿ ಹೇಳಬಯಸುತ್ತೇನೆ. ಬಸವಾದಿ ಶರಣರ ತರುವಾಯ ಅವರು ಕನಸಿದ ಎಲ್ಲವನ್ನು ಜಾರಿಗೆ ತಂದರೆ ತಮ್ಮ ಮೈಗಳ್ಳ ಜೀವನಕ್ಕೆ ಅದು ಮುಳುವಾಗುತ್ತದೆ ಎಂದು ಭಾವಿಸಿದ ತಾವು ತಮಗೆ ಎಷ್ಟುಬೇಕೋ ಅಷ್ಟನ್ನೇ ಸ್ವೀಕರಿಸಿ, ಉಳಿದದ್ದನ್ನು ಹಳ್ಳಕ್ಕೆ ದಾಟಿಸಿಬಿಟ್ಟಿರಿ. ಇಲ್ಲದ ಸುಳ್ಳು ಸೊಟ್ಟುಗಳನ್ನು ಮತ್ತೆ ತುರುಕಿದಿರಿ. ಭಯಗಳನ್ನು ಯಥೇಚ್ಛವಾಗಿ ಬಿತ್ತಿದಿರಿ. ಯಾರು ಪಕ್ಕಾ ಲಿಂಗಾಯತನೋ ಆತನಿಗೆ ಇಲ್ಲದ ಕಾಟ ಕೊಟ್ಟು ತೆಪ್ಪಗಿರಿಸಿದಿರಿ. ಜಾತ್ಯಾತೀತ ಭಾವನೆಗಳ ಒಟ್ಟು ಮೊತ್ತವಾಗಿದ್ದ ಲಿಂಗಾಯತವನ್ನು

ನಿಮ್ಮ ಕುತಂತ್ರದಿಂದ ಮತ್ತೆಹತ್ತರೊಳಗಿನ ಹನ್ನೊಂದನೆಯ ಜಾತಿಯನ್ನಾಗಿ ಮಾಡಿದಿರಿ. ಆ ಜಾತಿಗೆ ನೀವು ಗುರು-ಜಗದ್ಗುರುವಾಗಬೇಕಿತ್ತು ತಾನೆ? ನಿಮ್ಮ ಮೆರವಣಿಗೆ - ಉರವಣಿಗೆ ಅವರಿಂದ ನಡೆಯಬೇಕಿತ್ತು! ಹೌದಲ್ಲವೇ? ನಿಮ್ಮ ಮಠಮಾನ್ಯಗಳು ಮತ್ತೆ ಎಂದಿನಂತೆ ತಲೆ ಎತ್ತಿ ಮೆರೆಯಬೇಕಿತ್ತು, ಅಲ್ಲವೆ? ಜನರನ್ನು ಮತ್ತೆ ಅಜ್ಞಾನದ ಕತ್ತಲೆಗೆ ದೂಡಿ ತಾವು ಮಜವಾಗಿ ಅವರ ಮೇಲೆ ಸವಾರಿ ಮಾಡಬೇಕಿತ್ತು, ಹೌದಲ್ಲವೆ?

ನಿಮ್ಮ ಸ್ವಾರ್ಥಕ್ಕಾಗಿ ಇಡೀ ಲಿಂಗಾಯತ ಸಮುದಾಯವನ್ನೇ ಸತ್ಯಾನಾಸ ಮಾಡಿಬಿಟ್ಟಿರುವಿರಿ. ಅವರಲ್ಲಿಯೂ ನವ ಬ್ರಾಹ್ಮಣಶಾಹಿತನವನ್ನು ಹುಲುಸಾಗಿಯೇ ಬೆಳೆಸಿದ್ದೀರಿ. ಹಾಗಾಗಿ ಅವರು ಇಂದು ಅಧೀರರಾಗಿದ್ದಾರೆ. ನಿಮ್ಮ ಸುಳ್ಳು ಸೊಟ್ಟುಗಳಿಗೆ ಅವರು ಬೆದರಿ ಬಿಡುತ್ತಾರೆ. ನೀವು ಸಿಟ್ಟಿಗೆದ್ದರೇ ತಾವೆಲ್ಲಿ ಸರ್ವನಾಶವಾಗಿ ಹೋಗುತ್ತೇವೋ ಎಂದು ಭಯಭೀತರಾಗಿದ್ದಾರೆ. ಕಟ್ಟಿದ ಲಿಂಗವನ್ನಂತೂ ಅವರು ಎಂದೋ ಕಡೆಗಣಿಸಿದ್ದಾರೆ. ನೀವು ಹೇಳಿದಂತೆ ಬೆಟ್ಟದ ಲಿಂಗಕ್ಕೆ ಬಂದು ನಿಮಗೆ ಸೇವೆ ಸಲ್ಲಿಸಿ ಕೃತಾರ್ಥರಾಗುತ್ತಿದ್ದಾರೆ. ತಮ್ಮ ಕಣ್ಣರಿಕೆಗೆ ಪಾತ್ರವಾದರೆ ಸ್ವರ್ಗವೇ ಪ್ರಾಪ್ತವಾಗುತ್ತದೆ ಎಂದರಿತ ಈ ಸಮುದಾಯ ನಿಮಗಾಗಿ ಏನೆಲ್ಲವನ್ನೂ ಧಾರೆ ಎರೆಯುತ್ತಿದೆ.

ತಾವು ಏನು ತಿನ್ನುತ್ತಿರೋ ಅದನ್ನು ನೀಡುತ್ತಿದೆ. ತಾವು ಎಂಥ ಮಹಲಿನಲ್ಲಿ ವಾಸಿಸಲು ಇಚ್ಛಿಸುತ್ತೀರೋ ಅಂಥದೇ ಮಹಲನ್ನು ಕಟ್ಟಿಕೊಡುತ್ತಿದ್ದಾರೆ. ತಾವು ತಿರುಗಾಡಿ ಜನ ಸೇವೆ ಮಾಡಲು (?) ಹತ್ತಾರು ಲಕ್ಷಗಳ ಲಕ್ಷುರಿ ಕಾರುಗಳನ್ನು ಕೊಡಿಸಿದ್ದಾರೆ. ನೀವು ನಡೆದರೆ ತಮ್ಮ ಪಾದಗಳಿಗೆ ಧೂಳು ಹತ್ತಿತ್ತೆಂದು ತಾವು ಉಟ್ಟುಕೊಳ್ಳುವ ಬಟ್ಟೆಯನ್ನೇ ಹಾಸಿ ನಿಮ್ಮನ್ನು ಸ್ವಾಗತಿಸಿದೆ. ಬಡತನ ತಮಗೆ ಬೆಂಬತ್ತಿ ಕಾಡುತ್ತಿದ್ದರೂ ನಿಮಗೆ ತಕ್ಕಷ್ಟು ಕಾಣಿಕೆ ಅರ್ಪಿಸಿ ಕೃತಾರ್ಥತೆಯನ್ನು ಅದು ಕಾಣುತ್ತಿದೆ. ತಾವು ಮಠದಲ್ಲಿ ಏನೆಲ್ಲ ಮಾಡುತ್ತಿರಿ ಎಂಬುದು ಜಗಜ್ಜಾಹೀರು. ಆದರೂ ಅಪ್ಪೋರು ಮಾಡಿದ್ದು ಎಂದು ಮನ್ನಿಸುವಂಥ ದೊ(ದ)ಡ್ಡ ಮನಸ್ಸನ್ನು ನಮಗೆ ಒದಗಿಸಿಕೊಟ್ಟಿದ್ದೀರಿ. ನಮ್ಮ ಮನೆಯಲ್ಲಿಯ ಹಾಲು, ಮೊಸರು, ತುಪ್ಪ ಕೊನೆಗೆ ಮಜ್ಜಿಗೆಯನ್ನೂ ಮೊದಲು ತಮಗೆ ಸಮರ್ಪಿಸಿಯೇ ಉಳಿದರೆ ನಾವು ಉಂಡಿದ್ದೇವೆ. ಇಲ್ಲದಿದ್ದರೆ ನಿಮ್ಮ ತೃಪ್ತಿಯಲ್ಲಿಯೇ ನಾವು ತೃಪ್ತರಾಗಿದ್ದೇವೆ. ಕೆಲವು ಸಲ ನೀವು ಕಟ್ಟುವ ತಾಯಿತಕ್ಕೋ-ಬೂದಿಗೋ, ಕರಿದಾರವನ್ನೋ ನಂಬಿ ಸುಖಾ ಸುಮ್ಮನೆ ಜೀವವನ್ನು ಕಳೆದುಕೊಂಡಿದ್ದೇವೆ. ಆದರೂ ನೀವು ಮಾತ್ರ ಬೂದಿ ಮಂತ್ರಿಸಿಕೊಡುವುದನ್ನು ಮರೆತಿಲ್ಲ. ಅದನ್ನು ಅನುಚಾನವಾಗಿ ಮಾಡಿಕೊಂಡೇ ಬರುತ್ತಿದ್ದೀರಿ.

ಹಲವಾರು ಸಲ ಬೇಕಂತಲೇ ನಿಗೂಢವಾಗಿ ಮಾತಾಡುತ್ತೀರಿ. ಜನರನ್ನು ತಬ್ಬಿಬ್ಬುಗೊಳಿಸುತ್ತೀರಿ. ನಿಮ್ಮ ಸುತ್ತ ಮುತ್ತ ಹೊಗಳು ಭಟ್ಟರನ್ನು ನೇಮಿಸಿಕೊಂಡು ಮಾಡದ ಪವಾಡವನ್ನು ಮಾಡಿದಂತೆ ಪ್ರಚಾರ ಮಾಡಿಸಿಕೊಳ್ಳುತ್ತೀರಿ. ಸರಳತೆ-ಸಜ್ಜನಿಕೆ ನಿಮ್ಮಲ್ಲಿ ಇಲ್ಲವೇ ಇಲ್ಲ. ಆಡಂಬರವೇ ನಿಮಗೆ ಭೂಷಣ ಎಂದು ತಿಳಿದುಕೊಂಡಿದ್ದೀರಿ. ಹತ್ತಾರು ಬೆರಳುಗಳಿಗೂ ಬಂಗಾರದ ಉಂಗುರವನ್ನೇ ಇಟ್ಟುಕೊಳ್ಳುತ್ತಿದ್ದೀರಿ. ಚಮಕಾಯಿಸುವ ಜರತಾರಿ ಅಂಗಿಗಳನ್ನೇ ಉಟ್ಟುಕೊಳ್ಳುತ್ತೀರಿ. ನೀವು ಪವಡಿಸುವ ಕುರ್ಚಿಗಳು, ಮಲಗುವ ಮಂಚಗಳು ರಾಜ ಮಹಾರಾಜರ ವೈಭವವನ್ನೇ ಮೀರಿಸುವಂಥವು. ಇದೆಲ್ಲವೂ ನೀವು ದುಡಿದು ಗಳಿಸಿದ್ದರೆ ನಾನು ಹೀಗೆಲ್ಲ ಹಂಗಿಸುತ್ತಿರಲಿಲ್ಲ. ಇದೆಲ್ಲ ಲಿಂಗಾಯತ ಸಮುದಾಯದ ದುಡ್ಡು. ಈ ದುಡ್ಡಿನಲ್ಲಿ ನೀವು ಮಾಡದ ಮಜಾ, ಅನುಭವಿಸಿದ ಶ್ರೀಮಂತಿಕೆಯೊಂದೂ ಇಲ್ಲವೆಂದರೂ ನಡೆಯುತ್ತದೆ.

ಇಂಥ ಶ್ರೀಮಂತಿಕೆಯನ್ನು ಅನುಭವಿಸಿಯೂ ಬ್ರಹ್ಮಚಾರಿಗಳಾಗಿ ಇರುವಿರೆಂದು ಸುಳ್ಳು ಬೇರೆ ಹೇಳುತ್ತೀರಿ. ಇಂದ್ರಿಯ ನಿಗ್ರಹವ ಮಾಡಿದಡೆ ಹೊಂದುವವು ದೋಷಂಗಳು. ಹಿಂದೆ ಬಂದು ಕಾಡುವವು ಪಂಚೇಂದ್ರಿಯಗಳು...ಎಂದು ಸ್ಪಷ್ಟವಾಗಿ ಶರಣರು ಹೇಳಿದ್ದರು. ತಾವು ಮಾತ್ರ ಇದನ್ನು ಕಡೆಗಣಿಸಿ ಹುಸಿ

> **ಲಿಂಗಾಯತರೆಂದು ಕರೆಯಿಸಿಕೊಳ್ಳುತ್ತಿರುವ ಜನಗಳೇ ಬ್ರಾಹ್ಮಣ್ಯಕ್ಕೆ ಅಂಟಿಕೊಳ್ಳುತ್ತಿದ್ದಾರೆ. ಮಡಿ ಮೈಲಿಗೆ, ಸ್ವರ್ಗ-ನರಕ, ಮುಟ್ಟು-ತಟ್ಟು, ಮೇಲ್ಜಾತಿ-ಕೆಳಜಾತಿ, ಕರ್ಮ-ಪ್ರಾರಬ್ಧ ಶುರುವಾಗಿವೆ. ರಾಹುಕಾಲ, ಗುಳಿಕ ಕಾಲವಂತೂ ನೋಡದವರೇ ಇಲ್ಲ ಎನ್ನುವಂತಾಗುತ್ತಿದೆ. ವಾಸ್ತುವಿಗಾಗಿಯಂತೂ ಬಹುತೇಕರೂ ಪಿಗ್ಗಿ ಬಿದ್ದಿದ್ದಾರೆ. ನಿಮ್ಮಗಳ ಕುತಂತ್ರಕ್ಕೆ ಒಳಗಾದ ಇಂದಿನ ಲಿಂಗಾಯತ ಸಮುದಾಯ ತಮ್ಮ ಮೂಲವನ್ನು ಮರೆತು, ತಮ್ಮ ಸಹೋದರ ಬಂಧುಗಳಾದ ದಲಿತರ ಮೇಲೆ ಬರ್ಬರವಾಗಿ ಮೇಲೆರಗುತ್ತಿದ್ದಾರೆ. ಅವರ ಅನ್ನ, ಬಟ್ಟೆ, ವಸತಿಗಳ ಮೇಲೂ ತಮ್ಮ ಕಾಕದೃಷ್ಟಿ ಬೀರತೊಡಗಿದ್ದಾರೆ. ಕೆಲವು ಕಡೆಗಳಲ್ಲಿ ಇಡೀ ಊರಿಗೇ ಊರೇ ಶೋಷಿತ ಸಮುದಾಯಕ್ಕೆ ಬಹಿಷ್ಕಾರ ಹಾಕುತ್ತಿದೆ. ಮತ್ತೆ ಹಲವೆಡೆ ಅವರಿಗೆ ಅಮೇಧ್ಯವನ್ನು ತಿನ್ನಿಸುವ ಕೀಳು ಕೆಲಸಕ್ಕೂ ಅದು ಕೈ ಹಾಕುತ್ತಿದೆ. ಜೀವಂತವಾಗಿ ದಲಿತರ ದೇಹಗಳನ್ನು ಸುಡುವಷ್ಟು ನೀಚ ಪ್ರವೃತ್ತಿ ಬೆಳೆಸಿಕೊಳ್ಳುತ್ತಿದೆ. ದಲಿತರ ಹಾಗೂ ತಮ್ಮ ನಡುವೆ ಸಮಾನಾಂತರವಾದ ಅಂತರವನ್ನು ಬಹು ಜಾಗೃತಿಯಿಂದ ಕಾಯ್ದುಕೊಂಡೇ ಬರತೊಡಗಿದೆ. ಅವರ ನಡುವೆ ಈಗ ಕಂದಕ ಉಂಟಾಗಿದೆ. ಒಬ್ಬರು ಮತ್ತೊಬ್ಬರನ್ನು ನೋಡಿದರೆ ಗುರುಗುಟ್ಟುವಂತಾಗಿದೆ. ಒಟ್ಟಿನಲ್ಲಿ ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಗೌರವದಿಂದ ಕಾಣುವಷ್ಟು ಸೌಜನ್ಯವನ್ನೂ ಉಳಿಸಿಕೊಂಡಿಲ್ಲ.**

ಬ್ರಹ್ಮಚರ್ಯೆಗೆ ಜೋತು ಬಿದ್ದಿದ್ದೀರಿ. ಇದರಿಂದ ಏನೆಲ್ಲ ಅವಾಂತರ-ಅನಾಹುತ ಮಾಡಿಕೊಂಡಿರಲ್ಲ!? ಇಂಥ ಅನಾಹುತಗಳನ್ನು ಮಾಡಿಕೊಂಡೇ ಬ್ರಾಹ್ಮಣಶಾಹಿ ಬಸವಣ್ಣನವರ ಕೈಯಲ್ಲಿ ಸಿಕ್ಕು ಫಜೀತಿ ಅನುಭವಿಸಿತು. ಹೆಣ್ಣನೊಳಗೆ ಮನವಾದರೆ ಲಗ್ನವಾಗಿ ಕೂಡುವುದು ಎಂದು ಸ್ಪಷ್ಟವಾಗಿ ಶರಣರು ಹೇಳಿದ್ದರೂ ನೀವು ಅದೇಕೆ ಒತ್ತಾಯದ ಬ್ರಹ್ಮಚರ್ಯಕ್ಕೆ ಜೋತು ಬಿದ್ದಿರಿ? ಏನಯ್ಯ ವಿಪ್ರರು ನುಡಿದಂತೆ ನಡೆಯರು. ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ ಎಂದು ಮುಖ ತೋಯ್ಯುವಂತೆ ಉಗಿಸಿಕೊಂಡರು. ಈ ಮಾತು ಈಗ ನಿಮಗೇ ಚೆನ್ನಾಗಿ ಒಪ್ಪುತ್ತದೆ. ನೀವೂ ಕೂಡ ಈಗ ಬ್ರಾಹ್ಮಣಶಾಹಿ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೊರಟಿರುವ ಪುರೋಹಿತರೇ ಆಗಿದ್ದೀರಿ. ಇದನ್ನು ನಾನೇ ಏಕೆ ಸ್ವತಃ ನಿಮಗೂ ಹಾಗೆ ಕರೆಯಿಸಿಕೊಳ್ಳಬೇಕೆಂಬ ಹಂಬಲವೇ ಇದೆ. ಹಿಂದೊಮ್ಮೆ ಕೋರ್ಟಿನ ಕಟಕಟೆ ಏರಿ ಲಿಂಗಿಬ್ರಾಹ್ಮರು ಎಂದು ಕರೆಯಿಸಿಕೊಂಡದ್ದು ದಾಖಲೆಯೇ ಇದೆ. ಹಾಗಾಗಿಯೇ ನೀವು ನಿಮ್ಮನ್ನು ಬ್ರಾಹ್ಮಣ್ಯದ ಜೊತೆ ಗುರುತಿಸಿಕೊಳ್ಳಲು ನೋಡುತ್ತೀರಿ. ತಾವು ಆಗಾಗ ಆರ್.ಎಸ್.ಎಸ್., ಬಜರಂಗದಳ, ಬಿ.ಜೆ.ಪಿ. ವಿಶ್ವ ಹಿಂದೂ ಪರಿಷತ್ತಿನಂಥ ಸನಾತನವಾದಿಗಳೊಂದಿಗೆ ಕೂಡುತ್ತೀರಿ. ಅವರೊಂದಿಗೆ ಜೊತೆಗೂಡಿ ತಮ್ಮ ಮಠಗಳಲ್ಲಿ ಕವಾಯತ್ತು ಬೇರೆ ನಡೆಸುತ್ತೀರಿ. ಇಟ್ಟಿಗೆಗಳ ಮೆರವಣಿಗೆ ಹೊರಡಿಸುತ್ತೀರಿ. ಲಾರಿಗಳನ್ನು ಎತ್ತಿ ತಿರುವುತ್ತೀರಿ. ಇದಕ್ಕಿಂತ ಬೇರೆ ಉದಾಹರಣೆ ಏನಾದರೂ ಬೇಕೆ?

ಇದರ ಜೊತೆಗೆ ಸಾಮಾನ್ಯ ಜನರಿಗೆ ತಿಳಿಯಬಾರದೆಂದು ಸಂಸ್ಕೃತ ಭಾಷೆಗೆ ಪ್ರಾಮುಖ್ಯತೆ ಕೊಡುತ್ತಿರುವಿರಿ. ನಿಮ್ಮ ಮಠಗಳಲೆಲ್ಲ ಈಗೀಗ ಸಂಸ್ಕೃತ ಪಾಠ ಶಾಲೆಗಳು ತಲೆ ಎತ್ತುತ್ತಿರುವುದೇ ಇದಕ್ಕೆ ಸಾಕ್ಷಿ. ನೀವು ಮಾಡಿಕೊಂಡ ಕಲ್ಲದೇವರುಗಳಿಗೂ ಆ ಸಂಸ್ಕೃತ ಮಂತ್ರದಿಂದಲೇ ಎಚ್ಚರಿಸುತ್ತೀರಿ. ಮಲಗಿಸುತ್ತೀರಿ. ಜೋಗುಳ ಹಾಡುತ್ತೀರಿ. ನಿಮ್ಮ ಹತ್ತಿರ ನೆಮ್ಮದಿಯನ್ನು ಹುಡುಕಿಕೊಂಡು ಬಂದ ಭಕ್ತರಿಗೂ ತಿಳಿಯದ ಮಣ ಮಣ ಮಂತ್ರ ಹೇಳಿ ತಬ್ಬಿಬ್ಬುಗೊಳಿಸುತ್ತೀರಿ. ಒಟ್ಟಿನಲ್ಲಿ ಮೋಸದ ಭಾಷೆಯನ್ನು ಉಪಯೋಗಿಸಿ ನಿಮ್ಮ ಭೋಗವನ್ನು ಹೆಚ್ಚು ಮಾಡಿಕೊಂಡಿದ್ದೀರಿ. ಏಕೆಂದರೆ ಜನಭಾಷೆಯಾದ ಕನ್ನಡವನ್ನು ನೀವು ಬಳಸಿದರೆ ನಿಮ್ಮ ದಡ್ಡತನ ಬಯಲಾಗುತ್ತದೆ ಎಂಬ ಭಯ ನಿಮಗೆ. ಹಾಗಾಗಿ ಜನ ಉಪಯೋಗಿಸದ, ಸತ್ತ ಭಾಷೆಯಾಗಿರುವ ಸಂಸ್ಕೃತದ ಮೇಲೆ ನಿಮಗೆ ಹೆಚ್ಚು ವ್ಯಾಮೋಹ, ಅಲ್ಲವೆ? ಒಟ್ಟಂದದಲ್ಲಿ ನೀವು ನವ ಪುರೋಹಿತರೇ ಆಗಿದ್ದೀರಿ.

ನೀವು ಈಗ ಪೈಪೋಟಿಗೆ ಇಳಿದು ಕಟ್ಟಿಸುತ್ತಿರುವ ಗುಡಿ, ಕಲ್ಯಾಣ ಮಂಟಪಗಳೋ ಇಂದ್ರನ ಐಭೋಗವನ್ನೇ ನಾಚಿಸುವಂತಿವೆ. ಲಿಂಗ ಪ್ರತಿಷ್ಠೆಯ ಮಾಡಿದವಂಗೆ ನಾಮಕ ನರಕ ಎಂದು ಲಿಂಗಾಯತ ಫಿಲಾಸಫಿ ಹೇಳಿದ್ದರೂ ಅದನ್ನು ಕಾಲ ಕಸ ಮಾಡಿದ್ದೀರಿ. ನವಗ್ರಹಗಳ, ನವ ಶನಿಗಳೆಂಬ ದೇವರುಗಳ ಪ್ರತಿಷ್ಠಾಪನೆ ಮಾಡಿ ಜನರಿಂದ ಹೊಸ ಹೊಸ ಸುಲಿಗೆ ಆರಂಭಿಸಿದ್ದೀರಿ. ಲಕ್ಷದೀಪೋತ್ಸವ, ಕುಂಭಾಭಿಷೇಕ, ಯಜ್ಞ-ಯಾಗಗಳನ್ನು ಮಾಡಿ ಜನರ ಒಳ ಹೊರಗಿನ ತಲೆಯನ್ನು ನುಣ್ಣಗೇ ಬೋಳಿಸಿರುವಿರಿ.

ಹೋಗಲಿ, ಸಮಾಜವನ್ನು ಹೀಗೆ ರಕ್ಕಸನಂತೆ ಒಂದೇ ಸಮ ಸುಲಿಗೆ ಮಾಡುತ್ತ ಹೊರಟಿರುವ ನೀವು ಆ ಜನಗಳಿಗೆ ಕೊಟ್ಟಿರುವುದಾದರೂ ಏನನ್ನು? ಹೊಲೆಯರಲ್ಲಿಯ ಬೂದಿ, ಕರಿದಾರ, ಲಿಂಬೆಕಾಯಿ, ತಾಮ್ರದ ತಾಯಿತ ಅಲ್ಲವೆ? ತಿಂದುಂಡು ಸೋಮಾರಿಯಾಗಿ ಬಿದ್ದಲ್ಲೇ ಬಿದ್ದಿರುವ ತಮ್ಮ ಬಾತುಕೊಂಡ ಪಾದಗಳನ್ನಲ್ಲವೆ? ಅಥವಾ ಕಾಂಗ್ರೆಸ್ ಪಕ್ಷದ ನೇತಾರರಂತೆ ಬಲಗೈಯನ್ನು ಮೇಲೆತ್ತಿ ಆಶೀರ್ವದಿಸುವ ತಮ್ಮ (ಅ)ಮೃತ ಹಸ್ತಗಳನ್ನಲ್ಲವೆ? ಇದನ್ನಲ್ಲದೆ ತಾವು ಜನತೆಗೆ ಕೊಟ್ಟಿರುವುದಾದರೂ ಏನನ್ನು? ಹೇಳಿ?!

ಇದು ಇಪ್ಪತ್ತೊಂದನೆಯ ಶತಮಾನ, ಕಂಪ್ಯೂಟರ್ ಯುಗ. ಕಾಲ ಬದಲಾಗುತ್ತಿದೆ. ಆದರೂ ನೀವು ಬದಲಾಗುತ್ತಿಲ್ಲ. ನಿಮ್ಮ ಚಟುವಟಿಕೆಗಳು, ಓಬಿರಾಯನ ಕಾಲದವೇ. ಕಾಲದೊಂದಿಗೇ ನೀವು ಸಮ್ಮಿಳಿತಗೊಳ್ಳದೇ ಹೋದರೆ ನೀವು ಔಟ್ ಡೇಟೆಡ್ ಆಗುತ್ತೀರಿ. ಮೂಲೆಗುಂಪಾಗುತ್ತೀರಿ. ಕೊನೆಗೆ ಮೂಲೋತ್ಪಾಟನ ಗೊಳ್ಳುತ್ತೀರಿ. ಸನಾತನವಾದಿಗಳಿಗಿದು ಕಾಲವಲ್ಲ. ಸಮಾನತಾವಾದಿಗಳಿಗೆ ಕಾಲವಿದು. ಹಾಗಾಗಿ ಬಸವಾದಿ ಶರಣರ ವಿಚಾರಗಳ ಪ್ರಸ್ತುತತೆ ಇಂದು ಹೆಚ್ಚಾಗುತ್ತಿದೆ. ಅವರ ಅಧ್ಯಯನ ಹಲವಾರು ನಿಟ್ಟಿನಲ್ಲಿ ಸಾಗಿದೆ. ದಿನ ನಿತ್ಯ ಒಂದಿಲ್ಲೊಂದು ಕಡೆ ವಚನ ಸಾಹಿತ್ಯದ ಜಿಜ್ಞಾಸೆ ನಡೆದಿದೆ. ಶರಣರ ವ್ಯಕ್ತಿತ್ವದ ನಾನಾ ಮುಖಗಳ ಪರಿಚಯವಾಗುತ್ತಿದೆ. ಹಾಗಾಗಿ ಅವರ ಬೆಳಕು ಇಡೀ ಸಮಾಜದಲ್ಲಿ ಪ್ರವಹಿಸಿ, ನಿಮ್ಮ ದಟ್ಟ ಕತ್ತಲೆ ಕಾಣುವಂತಾಗಿದೆ. ಇಷ್ಟು ದಿನ ಗೊತ್ತಿಲ್ಲದೆ ನಿಮ್ಮನ್ನು ಅನುಸರಿಸಿಕೊಂಡು ನಡೆದಿದ್ದ ಲಿಂಗಾಯತ ಸಮುದಾಯವೂ ಈಗ ನಿಮ್ಮೊಂದಿಗೆ ಗುರುತಿಸಿಕೊಳ್ಳಲು ಬಯಸುತ್ತಿಲ್ಲ. ಹಿಂದೊಂದು ಕಾಲಕ್ಕೆ ಲಿಂಗವಂತರೇ ಆಗಿದ್ದ ದಲಿತ ಬಂಧುಗಳೂ ಈಗ ಪುನಃ ಬಸವಾದಿ ಶರಣರ ವಿಚಾರಗಳ ಹತ್ತಿರ ಬರುತ್ತಿದ್ದಾರೆ. ನಿಮ್ಮ ಊರಣವನ್ನು ಅವರೂ ಬಯಲಿಗಿಡುತ್ತಿದ್ದಾರೆ. ಇಷ್ಟರಲ್ಲಿಯೇ ನೀವು ಕುಳಿತ ಖುರ್ಚಿ ಅದುರುತ್ತದೆ. ನಿಮ್ಮ ಮ.ನಿ.ಪ್ರ.-ಗಿ.ನಿ.ಪ್ರ ಮಹಾಸನ್ನಿಧಿ, ಜಗದ್ಗುರು, ಮಹಾ ಗುರು ಎಂಬ ನಿಮ್ಮ ಬಿರುದು ಬಾವಲಿಗಳೆಲ್ಲ ಉದುರಿ ಬೀಳುತ್ತವೆ. ಆಗ ನಿಮ್ಮ ಸನಾತನ, ಪುರಾತನವಾಗಿರುವ ನಿಮ್ಮ ಬೇರುಗಳೂ ಸಡಿಲಗೊಳ್ಳುತ್ತವೆ. ಬಂಗಾರದ ವಜ್ರದ ಕಿರೀಟಗಳೆಲ್ಲವೂ ಉರುಳುರುಳಿ ನೆಲಕಚ್ಚುತ್ತವೆ. ಸಮಾಜದ ಅಪಹಾಸ್ಯಕ್ಕೆ-ಅವಹೇಳನಕ್ಕೆ ಗುರಿಯಾಗಿ ನಗೇಡಿಯಾಗಿ ಜೀವನ ಸಾಗಿಸುತ್ತೀರಿ. ಇಂಥ ಭಂಡ ಬಾಳು ನಿಮಗೆ ಬೇಕೆ?

ಮಠ-ಪೀಠಗಳ ಬಿಟ್ಟು ಹೊರಬನ್ನಿ. ಜನತೆಯ ಕಷ್ಟ-ಸುಖದೊಡನೆ ಭಾಗಿಯಾಗಿ. ಅವರಲ್ಲಿ ಪ್ರಜ್ಞೆ ತುಂಬುವ ಕೆಲಸ ಮಾಡಿ. ಪ್ರತಿಯೊಬ್ಬರಲ್ಲೂ ಅಡಗಿರಬಹುದಾದ ಬೆಳಕನ್ನು ಬಯಲಿಗೆ ತನ್ನಿ. ಸಮಾನತೆಯ ಬೀಜ ಬಿತ್ತಿ. ಸಮುದಾಯದೊಡನೆ ಸೇರಿ. ನೀವೇ ಒಂದು ದ್ವೀಪವಾಗುವುದು ಬೇಡ. ದೀಪವಾಗಿ, ಬಸವಾದಿ ಶರಣರ ಬೆಳಕಿನ ದೀಪಟಿಯನ್ನು ಎತ್ತಿಹಿಡಿಯುವ ಕೆಲಸ ಮಾಡಿ ಸಾಕು. ನಿಮ್ಮ ಇಷ್ಟು ದಿನದ ಇಭ್ರತಿಯೆಲ್ಲ ತಂತಾನೆ ಹೊರಟು ಹೋಗುತ್ತದೆ. ದರಿದ್ರತನ ಮೂಲೋಚ್ಚಾಟನೆಗೊಳ್ಳುತ್ತದೆ. ಈ ಕೆಲಸವನ್ನು ಈಗಲಾದರೂ ಕೈಗೆತ್ತಿಕೊಳ್ಳುತ್ತೀರಿ ತಾನೆ? ●



ಸಂವಾದ

ವಾರ್ಷಿಕ ವಿಶೇಷಾಂಕ

ಸಹೃದಯರೆ,

ನಿಮ್ಮೆಲ್ಲರ ಪ್ರೀತಿ-ಅಭಿಮಾನ ಮತ್ತು ಸಹಕಾರದಿಂದಾಗಿ ತನ್ನೆಲ್ಲಾ ಅಡೆತಡೆಗಳನ್ನು ಮೀರಿಯೂ ತಪ್ಪದೇ ತಮ್ಮ ಜತೆ ಸಂವಾದಿಸುತ್ತಿರುವ 'ಸಂವಾದ' ಮಾಸಪತ್ರಿಕೆಗೆ ಇದೀಗ ಒಂದು ವರ್ಷ (ನವೆಂಬರ್ 2003) ಸಮೀಪಿಸುತ್ತಿದ್ದು, ಅದರ ನೆನಪಿನಲ್ಲಿ 'ಸಂವಾದ ವಿಶೇಷಾಂಕ'ವೊಂದನ್ನು ಹೊರತರಲು ತೀರ್ಮಾನಿಸಿರುತ್ತೇವೆ.

ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳು, ಮರೆಯಾಗುತ್ತಿರುವ ಜೀವನಕ್ರಮಗಳು, ತಲ್ಲಣಗೊಳ್ಳುತ್ತಿರುವ ಸಿದ್ಧಾಂತಗಳು, ಖಾಸಗೀಕರಣಗೊಂಡು ವ್ಯಕ್ತಿಸ್ವಾಮ್ಯಕ್ಕೆ ಒಳಪಡುತ್ತಿರುವ ಉದ್ಯಮಗಳು, ಅನುಕೂಲಸಿಂಧುಗಳಾಗುತ್ತಿರುವ ದಲಿತರು ಮತ್ತು ಶೂದ್ರರ ಮನಸ್ಸಿನಲ್ಲಿ ನಡೆಯುತ್ತಿರುವ ಚೌಕಾಸಿಗಳು, ಬಿಕ್ಕಟ್ಟಿಗೆ ಒಳಗಾಗುತ್ತಿರುವ ಬಹುರೂಪಿ ಸಂಸ್ಕೃತಿಯ ಜತೆಗೆ ಈ ನಾಡಿನ ಕೃಷಿ ಕಾರ್ಮಿಕರು, ವಿದ್ಯಾರ್ಥಿ ಯುವ ಜನರು, ಮಹಿಳೆಯರು, ಸಂಘ-ಸಂಸ್ಥೆಗಳು ಹಾಗೂ ಉದ್ಯೋಗಸ್ಥರು ಎದುರಿಸುತ್ತಿರುವ ಹೊಸ ಪರಿಕಲ್ಪನೆಗಳ ಸವಾಲುಗಳನ್ನು ಕುರಿತ ಲೇಖನಗಳನ್ನು 'ಸಂವಾದ ವಿಶೇಷಾಂಕ'ದಲ್ಲಿ ಪ್ರಕಟಿಸಲು ಯೋಜಿಸಲಾಗಿದೆ.

ಇಂಥ ಗಂಭೀರ ವಿಚಾರಗಳನ್ನೊಳಗೊಂಡ ವಿಶ್ಲೇಷಣಾತ್ಮಕ ಲೇಖನಗಳಲ್ಲದೆ ಕಥೆ, ಕವನ, ವಿಡಂಬನೆ, ವ್ಯಕ್ತಿಚಿತ್ರ ಛಾಯಾಚಿತ್ರಗಳ ನುಡಿಬರಹ ಮುಂತಾದ ಲೇಖನಗಳನ್ನು ಬರೆದು ಕಳುಹಿಸಿಕೊಡುವುದು ಮೂಲಕ 'ಸಂವಾದದ ವಿಶೇಷಾಂಕ' ಸುಂದರವಾಗಿ ಮೂಡಿಬರಲು ಸಹಕರಿಸಬೇಕೆಂದು ಕೋರುತ್ತೇವೆ. ನಿಮ್ಮ ಲೇಖನಗಳು ನಮಗೆ ತಲುಪಲು ಕೊನೆಯ ದಿನಾಂಕ : 15-10-2003

ವಿಳಾಸ : ಸಂವಾದ ಮಾಸಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ
ಬೆಂಗಳೂರು-560 091. ದೂರವಾಣಿ : 3287943/3281667

ಚಂದಾದಾರರಲ್ಲಿ ಮನವಿ

'ಸಂವಾದ'ವನ್ನು ಪ್ರತಿ ತಿಂಗಳ 13ರಂದು ಅಂಚೆಗೆ ಹಾಕಲಾಗುತ್ತದೆ. ಎಷ್ಟೇತಡವೆಂದರೂ ಆಯಾ ತಿಂಗಳ 20ನೇ ತಾರೀಖಿನ ಒಳಗೆ ಅದು ತಮಗೆ ತಲುಪುತ್ತದೆ. ಹಾಗೇನಾದರೂ 20ರ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು, ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ-ಸಾಧ್ಯವಾದರೆ ಪತ್ರಿಕೆ ತಲುಪದಿರುವ ಬಗೆಗೆ ಲಿಖಿತ ದೂರು ನೀಡಿ. ಪ್ರತಿಯೊಂದನ್ನು ನಮಗೆ ಕಳುಹಿಸಿ. ಅದರ ಆಧಾರದ ಮೇಲೆ ಇಲ್ಲಿನ ಅಂಚೆ ಕಚೇರಿಯಲ್ಲಿ ನಾವು ವಿಚಾರಿಸಿ, ಪತ್ರಿಕೆ ಸಕಾಲಕ್ಕೆ ತಲುಪುವಂತೆ ವ್ಯವಸ್ಥೆ ಮಾಡುತ್ತೇವೆ. —ಸಂಪಾದಕ





ಬ್ರಾಹ್ಮಣ-ಶೂದ್ರ-ಓಬಿಸಿ-ದಲಿತ

ಮೀಸಲಾತಿಯ ಮಹಾ ಚರ್ಚೆ

ಚಂದ್ರ ಬಾನ್ ಪ್ರಸಾದ್

ದಲಿತ್ ಡೈರಿ

ಮೀಸಲಾತಿ ಬುತ್ತಿಗೆ ಹೊಸ ಆಕಾಂಕ್ಷಿಗಳಾಗಿ ಬ್ರಾಹ್ಮಣರು ಕೈಚಾಚಿರುವುದು ಕೊನೆಗೂ ದಲಿತ ಚಳುವಳಿ ನಿಟ್ಟುಸಿರು ಬಿಟ್ಟಂತಾಗಿದೆ. "ಅರ್ಹತೆ"ಯ ಮೂಲಭೂತ ಪ್ರಶ್ನೆ ಈಗ ಪರಿಹಾರ ಕಂಡಂತಾಗಿದೆ. ಏಕೆಂದರೆ ರಾಜ್ಯಾಂಗ ನೀತಿಯ ಕಡು ವಿರೋಧಿಗಳಾದ ಬ್ರಾಹ್ಮಣರೇ ಈಗ ಅದನ್ನು ಪಡೆಯಲು ಆತುರರಾಗಿದ್ದಾರೆ. ಆದ್ದರಿಂದಲೇ, ರಾಜಸ್ಥಾನ ಸರ್ಕಾರ ಕೈಗೊಳ್ಳುತ್ತಿರುವ ಕ್ರಮವನ್ನು ಸ್ವಾಗತಿಸಲೇಬೇಕು. ಒಂದೇ ಸರದಿಯಲ್ಲಿ ದಲಿತ ಮತ್ತು ದ್ವಿಜ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರಕ್ಕಾಗಿ ಸಾಲಾಗಿ ನಿಂತಿರುವುದು ಸಂತಸದ ಸಂಗತಿಯೇ ಸರಿ. ಹೀಗಾಗಿಯೇ ಸಾಮಾನ್ಯ ವರ್ಗದಿಂದ ಸ್ವಲ್ಪ ಕಮ್ಮಿ ಅಂಕ ಪಡೆದು ಆಯ್ಕೆಗೊಂಡವರ ಬುದ್ಧಿ ಮತ್ತು ಸಾಮರ್ಥ್ಯದ ಬಗ್ಗೆ ದ್ವಿಜರು ಹೀಯಾಳಿಸಿರಬೇಕು. ಅಂತೂ, ಅಭ್ಯರ್ಥಿಗಳ ಬಹುರೂಪಿ ಸಾಂಸ್ಕೃತಿಕ ಹಿನ್ನಲೆ, ಭಿನ್ನ ಸಾಂಸ್ಕೃತಿಕ ಚರಿತ್ರಾ ಪರಂಪರೆಗಳು, ಇಲ್ಲಿ ಡೋಲಾಯಮಾನ ಆರ್ಥಿಕ ಹಿನ್ನೆಲೆಗಳನ್ನು ಪರಿಗಣಿಸಿದಿದ್ದರೂ ಸಹ, ಪರೀಕ್ಷೆಗಳಲ್ಲಿ ಅವರು ಪಡೆದ ಅಂಕಗಳೇ ಅವರ ಬುದ್ಧಿವಂತಿಕೆ ಮತ್ತು ಸಾಮರ್ಥ್ಯವನ್ನು ಇಲ್ಲಿಯವರೆಗೆ ಸಾರುತ್ತಿದ್ದವು.

ದ್ವಿಜರಲ್ಲಿ ಬಡವರು, ತಮ್ಮ ಒಂದೇ ಸಾಂಸ್ಕೃತಿಕ ವ್ಯವಸ್ಥೆಗೆ ಸೇರಿದ್ದರೂ ಸಹ ಸರ್ಕಾರಿ ಉದ್ಯೋಗಗಳಿಗೆ ಸೇರಲಾಗುತ್ತಿರಲಿಲ್ಲ. ಸ್ಪರ್ಧೆಯಲ್ಲಿ ಅವರ ಅಸಾಮರ್ಥ್ಯ ತಮ್ಮ ಆದಾಯ ಮೂಲದಿಂದಾಗಿ ಎಂದು ಭಾವಿಸಲಾಗಿದೆ. ಅಂದರೆ ದ್ವಿಜರು ಈಗ ಒಪ್ಪಿಕೊಳ್ಳುತ್ತಿರುವ ಸಂಗತಿಯೆಂದರೆ ಯಾರಿಗೆ ಒಳ್ಳೇ ಶಾಲೆ, ಟ್ಯೂಶನ್ ವ್ಯವಸ್ಥೆ ಮತ್ತು ಮೂಲ ಸೌಕರ್ಯಗಳು ದೊರೆಯುತ್ತವೆಯೋ ಅವರೇ ಅವಕಾಶಗಳನ್ನು ಸಾಮ್ಯೀಕರಿಸುತ್ತಿದ್ದರಿಂದ, ಅವುಗಳಿಂದ ವಂಚಿತರಾದವರು ಸೋಲುತ್ತಿದ್ದರು. ಈ ಆಲೋಚನೆಯನ್ನು ನಾವು ಮೆಚ್ಚುತ್ತೇವೆ. ಅಲ್ಲದೆ, ಬಡಬ್ರಾಹ್ಮಣರಿಗೆ ಮೀಸಲಾತಿಯನ್ನು ಒತ್ತಾಯಿಸುವುದನ್ನು ಕಂಡರೆ, ಬ್ರಾಹ್ಮಣ ನಾಯಕತ್ವ, "ಅಸಮರ್ಥ" ಬ್ರಾಹ್ಮಣರು ಸರ್ಕಾರಿ ಸ್ಥಾನಗಳನ್ನು ವಹಿಸಿಕೊಳ್ಳುವುದನ್ನು ಇಷ್ಟಪಡುವುದಿಲ್ಲವೆಂದು ನಮಗೆ ತಿಳಿದಿದೆ. ಅಂದರೆ ಅವರು ಸೂಚಿಸುತ್ತಿರುವುದೇನೆಂದರೆ ಕಮ್ಮಿ ಅಂಕಗಳಿಸಿದ ಬ್ರಾಹ್ಮಣರಿಗೆ ಅವಕಾಶವೊಂದನ್ನು ನೀಡಿದರೆ ಅವರೂ ಸಹ ತಮಗೆ ವಹಿಸಿದ ಜವಾಬ್ದಾರಿಗಳನ್ನು ಅತ್ಯುತ್ತಮವಾಗಿ ನಿಭಾಯಿಸಬಲ್ಲರು.

ಅಂದರೆ ರಾಜಸ್ಥಾನದ ಬ್ರಾಹ್ಮಣರು ಏನು ವಾದಿಸುತ್ತಿದ್ದಾರೋ, ಅದನ್ನೇ ದಲಿತರು ಕಳೆದ ದಶಕಗಳಿಂದಲೂ ವಾದಿಸುತ್ತಾ ಬಂದಿದ್ದಾರೆ. ದಲಿತರ ಗ್ರಹಿಕೆಯಲ್ಲಿ ಅಥ್ಲೆಟ್‌ಗಳು ಹೇಗೆ ವೃದ್ಧಿಕಾರಕ ಔಷಧಿಗಳನ್ನೇ ಸೇವಿಸಿದಂತೆ, ಉದಾರವಾದಿ ಕಲಿಕೆ/ಟ್ಯೂಶನ್/ತಕ್ಷಣದ ಯಶಸ್ಸಿಗೈಡ್‌ಗಳು ನಿಜವಾಗಿಯೂ "ಸಾಮರ್ಥ್ಯ ವರ್ಧಕ"ಗಳಾಗಿ ಕೆಲಸ ಮಾಡುತ್ತವೆ. ಈ "ಸಾಮರ್ಥ್ಯ ವರ್ಧಕ" (ಶಕ್ತಿವರ್ಧಕ)ಗಳು ತಾತ್ಕಾಲಿಕವಾಗಿಯಷ್ಟೆ ಶಕ್ತಿಯನ್ನು ವೃದ್ಧಿಸುತ್ತವೆಯೇ ವಿನಃ, ಅಥ್ಲೆಟ್ ಒಬ್ಬ/ಳ ನಿಜವಾದ ಪ್ರತಿಭೆಯನ್ನಲ್ಲ. ಹಾಗೆಯೇ ಮೂಲ ಸೌಕರ್ಯದಿಂದ ಅಧಿಕ ಅಂಕಗಳಿಸಿದ ಅಭ್ಯರ್ಥಿಯೊಬ್ಬನ/ಳ ನಿಜವಾದ ಬುದ್ಧಿವಂತಿಕೆಯನ್ನು ಸೂಚಿಸುವುದಿಲ್ಲ. ಗ್ರಾಮೀಣ, ದ್ವೇಷಮಯ ಸಾಮಾಜಿಕ ಸನ್ನಿವೇಶ, ಅನುತ್ತೇಜಕ ಬೋಧಕ ವರ್ಗಕ, ಇವುಗಳ ನಿಮಿತ್ತ ಅನೇಕ ಮಂದಿ ಗ್ರಾಮೀಣ ದಲಿತರು ತಾತ್ಕಾಲಿಕ ವಿದ್ಯಾರ್ಥಿಗಳಷ್ಟೆ. ಇವರು ನಗರದಲ್ಲಿ ಪೂರ್ಣಕಾಲಿಕ ವಿದ್ಯಾರ್ಥಿಗಳಾಗಿ ಶೇಕಡ 50ರಷ್ಟು ಅಂಕಗಳಿಸುವುದು, ಎಲ್ಲಾ ರೀತಿಯ ಮೂಲ ಸೌಕರ್ಯಗಳೆಂಬ "ಡ್ರಗ್ಸ್" ಪಡೆದ ವಿದ್ಯಾರ್ಥಿಗಳು ಶೇಕಡ 60ಕ್ಕೂ ಅಧಿಕ ಅಂಕಗಳನ್ನು ಪಡೆಯುವುದು ಸಮರ್ಥಿಸಲಾದೀತೆ? ಅಂದರೆ ವೈವಿಧ್ಯಮಯ ಸಾಮಾಜಿಕ ಕ್ಷೇತ್ರಗಳಿಂದ ಬರುವ ಅಭ್ಯರ್ಥಿಗಳ ಸಾಮರ್ಥ್ಯವನ್ನು ಅಳೆಯುವುದಾದರೂ ಹೇಗೆ?

ಒಂದು ಜನಪ್ರಿಯವಾದ ಸಂಗತಿಯೆಂದರೆ ಭಾರತೀಯ ನೌಕರಿಶಾಹಿ ಸಂಪೂರ್ಣವಾಗಿ ಅಸಮರ್ಥ, ಭ್ರಷ್ಟ ಮತ್ತು ಯಾವ ಜವಾಬ್ದಾರಿಗಳಿಗೆ ಅವರನ್ನು ನೇಮಿಸಿಕೊಳ್ಳಲಾಗಿತ್ತೋ, ಅವಕ್ಕೆ ನಿಷ್ಪ್ರಯೋಜಕವಾದುದು. ಈ ಸಾರ್ವಜನಿಕ ಗ್ರಹಿಕೆ ಸತ್ಯವೆನ್ನುವುದು ಭಯಂಕರವಾಗಿ ಹತ್ತಿರವಾಗಿದೆ. 1962ರ ಹೊತ್ತಿಗೆ



ಪ್ರಥಮ ದರ್ಜೆಯ ಸೇವಾ ಕ್ಷೇತ್ರಗಳಲ್ಲಿ (8394) ಎಸ್‌ಸಿ/ಎಸ್‌ಟಿ ಕೇವಲ 107 ಮಾತ್ರ. ಅಂದರೆ ಶೇ. 01.27 ಅಷ್ಟೆ. ಇದು 1995ರಲ್ಲಿ ಅದೇ ದರ್ಜೆಯ ಸೇವೆಗಳಲ್ಲಿ (65408) ಎಸ್.ಸಿ/ಎಸ್‌ಟಿಗಳು ಕೇವಲ 5028 ಮಾತ್ರ; ಅಂದರೆ ಶೇ. 13.04 ಅಷ್ಟೆ. ಈ ಸಂತಿ. ಮೇರೆಗೆ 13% ಎಸ್.ಸಿ./ಎಸ್.ಟಿ. ಅಥವಾ "ಅರ್ಹ"ರೆನಿಸಿಕೊಂಡ ಉಳಿದ 87% "ಅಸಮರ್ಥ, ಭ್ರಷ್ಟ ಮತ್ತು ನಿಷ್ಪ್ರಯೋಜಕ" ಎಂದು ಭಾರತೀಯ ನೌಕರಶಾಹಿಯನ್ನು ಕರೆಯಬಹುದೇ?

ಈ ಸತ್ಯಕ್ಕೆ ತಲೆಬಾಗಿದ ರಾಜಸ್ಥಾನ ಬ್ರಾಹ್ಮಣರಿಗೆ ನಮ್ಮ ಅಭಿನಂದನೆಗಳು. ಅಸತ್ಯಕ್ಕಿರುವ ಎಲ್ಲಾ ಬಾಗಿಲುಗಳು ಮುಚ್ಚಿಕೊಂಡಾಕ್ಷಣ ಬ್ರಾಹ್ಮಣರು ಸತ್ಯವಂತರಾಗಿಬಿಡುತ್ತಾರೆ. 16ನೇ ಶತಮಾನದ ಕಾಶಿಯಲ್ಲಿ ಗುರುರವಿದಾಸ್‌ನನ್ನು ಎದುರುಗೊಂಡಾಗ ಅವರು ಸತ್ಯವಂತರಾಗಿ ಬಿಟ್ಟಿದ್ದರು. ಈ 20ನೇ ಶತಮಾನದ ಮಧ್ಯದಲ್ಲಿ ಭಾರತಕ್ಕೆ ಒಂದು ಸಂವಿಧಾನ ಬೇಕೆಂದಾಗ ಅವರು ಪುನಃ ಸತ್ಯವಂತರಾದರಲ್ಲದೆ, "ಶೂಟ್ ಧರಿಸಿದ

ವ್ಯಕ್ತಿಯನ್ನು" ಕರೆದರು. ಉತ್ತರ ಪ್ರದೇಶದಲ್ಲಿ ಪ್ರಜಾಪ್ರಭುತ್ವದ ವಿರೋಧಿ ಶಕ್ತಿಗಳು ಸವಾಲೆಸೆದಾಗ ಅವರು ಮತ್ತೊಮ್ಮೆ ತಮ್ಮ ಸತ್ಯವನ್ನು ಮೆರೆದು ಮಾಯಾವತಿಯವರಲ್ಲಿ ಒಬ್ಬ ಸಾಮಾಜಿಕ ಸುಧಾರಣಾವಾದಿಯನ್ನು ಕಂಡರು. ಈಗ, ಜಾಗತೀಕರಣದ ಕಾಲದಲ್ಲಿ, ಸಾಮಾನ್ಯ ಬ್ರಾಹ್ಮಣರು ಸಹ ತಮ್ಮ ಜನ್ಮಕುಂಡಲಿಯನ್ನು ಅಂತರ್‌ಜಾಲದಲ್ಲಿ (ಇಂಟರ್‌ನೆಟ್) ಹುಡುಕುತ್ತಿರುವಾಗ, ಸಂಪ್ರದಾಯಸ್ಥ ಬಡ ಬ್ರಾಹ್ಮಣರು ತಮ್ಮ ಪೌರೋಹಿತ್ಯದಲ್ಲಿ ಮುಳುಗಿದ್ದು, ಸಾಮಾಜಿಕವಾಗಿ ಜಡತ್ವದಲ್ಲಿದ್ದಾಗ, ಒದರಿಕೊಂಡು ಕೊನೆಗೂ ಈ "ಅರ್ಹತೆ"ಯನ್ನು ಧಿಕ್ಕರಿಸಿ, ತಮ್ಮ ಬೌದ್ಧಿಕ ಶ್ರೇಷ್ಠತೆಯ ಭ್ರಮೆಯಿಂದ ಹೊರ ಬಂದಂತಿದ್ದಾರೆ.

ಅಂಬೇಡ್ಕರ್ ಪರಿಭಾಷೆಯಲ್ಲಿ 'ಮೀಸಲಾತಿ' ಪರಿಕಲ್ಪನೆಯು ಕೇವಲ ಅತಿಥಿಯಂತೆ ಇಣಕಿದ್ದು, "ಪ್ರತಿನಿಧಿ" ಕಲ್ಪನೆಯ ಜಾರಿಯಾಗುವಿಕೆಯಲ್ಲಿ ಅದೊಂದು ವಿಧಾನವಷ್ಟೆ. ಪಾರಂಪರಿಕ ವರ್ಣ ವ್ಯವಸ್ಥೆಯಲ್ಲಿ ಎಸ್.ಸಿ/ಎಸ್.ಟಿಗಳು ನಾಗರೀಕರೆನಿಸಿಕೊಂಡಿರಲಿಲ್ಲ; ಆದರೆ ಆಧುನಿಕ ರಾಜ್ಯಾಂಗ ವ್ಯವಸ್ಥೆ ಮತ್ತು ಅದರ ಅಂಗ ಸಂಸ್ಥೆಗಳಲ್ಲಿ ಅವರು ಜೊತೆಗಾರರಾದರು. ಎಸ್‌ಸಿ/ಎಸ್‌ಟಿ ಅಥವಾ ದಲಿತರು ತಮ್ಮ "ಪ್ರಾತಿನಿಧಿತ್ವ"ದ ಹಕ್ಕನ್ನು ಭಾರತದುದ್ದಕ್ಕೂ ರಾಜಕೀಯವಾಗಿ ಅನುಭವಿಸುವಂತಾಗಿದ್ದರು. ಆದರೆ ಮಂಡಲ್ ವರದಿಯ ಜಾರಿಯ ನಂತರ ಅಂತಹ ಒಪ್ಪಿಗೆ ಅವರಿಗೆ ಇಲ್ಲವಾಯಿತು. ಏಕೆಂದರೆ ವಿ.ಪಿ. ಸಿಂಗ್ ಮಂಡಲ್ ವರದಿಯನ್ನು ಹೇರಿದ್ದರಿಂದಲೇ ಅದೆಲ್ಲವೂ ಗೊಂದಲದಲ್ಲಿ ಸಿಲುಕಿಕೊಂಡಿತು. ಮಂಡಲ್ ಸಮಿತಿಯಲ್ಲಿದ್ದ ಒಬ್ಬನೇ ಒಬ್ಬ ದಲಿತ ಸದಸ್ಯ ಎಲ್.ಆರ್. ನಾಯಕ್, ಆದರೆ ಶಿಫಾರಸ್ಸುಗಳಿಗೆ ಸಹಿ ಮಾಡಲು ಒಪ್ಪಲಿಲ್ಲ; ಬದಲು ತನ್ನ ವಿರೋಧವನ್ನು ಲಿಖಿತ ಬರವಣಿಗೆಯಲ್ಲಿ ಸಲ್ಲಿಸಿದ. ತನ್ನ ಬರಹದಲ್ಲಿ ಆತ ವಾದಿಸಿದ್ದೆಂದರೆ, ಒ.ಬಿ.ಸಿ. ಪಾಲು ಕೆಳ ಮತ್ತು ಉನ್ನತ ಒ.ಬಿ.ಸಿ.ಗಳೆಂದು ವಿಂಗಡಿಸಲಾಗುತ್ತದೆ ಮತ್ತು ಉನ್ನತ ಒ.ಬಿ.ಸಿ.ಗಳು ಒಡ್ಡುವ ಅಪಾಯದ ಬಗ್ಗೆ ಎಚ್ಚರಿಸಿದ್ದ. ಹೀಗೆ ಆತ ವಾದಿಸಿದ ಎರಡು ದಶಕಗಳಲ್ಲೇ, ಅಂದರೆ ಇಂದು, ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದ್ದು ಈ ಸವರ್ಣೀಯ ಒ.ಬಿ.ಸಿ.ಗಳೇ ಪ್ರಜಾಪ್ರಭುತ್ವ ವಿರೋಧಿ ಚಟುವಟಿಕೆಗಳಲ್ಲಿ ಹೊಸಯುಗವನ್ನೇ ಆರಂಭಿಸಿದ್ದಾರೆ. ಅಂದರೆ ಮಂಡಲ್ ಜಾರಿಯಿಂದ 'ಮೀಸಲಾತಿ'ಯು ತನ್ನ ಸಾಮಾಜಿಕ ಮಾನ್ಯತೆಯನ್ನು ಕಳೆದುಕೊಳ್ಳುತ್ತದೆ. ಇದರೊಡನೆ ದ್ವಿಜರು ಸೇರಿಕೊಂಡು ಅದನ್ನು 'ಮತಪೆಟ್ಟಿಗೆ'ಯ ತಂತ್ರವನ್ನಾಗಿ ಪಲ್ಲಟಗೊಳಿಸಲಾಗುತ್ತಿದೆ.

ತಾಂತ್ರಿಕ ದೋಷದ ಹೊರತಾಗಿಯೂ, ಮೀಸಲಾತಿ ಬುತ್ತಿಗೆ ಬಂದಿರುವ ದ್ವಿಜರಿಂದ, ಒಂದು ಉಪ ಉತ್ಪನ್ನ ಎಂಬಂತೆ, ದಲಿತರಿಗೆ ಅಧಿಕ ಲಾಭವನ್ನೇ ತರುವುದು. ಒ.ಬಿ.ಸಿಗಳು ಈಗಾಗಲೇ ರಾಜ್ಯಮಟ್ಟದ 'ನೌಕರಶಾಹಿ'ಯಲ್ಲಿ ಮತ್ತು ಕೇಂದ್ರ ಸೇವೆಗಳಲ್ಲಿ ತಮ್ಮ ಪಾಲನ್ನು ಅಧಿಕವಾಗಿಯೇ ಪಡೆದಿದ್ದಾರೆ. ಅದರೊಡನೆ 27% ಸೇರ್ಪಡೆಯಿಂದಾಗಿ, ಕೆಲವೇ ದಶಕಗಳಲ್ಲಿ ಅವರು 50% ಮುಂದುವರೆಯಲ್ಲಿದ್ದಾರೆ. ಅದೇನಾದರೂ ಆದಲ್ಲಿ 'ನೌಕರಶಾಹಿ'ಯ ಸಾಮಾಜಿಕ ಸ್ವರೂಪವು ತನ್ನ "ಮೂರು-ವಿಭಾಗೀಯ" (ತ್ರಿಯೋ-ಪೋಲಾರ್) ಲಕ್ಷಣವನ್ನು ಕಳೆದುಕೊಂಡು ದಲಿತರಿಗೆ ಸಾಮಾಜಿಕ ನರಕವಾಗುತ್ತದೆ. ಬಡಬ್ರಾಹ್ಮಣರು ಒ.ಬಿ.ಸಿ. ವರ್ಗೀಕರಣದಲ್ಲೇ ಪ್ರವೇಶಿಸುತ್ತಾರಾದ್ದರಿಂದ ಈ ನಡೆಯನ್ನು ದಲಿತರು ಸ್ವಾಗತಿಸಲೇಬೇಕು.

ಈಗಲೂ ಬ್ರಾಹ್ಮಣರು ಶತ್ರು ನಂ. 1:

"ನಿಮ್ಮ ಮುಂದೆ ಎರಡು ರೀತಿಯ ಚಿತ್ರಗಳು ಎದುರಿಗಿವೆ. ಒಂದು ಬ್ರಾಹ್ಮಣನದ್ದು, ಮತ್ತೊಂದು ಶೂದ್ರನದ್ದು ಅಂದರೆ ಒಕ್ಕಲಿಗನದ್ದು. ಅವರಲ್ಲಿ ಒಬ್ಬನ ಮುಖಕ್ಕೆ ಕಪ್ಪುಮಸಿ ಬಳಿಯಲು, ನಿಮಗೊಂದು ಅವಕಾಶವಿದೆ, ಯಾರನ್ನು ಆಯ್ಕೆ ಮಾಡುವಿರಿ?" ಇತ್ತೀಚೆಗೆ ನಾನು ಬೆಂಗಳೂರಿಗೆ ಭೇಟಿಯಿತ್ತಾಗ, ನನ್ನ ಕನ್ನಡ ದಲಿತ ಬುದ್ಧಿಜೀವಿ ಸ್ನೇಹಿತನಿಗೆ ಮೇಲಿನ ನೇರ ಪ್ರಶ್ನೆ ಕೇಳಿದೆ. ಮಿಂಚಿನಂತೆ ಆತ ಉತ್ತರಿಸಿದ, "ಮೊದಲು ಬ್ರಾಹ್ಮಣನಿಗೆ" ನನಗೆ ಆಶ್ಚರ್ಯವೆನಿಸಿತು. ಒಬ್ಬರು ಸಮೀಕ್ಷೆಯೇನಾದರೂ ನಡೆಸಿದಲ್ಲಿ, ಮೊದಲಿಗೆ, ಅನಿವಾಸಿ ದಲಿತರಿಗೆ ಇದೇ ಪ್ರಶ್ನೆಯನ್ನು ಕೇಳಿದಲ್ಲಿ ಉತ್ತರ ಮೇಲಿನ ರೀತಿಯಲ್ಲೇ ಇರಬಹುದು. ಹಾಗೆಯೇ ದೇಶದೊಳಗಿನ ತಿಳುವಳಿಕಸ್ಥ ದಲಿತರು, ಬರಹಗಾರರು, ವಿಶ್ವವಿದ್ಯಾಲಯ ಮತ್ತು ಶಾಲಾ ಶಿಕ್ಷಕರು, ಎಲ್ಲಾ ಬಾಬುಗಳು, ನಾಗರೀಕ ಸೇವೆಯಲ್ಲಿರುವವರು ಅಥವಾ ಗುಮಾಸ್ತರು, ಎಲ್ಲರೂ ಒಂದೇ ಧ್ವನಿಯಲ್ಲಿ ಬ್ರಾಹ್ಮಣನ ಮುಖಕ್ಕೆ ಕಪ್ಪು ಬಳಿಯಲು ಇಚ್ಛಿಸುತ್ತಾರೆ.

ಮೀಸಲಾತಿ ಬುತ್ತಿಗೆ ಹೊಸ ಆಕಾಂಕ್ಷಿಗಳಾಗಿ ಬ್ರಾಹ್ಮಣರು ಕೈಚಾಚಿರುವುದು ಕೊನೆಗೂ ದಲಿತ ಚಳುವಳಿ ನಿಟ್ಟುಸಿರು ಬಿಟ್ಟಂತಾಗಿದೆ. "ಅರ್ಹತೆ"ಯ ಮೂಲಭೂತ ಪ್ರಶ್ನೆ ಈಗ ಪರಿಹಾರ ಕಂಡಂತಾಗಿದೆ. ಏಕೆಂದರೆ ರಾಜ್ಯಾಂಗ ನೀತಿಯ ಕಡು ವಿರೋಧಿಗಳಾದ ಬ್ರಾಹ್ಮಣರೇ ಈಗ ಅದನ್ನು ಪಡೆಯಲು ಆತುರರಾಗಿದ್ದಾರೆ. ಆದ್ದರಿಂದಲೇ, ರಾಜಸ್ಥಾನ ಸರ್ಕಾರ ಕೈಗೊಳ್ಳುತ್ತಿರುವ ಕ್ರಮವನ್ನು ಸ್ವಾಗತಿಸಲೇಬೇಕು. ಒಂದೇ ಸರದಿಯಲ್ಲಿ ದಲಿತ ಮತ್ತು ದ್ವಿಜ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರಕ್ಕಾಗಿ ಸಾಲಾಗಿ ನಿಂತಿರುವುದು ಸಂತಸದ ಸಂಗತಿಯೇ ಸರಿ.

ಅದನ್ನೇಕೆ ಮಾಡಬಾರದು? ಈ ಬ್ರಾಹ್ಮಣರಲ್ಲವೇ ಸಾಮಾಜಿಕ ವ್ಯವಸ್ಥೆಯಲ್ಲಿನ ಶ್ರೇಣೀಕರಣವನ್ನು ಸೃಷ್ಟಿಸಿದ್ದು, 'ಮಡಿ'-'ಮೈಲಿಗೆ'ಯ ವಿಷಕಾರದ ಕಲ್ಪನೆಗಳನ್ನು ತಂದದ್ದು, ಹಾಗೂ ತಮ್ಮ ಕ್ರಿಮಿನಲ್ ಸಿದ್ಧಾಂತವನ್ನು ಹಿಡಿದು ಅದಕ್ಕೆ ದೈವಿಕ ನೀತಿಯನ್ನು ಆರೋಪಿಸಿದ್ದು. ಸಾಪೇಕ್ಷ ಸಿದ್ಧಾಂತ ಅಥವಾ ಪರಮಾಣು ಚಲನಾಯಂತ್ರ ಶಾಸ್ತ್ರ (ಕ್ವಾಂಟುಮ್ ಮ್ಯಾಕಾನಿಕ್ಸ್)ವೇನೂ ಅಲ್ಲ, ಆದರೆ ಈ ದುರ್ಗಂಧ ಪೀಡಿತ ಕಲ್ಪನೆಯಾದ "ಅಸ್ಪೃಶ್ಯತೆ" ಮತ್ತು ಆದಿವಾಸಿಗಳನ್ನು ಪ್ರತ್ಯೇಕಿಸಿದ ಅವರ ಅಂಟೆನಾದಿಂದ ಉದ್ಭವಿಸಿ, ಅಲ್ಪಗುಣಮಟ್ಟದ ಗೊಬ್ಬರ ಗುಂಡಿಯ ಮೇಲೆ ನಿಂತಿರುವ ಈ ಸ್ವರೂಪ ಕುರೂಪಿಯದ್ದು. ಈ ಎಲ್ಲಾ ಪರಿಣಾಮಗಳಿಗೆ ಪಶ್ಚಾತ್ತಾಪ ಪಡುವ ಬದಲುವ ಬ್ರಾಹ್ಮಣರು ಅದರ ಬಗ್ಗೆ ಹೆಮ್ಮೆ ಪಡುತ್ತಿದ್ದಾರೆ. ಆದ್ದರಿಂದ, ದಲಿತರು ಅವರ ಬಗ್ಗೆ ಕರುಣೆ ತೋರುವಲ್ಲಿ ಯಾವುದೇ ಕಾರಣ ಇಲ್ಲ. ದಲಿತರ ಐಡಿಯಾಲಾಜಿಕಲ್ ಜಗತ್ತಿನಲ್ಲಿ ಬ್ರಾಹ್ಮಣರು ಯಾವಾಗಲೂ ನಂ. 1 ಗುರಿಯಾಗಿಯೇ ಇರುತ್ತಾರೆ.

ಆದರೆ, ಕನ್ನಡ ದಲಿತರೊಡನೆಯ ಚರ್ಚೆ ಮತ್ತೂ ಮುಂದುವರೆಯಿತು. "ಸರ್, ಒಬ್ಬ ಒಕ್ಕಲಿಗ, ದಲಿತನೊಬ್ಬನ ತಲೆಯನ್ನು ಒಡೆದು, ಆತನ ಹೆಂಡತಿಯನ್ನು ಅವಮಾನಕ್ಕೊಳಪಡಿಸಿದನ್ನೆಂದುಕೊಳ್ಳಿ. ಹಲ್ಲೆಗೊಳಗಾದ ದಲಿತ ಯಾರ ವಿರುದ್ಧ ನಿಲ್ಲುತ್ತಾನೆ" ಎಂದು ಕೇಳಿದ ನನ್ನ ಪ್ರಶ್ನೆಗೆ, "ನಿಜವಾಗಿಯೂ ಒಕ್ಕಲಿಗನ ವಿರುದ್ಧವೇ" ಎಂದು ತಕ್ಷಣ ಪ್ರತಿಕ್ರಿಯೆ ನೀಡಿದ. ಕರ್ನಾಟಕದಲ್ಲಿ ದಲಿತರ ಹಿಂಸೆಗೆ ಹೆಚ್ಚಾಗಿ ಕಾರಣರಾದವರು ಬ್ರಾಹ್ಮಣರೇ ಅಥವಾ ಒಕ್ಕಲಿಗರಂಥ ಇತರ ಶೂದ್ರರೇ?" ಎನ್ನುವ ಮೂರನೇ ಪ್ರಶ್ನೆಗೆ, ಸ್ವಲ್ಪ ಯೋಚಿಸಿದ ನನ್ನ ಮಿತ್ರ ಹೇಳಿದ, "ಅನೇಕ ಬಾರಿ ಶೂದ್ರರೇ, ಅಂದರೆ ಹಿಂದುಳಿದ ವರ್ಗಗಳೆಂದು ಕರೆಯುವವರೇ ಆಗಿದ್ದಾರೆ" ಜನಗಣತಿಯ ಅಂಕಿ-ಅಂಶಗಳನ್ನು ಉಲ್ಲೇಖಿಸುತ್ತಾ, ಸುಮಾರು 80% ದಲಿತರು ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದಾರಲ್ಲದೆ, ಅವರಲ್ಲಿ ಬಹುಸಂಖ್ಯೆ ಕೃಷಿ ಕೂಲಿ ಕಾರ್ಮಿಕರೇ ಆಗಿದ್ದಾರೆ. ಹೀಗಿರುವಲ್ಲಿ ನನ್ನ ನೇರ ಪ್ರಶ್ನೆಯೆಂದರೆ "ಕರ್ನಾಟಕದಲ್ಲಿ ದಲಿತ ಚಳುವಳಿ ಮೊದಲಿಗೆ ಯಾರನ್ನು ಗುರಿಯಾಗಿರಿಸಿಕೊಳ್ಳಬೇಕು. ಬ್ರಾಹ್ಮಣರನ್ನೇ ಅಥವಾ ಶೂದ್ರರನ್ನೇ?" ಈ ಹೊತ್ತಿಗೆ ನನ ದಲಿತ ಸ್ನೇಹಿತ ಮತ್ತಷ್ಟು ಯೋಚಿಸುತ್ತಾ, ನಾನು ಏನನ್ನು ಸೂಚಿಸುತ್ತಿದ್ದೇನೆಂಬುದನ್ನು ಗ್ರಹಿಸಲಾರಂಭಿಸಿದ್ದ.

1991ರಲ್ಲಿ ಜೆ.ಎನ್.ಯು (ನೆಹರು ಯೂನಿವರ್ಸಿಟಿ)ನಿಂದ ಎರಡನೇ ಬಾರಿ ಮತ್ತು ಅಂತಿಮ ಬಾರಿ ಬಿಡಿಸಿಕೊಂಡಾಗ, ಉತ್ತರ ಪ್ರದೇಶದಲ್ಲಿ ನಾನು ದಲಿತ ಶಿಕ್ಷಾಂದೋಲನವನ್ನು ಆರಂಭಿಸಿದಾಗ, ರಾಜ್ಯದ ಎಲ್ಲಾ ಭಾಗಗಳಿಗೆ ಭೇಟಿ ನೀಡಲು ಅವಕಾಶ ಸಿಕ್ಕಿತು. 1993ರ ಹೊತ್ತಿಗಾಗಲೇ ನನಗೆ ಪ್ರಾಮಾಣಿಕವಾಗಿ ಹೊಳೆದ ಸಂಗತಿಯೆಂದರೆ ಸಮುದಾಯದ ಬೌದ್ಧಿಕ ಅಭಿವ್ಯಕ್ತಿಯು ಹೆಚ್ಚಾಗಿ "ಭೂತ"ದಿಂದ ಹೆಕ್ಕಿಕೊಳ್ಳಲಾಗಿತ್ತೇ ವಿನಃ "ಜೀವಂತ" ಬದುಕಿನ ಅನುಭವಗಳಿಂದ ಅಲ್ಲ. ಈ ಸಲ ಅನಧಿಕೃತ ಅತಿಥಿಯಂತೆ ಜೆ.ಎನ್.ಯುಗೆ ವಾಪಸ್ಸಾದಾಗ, ಹೊಸದಾಗಿ ಆಲೋಚಿಸಲು

ಆರಂಭಿಸಿದ್ದಲ್ಲದೆ, "ಎಂ.ಎಲ್."ನಲ್ಲಿ ಪೂರ್ಣಕಾಲೀನ ವ್ಯಕ್ತಿಯಾಗಿದ್ದಾಗ, ಅಂದರೆ ನಾನು ಮೊದಲ ಬಾರಿ ಜೆ.ಎನ್.ಯು ಬಿಟ್ಟಾಗಿನ (1986-1987) ಅನುಭವಗಳೆಲ್ಲವನ್ನು ಅವಲೋಕಿಸ ತೊಡಗಿದೆ. ಆಗ ನನ್ನೊಳಗೆ ಮೊಳಗಿದ ಭಾವನೆಯೆಂದರೆ ನನ್ನನ್ನು ಒಳಗೊಂಡಂತೆ, ನನ್ನ ದಲಿತ ಚಿಂತಕರೆಲ್ಲಾ "ಭೂತ"ದ ಖೈದಿಗಳಾಗಿದ್ದದು ಹಾಗೂ ಯಾವುದೇ ವಿಮೋಚನೆಯ ಹೋರಾಟ ಮೊದಲಿಗೆ ಹೋರಾಟಗಾರರಿಂದಲೇ ಆರಂಭವಾಗಬೇಕೆಂದು ಬಿಡುಗಡೆಗಾಗಿ ಹಲುಬುತ್ತಾ, ನನ್ನೊಳಗೆ ಸೆಣಸಲಾರಂಭಿಸಿದೆ ಹಾಗೂ ಕೊನೆಗೆ ವಿಜಯ ಸಾಧಿಸಿಕೊಂಡೆ.

1996ರಲ್ಲಿ ತೀನ್‌ಮೂರ್ತಿ ಭವನದಲ್ಲಿ "ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಾಮಾಜಿಕ ಬದಲಾವಣೆಗಳು, ಒಂದು ದಲಿತ ದೃಷ್ಟಿಕೋನ" ಎಂಬ ಪ್ರಬಂಧವೊಂದನ್ನು ಮಂಡಿಸಿದೆ. ನನ್ನ ಪ್ರಬಂಧದ ವಾದವೆಂದರೆ ಭಾರತೀಯ ಸಾಮಾಜಿಕ ವ್ಯವಸ್ಥೆಯು ನಾಟಕೀಯವಾಗಿ ಅಂತರ್ ರಚನಾತ್ಮಕವಾಗಿ ಮರುವ್ಯವಸ್ಥೆಗೊಳ್ಳುತ್ತಿದ್ದು, ಗ್ರಾಮೀಣ ಭಾರತದಲ್ಲಿ ಶೂದ್ರರು ದ್ವಿಜರನ್ನು ಪಲ್ಲಟಗೊಳಿಸಿ, ಪ್ರಧಾನ ಆಳುವ ಗುಂಪಾಗಿ ಹೊರಹೊಮ್ಮಿದೆ. ದ್ವಿಜರು ರಾಜಕೀಯವಾಗಿ ಅಪ್ರಸ್ತುತವಾಗುವುದನ್ನು ಮುಳುಗುತ್ತಿರುವ ದೋಣಿಯಲ್ಲಿ ಕುರಿತು ಎದುರಿಸುವಂತಾಗಿದ್ದರೆ, ದಲಿತರು ತಮ್ಮ ತಕ್ಷಣದ ಹಿಂಸಕರಾದ ಶೂದ್ರರಿಂದ ಸವಾಲಿಗೊಳಗಾಗಿದ್ದಾರೆ. ಆದ್ದರಿಂದ ದಲಿತರು ಮತ್ತು ದ್ವಿಜರು ತಮ್ಮದೇ ಆದ ಕಾರಣಗಳಿಗಾಗಿ ಒಂದು ಸಮಾನ ರಾಜಕೀಯ ವೇದಿಕೆಯನ್ನು ಕೊಳ್ಳೆ ಹೊಡೆಯುತ್ತಿರುವ ಶೂದ್ರರ ವಿರುದ್ಧ ಕಟ್ಟಿಕೊಳ್ಳುವಂತಾಗಿದೆ. ನನ್ನ ಸಿದ್ಧಾಂತೀಕರಿಸುವಿಕೆಗೆ ವಿರುದ್ಧವಾಗಿದ್ದ ಬಿ.ಎಸ್.ಪಿ. ಸಿದ್ಧಾಂತ ಅಂತಿಮವಾಗಿ ಎಂಟು ವರ್ಷಗಳ ಹಿಂದೆ ವಾದಿಸಿದ ಸಂಗತಿಗೇ ಹಿಂತಿರುಗಿದ್ದಾರೆ.

"ದಲಿತ ದರ್ಶನ"/"ದಲಿತ ದೃಷ್ಟಿ" ಎಂದರೇನು ಎಂಬುದು ಸಾಮಾನ್ಯ ದಲಿತ ಜನರಿಂದ ಅಥವಾ ತಳಮಟ್ಟದ ಕಾರ್ಯಕರ್ತರಿಂದ ಅಭಿವ್ಯಕ್ತಿಗೊಂಡಿಲ್ಲ. ಅದು ಜಗತ್ತಿನ ಯಾವ ಎಡೆಯಲ್ಲೂ ಆಗಿಲ್ಲ. ಸಾಮಾಜಿಕ ಚಲನೆಯನ್ನು ಸಿದ್ಧಾಂತೀಕರಿಸುತ್ತಿರುವುದು ಎಲೀಟ್ (ಮೇಲ್ವರ್ಗ) ಅಥವಾ ಮಧ್ಯಮ ವರ್ಗದ ಜನರಿಂದ. ದಲಿತ ಬುದ್ಧಿಜೀವಿಗಳಿಗೆ ಸಂಬಂಧಿಸಿದಂತೆ, ಅನೇಕರು ಮೊದಲ ಅಥವಾ ಎರಡನೇ ತಲೆಮಾರಿನ ಶಿಕ್ಷಿತರಾಗಿದ್ದು, ಅವರ ಹುಟ್ಟು, ಬೆಳವಣಿಗೆ ಮತ್ತು ಪ್ರಾಥಮಿಕ ವಿದ್ಯಾಭ್ಯಾಸ ಗ್ರಾಮೀಣ ಸಮಾಜದಲ್ಲೇ ಆಗಿದ್ದು, ಅಲ್ಲಿ ಅವರು ಬ್ರಾಹ್ಮಣರ ಮನಸ್ಸು ಹೇಗೆ ವಂಚಿಸುತ್ತಿತ್ತು ಮತ್ತು ಕಮ್ಮ ಹಾಗೂ ಯಾದವರನ್ನು ದಲಿತರ ವಿರುದ್ಧ ಎತ್ತಿಕಟ್ಟುತ್ತಿದ್ದದ್ದನ್ನು ನೋಡಿದ್ದಾರೆ. ಇಂಥ ದಲಿತರು ನಗರಗಳಲ್ಲಿ ನೆಲೆಯೂರಿದ್ದು, ಒಬ್ಬ ಬ್ರಾಹ್ಮಣರ ಅಧಿಕಾರಿ ವ್ಯತಿರಿಕ್ತವಾದ ಸಿ.ಆರ್. ಬರೆಯುವುದನ್ನು, ಕುಜಾಗಗಳಿಗೆ ವರ್ಗಾವಣೆ ಮಾಡುವುದನ್ನು, ಒಬ್ಬ ಬ್ರಾಹ್ಮಣ ಸಂಪಾದಕ

ದ್ವಿಜರು ರಾಜಕೀಯವಾಗಿ ಅಪ್ರಸ್ತುತವಾಗುವುದನ್ನು ಮುಳುಗುತ್ತಿರುವ ದೋಣಿಯಲ್ಲಿ ಕುರಿತು ಎದುರಿಸುವಂತಾಗಿದ್ದರೆ, ದಲಿತರು ತಮ್ಮ ತಕ್ಷಣದ ಹಿಂಸಕರಾದ ಶೂದ್ರರಿಂದ ಸವಾಲಿಗೊಳಗಾಗಿದ್ದಾರೆ. ಆದ್ದರಿಂದ ದಲಿತರು ಮತ್ತು ದ್ವಿಜರು ತಮ್ಮದೇ ಆದ ಕಾರಣಗಳಿಗಾಗಿ ಒಂದು ಸಮಾನ ರಾಜಕೀಯ ವೇದಿಕೆಯನ್ನು ಕೊಳ್ಳೆ ಹೊಡೆಯುತ್ತಿರುವ ಶೂದ್ರರ ವಿರುದ್ಧ ಕಟ್ಟಿಕೊಳ್ಳುವಂತಾಗಿದೆ.

ಬರಹದ ಪುಟಗಳನ್ನು ಪ್ರಜಾಸತ್ತಾತ್ಮಕ ಗೊಳಿಸದಿರುವುದನ್ನು, ಅಥವಾ ಒಬ್ಬ ಬ್ರಾಹ್ಮಣ ವಿ.ಸಿ. ದಲಿತ ಶಿಕ್ಷಕರನ್ನು ನೇಮಿಸದಿರುವುದನ್ನು ಕಾಣುತ್ತಿದ್ದಾರೆ. ಹೀಗೆ ಅಭಿವ್ಯಕ್ತಿ ಸಾಮರ್ಥ್ಯವಿರುವ ದಲಿತರು ದಲಿತ-ಬ್ರಾಹ್ಮಣ ದ್ವಂದ್ವಗಳನ್ನು ಸಾರ್ವತ್ರೀಕರಿಸಿ, ಅದೇ ಮೂಲಭೂತ ಮತ್ತು "ಜೀವಂತ ಅನುಭವ"ವೆಂದು ತೋರಿಸುತ್ತಿರುವುದು ಬಹು ಸಂಖ್ಯಾತ ದಲಿತ ಜನರಿಗೆ ಸತ್ಯವಿರಲಿಕ್ಕಿಲ್ಲ. 'ಖೈದಿ'ಯಾಗಿರುವ ದಲಿತ ಮನಸ್ಸು ಸ್ವಯಂ ಪ್ರೇರಿತವಲ್ಲ, ಅದು ಸಾಂದರ್ಭಿಕವಾಗಿರುತ್ತದೆ; ಅಭಿವ್ಯಕ್ತಿಗೊಂಡ ದಲಿತ ಮನಸ್ಸು ಸಾಮಾಜಿಕ ಚಿಕಿತ್ಸಕವಾಗಿ ಗ್ರಾಮೀಣದತ್ತ ಹಿಂತಿರುಗಿ ನೋಡುತ್ತಿಲ್ಲ ಮತ್ತು ಒಂದು ಗಟ್ಟಿ ನಿರ್ಧಾರ ಮಾಡಿ ಅಂತರ್ ರಚನಾತ್ಮಕವಾಗಿ ಭಾರತೀಯ ಸಮಾಜ ಕಳೆದ ಐದು ದಶಕಗಳಿಂದ ಮರು ಸಂಘಟನೆಗೊಂಡಿರುವುದನ್ನು ಸಿದ್ಧಾಂತೀಕರಿಸಲಾಗಿಲ್ಲ. ಆದ್ದರಿಂದ ತೆಲ್ಲಾಣದಲ್ಲಿ ಜಾಥ್-ಸಿಖ್ಖರು ದಲಿತರನ್ನು ಆಘಾತಕ್ಕೊಳಪಡಿಸಿದಾಗ, ದೆಹಲಿಯಲ್ಲಿ ಕುಳಿತಿರುವ ನಮ್ಮಂತಹ ದಲಿತರು ಬ್ರಾಹ್ಮಣರನ್ನು ಶಪಿಸುತ್ತಿರಬಹುದು. ಈ ದೊಡ್ಡ ಸಾಮಾಜಿಕ ನಾಟಕದಲ್ಲಿ ಹಠಮಾರಿಯಾಗಿ ಮತ್ತಷ್ಟು ಮುಕ್ತರಾಗುವುದನ್ನು ತಿರಸ್ಕರಿಸುತ್ತಿದ್ದು, ಶೂದ್ರನು ಮಂದಸ್ಮಿತನಾಗಿ ಕುಂತು ನೋಡುತ್ತಿದ್ದಾನೆ.

ಎರಡು ಧ್ರುವಗಳ ಸಾಮಾಜಿಕ ನೆಲೆಯಲ್ಲಿ ದಲಿತರು

ಪ್ರತಿಯೊಂದು ದ್ವಂದ್ವವೂ ಪೂರ್ವಗ್ರಹ ಪೀಡಿತವಲ್ಲದ ಉತ್ತರವನ್ನು ಬಯಸುತ್ತದೆ. ಅದರ ಬದಲು ಎದೆಬಡಿದುಕೊಳ್ಳುವುದು ಸರ್ವನಾಶದತ್ತ ಹಾದಿಯನ್ನು ಸುಗಮಗೊಳಿಸುತ್ತದೆ. ದಲಿತರ ದುಃಖವನ್ನು ತಾವು ಜೀವಿಸುತ್ತಿರುವ ಸಾಮಾಜಿಕ ಸಂದರ್ಭಗಳಿಂದ ಹೊರತುಪಡಿಸುವುದು ಗಾಳಿ ಗುದ್ದಾಟವೆನಿಸುತ್ತದೆ. ಅಂಬೇಡ್ಕರೋತ್ತರ ಕಾಲದ ದಲಿತನು ಶೂದ್ರಬುಟ್ಟಿಯಲ್ಲಿ ಮೊಟ್ಟೆ ಇಡುತ್ತಿದ್ದು, ಕೇವಲ ಬ್ರಾಹ್ಮಣರನ್ನು ದೂಷಿಸುತ್ತಿದ್ದರೆ, ತಮ್ಮ ಹಿಂದುಗಡೆ ಶೂದ್ರ ಆ ಮೊಟ್ಟೆಗಳಿಗೆ ಕಾವು ಕೊಡದೆ, ಮೊಟ್ಟೆ-ಚಪಾತಿ ಮಾಡಿ ಮೆಲ್ಲುತ್ತಿರುವುದನ್ನು ಗಮನಿಸಲಾಗುವುದಿಲ್ಲ. ಅದನ್ನು ಸಂಪೂರ್ಣವಾಗಿ ನಿರ್ದಯೆ ಎನ್ನಲಾಗದಿದ್ದರೂ ಹಾಸ್ಯಾಸ್ಪದವಂತೂ ನಿಜ. ನಾವು ಶೂದ್ರ-ಬ್ರಾಹ್ಮಣ ಒಗಟನ್ನು ಬಿಡಿಸಬೇಕಾಗಿದೆ ಮತ್ತು ಹಾಗೆ ಮಾಡುವಾಗ ದಲಿತರು ಎಲ್ಲಿದ್ದಾರೆಂಬುದನ್ನು ಗಮನಿಸಲೇಬೇಕು. ಪಂಜಾಬಿನಲ್ಲಿ ದಲಿತರು 28.30% ಇದ್ದಾಗ್ಯೂ ಕಳೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಒಂದು ಸ್ಥಾನವನ್ನೂ ಗಳಿಸಲಾಗದ್ದು ಕೇವಲ 5.69% ಮತಗಳನ್ನಷ್ಟೇ ಗಳಿಸಿತು. ಹರಿಯಾಣದಲ್ಲಿ ದಲಿತರು 19.75% ಇದ್ದಾಗ್ಯೂ ಬಿ.ಎಸ್.ಪಿ. ಶೇ. 5.74 ಮತಗಳಿಸಿ, ಒಂದು ಸ್ಥಾನವನ್ನು ಮಾತ್ರ ಪಡೆಯಿತು.

ಆದರೆ, ಬಿ.ಎಸ್.ಪಿ.ಯು ಉತ್ತರ ಪ್ರದೇಶದಲ್ಲಿ 100 ಸ್ಥಾನಗಳನ್ನು ಗಳಿಸಿತಲ್ಲದೆ 1/4ರಷ್ಟು ಅಧಿಕ ಮತಗಳನ್ನು ಪಡೆಯುತ್ತದೆ. ಕಳೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಐದು ಎಂ.ಎಲ್.ಎ. ಸ್ಥಾನಗಳನ್ನು ಪಡೆದು, ಶೇ. 1.89ರಷ್ಟು ಮತಗಳನ್ನು ಗಳಿಸಿತು. ಮಧ್ಯಪ್ರದೇಶದಲ್ಲಿ ಅದೇ ಚುನಾವಣೆಯಲ್ಲಿ 11 ಎಂ.ಎಲ್.ಎ. ಮತ್ತು ಶೇ. 6.15ರಷ್ಟು ಮತಗಳನ್ನು ಪಡೆಯುತ್ತದೆ. ರಾಜಸ್ಥಾನದಲ್ಲಿ ಎರಡು ಸ್ಥಾನಗಳನ್ನು ಮತ್ತು 2.17% ಮತಗಳನ್ನು ಬಿಎಸ್‌ಪಿ ಗಳಿಸಿತು. ಈ ಮೇಲಿನ ರಾಜ್ಯಗಳಲ್ಲಿ ಅಸ್ಪೃಶ್ಯರು ಕ್ರಮವಾಗಿ ಶೇ. 14.55, 14.55 ಮತ್ತು 17.29%ರಷ್ಟಿದ್ದಾರೆ. ಆದಿವಾಸಿಗಳು ಶೇ. 7.66, 23.27 ಹಾಗೂ ಶೇ. 12.44ರಷ್ಟು ಇದ್ದಾರೆ. ಆದರೆ ಈ ರಾಜ್ಯಗಳಲ್ಲಿ ಹೇಳಿಕೊಳ್ಳುವಂತಹ ದಲಿತ ಚಳುವಳಿಯೇನೂ ಇಲ್ಲ. ಹೀಗಿದ್ದರೂ ಬಿಎಸ್‌ಪಿಯು ಉತ್ತರ ಪ್ರದೇಶದಲ್ಲಿ ದಿಟ್ಟವಾಗಿ ಹೆಜ್ಜೆಯಿಟ್ಟು, ಬಿಹಾರ್ ಎಂ.ಪಿ. ಮತ್ತು ರಾಜಸ್ಥಾನದಲ್ಲಿ ಸುಗಮವಾಗಿ ಪ್ರವೇಶಿಸಿತು, ಆದರೆ ಪಂಜಾಬ್ ಮತ್ತು ಹರಿಯಾಣದಲ್ಲಿ ಅದನ್ನು ಸಾಧಿಸಲು ಏಕೆ ಆಗಲಿಲ್ಲ? ಈ ರಹಸ್ಯವನ್ನು ಭೇದಿಸಲೇಬೇಕು ಇದನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಾವು ದಕ್ಷಿಣದತ್ತ ಪಯಣಿಸಲೇಬೇಕು.

ತಮಿಳುನಾಡಿನಲ್ಲಿ ದಲಿತರು (ಶೇ. 1.08ರಷ್ಟು ಆದಿವಾಸಿಗಳನ್ನು ಸೇರಿಸಿಕೊಂಡು) ಶೇ. 20.26 ರಷ್ಟಿದ್ದಾರೆ. ಆದರೆ, ತಮಿಳು ದಲಿತ ಚಳುವಳಿ ಯಾವುದೇ ಹೊಂದಾಣಿಕೆಯಿಲ್ಲದೆ ನಾಲ್ಕು ಎಂ.ಎಲ್.ಎ. ಸ್ಥಾನಗಳನ್ನು ಪಡೆಯದಿರಲು ಕಾರಣಗಳೇನು? ಕರ್ನಾಟಕದಲ್ಲಿ ದಲಿತರು (ಆದಿವಾಸಿಗಳು ಶೇ. 4.26 ರಷ್ಟು ಸೇರಿ) 20.64ರಷ್ಟು ಇದ್ದರೂ ಬಿಎಸ್‌ಪಿ ಪಡೆಯುವುದು ಕೇವಲ ಒಂದು ಸ್ಥಾನ ಅಷ್ಟೇ. ಆಂಧ್ರಾದಲ್ಲಿ ದಲಿತರು (ಶೇ. 6.31 ಆದಿವಾಸಿಗಳು ಸೇರಿ) 22.44ರಷ್ಟಾಗುತ್ತಾರೆ. ಆದರೆ ಅಲ್ಲಿನ ದಲಿತ ಚಳುವಳಿ ಒಂದೇ ಒಂದು ಸ್ಥಾನವನ್ನೂ ಸಹ ಗಳಿಸಲು ಸಾಧ್ಯವಿಲ್ಲ ಏಕೆ? ಕೇರಳದಲಿ ಶೇ. 10ರಷ್ಟು ಇರುವುದರಿಂದ ಮರೆತು ಬಿಡಬಹುದೇನೋ? ಇಂದು ದಕ್ಷಿಣ ರಾಜ್ಯಗಳು ಹಾಗೂ ಪಂಜಾಬ್, ಹರಿಯಾಣ, ಗುಜರಾತ್, ಮಹಾರಾಷ್ಟ್ರಗಳನ್ನು ಒಂದಾಗಿ ತೆಗೆದುಕೊಂಡರೂ ಬಿಎಸ್‌ಪಿ ಬಿಹಾರ್‌ನಲ್ಲಿ ಯಾವುದೇ

ಹೊಂದಾಣಿಕೆ ಇಲ್ಲದೆ ಐದು ಸ್ಥಾನಗಳನ್ನು ಪಡೆದುದಕ್ಕೆ ಸರಿಸಾಟಿಯಾಗಿ ನಿಲ್ಲಲಾಗುವುದಿಲ್ಲ.

ಬಿಎಸ್‌ಪಿಯ ಈ ರೀತಿಯ ಪರಾಕ್ರಮವು ಎಲ್ಲಾ ಗಂಗಾಬಯಲಿನ ದಲಿತರನ್ನು ಒಂದುಗೂಡಿಸಿದೆಯೆಂದರೆ ಅದನ್ನು ಕಾನ್ಸಿರಾಮ್‌ರವರ ಜಾಣ್ಮೆ, ತ್ಯಾಗ, ಶ್ರದ್ಧೆಯ ಕೆಲಸಗಳು ಎಂದು ಹೇಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಾಯಾವತಿಯಲ್ಲಿ ಅವರಿಗೆ ಒಂದು ಆದರ್ಶ ಸಂವಹನಾ ಮಾದರಿ ದೊರೆಯುತ್ತದೆ. ಕಾನ್ಸಿರಾಮ್‌ರನ್ನು ಅಂಬೇಡ್ಕರ್‌ರವರಿಗೆ ಮಾತ್ರ ಹೋಲಿಸಬಹುದೆನ್ನುವ ವಾದಕ್ಕೆ ಯಾರು ಅಸಮ್ಮತಿ ಸೂಚಿಸಲಾಗದು. ಅಲ್ಲದೆ ಅವರ ಬದ್ಧತೆಗೆ ಪ್ರಮಾಣ ಪತ್ರವೇನೂ ಬೇಕಿಲ್ಲ. ಆದರೂ ಕಾನ್ಸಿರಾಮ್‌ರವರ ಪ್ರಯತ್ನ ಪಂಜಾಬ್ ಅಥವಾ ಹರಿಯಾಣಗಳಲ್ಲಿ ಫಲಪ್ರದವಾಗಲಿಲ್ಲ ಏಕೆ? ಅಥವಾ ಉಳಿದ ಪ್ರದೇಶಗಳು ಕಾನ್ಸಿರಾಮ್‌ರಂಥ ವ್ಯಕ್ತಿತ್ವಗಳನ್ನು ಹುಟ್ಟಾಕಲಿಲ್ಲ ಏಕೆ?

ಭಾರತೀಯ ಸಾಮಾಜಿಕ ಚಲನೆಯನ್ನು ಗ್ರಹಿಸಬೇಕಾದರೆ ನಿಜ ಏನು ಎಂಬುದನ್ನು ನೋಡಬೇಕಿದೆ. ಅಂದರೆ ಭಾರತೀಯ ರಿಪಬ್ಲಿಕನ್ ಪಕ್ಷ 1967ರಲ್ಲೇ ಉತ್ತರ ಪ್ರದೇಶದಲ್ಲಿ 10 ಎಂ.ಎಲ್.ಎ. ಸ್ಥಾನಗಳನ್ನು ಪಡೆದಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಉಳಿದಂತೆ ಭಾರತಾದ್ಯಂತವೂ ಆ ಪಕ್ಷ ಅಷ್ಟು ಸ್ಥಾನಗಳನ್ನು ಪಡೆಯಲಾಗಲಿಲ್ಲ ಏಕೆ? ಅಲ್ಲದೆ ಉತ್ತರ ಪ್ರದೇಶದಲ್ಲಿ ದಲಿತರಿಗೆ ಒಬ್ಬ ಕಾನ್ಸಿರಾಮ್‌ರಾಗಲೀ ಅಥವಾ ನಂಬಲರ್ಹ ಬ್ರಾಹ್ಮಣೇತರ ಚಳುವಳಿಯಾಗಲಿ ಇರಲಿಲ್ಲ. ಪಂಜಾಬ್ ಪ್ರಾಂತ್ಯದಲ್ಲಿ ನಾಲ್ಕು ಶತಮಾನಗಳ ಹಿಂದೆಯೇ ಬ್ರಾಹ್ಮಣರನ್ನು ಹೊರ ದಬ್ಬಿದ್ದರು. ಹಾಗೆಯೇ ಕಳೆದ ಶತಮಾನದಲ್ಲಿ ತಮಿಳುನಾಡಿನಲ್ಲಿ ಆಯಿತು. ತಮಿಳು ನಾಡಿನ ಅನುಭವವು ದಕ್ಷಿಣದುದ್ದಕ್ಕೂ ಮೊಳಗಿತಲ್ಲದೆ ಪಶ್ಚಿಮ ಭಾರತದಲ್ಲೂ ಬ್ರಾಹ್ಮಣರು ಸಾಮಾಜಿಕವಾಗಿ ಅಪ್ರಸ್ತುತರಾದರು. ಇಂಥ ಎಡೆಗಳಲ್ಲೆಲ್ಲಾ ಬ್ರಾಹ್ಮಣರನ್ನು ದೂಷಿಸುವ ಸೈದ್ಧಾಂತಿಕ ನಾಟಕದಲ್ಲಿ ದಲಿತ ಚಳುವಳಿ ಬೆಳೆಯಬಹುದಾಗಿತ್ತೇನೋ. ಅದು ಆಗಲಿಲ್ಲ. ನನ್ನ ಭಯವೆಂದರೆ 1967ರಲ್ಲಿ ಯುಪಿಯಲ್ಲಿ ರಿಪಬ್ಲಿಕನ್ ಪಕ್ಷ ಏನನ್ನು ಸಾಧಿಸಿತೋ ಅದನ್ನು ತಮಿಳ್ನಾಡಿನ ದಲಿತ ಚಳುವಳಿ 2019ರಲ್ಲೂ ಅಂದರೆ 50 ವರ್ಷಗಳ ನಂತರವೂ ಸಾಧಿಸಲಾಗುವುದಿಲ್ಲವೇನೋ! ಹಾಗಾದರೆ ಈ ಬ್ರಾಹ್ಮಣ ರಹಸ್ಯವನ್ನು ಭೇದಿಸುವುದು ಹೇಗೆ?

ಗಂಗಾ ಬಯಲಿನ ಪ್ರದೇಶದಲ್ಲಿ, ಅಂಕಿಅಂಶಗಳಿಗಾಗಿಯಾದರೂ, ದ್ವಿಜರನ್ನು ಪ್ರತಿನಿಧಿಸುವ ಅಧಿಕ ಮಂದಿ ಬ್ರಾಹ್ಮಣರು ನೆಲೆಯೂರಿದ್ದಾರೆ. ಯುಪಿಯಲ್ಲಿ ಬ್ರಾಹ್ಮಣರು (9.27%), ಕ್ಷತ್ರಿಯರು ಮತ್ತು ವೈಶ್ಯರು ಒಟ್ಟಾಗಿ ಶೇ. 20.50ರಷ್ಟಿದ್ದಾರೆ. ಇದು ದಲಿತರಿಗೆ ಸಮವಾಗಿದೆ. ಇದರಂತೆಯೇ ಬಿಹಾರ್, ಎಂ.ಪಿ. ಮತ್ತು ರಾಜಸ್ಥಾನದಲ್ಲೂ ಇದೆ. ಗಂಗಾ ಬಯಲು ಪ್ರದೇಶ ಮೂರು ಧ್ರುವಗಳ ಸಮಾಜವಾಗಿದೆ. ದಲಿತರು, ದ್ವಿಜರು ಮತ್ತು ಶೂದ್ರರು ಪ್ರಬಲವಾಗಿ ಪ್ರತಿಸ್ಪರ್ಧಿಸುತ್ತ ಸಾಮಾಜಿಕ ಶಕ್ತಿಗಳಾಗಿದ್ದಾರೆ. ಪಂಜಾಬ್, ಹರಿಯಾಣ, ಗುಜರಾತ್, ಮಹಾರಾಷ್ಟ್ರ ಹಾಗೂ ದಕ್ಷಿಣಾದ್ಯಂತ ಎರಡು ಧ್ರುವಗಳ ಸಮಾಜಗಳು ಎದ್ದು ಕಾಣುತ್ತವೆ. ದಲಿತರು ಮತ್ತು ಶೂದ್ರರು ಪರಸ್ಪರ ಮುಖಾಮುಖಿಯಾಗಿ ಸೆಣಸುತ್ತಿದ್ದಾರೆ. ಅಂದರೆ ಸಾಮಾಜಿಕ ಶಕ್ತಿಯಾಗಿ ಬ್ರಾಹ್ಮಣರ ಗೈರುಹಾಜರಿ ದಲಿತ ರಾಜಕೀಯ ಚಳುವಳಿಗೆ ಅಡ್ಡಗಾಲಾಯಿತೇ? ಇಂಥ ಎರಡು ದ್ರುವಗಳ ಸಾಮಾಜಿಕ ಸನ್ನಿವೇಶದಲ್ಲಿ ದಲಿತರು ತಮ್ಮ ಸೆಣಸಾಟದಲ್ಲಿ ಸೋಲುತ್ತಾರೆ. ಬ್ರಾಹ್ಮಣರು ತಮ್ಮ ಹಿತಾಸಕ್ತಿಗಳಿಗನುಗುಣವಾಗಿ ಸಾಮಾಜಿಕ ಪ್ರಜಾಪ್ರಭುತ್ವವನ್ನು ವಿಸ್ತರಿಸಿಕೊಳ್ಳುವಾಗ, ಅದರಿಂದ ದಲಿತರಿಗೂ ಪ್ರಯೋಜನವಿದೆ. ತಮಾಷೆಯಲ್ಲದಿದ್ದರೂ, ಬ್ರಾಹ್ಮಣರು, ಸಾಮಾಜಿಕ ಸುಧಾರಣವಾದಿಗಳಾಗಿ

ತಮಾಷೆಯಲ್ಲದಿದ್ದರೂ, ಬ್ರಾಹ್ಮಣರು, ಸಾಮಾಜಿಕ ಸುಧಾರಣವಾದಿಗಳಾಗಿ ಪಲ್ಲಟಗೊಳ್ಳುತ್ತಿದ್ದಾರೆ. ಈ ದ್ವಿವೀಕೃತ ಸನ್ನಿವೇಶದಲ್ಲಿ ಶೂದ್ರರು ಸಾಮಾಜಿಕ ಬದುಕನ್ನು ನಿಯಂತ್ರಿಸುವವರಾಗಿ, ಸಮಾಜದಲ್ಲಿ ಪ್ರಜಾಸತ್ತಾತ್ಮಕವಲ್ಲದ ಕೆಲಸಗಳಲ್ಲಿ ತೊಡಗುವವರಾಗಿದ್ದಾರೆ. ಗಂಗಾ ಬಯಲಿನಲ್ಲಿ ಒಮ್ಮೆ ಬ್ರಾಹ್ಮಣರಿಂದ ನಿರ್ಲಕ್ಷ್ಯಕ್ಕೆ ಒಳಗಾದ ದಲಿತರು, ಇಂದು ಬ್ರಾಹ್ಮಣರ ಪ್ರಾಬಲ್ಯ ಇವರಿಗೆ ವರದಾನವಾದಂತಿದೆ. ಆದ್ದರಿಂದ ದಲಿತ ಬುದ್ಧಿ ಜೀವಿಗಳು ಎದೆ ಬಡಿದುಕೊಂಡು ಕೂತರೆ ಏನೂ ಪರಿಹಾರ ಕಾಣುವುದಿಲ್ಲ

ಪಲ್ಲಟಗೊಳ್ಳುತ್ತಿದ್ದಾರೆ. ಈ ದ್ವಿವೀಕೃತ ಸನ್ನಿವೇಶದಲ್ಲಿ ಶೂದ್ರರು ಸಾಮಾಜಿಕ ಬದುಕನ್ನು ನಿಯಂತ್ರಿಸುವವರಾಗಿ, ಸಮಾಜದಲ್ಲಿ ಪ್ರಜಾಸತ್ತಾತ್ಮಕವಲ್ಲದ ಕೆಲಸಗಳಲ್ಲಿ ತೊಡಗುವವರಾಗಿದ್ದಾರೆ. ಗಂಗಾ ಬಯಲಿನಲ್ಲಿ ಒಮ್ಮೆ ಬ್ರಾಹ್ಮಣರಿಂದ ನಿರ್ಲಕ್ಷ್ಯಕ್ಕೆ ಒಳಗಾದ ದಲಿತರು, ಇಂದು ಬ್ರಾಹ್ಮಣರ ಪ್ರಾಬಲ್ಯ ಇವರಿಗೆ ವರದಾನವಾದಂತಿದೆ. ಆದ್ದರಿಂದ ದಲಿತ ಬುದ್ಧಿ ಜೀವಿಗಳು ಎದೆ ಬಡಿದುಕೊಂಡು ಕೂತರೆ ಏನೂ ಪರಿಹಾರ ಕಾಣುವುದಿಲ್ಲ. ಬದಲು ಪೂರ್ವಾಗ್ರಹವಿಲ್ಲದೆ ಹೊರ ಬಂದು ತಮ್ಮ ಪ್ರತಿಕ್ರಿಯೆಯನ್ನು ನೀಡಬೇಕಾಗುತ್ತದೆ.

ಬ್ರಾಹ್ಮಣ ಪೆಟ್ಟು ಮನಸ್ಸಿಗೆ, ಶೂದ್ರನ ಹೊಡೆತ ದೇಹಕ್ಕೆ?

ಹಲವಾರು ದಿನಪತ್ರಿಕೆಗಳು ಇಂದು ದೇಶದಲ್ಲಿದ್ದರೂ ಸಹ, ಒಂದೇ ಒಂದು ದಲಿತನ ಸಂಪಾದಕತ್ವದಲ್ಲಿ ಇಲ್ಲ. ಅನೇಕ ಸುದ್ದಿ ಮಾಧ್ಯಮಗಳಿದ್ದರೂ ಅವುಗಳಲ್ಲಿ ದಲಿತನೊಬ್ಬ ಬೇರೂರಲಾಗಿಲ್ಲ. ದಲಿತರು ಅಥವಾ ಎಸ್‌ಸಿ/ಎಸ್‌ಟಿಗಳು ಸೇರಿದಲ್ಲಿ 250 ಮಿಲಿಯನ್‌ಗಿಂತ ಅಧಿಕವಾಗುತ್ತಾರೆ. ಫ್ರಾನ್ಸ್, ಇಟಲಿ, ಇಂಗ್ಲೆಂಡ್ ಮತ್ತು ಜರ್ಮನಿಯವರನ್ನು ಕೂಡಿಸಿದಲ್ಲಿ ಮೇಲಿನ ಸಂಖ್ಯೆಯಷ್ಟೇ ಆಗುತ್ತದೆ. ದಲಿತ ಪ್ರತಿಭೆ ಮತ್ತು ಸಾಮರ್ಥ್ಯ ವಿರೋಧವಾಗಿರುವ ಬ್ರಾಹ್ಮಣ ದ್ವೇಷ ಜಗತ್ತಿನ ಚರಿತ್ರೆಯಲ್ಲಿ ಅಂಥ ಮಹತ್ವದ್ದೇನು ಅಲ್ಲ. ಉದಾಹರಣೆಗೆ, ಅನೇಕ ಮಂದಿ ಸಂಪಾದಕರು ಯೂರೋಪಿನ ಅರ್ಹತೆಯಲ್ಲಿ ಏನೇನೂ ಇಲ್ಲ, ಆದರೆ ಅವರ ಹುಟ್ಟೇ ವರ್ಗೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಅವರು ಸಂಪಾದಕೀಯ ಪೀಠದಲ್ಲಿ ಪವಡಿಸಿದ್ದಾರೆ. ನಮ್ಮಂಥವರು ಬರೆದ ಲೇಖನಗಳನ್ನು ಅವರು ಪ್ರಕಟಿಸಲು ಅನರ್ಹವೆಂದು ಭಾವಿಸುತ್ತಾರೆ. ಶ್ರೇಷ್ಠತಾ ವ್ಯವಸ್ಥೆಯಲ್ಲಿ ಇದೊಂದು ಮಾನಸಿಕ ಹಿಂಸೆಯಲ್ಲವೇ? ಇಂಥ ಹಿಂಸೆ ಬ್ರಾಹ್ಮಣರಿಂದ ಮಾತ್ರ ಸಾಧ್ಯ.

ಒಬ್ಬ ಶೂದ್ರ ವಿದ್ಯಾರ್ಥಿ ಬ್ರಾಹ್ಮಣನಂತೆ, ಮೆಟ್ರಿಕ್‌ನಲ್ಲಿ ಎರಡು ಬಾರಿ ಫೈಲಾಗಿ, ತನ್ನ ದಲಿತ ಸಹಪಾಠಿ ಮೊದಲ ಬಾರಿಗೆ ಪ್ರಥಮ ದರ್ಜೆಯಲ್ಲಿ ಜಯಶಾಲಿಯಾಗುವುದನ್ನು ಸಂದೇಹಿಸುತ್ತಾನೆ. ಒಬ್ಬ ಕಿರಿಯ ಬ್ರಾಹ್ಮಣ ನಾಗರೀಕ ಸೇವಾ ವ್ಯಕ್ತಿ ತನ್ನ ಕುತಂತ್ರದಿಂದ ದಲಿತ ಮಿತ್ರನಿಗೆ ಮೇಲಧಿಕಾರಿಯಾಗುತ್ತಾನೆ. ಎಲ್ಲಾ ದಲಿತ ಅಧಿಕಾರಿಗಳು/ನೌಕರರು/ಶಿಕ್ಷಕರು, ಬರಹಗಾರರು ಒಂದಲ್ಲಾ ಒಂದು ಸಲವಾದರೂ ಬ್ರಾಹ್ಮಣ ಮೇಲಧಿಕಾರಿ, ಸಹಪಾಠಿಗಳಿಂದ ಅವಮಾನವನ್ನು ಅನುಭವಿಸುತ್ತಾರೆ. ಪಾರಂಪರಿಕವಾಗಿ ಬ್ರಾಹ್ಮಣರು ದಲಿತ ಮದುವೆಗಳನ್ನು ಅಥವಾ ಧಾರ್ಮಿಕ ಆಚರಣೆಗಳನ್ನು ವಿಧಿ ಬದ್ಧತೆಯಿಂದ ಹೊರಗಿಟ್ಟಿದ್ದರು. ಅಲ್ಲದೆ ಅವರ ನೆರಳನ್ನೂ ಸಹ ಮುಟ್ಟಲು ತಿರಸ್ಕರಿಸಿದ್ದರು. ದುರಂತವೆಂದರೆ ಅವರು ಈ ಹಿಂಸಾತ್ಮಕ ವ್ಯವಸ್ಥೆಗೆ ದೈವಿಕ ನೀತಿಯನ್ನು ಹೇರಿದ್ದರು. ಒಬ್ಬ ಬ್ರಾಹ್ಮಣನ ನೆರಳನ್ನು ಮುಟ್ಟುವುದೂ ಸಹ ಪ್ರತಿಯೊಬ್ಬ ದಲಿತನ ಮನಸ್ಸಿಗೆ ಘಾಸಿಯಾಗುತ್ತದೆ. ಈ ಘಾಸಿಗೊಂಡ ವ್ಯಕ್ತಿತ್ವದ ಹೊರತಾಗಿಯೂ, ದಲಿತ ಸಾಧಕರ ಪಟ್ಟಿಯೊಂದನ್ನು ಮಾಡಿದಲ್ಲಿ ಆ ಪಟ್ಟಿ ಬ್ರಾಹ್ಮಣ ಪ್ರಾಬಲ್ಯವಿರುವ ಶಿಕ್ಷಣ, ನೌಕರಶಾಹಿ, ವೃತ್ತಿಪರತೆ, ಕಲೆ, ಸಂಸ್ಕೃತಿ ಹಾಗೂ ರಾಜಕೀಯದಲ್ಲೂ ಬೆಳೆಯುತ್ತಾ ಹೋಗುತ್ತದೆ. ಒಬ್ಬ ದಲಿತ ನಾಗರೀಕ ಸೇವೆ ಅಥವಾ ಕಿರಿಯ ಹಂತದ ನೌಕರ ಮೂರು ಬಾರಿ ಅವಮಾನಿತನಾದರೂ ಜೀವನ ಮೂಲ ಸೌಕರ್ಯಗಳಾದ ಮನೆ, ಒಳ್ಳೇ ಆಹಾರ, ಉತ್ತಮ ಬಟ್ಟೆ, ಮಕ್ಕಳಿಗೆ ಶಿಕ್ಷಣ, ಇತ್ಯಾದಿಗಳನ್ನು ಹೊಂದಿದ್ದಾರೆ. ಬದುಕು ಮುಂದುವರೆಯುತ್ತದೆ. ಭವಿಷ್ಯ ಪ್ರತಿದಿನವು ಮತ್ತಷ್ಟು ಭರವಸೆಯನ್ನು ಮೂಡಿಸುತ್ತಿರುತ್ತದೆ. ಇದೇ ಸಂದರ್ಭದಲ್ಲಿ ದಲಿತರು ಬ್ರಾಹ್ಮಣರ ಆಕ್ರಮಣವನ್ನು ನಿಭಾಯಿಸಲು ಕಲಿಯುತ್ತಾರೆ. ತಮ್ಮ ಘನತೆಯನ್ನು ಕಾಯ್ದುಕೊಳ್ಳಲು ಅನೇಕರು ನಿರ್ಧರಿಸಿ, ಬ್ರಾಹ್ಮಣರಿಗೆ ಅದೇ ಅಳತೆಯಿಂದ ವಾಪಸ್ಸು ನೀಡಿದ್ದಾರೆ. ಆದರೆ, ಹಿಂಸೆ ಹಿಂಸೆಯೇ. ಮಾನಸಿಕ ಹಿಂಸೆ ಹೃದಯದಲ್ಲಿ ಮತ್ತಷ್ಟು ಉಳಿದು ಬಿಡುತ್ತದೆ.

1977ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಉತ್ತರ ಭಾರತಾದ್ಯಂತ ಶೂದ್ರರು ಜಯಭೇರಿ ಭಾರಿಸಿದರು. ಕಾಂಗ್ರೆಸ್ಸನ್ನು ಮೂಲೋಚ್ಛಾಟನೆಗೊಳಿಸಿದ ಹಲವಾರು

(37ನೇ ಪುಟಕ್ಕೆ)

ಭಾರತೀಯ ವಿಜ್ಞಾನದ ಹಾದಿ:
ಲೌಕಿಕ ಸಂದರ್ಭದ ಅನನ್ಯ ಶೋಧನೆ

ಹಂಪಿ ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಪ್ರಕಟವಾದ ಡಾ|| ಜಿ. ರಾಮಕೃಷ್ಣ ಅವರ ಕೃತಿ 'ಭಾರತೀಯ ವಿಜ್ಞಾನದ ಹಾದಿ' (ಪ್ರಥಮ ಮುದ್ರಣ 1997) ಸಮಕಾಲೀನ ಸಾಮಾಜಿಕ ಸಂದರ್ಭದಲ್ಲಿ ಮೌಲಿಕವಾದ ಕೃತಿ.

ಶುದ್ಧ ಭಾರತೀಯತೆಯ ಮನೋಭೂಮಿಕೆಯಿಂದ ರಚನೆಯಾಗಿರುವ ಈ ಕೃತಿಯಲ್ಲಿ ಮೊಟ್ಟ ಮೊದಲು ಗುರುತಿಸಬೇಕಾದ್ದು ನೈಜ ಅಭಿಮಾನ ಮತ್ತು ದುರಭಿಮಾನಗಳ ನಡುವಿನ ವ್ಯತ್ಯಾಸವನ್ನು, ಆಧುನಿಕ ಪಾಶ್ಚಾತ್ಯ ಪ್ರಣೀತ ವಿಜ್ಞಾನವೇ ನಿಜವಾದ ವಿಜ್ಞಾನವೆಂದು ವ್ಯಾಖ್ಯಾನಿಸುವ ಪಾಶ್ಚಾತ್ಯ ದೃಷ್ಟಿಕೋನವನ್ನು ತೀವ್ರವಾಗಿ ಖಂಡಿಸುವ ಲೇಖಕರು ಆಧುನಿಕವಾದ ಎಲ್ಲವನ್ನೂ ಪ್ರಾಚೀನ ಕಾಲದಲ್ಲಿ ಇದ್ದವು ಎನ್ನುವ ವಾದವನ್ನೂ ಅಷ್ಟೇ ತೀವ್ರವಾಗಿ ಖಂಡಿಸುತ್ತಾರೆ. ಪ್ರಾಚೀನ ಕಾಲದ ವೈಜ್ಞಾನಿಕ ಬೆಳವಣಿಗೆಯನ್ನು ಆ ಕಾಲಮಾನದಲ್ಲಿ ನಿಂತು ಅಂದಿನ ಜ್ಞಾನ ಪರಿಧಿಯ ಮಿತಿಯೊಳಗೆ ಗ್ರಹಿಸುತ್ತಾ, ಮಂಡಿಸುತ್ತಾ ಸಾಗುವ ಕೃತಿ ಓದುಗನನ್ನು ವೈಚಾರಿಕ ತುಮುಲಕ್ಕೆ ತಳ್ಳುತ್ತದೆ. ಚಾರಿತ್ರಿಕ ಹಿನ್ನೆಲೆಯಲ್ಲಿ ಸಮಕಾಲೀನ ಸಂದರ್ಭವನ್ನು ಅರ್ಥೈಸಿಕೊಳ್ಳುವ ಗಂಭೀರ ಚಿಂತನೆಯತ್ತ ಕೊಂಡೊಯ್ಯುತ್ತದೆ. "ಸಂಪೂರ್ಣವಾದ ಅಬಾಧಿತ ಜ್ಞಾನ ಹಿಂಸೆ, ಇಂದು, ಮುಂದೆ ಎಂದೂ ಲಭ್ಯವಾಗದೆ ಉಳಿಯುವಂತಹದು" ಎನ್ನುವ ಲೇಖಕರು ಯಾವುದೇ ವಸ್ತು, ವಿಷಯ, ಗ್ರಂಥಗಳ ಸರ್ವಜ್ಞತ್ವವನ್ನು ತಳ್ಳಿಹಾಕುತ್ತಾ ನಿಜಸತ್ಯವನ್ನು ಕಂಡರಿಸುತ್ತಾರೆ. ದೇಶೀಯ ವೈಜ್ಞಾನಿಕ ಸಾಧನೆಯನ್ನು ಆ ಕಾಲದ ಇನ್ನಿತರ ದೇಶಗಳ ಸಾಧನೆಗಳೊಂದಿಗೆ ಅಲ್ಲಲ್ಲಿ ತುಲನೆ ಮಾಡುವ ಸಣ್ಣದೆನಿಸಿದರೆ ಅದಕ್ಕಾಗಿ ಪಶ್ಚಾತ್ತಾಪವಾಗಲಿ, ವಿತಂಡವಾದವಾಗಲಿ ಇಲ್ಲದೆ ಎಲ್ಲವನ್ನೂ ನಿರುದ್ವಿಗ್ನ, ಶಾಂತಚಿತ್ತದಿಂದ ಗ್ರಹಿಸುವ ಲೇಖಕರು ಒಟ್ಟು ಜ್ಞಾನ ಶಾಖೆಗಳಲ್ಲಿರುವ ಸಮಕಾಲೀನ ಮಹತ್ವದ ವಿಚಾರಗಳನ್ನು ಆಯ್ದು ದಾಖಲಿಸುತ್ತಾ ಭಾರತೀಯ ವಿಜ್ಞಾನದ ಪರಂಪರೆಯನ್ನು ಅರ್ಥೈಸುವ ಪರಿಪೂರ್ಣ ಹಾದಿಯಲ್ಲಿ ಸಾಗುತ್ತಾರೆ. "ವಿಜ್ಞಾನ ಒಂದು ಕಾಲದ ಗ್ರಹಿಕೆಯನ್ನು ಮತ್ತೊಂದು ಕಾಲದ ಗ್ರಹಿಕೆ ಬೀಳಿಸುತ್ತದೆ ಎಂದ ಮಾತ್ರಕ್ಕೆ ಹಿಂದಿನ ವೈಜ್ಞಾನಿಕ ಗ್ರಹಿಕೆಯ ಮಹತ್ವವೇನೂ ಕಳೆದು ಹೋಗುವುದಿಲ್ಲ; ಹಿಂದಿನ ವೈಜ್ಞಾನಿಕ ಗ್ರಹಿಕೆಯ ವಿಸ್ತರಣೆ ಆಗುತ್ತಾ ಆಗುತ್ತಾ ಹೊಸದು ಹುಟ್ಟಿಕೊಳ್ಳುತ್ತದೆ. ಅಂದರೆ ಹೊಸ ಹುಟ್ಟಿಗೆ ಹಳೆಯದರ ಅಗತ್ಯವಿರುತ್ತದೆ" ಎಂಬ ಧ್ವನಿಪೂರ್ಣ ಅಭಿಪ್ರಾಯ ಮುಂದಿಡುವ ಲೇಖಕರು ಸಮರ್ಥನೀಯ 'ವಾದ'ಕೊಟ್ಟಿದ್ದಾರೆ. 'ವಿಜ್ಞಾನ ಹೇಳುವುದೆಲ್ಲ ಸತ್ಯವೇ?" ಎಂದು ಪ್ರಶ್ನಿಸುವ ಜನರಿಗೆ,



ಭಾರತೀಯ ವಿಜ್ಞಾನದ ಹಾದಿ
ಲೇ : ಡಾ. ಜಿ. ರಾಮಕೃಷ್ಣ
ಪ್ರಕಾಶಕರು : ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ - 583 221
ಬೆಲೆ : ರೂ. 150/-

○ ಅರವಿಂದ ಚೊಕ್ಕಾಡಿ

ಶುದ್ಧ ವಿಜ್ಞಾನದ ನಿಲುಮೆ ಯಾವತ್ತೂ ತನ್ನದನ್ನು ಸಂಪೂರ್ಣ ಸತ್ಯವೆಂದು ಹೇಳುವುದೇ ಇಲ್ಲ, ಹಾಗೆ ಹೇಳುವ ಶಾಖೆ ಬೇರೆಯದೇ ಇದೆ ಎನ್ನುವಲ್ಲಿ ಲೇಖಕರು ವಿಜ್ಞಾನದ ಪ್ರಾಮಾಣಿಕ ನಿಲುಮೆಯನ್ನು ಬಿಚ್ಚಿಡುತ್ತಾರೆ. "ವೇದದಲ್ಲಿರುವ ಶ್ರೇಷ್ಠತೆಯನ್ನು ಗುರುತಿಸದೆ ಆಧುನಿಕ ಅದರ ಮೇಲೆ ಹೇರುವುದು ವೇದದ ಬಗ್ಗೆ ಎಷ್ಟು ಅಸಡ್ಡೆ ಇದೆ ಎಂಬುದನ್ನು ಸೂಚಿಸುತ್ತದೆ. "ವಿದ್ಯುಚ್ಛಕ್ತಿ ನೀರಿನಲ್ಲಿದೆ ಎನ್ನುವುದನ್ನು ವೇದದಲ್ಲಿ ಹೇಳಿದೆ ಎನ್ನುತ್ತಾ, ವೇದಗಳು ನೀರಿನಲ್ಲಿ ಅಡಕವಾಗಿರುವ ಇತರ ಅಂಶಗಳ ಪ್ರಸ್ತಾಪಮಾಡಿರುವುದನ್ನು ಅಲಕ್ಷಿಸುವುದರಿಂದ ವೇದಗಳ ನೈಜ ಗ್ರಹಿಕೆಗೆ ಅನ್ಯಾಯವಾಗುತ್ತದೆ" ಎಂಬ ಅಭಿಪ್ರಾಯ ಉಳ್ಳ ಲೇಖಕರು ವಾಸ್ತವ ಗ್ರಹಿಕೆಯ ಅವಶ್ಯಕತೆಯನ್ನು ಒತ್ತಿ ಹೇಳುತ್ತಾರೆ. ವಾದಿ ಪ್ರತಿವಾದಿಗಳು ಹೇಳುವ ವಿಚಾರಗಳಲ್ಲೆಲ್ಲ ಕೊಂಚ ಸತ್ಯಾಂಶವಿರುತ್ತದೆ ಎನ್ನುವ ಅನೇಕಾಂತವಾದ ಜಾಡಿನಲ್ಲಿ ಸಾಗುವ ಲೇಖಕರ ಸೂಕ್ಷ್ಮ ವೈಜ್ಞಾನಿಕ ಮನಸ್ಸು ಇಲ್ಲಿ ವಿಪುಲವಾಗಿ ಕೆಲಸ ಮಾಡಿದ್ದು ನಮ್ಮನ್ನು ನಾವು ಪುನರ್ವಿಮರ್ಶಿಸಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತದೆ.

ಮನುಷ್ಯನ ಬದುಕಿನ ಅವಿಭಾಜ್ಯ ಅಂಗವಾಗಿ ವಿಜ್ಞಾನವು ಹೇಗೆ ಬೆಳೆದು ಬಂದಿತೆಂಬುದನ್ನು ಲೇಖಕರು ಹರಪ್ಪ ನಾಗರಿಕತೆಯ ಕಾಲದಿಂದಲೇ ಚರ್ಚಿಸುತ್ತಾ ಬಂದಿದ್ದಾರೆ. ತಂತ್ರಜ್ಞಾನ, ವೈದ್ಯವಿಜ್ಞಾನ, ಖಗೋಳ ಶಾಸ್ತ್ರ, ಗಣಿತಶಾಸ್ತ್ರ, ಪ್ರಾಣಿಶಾಸ್ತ್ರ, ರಸಾಯನಶಾಸ್ತ್ರಗಳು ಇಲ್ಲಿ ಬಹು ಚರ್ಚಿತವಾಗಿರುವ ವಿಷಯಗಳು. ಹರಪ್ಪ ನಾಗರಿಕತೆಯ ಕಾಲದಲ್ಲಿ ಪ್ರಬುದ್ಧ ಮಟ್ಟದ ನಗರೀಕರಣ ತಂತ್ರಜ್ಞಾನವಿದ್ದು, ವೇದಕಾಲೀನ ಜನರು ದೀರ್ಘಕಾಲ ಅದನ್ನು ಉಪಯೋಗಿಸದೆ (ಅಂದರೆ ಹರಪ್ಪ ತಂತ್ರಜ್ಞಾನದ ವಿಸ್ತರಣೆ ಮಾಡದೆ) ಇದ್ದಿರಲು ಕಾರಣವೇನು ಎಂಬ ಮುಖ್ಯ ಪ್ರಶ್ನೆಯನ್ನು ಎತ್ತುತ್ತಾರೆ ಲೇಖಕರು.

ಕುತೂಹಲ ಪೂರ್ಣ ಸಂಗತಿಯೆಂದರೆ ವೈದ್ಯ ವಿಜ್ಞಾನದ್ದು. ಚರಕ ಸಂಹಿತೆ, ಸುಶ್ರುತ, ವಾಗ್ಭಟರ ಕೃತಿಗಳಲ್ಲಿ ಆಧುನಿಕ ವೈದ್ಯವಿಜ್ಞಾನಕ್ಕೆ ತೀರಾ ಸಮೀಪವಾದ ದಾಖಲೆಗಳು ಲಭ್ಯವಾಗುತ್ತವೆ. ವೈದ್ಯನೊಬ್ಬನ ದೃಷ್ಟಿಯಲ್ಲಿ ಎಲ್ಲ ಜೀವಿಗಳೂ ಒಂದೇ, ಅವರನ್ನು ಬದುಕಿಸುವುದೇ ವೈದ್ಯನ ಬದ್ಧತೆ ಎಂದು ಹೇಳುವ ಚರಕ ಸಂಹಿತೆ ಆ ಕಾಲದ ಅಸಮಾನತೆಯನ್ನು ತೊಡೆದು ನಿಂತುದು ದಿಟ್ಟ ವೈಜ್ಞಾನಿಕ ನಿಲುಮೆಯಾಗಿದೆ ಎನ್ನುವಲ್ಲಿ ಎರಡು ಮಾತಿಲ್ಲ. ಆದರೆ ಅದಕ್ಕೆ ಪ್ರತಿಶಕ್ತಿಯಾಗಿ ಇಂದ್ರಿಯ ಗೋಚರ ವಸ್ತುಗಳನ್ನು ನಗಣ್ಯವಾಗಿಸುತ್ತಾ, ವೈದ್ಯವೃತ್ತಿಯನ್ನು ಹಗುರವಾಗಿ, ನೀಚತಮವಾಗಿ ಕಂಡ ಧರ್ಮಶಾಸ್ತ್ರ, ಭೌತಿಕವಾದವನ್ನು ಅಲ್ಲಗಳೆದ ಶಂಕರಾಚಾರ್ಯರ ಹುಸಿ ಸಿದ್ಧಾಂತ, ವಿತಂಡವಾದಗಳು ನಮ್ಮ ವೈದ್ಯಕೀಯ ವಿಜ್ಞಾನದ ಬೆಳವಣಿಗೆಗೆ ಎಂತಹ ಪ್ರತಿಬಂಧಕ ಶಕ್ತಿಯಾಗಿತ್ತೆನ್ನುವುದನ್ನು ನೋಡಿದರೆ ನಮ್ಮ ಬೆಳವಣಿಗೆಯನ್ನು ನಾವೇ ಮೊಟಕುಗೊಳಿಸಿದ್ದರ ಬಗ್ಗೆ ಅಸಹನೀಯ ನೋವು ಕಾಡುತ್ತದೆ. ಋಗ್ವೇದದಲ್ಲಿ ವೈದ್ಯರನ್ನು ಗೌರವಾದರಗಳಿಂದ ಕಂಡಿದ್ದು ಧರ್ಮಶಾಸ್ತ್ರಗಳು ವೈದ್ಯರನ್ನು ನೀಚಸ್ಥಾನದಲ್ಲಿ ನಿಲ್ಲಿಸಿದೆ ಎನ್ನುವಲ್ಲಿ ವೇದ ವಿರುದ್ಧವಾದ ಧರ್ಮಶಾಸ್ತ್ರಗಳು ಹಿಂದೂ ಧರ್ಮದ ತಳಹದಿಯೇ ಇಲ್ಲ ವೇದವೇ ಎನ್ನುವ ಅನುಮಾನ ಕಾಡುತ್ತದೆ. ಪ್ರಾಯಶಃ ಜಾತಿ ವ್ಯವಸ್ಥೆಯೊಂದೇ. ಅದನ್ನು ದೃಢಪಡಿಸುವ ಕೆಲಸವನ್ನಷ್ಟೇ ಧರ್ಮಶಾಸ್ತ್ರಗಳು ಮಾಡಿದವು. ಆ ಕಾರಣಕ್ಕಾಗಿಯೇ ವೈದ್ಯರುಗಳು ತುಚ್ಛೀಕರಿಸಲ್ಪಟ್ಟರು. ಏಕೆಂದರೆ ಅವರ ದೃಷ್ಟಿಯಲ್ಲಿ ಎಲ್ಲರೂ ಸರಿಸಮಾನರು!

ಉದ್ದಾಲಕ ಅರುಣಿಯ ಪ್ರಾಯೋಗಿಕ ವಿಜ್ಞಾನದ ಮಹತ್ವ, ಆ ಕಾಲದಲ್ಲಿ ಆತ ಸಾಧಿಸಿದ ಪ್ರಬುದ್ಧತೆ, ಅಸ್ಪಷ್ಟವಾಗಿ ಪರಮಾಣುವಿನ ಗುರುತಿಸುವಿಕೆ, ಕಣಾದನ ತರ್ಕಶುದ್ಧ ಪರಮಾಣುವಾದದ ಗ್ರಹಿಕೆಗಳ ಬಗ್ಗೆ ವಿಪುಲ ಬೆಳಕು ಚೆಲ್ಲುವ ಲೇಖಕರು ಓದುಗನ ಮುಂದೆ ಗಂಭೀರ ಪ್ರಶ್ನೆ ತಂದಿಡುವಲ್ಲಿ ಸಮರ್ಥರಾಗುತ್ತಾರೆ. ಅದೇನೆಂದರೆ ಚಾರಿತ್ರಿಕವಾಗಿ ಮಹತ್ವಪೂರ್ಣ ಕಾಣ್ಕೆ ಸಲ್ಲಿಸಿದ ಉದ್ದಾಲಕ ಅರುಣಿ, ಕಣಾದರಂಥವರ ಬಗ್ಗೆ, ಅದು ಆಧುನಿಕ ಕಾಲಕ್ಕೆ

ಮುಖ್ಯವಾದ ವಿಚಾರಗಳಾಗಿದ್ದರೂ ನಮ್ಮ ಚರಿತ್ರೆಯ ಪಠ್ಯಗಳಲ್ಲಿ ಇಂತಹ ಮಹನೀಯರುಗಳ ಬಗ್ಗೆ ಸಿಗುವ ವಿವರಗಳು, ಅಧ್ಯಯನ ಯೋಗ್ಯ ಸಾಮಗ್ರಿಗಳು ಬಹಳ ವಿರಳ, ಏಕೆ? ಬದಲಿಗೆ ಯಾವ್ಯಾವುದೋ ಆಧ್ಯಾತ್ಮಿಕವೆನ್ನಲಾದ ವಾದಗಳೇ ಪಠ್ಯದಲ್ಲಿ ತುಂಬಿಕೊಳ್ಳುತ್ತಿರುವುದೇಕೆ? ಐಹಿಕವಾಗಿ ಅವಕ್ಕಿರುವ ಮಹತ್ವವಾದರೂ ಏನು? ಮೂಲತಃ ಅಲ್ಲಿರುವ ಒಂದು ಅಂಶಗಳು ಆಧ್ಯಾತ್ಮಿಕವಾಗಿರದೆ (ಉದಾ: ಆಚಾರ್ಯರು, ಯಜ್ಞ, ಮನು...) ವರ್ಣ ವ್ಯವಸ್ಥೆಯನ್ನು ಪುಷ್ಟೀಕರಿಸುವುದಕ್ಕಾಗಿ ದುರ್ಬಳಕೆಯಾದ ಆಧ್ಯಾತ್ಮವೇ ಆಗಿರುತ್ತದೆ. ಹೀಗಿರುವಲ್ಲಿ ನಿಜವಾಗಿ ನಾವು ಕಲಿಯಬೇಕಾದ್ದು, ಚರ್ಚಿಸಬೇಕಾದ್ದು ಯಾವುದನ್ನು? ಬಹುಶಃ ಇದಕ್ಕೆಲ್ಲ ಇರುವ ಉತ್ತರ ಒಂದೇ:- ಯಾವ ಸಿದ್ಧಾಂತ ನಮ್ಮ ವಿಜ್ಞಾನದ ಮುನ್ನಡೆಯನ್ನು ಸಹಿಸದ ಸಾಮಾಜಿಕ ವ್ಯವಸ್ಥೆ ಅಂದು ಇತ್ತೋ ಇಂದಿಗೂ ಅದು ಪರೋಕ್ಷವಾಗಿ ಈ ಲೌಕಕಿ (ಸೆಕ್ಯೂಲರ್ ಶಬ್ದದ ಮೂಲ ಲ್ಯಾಟೀನ್ ಪದದ ಅರ್ಥ ಐಹಿಕ ಪ್ರಾಮುಖ್ಯ ಉಳ್ಳ ಎಂದು) ಸಮಾಜದ ಮೇಲೆ ಬಹಳ ಬಿಗಿಯಾದ ನಿಯಂತ್ರಣ ಹೊಂದಿದೆ.

ಇದಲ್ಲದೆ ಇನ್ನೊಂದು ಮುಖ್ಯ ಪ್ರಶ್ನೆಯತ್ತ ಗಮನ ಸೆಳೆಯುತ್ತಾರೆ ಲೇಖಕರು. ಸುಶ್ರುತ, ವಾಗ್ಭಟ, ಚರಕ ತ್ರಿಮೂರ್ತಿಗಳ (ಅಥವಾ ಸಮುದಾಯ) ಕೃತಿಗಳು ಶುದ್ಧ ವೈದ್ಯಕೀಯ ಬರಹಗಳಾಗಿದ್ದು ಪ್ರಯೋಗ, ಚರ್ಚೆ, ವಿಶ್ಲೇಷಣೆ-ಅವಲೋಕನಗಳಿಗೆ ಅಲ್ಲಿ ಪ್ರಾಧಾನ್ಯತೆ ಇದೆ. ಅದರಲ್ಲೂ ಚರಕ ಸಂಹಿತೆ ಕಾಲ್ಪನಿಕ ಅಲೌಕಿಕ ನೆಲೆಯನ್ನು, ಅಸಮಾನತೆಯನ್ನು ನಿರಾಕರಿಸಿರುವ ಮಹತ್ವಪೂರ್ಣ ಕೃತಿ. ಆದರೆ ತ್ರಿಮಲ್ಲಭಟ್ಟನ ಬರವಣಿಗೆಯ ಉಪಯುಕ್ತತೆಯ ಜೊತೆ ಜೊತೆಯಲ್ಲಿ ಅತಾರ್ಕಿತ ನೆಲೆಗಳು ಗೋಚರಿಸುತ್ತವೆ. 'ವೈದ್ಯಸಾರ ಸಂಗ್ರಹ ಮತ್ತು ಸಕಲ ವೈದ್ಯ ಸಂಹಿತಾ ಸಾರಾರ್ಣವ'ಗಳು ದೈವಿಕ ಸಂಭಾಷಣೆಯ ಮೂಲಕ ವಸ್ತುವನ್ನು ತೆರೆದಿಡುತ್ತವೆ. ರಸಾಯನ ತಂತ್ರ ಅವಾಸ್ತವಿಕ ಕಲ್ಪನೆಗಳನ್ನಾಧರಿಸಿದ್ದು ಅಜ್ಞಾನ, ಮೋಸ, ದುರಾಸೆಗಳಿಗೆ ಕಾರಣೀಭೂತವಾಗಲು ಸಹಾಯಕವೆಂಬ ಅಂಶವನ್ನು ಅಲ್ಬೆರೂನಿ ಮಾತುಗಳ ಮೂಲಕ ಸ್ಪಷ್ಟಪಡಿಸುತ್ತಾರೆ ಲೇಖಕರು. ಉದಾಹರಣೆಯಾಗಿ ಚರಕ ಸಂಹಿತೆ ಮತ್ತು ತ್ರಿಮಲ್ಲಭಟ್ಟನ ಬರಹಗಳನ್ನು ತೆಗೆದುಕೊಂಡು ನನ್ನ ಅಭಿಪ್ರಾಯ ಮುಂದಿಡುತ್ತೇನೆ. ಲೇಖಕರು ಒಂದೆಡೆ ಹೇಳಿರುವಂತೆ ಚರಕ ಸಂಹಿತೆ ಪರಿಪೂರ್ಣವೆಂದು ಭಾವಿಸಿ ಆ ನಂತರ ಪ್ರಯೋಗಶೀಲತೆಗೆ ಒಳಗಾಗದಿದ್ದುದು ತ್ರಿಮಲ್ಲನ ಬರಹಗಳಲ್ಲಿ ಅಳ್ಳಕಗಳು ಗೋಚರಿಸಲು ಒಂದು ಕಾರಣ. ಆದರೆ ಇದೊಂದೇ ಆಗಿರಲಾರದು. ಲೇಖಕರೇ ಹೇಳುವಂತೆ ವಿಜ್ಞಾನದ ಬೆಳವಣಿಗೆ, ಹಿನ್ನಡೆಗಳಲ್ಲಿ ಸಾಮಾಜಿಕ ಸಂದರ್ಭದ ಪಾತ್ರವೂ ಇರುತ್ತದೆ. ಅಂಥಲ್ಲಿ ಚರಕ ಸಂಹಿತೆಯ ಕಾಲಕ್ಕೆ ಇದ್ದ ಸಾಮಾಜಿಕ ಸಂದರ್ಭ ವಿಜ್ಞಾನದ ಬೆಳವಣಿಗೆಗೆ ಪೂರಕವಾಗಿತ್ತೇ? ಆದರೆ ಸಂಹಿತೆಯಲ್ಲಿ ಬರುವ ಮೈತ್ರೇಯನ ಸೂಚ್ಯ ಕರ್ಮಸಿದ್ಧಾಂತದ ಸಮರ್ಥನೆಯ ವಾದ, ಸೂಚ್ಯವಾಗಿಯೇ ಅದನ್ನು ತಳ್ಳಿಹಾಕುವ ಸಂಹಿತೆ ಈ ಅಭಿಪ್ರಾಯವನ್ನು ಅಲ್ಲಗಳೆಯುತ್ತದೆ. ಹೀಗಿದ್ದೂ ತನ್ನನ್ನು ಅಲ್ಲಗಳೆಯುವ ಪ್ರಬಲಶಕ್ತಿಯನ್ನು ಮೀರಿ ನಿಲ್ಲಲು ಚರಕಸಂಹಿತೆಗೆ ಹೇಗೆ ಸಾಧ್ಯವಾಯಿತು? ಆ ವ್ಯಕ್ತಿಯ ಅಥವಾ ಆ ಒಂದು ಸಮುದಾಯದ ಪ್ರಶ್ನಾತೀತ ವೈಜ್ಞಾನಿಕ ಬದ್ಧತೆಯೇ? ಅಥವಾ ಅದರ ಹಿಂದೆ ಏನಾದರೂ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ವೈಜ್ಞಾನಿಕ, ಪ್ರಾಕೃತಿಕ ಪರಿಸರದ ಕೊಡುಗೆಯೇನಾದರೂ ಇತ್ತೇ? ಹಾಗೆಯೇ ಚರಕ ಸಂಹಿತೆಯ ಕಾಲಕ್ಕೆ ವಿಜ್ಞಾನವನ್ನು ಮುನ್ನಡೆಸಿದ ಪ್ರಶ್ನಾ ಮನೋಭಾವ, ಪ್ರಯೋಗಶೀಲತೆ, ತರ್ಕಗಳು ಆ ನಂತರದ ದಿನಗಳಲ್ಲಿ ಇಳಿಮುಖವಾಗುತ್ತಾ ಹಿಂದಿನವರು ಹೇಳಿದ್ದೇ ಸಂಪೂರ್ಣ ಸತ್ಯವೆನ್ನುವ ಬೌದ್ಧಿಕ ಶೈಥಿಲ್ಯ ಉಂಟಾಗಲು ಕಾರಣವೇನು? ಜಾತಿ ವ್ಯವಸ್ಥೆ, ಧರ್ಮಶಾಸ್ತ್ರಗಳ ಕಟ್ಟುಪಾಡುಗಳೇ ಇದಕ್ಕೆ ಕಾರಣವೇ ಇಲ್ಲ ಬೇರೇನಾದರೂ ಕಾರಣಗಳಿವೆಯೇ? ಬಹುಶಃ ಈ ಪ್ರಶ್ನೆಗಳು ವಿಸ್ತೃತ ಚರ್ಚೆ, ನಿರುದ್ವಿಗ್ನ ಸೂಕ್ಷ್ಮ ಸಂಶೋಧನೆಗಳಿಂದ ಬಗೆಹರಿದೀತು.

ಖಗೋಳ ಶಾಸ್ತ್ರ-ಗಣಿತಶಾಸ್ತ್ರಗಳ ಬಗ್ಗೆ ಸುದೀರ್ಘ ಚರ್ಚೆ ಕೈಗೆತ್ತಿಕೊಂಡಿರುವ ಲೇಖಕರು ಪ್ರಬಲ ಸಾಕ್ಷ್ಯಾಧಾರಗಳ ಸಹಿತವಾಗಿ ಭಾರತದ ಪರಂಪರೆಯಲ್ಲಿ ಬೆಳೆದು ನಿಂತಿದ್ದ ಪ್ರಬುದ್ಧ ಖಗೋಳ ಅಧ್ಯಯನ, ಶ್ರೇಷ್ಠತಮ ಗಣಿತ ಜ್ಞಾನಗಳನ್ನು ವಸ್ತುನಿಷ್ಠವಾಗಿ ಪರಿಚಯಿಸಿದ್ದಾರೆ. ಜ್ಯಾಮಿತಿ, ಬೀಜಗಣಿತಗಳಲ್ಲಿ ನಿಷ್ಣಾತನಾಗಿದ್ದ ಬ್ರಹ್ಮಗುಪ್ತ ಆರ್ಯಭಟನ ಕುರಿತು ತೋರುವ ತೀವ್ರ ಅಸಹನೆ, ಬೌದ್ಧಿಕವಾದದ್ದೋ ಜಾತಿಯ ಕಾರಣದ್ದೋ ಎನ್ನುವ ಗುಮಾನಿ ಇಲ್ಲಿದೆ. ಆ ಕಾಲಕ್ಕೆ ಭೂಮಿ, ಸೂರ್ಯ, ಚಂದ್ರ, ನಕ್ಷತ್ರಗಳ ಚಲನೆಯನ್ನು ತೋರಿಸಿಕೊಟ್ಟು ಖಗೋಳಶಾಸ್ತ್ರೀಯ ಪ್ರಮೇಯ, ಗಣಿತ ಸಿದ್ಧಾಂತಗಳನ್ನು ನಿರೂಪಿಸಿದ ಆರ್ಯಭಟನ ಬಗ್ಗೆ ನಾವೆಲ್ಲ ಹೆಮ್ಮೆ ಪಡಬೇಕು. ಏಕೆಂದರೆ ಆಧುನಿಕ ವಿಜ್ಞಾನದಲ್ಲಿ ಸೂರ್ಯ, ನಕ್ಷತ್ರಗಳ ಚಲನೆಯ ಗುರುತಿಸುವಿಕೆ ತೀರಾ ಇತ್ತೀಚಿನದು. ನಾವು ಕಲಿಯುವ, ಕಲಿಸುವ ಚರಿತ್ರೆಯಲ್ಲಿ ರಾಜರುಗಳ ದುಷ್ಕೃತ್ಯ, ಅದನ್ನೇ ಘನಸಾಧನೆಯೆನ್ನುವ ವೈಭವೀಕರಣ, ಸಾಧು-ಸಂತ-ಋಷಿ-ಮುನಿಗಳ ಪಾರಮಾರ್ಥಿಕವಾದಗಳೆಲ್ಲ ಎರಡನೆ ಆದ್ಯತೆಯಾಗಿ ಆರ್ಯಭಟನಂಥ ವಿದ್ವಾಂಸರು ಪ್ರಧಾನ ಆದ್ಯತೆ ಪಡೆದಿದ್ದರೆ ಎಷ್ಟೋ ಕ್ಷೇಮವಿತ್ತು. ಆದರೆ ಆತ ಆರ್ಯಭಟನೇ ಹೊರತು ಆರ್ಯಭಟ್ಟನಲ್ಲವಲ್ಲ? ಆತ ಹೇಳಿದ್ದು ಲೌಕಿಕ ಉಪಯುಕ್ತತೆಯನ್ನೇ ಹೊರತು ಅಲೌಕಿಕವನ್ನಲ್ಲವಲ್ಲ? ಅಲೌಕಿಕವಾದಿಗಳೇ ಲೌಕಿಕವನ್ನು ಹಿಂಡಿ ಹಿಪ್ಪೆ ಮಾಡುವಲ್ಲಿ ಹೇಗೆ ತಾನೇ ಆರ್ಯಭಟ ಪ್ರಧಾನ ಆದ್ಯತೆಯಾಗಬಲ್ಲ?

ವೇದಗಳು, ಸ್ಮೃತಿ, ಚರಕ ಸಂಹಿತೆ, ಜೈನ ದಾರ್ಶನಿಕಗಳು ಇತ್ಯಾದಿಗಳು ಅವಲೋಕಿಸುವ ಪ್ರಾಣಿಗಳ ಚರ್ಯೆಯ ಮೂಲಕ ಪ್ರಾಣಿಶಾಸ್ತ್ರದ ಬಗ್ಗೆ ಹಿಂದಿನ ಭಾರತೀಯರು ಹೊಂದಿದ್ದ ತಿಳಿವಳಿಕೆಯನ್ನು ಲೇಖಕರು ಹೇಳಿದ್ದಾರೆ. ಚರಕ ಸಂಹಿತೆ, ಹುಟ್ಟುವ ಮಗು ಗಂಡೋ ಹೆಣ್ಣೋ ಎಂಬುದಕ್ಕೆ ಕೊಟ್ಟಂಥ ವ್ಯಾಖ್ಯಾನಗಳು ಇವತ್ತಿನ ದಿನಕ್ಕೆ ಕಾಲ್ಪನಿಕವಾಗುತ್ತದಾದರೂ ಆ ಬಗ್ಗೆ ಸಂಹಿತೆ ಆಸಕ್ತಿ ತಳೆದಿರುವುದನ್ನು ನಗಣ್ಯವಾಗಿಸುವಂತಿಲ್ಲ. ಸಸ್ಯಗಳ ಬಗ್ಗೆ ವಿಶೇಷ ಆಸಕ್ತಿ ತಳೆದಿದ್ದ ಪ್ರಾಚೀನರು ಸಸ್ಯ ಲಕ್ಷಣ, ಪಾಲನೆ ಪೋಷಣೆ, ಸಸ್ಯಗಳ ರೋಗ ನಿವಾರಣೆ, ಸಸ್ಯ ವಿಂಗಡಣೆ, ಸಸ್ಯದ ನಾನಾ ಭಾಗಗಳ ವಿಂಗಡಣೆ ಮತ್ತು ಲಕ್ಷಣಗಳ ಕುರಿತು ಹೇಳಿರುವುದು ಗಮನಾರ್ಹ ಸಂಗತಿ. ಅಥರ್ವವೇದದಲ್ಲೇ ಮಣ್ಣಿನ ಸತ್ವವನ್ನು ಹೆಚ್ಚಿಸುವ ಉಲ್ಲೇಖವಿರುವುದು ಗೊಬ್ಬರ ಬಳಕೆಯ ಪ್ರಾಚೀನತೆಯ ಬಗ್ಗೆ ಸೋಜಿಗ ಉಂಟುಮಾಡುತ್ತದೆ. ಪ್ರಸ್ತುತ ಕೃತಿಯಲ್ಲಿ ಲೇಖಕರು ಶುಲ್ಬಸೂತ್ರ, ವೇದಾಂಗ ಜ್ಯೋತಿಷ, ರೋಮಕ ಸಿದ್ಧಾಂತ,, ವೃಕ್ಷಾಯುರ್ವೇದ, ಹಸ್ತ್ಯಾಯುರ್ವೇದ, ಅಶ್ವಾಯುರ್ವೇದ, ವ್ಯವಹಾರ ಗಣಿತಂ, ಸಮರಾಂಗಣ ಸೂತ್ರಧಾರ, ಕಲ್ಯಾಣರಾಮ, ಲೋಕೋಪಕಾರಣ, ಮಾನಸೋಲ್ಲಾಸ, ಖಗೇಂದ್ರಮಣಿ ದರ್ಪಣ (ವಿಷಶಾಸ್ತ್ರ) ಮುಂತಾದವುಗಳ ಬಗ್ಗೆ ಚರ್ಚೆ ಕೈಗೊಂಡಿದ್ದು ವಿಪುಲ ಉಪಯುಕ್ತ ಮಾಹಿತಿಗಳು ಲಭ್ಯವಾಗುತ್ತವಲ್ಲದೆ ಹಲವು ಜಿಜ್ಞಾಸೆಗಳನ್ನು ಹುಟ್ಟು ಹಾಕುತ್ತವೆ. ಕುತೂಹಲ ಕೆರಳುತ್ತದೆ.

ಇಡೀ ಕೃತಿಯಲ್ಲಿ ಡಾ|| ಜಿ. ರಾಮಕೃಷ್ಣ ಅವರ ಚಿಕಿತ್ಸಕ ದೃಷ್ಟಿ ಪ್ರಭಾವಶಾಲಿಯಾಗಿ ಕೆಲಸ ಮಾಡಿದ್ದು ಒಟ್ಟೂ ಪ್ರಗತಿ ಪರ ಕಳಕಳಿಯ ಪ್ರಜ್ಞಾವಂತ ಸೂಕ್ಷ್ಮ ನಡೆ ಇಲ್ಲಿದೆ. ವಾದಕ್ಕೆ ಪ್ರತಿವಾದವನ್ನು ಸ್ವೀಕರಿಸುತ್ತಾ ಅದರ ಒಳಿತು ಕೆಡುಕುಗಳ ಪರಿಶೀಲನೆಯ ಬಳಿಕ ಲೇಖಕರು ತೆಗೆದುಕೊಳ್ಳುವ ತೀರ್ಮಾನ ಬಹಳ ಮಹತ್ವದ್ದು. ಅಸಹನೀಯ ಪ್ರಸಂಗಗಳನ್ನು ಚರ್ಚಿಸುವಲ್ಲಿ ಲೇಖಕರು ಬಳಸಿರುವ ವ್ಯಂಗ್ಯದ ಮೊನಚು ವೈಜ್ಞಾನಿಕ ಪ್ರಗತಿಗೆ ಹಿನ್ನಡೆ ಒಡ್ಡಿದ ವ್ಯವಸ್ಥೆಯ ಕುತಂತ್ರ, ಕ್ರೌರ್ಯವನ್ನು ಬಿಚ್ಚಿಡುತ್ತದಲ್ಲದೆ ಓದುಗನಿಗೆ ಕಚಗುಳಿ ಇಡುತ್ತದೆ. ಭಾರತದ ಚರಿತ್ರೆಯನ್ನು ಲೌಕಿಕವಾಗಿ ದೃಷ್ಟಿಕೋನದಲ್ಲಿ ವಿಶ್ಲೇಷಿಸಿರುವ ಲೇಖಕರಿಗೆ ವೇದಗಳಲ್ಲಿ ಹೇಳಲ್ಪಟ್ಟಿರುವ ದೇವಸ್ತುತಿಗಳ ಕಲ್ಪನೆ ಮುಖ್ಯವಾಗದೆ ಅದೇ ಸ್ತೋತ್ರದಲ್ಲಿರುವ ವೈಜ್ಞಾನಿಕ ಸತ್ಯ, ವಾಸ್ತವಿಕ ಅಂಶಗಳು ಮುಖ್ಯವಾಗುತ್ತವೆ. ಇವತ್ತಿಗೂ ವಾಸ್ತವಿಕ ದೃಷ್ಟಿಕೋನವನ್ನು ತಡೆಹಿಡಿಯುತ್ತಿರುವ ಭಾರತದ ವೈಜ್ಞಾನಿಕ ಸಾಧನೆಯನ್ನು ವಾಸ್ತವಿಕವಾಗಿ ಸ್ವೀಕರಿಸಿ ಬೆಳೆಯಗೊಡದೆ ಕಪೋಲಕಲ್ಪಿತ ಕತೆಗಳೇ ನಮ್ಮ ಶ್ರೇಷ್ಠತೆ ಎಂದು ವಿಜೃಂಭಿಸಿದ ಯಾವ ತತ್ವ ಭಾರತೀಯರನ್ನು ನಾನಾ ಸಂಕಷ್ಟಗಳಿಗೆ ಗುರಿಮಾಡಿತೋ, ಯಾವ ಸಿದ್ಧಾಂತ ಸಮಾಜವನ್ನು ಮನುಷ್ಯ ಹೃದಯಗಳನ್ನು ಒಡೆದು ನುಚ್ಚುನೂರಾಗಿಸಿತೋ ಅದೇ ಸಿದ್ಧಾಂತ ತನ್ನ ಬಲಿಷ್ಠ ಬಾಹುಗಳನ್ನು ಚಾಚುತ್ತಿರುವ ಇಂದಿನ ಸ್ಥಿತಿಯಲ್ಲಿ ಡಾ|| ಜಿ. ರಾಮಕೃಷ್ಣರ ಈ ಕೃತಿ ಬಹಳ ಉಪಯುಕ್ತವಾಗುತ್ತದೆ. ಪ್ರಗತಿಪರ ಮುನ್ನಡೆಗೆ ಚಾಲಕಶಕ್ತಿಯಾಗಿ ನಿಲ್ಲುವ ಸಾಮರ್ಥ್ಯ, ವಾಸ್ತವ ಬದುಕಿಗೆ ಬಹುಕಾಲ ಮಾರ್ಗದರ್ಶನ ಮಾಡಬಲ್ಲ ಶಕ್ತಿ ಈ ಕೃತಿಗಿದೆ. ಆದುದರಿಂದಲೇ ಲೌಕಿಕದಲ್ಲಿ ಚೆನ್ನಾಗಿ ಬಾಳಬೇಕೆಂದು ಬಯಸುವವರೆಲ್ಲರಿಗೆ ಈ ಕೃತಿ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ.

ಮೀಸಲಾತಿ ರಾಜಕಾರಣದ ಸುತ್ತ...

> ಗೆಹಲಟ್‌ರ ಮೀಸಲಾತಿ ನೀತಿಯನ್ನು ಮೂರು ಸ್ತರಗಳಲ್ಲಿ ಅರ್ಥೈಸಬಹುದು. ಒಂದು; ಈಗಾಗಲೇ ಹೇಳಿದಂತೆ ಚುನಾವಣಾ ರಾಜಕಾರಣ. ಇದರ ಹೊರತಾಗಿ, ಜಾತಿರಾಜಕಾರಣದ ಭಾಗವಾಗಿಯೂ ಸಹ "ಗೆಹಲಟ್ ಮೀಸಲಾತಿ" ನೀತಿಯನ್ನು ವಿಶ್ಲೇಷಿಸಬಹುದು. ಇನ್ನು ಮುಂದಕ್ಕೆ ಪ್ರಸ್ತುತ ವಾದವನ್ನು ಕೊಂಡೊಯ್ಯುವುದಾದರೆ, ಇಡೀ ಪ್ರಕ್ರಿಯೆಯನ್ನು, ಕಾಂಚ ಐಲಯ್ಯನವರು ಹೇಳಿದಂತೆ ಮೇಲ್ಜಾತಿಗಳ "ಕರಗಿಸಿಕೊಳ್ಳುವಿಕೆ"ಗೆ (Assimilation) ಸಮೀಕರಿಸಬಹುದು. ಇತಿಹಾಸದುದ್ದಕ್ಕೂ ದಲಿತರು ಎಚ್ಚೆತ್ತುಕೊಂಡಾಗಲೆಲ್ಲ ಮೇಲ್ವರ್ಗ-ಮುಖ್ಯವಾಗಿ ಬ್ರಾಹ್ಮಣಶಾಹಿ ತನ್ನ ವಿಶಾಲ ಬಾಹುಗಳಲ್ಲಿ ಬಂಧಿಸುತ್ತಲೇ ಬಂದಿದೆ.

○ ಎಂ.ಆರ್. ಸತ್ಯಪ್ರಕಾಶ್

ಇತ್ತೀಚೆಗೆ ರಾಜಸ್ಥಾನದಲ್ಲಿ ಅಲ್ಲಿನ ಮುಖ್ಯಮಂತ್ರಿ ಅಶೋಕ್ ಗೆಹಲಟ್ ಮೇಲ್ವರ್ಗದ ಬಡವರಿಗಾಗಿ ಶೇ. 14 ಮೀಸಲಾತಿಯನ್ನು ಶಿಕ್ಷಣ ಮತ್ತು ಉದ್ಯೋಗ ವಲಯಗಳಲ್ಲಿ ಘೋಷಿಸಿ ಇಡೀ ದೇಶವನ್ನೇ ತಬ್ಬಿಬ್ಬುಗೊಳಿಸಿದ್ದಾರೆ. ಗೆಹಲಟ್‌ರವರ ಈ ಹೊಸ ಮೀಸಲಾತಿ ನೀತಿ ರಾಜಕೀಯವಾಗಿ ಪ್ರೇರಿತವಾದದ್ದು ಎಂಬುದರಲ್ಲಿ ಸಂಶಯವೇ ಇಲ್ಲ. ವಿಧಾನಸಭೆಯ ಚುನಾವಣೆ ಸನ್ನಿಹಿತವಾಗುತ್ತಿರುವಂತೆ ರಾಜಕೀಯ ದಾಟದಲ್ಲಿ ಬಿಜೆಪಿಯನ್ನು ಮಣಿಸುವ ಈ ನಿರ್ಧಾರ ಘೋಷಿಸಿದ್ದಾರೆ. ಗೆಹಲಟ್‌ರ ಮೀಸಲಾತಿ ನೀತಿಯನ್ನು ಮೂರು ಸ್ತರಗಳಲ್ಲಿ ಅರ್ಥೈಸಬಹುದು. ಒಂದು; ಈಗಾಗಲೇ ಹೇಳಿದಂತೆ ಚುನಾವಣಾ ರಾಜಕಾರಣ. ಇದರ ಹೊರತಾಗಿ, ಜಾತಿರಾಜಕಾರಣದ ಭಾಗವಾಗಿಯೂ ಸಹ "ಗೆಹಲಟ್ ಮೀಸಲಾತಿ" ನೀತಿಯನ್ನು ವಿಶ್ಲೇಷಿಸಬಹುದು. ಇನ್ನು ಮುಂದಕ್ಕೆ ಪ್ರಸ್ತುತ ವಾದವನ್ನು ಕೊಂಡೊಯ್ಯುವುದಾದರೆ, ಇಡೀ ಪ್ರಕ್ರಿಯೆಯನ್ನು, ಕಾಂಚ ಐಲಯ್ಯನವರು ಹೇಳಿದಂತೆ ಮೇಲ್ಜಾತಿಗಳ "ಕರಗಿಸಿಕೊಳ್ಳುವಿಕೆ"ಗ (Assimilation) ಸಮೀಕರಿಸಬಹುದು. ಇತಿಹಾಸದುದ್ದಕ್ಕೂ ದಲಿತರು ಎಚ್ಚೆತ್ತುಕೊಂಡಾಗಲೆಲ್ಲ ಮೇಲ್ವರ್ಗ -ಮುಖ್ಯವಾಗಿ ಬ್ರಾಹ್ಮಣಶಾಯಿ ತನ್ನ ವಿಶಾಲ ಬಾಹುಗಳಲ್ಲಿ ಬಂಧಿಸುತ್ತಲೇ ಬಂದಿದೆ. ವಚನ ಚಳುವಳಿಯ ವೈಫಲ್ಯ ತತ್‌ಕ್ಷಣ ನೆನಪಿಗೆ ಬರುವ ಉದಾಹರಣೆ. (ರಾಜಸ್ಥಾನದ ಪ್ರಸ್ತುತ ಬೆಳವಣಿಗೆಯನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ) ಭಾರತದಲ್ಲಿ ಮೀಸಲಾತಿ ನಡೆದು ಬಂದ ದಾರಿ. ಈ ಮೀಸಲಾತಿ ರಾಜಕಾರಣದ ವಿವಿಧ ಮಗ್ಗುಲುಗಳನ್ನು ಅರಿಯುವ ಪ್ರಯತ್ನ ಇಲ್ಲಿದೆ.

ದೇಶದಲ್ಲಿ ಮೊದಲಿಗೆ ಮೀಸಲಾತಿಯನ್ನು ಹಳೆಯ ಮೈಸೂರು ಮತ್ತು ಕೊಲ್ಹಾಪುರ ಪ್ರಾಂತ್ಯ/ಸಂಸ್ಥಾನಗಳಲ್ಲಿ ನೀಡಲಾಗಿತ್ತು. ನಂತರ ಮದ್ರಾಸ್ ಪ್ರೆಸಿಡೆನ್ಸಿ, ಪೂನಾ ಒಪ್ಪಂದದಲ್ಲಿ ಕಾಣಿಸಿಕೊಂಡು ಮೀಸಲಾತಿ ಸಂವಿಧಾನದಲ್ಲಿ ಸ್ಥಾನ ಪಡೆಯಿತು. 1950ರಲ್ಲಿ ಸಂವಿಧಾನವನ್ನು ಭಾರತ ಅಂಗೀಕರಿಸಿದಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಅಂದರೆ ದಲಿತರನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಸಮಾಜದ ಮುಂದುವರೆದ ಜಾತಿಗಳ ಮಟ್ಟಕ್ಕೆ ತರುವ ಸಲುವಾಗಿ ಮೀಸಲಾತಿಯನ್ನು ನಿಗಧಿತ ಸಮಯದವರೆಗೆ (ಮೊದಲಿಗೆ 10 ವರ್ಷಗಳು, ನಂತರ 50 ವರ್ಷಗಳು; ಜಾರಿಗೆ ತರಲಾಗಿತ್ತು. ನಿಗಧಿತ ಸಮಯ ವಿಸ್ತರಣೆಗೊಳ್ಳುತ್ತಲೇ ಇದೆ. ಮೀಸಲಾತಿಗೆ ಭಾಜನರಾದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜೊತೆಗೆ 1990ರ ಮಂಡಲ್ ವರದಿಯ ನಂತರ ಹಿಂದುಳಿದ ವರ್ಗಗಳ ಸಮೂಹವೇ ಸೇರ್ಪಡೆಯಾಗಿದೆ. ಆದರೆ ಮೀಸಲಾತಿ ನೀತಿಯ ಉದ್ದಿಶ್ಯ ಈಡೇರಿದೆಯೇ. ಸಂವಿಧಾನ ಜಾರಿಗೆ ಬಂದು ಅರ್ಧ ಶತಮಾನ ಕಳೆದರೂ ದಲಿತರ ಸ್ಥಿತಿ ಬದಲಾಗಿಲ್ಲ. ಜಾಗತೀಕರಣ ಮತ್ತು ಉದಾರೀಕರಣ ನೀತಿಗಳ ಅನುಷ್ಠಾನದ ನಂತರ ದಲಿತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಇನ್ನೂ ಹದಗೆಡುತ್ತಿದೆ. ಪ್ರಸ್ತುತ ಕೇಂದ್ರ ಸರ್ಕಾರ ಬಂಡವಾಳ ಹಿಂತೆಗೆತ ಪ್ರಕ್ರಿಯೆಯಡಿ ಬೃಹತ್ ಸರ್ಕಾರಿ ಕೈಗಾರಿಕಾ ಸಂಸ್ಥೆಗಳನ್ನು ಒಂದಾದರೊಂದ ನಂತರ ಮಾರಾಟ ಮಾಡುವ ಮೂಲಕ ದಲಿತರ ಉದ್ಯೋಗಗಳಿಗೆ ಸಂಚಕಾರ ತರುತ್ತಲಿದೆ. ಮೀಸಲಾತಿ ನೀತಿಯ ಅನುಷ್ಠಾನ ವೈಫಲ್ಯಗೊಂಡಿರುವುದು ಸತ್ಯ. ಅದರಂತೆ ಹಿಂದುಳಿದ ವರ್ಗಗಳ ಉದ್ಧಾರದ ಹೆಸರಲ್ಲಿ ಮೀಸಲಾತಿ ರಾಜಕಾರಣ ನಡೆಯುತ್ತಿರುವುದು ಅಷ್ಟೇ ಸತ್ಯ. ಗೆಹಲಟ್ ಘೋಷಿಸಿರುವ ಸ್ಪರ್ಧಾತ್ಮಕ ಮೀಸಲಾತಿ ನೀತಿ ಜಾತಿ ರಾಜಕಾರಣಕ್ಕೆ ಸ್ಪಷ್ಟ ನಿದರ್ಶನವಾಗಿದೆ.

1990ರಲ್ಲಿ, ವಿ.ಪಿ.ಸಿಂಗ್ ಮಂಡಲ್ ವರದಿಯನ್ನು ಜಾರಿಗೊಳಿಸುವ ಮೂಲಕ ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜಾತಿಯಾಧಾರಿತ ರಾಜಕಾರಣಕ್ಕೆ ಶಾಶ್ವತ ಸ್ಥಾನ ಕಲ್ಪಿಸಿಕೊಟ್ಟರು. ಮಂಡಲ್ ವರದಿ ಕೇವಲ ಗಲಭೆ ಮತ್ತು ಹಿಂಸಾಚಾರಕ್ಕಷ್ಟೆ ಪ್ರೇರಣೆ ನೀಡಲಿಲ್ಲ. ಜೊತೆಗೆ ಸ್ವಜಾತಿ ಪ್ರೇಮವನ್ನು ಮುಖ್ಯವಾಗಿ ನಗರದ ಜನರಲ್ಲಿ ಹುಟ್ಟುಹಾಕಿತು. ಜಾತಿಗಳ ನಡುವೆ ಇದ್ದ ಕಂದರ ಮತ್ತೂ ತೀವ್ರವಾಯಿತು. ಮಂಡಲ್ ವರದಿಯನ್ನು ಆಧರಿಸಿ ಜಾರಿಗೆ ಬಂದ ಮೀಸಲಾತಿ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ಕೆಲಸ ಮಾಡುವ ಬದಲು ಸಮಾಜವನ್ನು ಜಾತಿಯಾಧಾರದ ಮೇಲೆ ಒಡೆಯುವ ಕೆಲಸವನ್ನು ಪರೋಕ್ಷವಾಗಿ ಮಾಡಿತು. ಪ್ರಸ್ತುತ ಜಾತಿ ರಾಜಕಾರಣ ತನ್ನ ಹಿಡಿತವನ್ನು ಬಿಗಿಗೊಳಿಸಿದೆ. ಮೀಸಲಾತಿಯ ಲಾಭಗಳಿಸಲು ಉತ್ತರಪ್ರದೇಶ ಮತ್ತು ಬಿಹಾರ್‌ನಂತಹ ರಾಜ್ಯಗಳಲ್ಲಿ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಲು ಹಲವಾರು ಜಾತಿಗಳು ಸ್ಪರ್ಧೆಗಿಳಿದಿವೆ. ರಾಜಸ್ಥಾನದಲ್ಲಿರುವ "ಸಾಮಾಜಿಕ ನ್ಯಾಯ ಮಂಚ್" ಸಮಾಜದ ಮೇಲ್ಜಾತಿಗಳ ಒಂದು ಒಕ್ಕೂಟ. (ಬ್ರಾಹ್ಮಣ ಮಹಾಸಭಾ, ಕ್ಷತ್ರಿಯ ಮಹಾಸಭಾ, ರಜಪೂತ್ ಅರಕ್ಷಣ ಮಂಚ್, ವೈಶ್ಯಮಹಾಸಭಾ ಮುಂತಾದವರು) ಈ ಒಕ್ಕೂಟದ ಮೂಲೋದ್ದೇಶ. ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಅಧಿಕಾರಯುತ ಸ್ಥಾನದಲ್ಲಿರುವ ಜಾಟ್‌ಗಳಂಥವರಿಗೆ OBC ಪಟ್ಟಿಯಲ್ಲಿ ಸ್ಥಾನ ಕಲ್ಪಿಸುವುದು! OBC ಪಟ್ಟಿಯೊಳಗೆ ಜಾಟ್‌ಗಳು ಸೇರ್ಪಡೆಯಾದರೆ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಬರಬಹುದೆಂಬ ಭಯದಿಂದ ರಜಪೂತ್‌ಗಳು OBC ಪಟ್ಟಿಯಲ್ಲಿನ ಜಾತಿಗಳನ್ನು ವಿಂಗಡಿಸಬೇಕೆಂದು ಬೇಡಿಕೆ ಇಟ್ಟಿದ್ದಾರೆ. ಕರ್ನಾಟಕ, ತಮಿಳುನಾಡು ಮತ್ತು ಬಿಹಾರ್‌ಗಳಲ್ಲಿ ಈಗಾಗಲೇ ಈ ರೀತಿಯ ವಿಂಗಡಣೆಯಾಗಿರುವುದನ್ನು ಗಮನಿಸಬಹುದು. ರಾಜಸ್ಥಾನದಲ್ಲಿನ ಪ್ರಾಂತ್ಯದಲ್ಲಿ ನಿಜವಾಗಿ ತುಳಿತಕ್ಕೊಳಗಾಗಿರುವ ಹಿಂದುಳಿದವರ್ಗಗಳಾದ ಗುಜ್ಜರ್‌ಗಳು, ಮಾಲಿಗಳು ಮತ್ತು ರಾವತ್‌ಗಳು ಮೌನವಹಿಸಿಬಿಟ್ಟಿದ್ದಾರೆ. ಆದರೆ ರಜಪೂತ್‌ಗಳು ಜಾಟ್‌ಗಳೊಂದಿಗಿನ ವಿರಸದಿಂದಷ್ಟೆ ಈ ಬೇಡಿಕೆ ಮುಂದಿಟ್ಟಿರುವುದು. ಜಾಟ್ ಮತ್ತು ರಜಪೂತ್‌ಗಳು ಪಾರಂಪರಿಕ ಎದುರಾಳಿಗಳು ಎಂಬುದು ತಿಳಿದ ವಿಷಯ.

ಅದೇನೇ ಇರಲಿ ಪ್ರಸ್ತುತ ರಾಜಸ್ಥಾನದಲ್ಲಿ ಘೋಷಿಸಲಾಗಿರುವ ಮೀಸಲಾತಿ ಸಂವಿಧಾನ ಬಾಹಿರವಾದುದು. ಸುಪ್ರೀಂಕೋರ್ಟ್ ಮೀಸಲಾತಿಯನ್ನು ಶೇ. 50ರ ಮಟ್ಟಕ್ಕೆ ನಿಗಧಿಪಡಿಸಿದೆ. ಆದರೆ ತಮಿಳುನಾಡಿನಲ್ಲಿ ಮೀಸಲಾತಿಯ ಪ್ರಮಾಣ ಶೇ. 69ರಷ್ಟಿದೆ. ಮತ್ತೀಗ ರಾಜಸ್ಥಾನದಲ್ಲಿ ಮೀಸಲಾತಿ ಪ್ರಮಾಣ ಶೇ. 63ಕ್ಕೆ ಏರಿದೆ. ಇದರಲ್ಲಿ ಪರಿಶಿಷ್ಟ ಜಾತಿ ಶೇ. 16, ಪರಿಶಿಷ್ಟ ಪಂಗಡ ಶೇ. 12, ಹಿಂದುಳಿದ ವರ್ಗಗಳು ಶೇ. 21 ಮತ್ತು ಹೊಸ ಸೇರ್ಪಡೆ ಮೇಲ್ಜಾತಿಗಳ ಬಡವರು ಶೆ. 14ರಷ್ಟು ಮಂದಿ ಮೀಸಲಾತಿಗೆ ಭಾಜನಾರಾಗಿದ್ದಾರೆ. ಇದು ಸುಪ್ರೀಂಕೋರ್ಟ್ ಆದೇಶದ ಸ್ಪಷ್ಟ ಉಲ್ಲಂಘನೆಯೂ ಹೌದು. 1980ರವರೆಗೆ

ದಲಿತರಿಗಷ್ಟೆ ಇದ್ದ ಮೀಸಲಾತಿ ಮಂಡಲ್ ವರದಿಯ ನಂತರ ಹಿಂದುಳಿದ ವರ್ಗಗಳಿಗೂ ನೀಡಲಾಯಿತು. ಆಗ ಸುಪ್ರೀಂಕೋರ್ಟ್ ಮುಂದಾಲೋಚನೆ ಮಾಡಿ ಮೀಸಲಾತಿಯ ಮಟ್ಟವನ್ನು ಶೇ. 50ಕ್ಕೆ ನಿಗಧಿಗೊಳಿಸಿತ್ತು.

ಈ ಹಿಂದೆ ಮೇಲ್ಜಾತಿಗಳಿಗೆ ಮೀಸಲಾತಿ ಒದಗಿಸುವ ಪ್ರಯತ್ನವನ್ನು ಕೇಂದ್ರ ಸರ್ಕಾರ ಮಾಡಿತ್ತು. 1992ರಲ್ಲಿ ನರಸಿಂಹರಾವ್ ಸರ್ಕಾರ ಇತರೆ ಹಿಂದುಳಿದ ವರ್ಗಗಳಿಗೆ ಶೇ. 10ರಷ್ಟು ಮೀಸಲಾತಿಯನ್ನು ಉದ್ಯೋಗ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ನೀಡುವ ಅಧಿಸೂಚನೆ ಹೊರಡಿಸಿತ್ತಾದರೂ ಸುಪ್ರೀಂಕೋರ್ಟ್ ಅಧಿಸೂಚನೆಯನ್ನು ತಳ್ಳಿಹಾಕಿತ್ತು. ಆದರೆ ಈಗ ರಾಜಸ್ಥಾನ ಸರ್ಕಾರ ಈ ರೀತಿಯ ಪ್ರಯತ್ನದಲ್ಲಿ ಸದ್ಯಕ್ಕೆ ಯಶಸ್ವಿಯಾಗಿದೆ.

ಮುಂದುವರೆದ ಜಾತಿಗಳ ಬಡವರಿಗಾಗಿ ಗೆಹಲಟ್ ಘೋಷಿಸಿರುವ ಶೇ. 14ರ ಮೀಸಲಾತಿ, ಇಡೀ ಮೀಸಲಾತಿ ನೀತಿಯ ಪರಿಕಲ್ಪನೆಯನ್ನು ವ್ಯಕ್ತಿಯ ಮಟ್ಟಕ್ಕೆ ತಂದು ನಿಲ್ಲಿಸುತ್ತದೆ. ಆರ್ಥಿಕ ನ್ಯಾಯ ಒದಗಿಸಲು ಮೀಸಲಾತಿಯನ್ನು ಸಂವಿಧಾನದಲ್ಲಿ ಅಳವಡಿಸಿಕೊಂಡದ್ದಲ್ಲ. ಆರ್ಥಿಕ ನ್ಯಾಯ ಮೀಸಲಾತಿಯ ಗುರಿಗಳಲ್ಲೊಂದಾದರೂ, "ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜಾತಿಗಳನ್ನು ಬೆಳೆಸಲು ಮೀಸಲಾತಿಯನ್ನು ಸಂವಿಧಾನದ ಪರಿಧಿಯೊಳಗೆ ತರಲಾಯಿತು. ಮೀಸಲಾತಿಯ ಗುರಿ ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆಯಲ್ಲ. ಆರ್ಥಿಕ ಸಹಾಯ ಒದಗಿಸಲು ದೇಶದಲ್ಲಿ ಯೋಜನೆಗಳಿಗೇನು ಕೊರತೆಯಿಲ್ಲ. ಇದಕ್ಕೂ ಮೀಸಲಾತಿಯ ಮಾರ್ಗವೇ ಬೇಕೆ? ಸಂವಿಧಾನ ಬಾಹಿರವಾದ ಈ ಹೊಸ ಮೀಸಲಾತಿ ನೀತಿ, ಇತಿಹಾಸದುದ್ದಕ್ಕೂ ಬ್ರಾಹ್ಮಣಶಾಹಿ ನಡೆಸಿಕೊಂಡು ಬಂದಿರುವ "ಕರಗಿಸಿಕೊಳ್ಳುವಿಕೆ"ಯ ಭಾಗವೇ ಆಗಿದೆ ಎನ್ನಲಡ್ಡಿಯಿಲ್ಲ. ಮೇಲ್ಜಾತಿಗಳ ಬಡವರಿಗಾಗಿ ಮೀಸಲಾತಿಯೆಂಬ ಹೆಸರಿನಲ್ಲಿ, ಸಂವಿಧಾನದ ಆಶಯವನ್ನು ಉಚ್ಚಾಟಿಸುವ ಪ್ರಯತ್ನ ನಡೆಸಲಾಗುತ್ತಿದೆ. ಪ್ರಸ್ತುತ ಪ್ರಕ್ರಿಯೆಯ ಮೂಲಕ ದಲಿತರು ಮತ್ತು ಹಿಂದುಳಿದ ವರ್ಗಗಳ ಹಕ್ಕಾಗಿದ್ದ ಮೀಸಲಾತಿಯ ಕ್ಷೇತ್ರಕ್ಕೂ ಮೇಲ್ಜಾತಿಗಳು ಲಗ್ಗೆಯಿಡುತ್ತಿವೆ. ಇತಿಹಾಸದುದ್ದಕ್ಕೂ ನಿರಾಕರಿಸಲ್ಪಟ್ಟ ಸಾಮಾಜಿಕ ನ್ಯಾಯವನ್ನು ಸಾಂವಿಧಾನಿಕ ಕ್ರಮಗಳ ಮೂಲಕ ದಲಿತರು ಪಡೆಯುತ್ತಿರುವಾಗ, ರಾಜಸ್ಥಾನದಲ್ಲಿ ಘೋಷಿಸಲಾದಂತಹ ನೀತಿಗಳು ಸಂವಿಧಾನದ ಮೂಲೋದ್ದೇಶಕ್ಕೆ ಕೊಡಲಿಪೆಟ್ಟುಗಳನ್ನು ಕೊಡುತ್ತಲೇ ಬಂದಿದೆ. ಈ ನಿಟ್ಟಿನಲ್ಲಿ "ಸಾಮಾಜಿಕ ನ್ಯಾಯ ಮಂಚ್"ನಂತಹ ಸಂಘಟನೆಗಳು ಯೋಜನಾಬದ್ಧವಾಗಿ ಕೆಲಸ ಮಾಡುತ್ತಲಿವೆ. ಇಡೀ ದೇಶಕ್ಕೆ ಗೆಹಲಟ್ ನಿರ್ಧಾರ ಹಠಾತ್ತಿನದಾಗಿರಬಹುದು ಆದರೆ ದಲಿತರು ನಿರೀಕ್ಷಿಸಿದ ನಿರ್ಧಾರವೇ ಇದು. ಕಾಂಗ್ರೆಸ್ ಅಲ್ಲದಿದ್ದರೆ ಬಿಜೆಪಿ ಈ ಕೆಲಸ ಮಾಡುತ್ತಿತ್ತು.

ಒಂದೆಡೆ ಸಾರ್ವಜನಿಕ ಉದ್ದಿಮೆಗಳ ಬಂಡವಾಳ ಹಿಂಪಡೆಯಲಾಗುತ್ತಿದ್ದರೆ, ಇನ್ನೊಂದೆಡೆ ಜಾಗತೀಕರಣದ ವಿಷವರ್ತುಲ ದೇಶಾದ್ಯಂತ ವ್ಯಾಪಿಸುತ್ತಿದೆ. ಮತ್ತೊಂದೆಡೆ ಸರ್ಕಾರಗಳ ಇಂಥಹ ನಿರ್ಧಾರಗಳು (ಮೇಲ್ಜಾತಿ ಬಡವರಿಗೆ ಶೇ. 14 ಮೀಸಲಾತಿ) ದಲಿತರ ಅಸ್ತಿತ್ವವನ್ನೇ ಅಲಗಾಡಿಸುತ್ತಿದೆ. ಇಂಥಹ ಸಂದರ್ಭದಲ್ಲಿ ದಲಿತರು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಸಂಘಟಿತರಾಗಬೇಕಾದ ಅಗತ್ಯತೆ ಇದೆ. ಈ ನಿಟ್ಟಿನಲ್ಲಿ ಮಧ್ಯಪ್ರದೇಶ ಸರ್ಕಾರ ಅಳವಡಿಸಿಕೊಂಡ 'ಭೋಪಾಲ್ ಘೋಷಣೆ'ಯನ್ನು ದೇಶದೆಲ್ಲೆಡೆ ಜಾರಿಗೆ ತರುವಂತೆ ಒತ್ತಾಯಿಸುವ ತುರ್ತು ನಮ್ಮ ಮುಂದಿದೆ. ಖಾಸಗಿ ಸಂಸ್ಥೆಗಳಲ್ಲಿ ಮೀಸಲಾತಿ 'ಭೋಪಾಲ್ ಘೋಷಣೆ'ಯ ಮುಖ್ಯ ಗುರಿಗಳಲ್ಲೊಂದು. ಸಂವಿಧಾನ ಪರಾಮರ್ಶೆಯ ಆಯೋಗ, "ಖಾಸಗೀಕರಣ ಮತ್ತು ಬಂಡವಾಳ ಹಿಂಪಡೆತಗಳ ನಂತರವೂ ಮೀಸಲಾತಿ ಈಗಿನಂತೆ ಮುಂದುವರೆಯಬೇಕು. ಈ ನಿಟ್ಟಿನಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಜೊತೆ ಸರ್ಕಾರ ಒಪ್ಪಂದ ಮಾಡಿಕೊಳ್ಳಬೇಕು" ಎಂಬ ತನ್ನ ಸ್ಪಷ್ಟ ಅಭಿಪ್ರಾಯವ್ಯಕ್ತಪಡಿಸಿದೆ. ಇದು ಖಾಸಗಿ ಕಂಪನಿಗಳ ಸಾಮಾಜಿಕ ಬದ್ಧತೆಯೂ ಹೌದು. ಒಟ್ಟಾರೆ, ಮೇಲ್ಜಾತಿಗಳ ಈ ಹೊಸ ಮೀಸಲಾತಿಯ ಷಡ್ಯಂತ್ರವನ್ನು ಮುರಿಯುವ ಕೆಲಸ ದಲಿತ ಸಂಘಟನೆಯ ಮೂಲಕ ತುರ್ತಾಗಿ ಆಗಬೇಕಿದೆ. ●

"ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜಾತಿಗಳನ್ನು ಬೆಳೆಸಲು ಮೀಸಲಾತಿಯನ್ನು ಸಂವಿಧಾನದ ಪರಿಧಿಯೊಳಗೆ ತರಲಾಯಿತು. ಮೀಸಲಾತಿಯ ಗುರಿ ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆಯಲ್ಲ. ಆರ್ಥಿಕ ಸಹಾಯ ಒದಗಿಸಲು ದೇಶದಲ್ಲಿ ಯೋಜನೆಗಳಿಗೇನು ಕೊರತೆಯಿಲ್ಲ. ಇದಕ್ಕೂ ಮೀಸಲಾತಿಯ ಮಾರ್ಗವೇ ಬೇಕೆ? ಸಂವಿಧಾನ ಬಾಹಿರವಾದ ಈ ಹೊಸ ಮೀಸಲಾತಿ ನೀತಿ, ಇತಿಹಾಸದುದ್ದಕ್ಕೂ ಬ್ರಾಹ್ಮಣಶಾಹಿ ನಡೆಸಿಕೊಂಡು ಬಂದಿರುವ "ಕರಗಿಸಿಕೊಳ್ಳುವಿಕೆ"ಯ ಭಾಗವೇ ಆಗಿದೆ. ಮೇಲ್ಜಾತಿಗಳ ಬಡವರಿಗಾಗಿ ಮೀಸಲಾತಿಯೆಂಬ ಹೆಸರಿನಲ್ಲಿ, ಸಂವಿಧಾನದ ಆಶಯವನ್ನು ಉಚ್ಚಾಟಿಸುವ ಪ್ರಯತ್ನ ನಡೆಸಲಾಗುತ್ತಿದೆ. ಪ್ರಸ್ತುತ ಪ್ರಕ್ರಿಯೆಯ ಮೂಲಕ ದಲಿತರು ಮತ್ತು ಹಿಂದುಳಿದ ವರ್ಗಗಳ ಹಕ್ಕಾಗಿದ್ದ ಮೀಸಲಾತಿಯ ಕ್ಷೇತ್ರಕ್ಕೂ ಮೇಲ್ಜಾತಿಗಳು ಲಗ್ಗೆಯಿಡುತ್ತಿವೆ.

ಸಂವಾದ

ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ಅಭಿವ್ಯಕ್ತಿ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

– ಸಂಪಾದಕ

ವಿಳಾಸ :

'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ, ಬೆಂಗಳೂರು - 560 091
ದೂರವಾಣಿ : 3287943 / 3281667

ನಾವು ನಮ್ಮವರು



ವರ್ಷವಿಡೀ ಮಳೆ ಬರದೆ ಬರಗಾಲ ಬಿದ್ದು
ಬೆಂಗಳೂರು ಬಾಂಬೆಗೆ ಗುಳೆ ಹೊರಟಿದ್ದಾರೆ ನನ್ನ ಜನ
ಒಂದೇ ಬೀಡಿಯನು ಮೂರು ಸಲ ಸೇದುತ್ತಾ, ಕೆಮ್ಮುತ್ತಾ
ಹರಿದ ತನ್ನ ಅಂಗಿಗೆ ತೇಪೆ ಹಾಕುತ್ತಿದ್ದಾನೆ ನಮ್ಮಜ್ಜ
ಸೇರು ಧಾನ್ಯಕ್ಕಾಗಿ ದಿನವಿಡೀ ದುಡಿದು ಬಂದಷ್ಟೂ ಸಂಜೆ ಸರಾಯಿ ಕುಡಿದು
ಜೋಲಿ ಹೊಡೆಯುತ ಮನೆಗೆ ಬಂದನು ನಮ್ಮಪ್ಪ
ನಿನ್ನೆ ಮಾಡಿದ ಅಡುಗೆಯನ್ನೇ ಬಡಿಸಿ, ಮುಖಕ್ಕೆ ಹೊಡೆಸಿಕೊಂಡು
ಅಳುತ್ತಾ ಕುಳಿತಳು ನಮ್ಮವ್ವ
ಇಸ್ಪೀಟ್-ಮಟಕಾ ಆಡಿ ಸಾಲ ಮಾಡಿ ಇದ್ದಷ್ಟೂ ಹೊಲ ಒತ್ತೆ ಹಾಕಿ
ಗೌಡನ ಮನೆಯಲ್ಲಿ ಜೀತಕೆ ನಿಂತಿದ್ದಾನೆ ನನ್ನಣ್ಣ
ಗುಟಕಾ ತಿನ್ನುತ, ಗೋಲಿ ಗುಂಡಾಡುತ ಶಾಲೆಯ ಮರೆತು
ಬೀದಿ ರಾಮನಾಗಿ ದಿನಕ್ಕೊಂದು ಜಗಳ ಕಾಯ್ತಾನೆ ನಂತಮ್ಮ
ಕುಡಿಯಲು ಕೊಡ ನೀರಿಗಾಗಿ ಮೂರು ತಾಸು ಸರದಿ ನಿಂತರೂ
ಕರೆಂಟ್ ಇಲ್ಲದಕ್ಕಾಗಿ ಶಾಪ ಹಾಕುತ ಬಂದಳು ನಮ್ಮಕ್ಕ
ವಿಷಪೂರಿತ ಬಿಸಿಯೂಟ ತಿಂದು ವಾಂತಿಬೇಧಿಯಾಗಿ
ದವಾಖಾನೆಯಲ್ಲಿ ದಾಖಲಾಗಿದ್ದಾಳೆ ನಂತಂಗಿ
ಹಿಂಗಿದ್ರ ನನ್ಯಾಕ ಮದುವೆಯಾದ್ರೀss ಎಂದು ಮುಸುಕು ಹಾಕಿ
ಮುನಿಸಿಗೊಂಡು ಮಲಗಿದ್ದಾಳೆ ನನ್ನ ಹೆಂಡ್ತಿ
ಹಳ್ಳ್ಯಾಗ ಇಲ್ಲೇನೈತಿ, ಸಿಟಿಯಲ್ಲಿ ಮನಿಬಾಡಿಗಿ ಹಿಡಿದು ಸಂಸಾರ
ಮಾಡಬೇಕಪ್ಪಾss ಎಂದು ಹೇಳುತ್ತಿದ್ದಾನೆ ನಂಮಾವ
ಮಗಳ ಮೈಮೇಲೆ ಒಡವೆ ಮಾಡಿಸಲಿಕ್ಕಾಗದಿದ್ರೂ ಪರವಾಗಿಲ್ಲ
ಒಂದು ಟಿ.ವಿ.ಯನ್ನಾದ್ರೂ ತೊಗೋಬಾರದೆ ಎನ್ನುತ್ತಿದ್ದಾಳೆ ನಮ್ಮತ್ತೆ
ಡೊನೇಷನ್, ಫೀಸು, ಪುಸ್ತಕ, ಡ್ರೆಸ್ಸು ಎಲ್ಲಾ ಸೇರಿ ಮೂರು ಸಾವಿರ ತರದಿದ್ರೆ
ನಾಳೆ ಶಾಲೆಗೆ ಬರಬೇಡ ಅಂದರು ನಮ್ಮ ಟೀಚರ್ ಎಂದಳು ನನ್ಮಗಳು
ಯಪ್ಪಾ ಇಸ್ಕೂಲ್ ಬಹಳ ದೂರೈತಿ, ನೆರೆಮನೆ ರವಿ ದಿನಾ ಆಟೋದಲ್ಲಿ ಬರ್ತಾನೆ
ನನಗೊಂದು ಸೈಕಲನ್ನಾದ್ರೂ ಕೊಡಿಸು ಎಂದು ಹಟ ಹಿಡಿದಿದ್ದಾನೆ ನನ್ಮಗ
ಒಣ ಉಪದೇಶ ನೀಡುತ, ಮೂರು ವರ್ಷದ ಹಿಂದೆ ನೀಡಿದ
ಸಾಲದ ಬಡ್ಡಿಯನ್ನಾದ್ರೂ ಕೊಡು ಎಂದು ಗೊಣಗುತ್ತಿದ್ದಾನೆ. ನನ್ನ ಗೆಳೆಯ
ಸೃಷ್ಟಿಯ ಮುನಿಸು, ಇನ್ನೆಷ್ಟು ದಿನ ಇದ್ದೀತು
ಕಾರಣ ತಿಳಿದಿದೆ, ಪರಿಣಾಮನ್ನೆದುರಿಸಲು ಸಿದ್ಧರಾಗಿರಬೇಕಪ್ಪೆ ಎನ್ನುತಿದೆ.
ನನ್ನ ಒಳಮನಸ್ಸು

○ ಅಗಸ್ತಾಳ ಮಲ್ಲಪ್ಪ, ಶಹಾಪುರ

ನನಗೆ

ಇಲ್ಲ,
ನನಗೆ ಯುದ್ಧದ ಭಯ
ಕಾಡುತ್ತಿಲ್ಲ, ಜಗಳ-ದೊಂಬಿ
ಇಲ್ಲಿ ಚಿಂತೆಗೀಡು ಮಾಡುತ್ತಿಲ್ಲ;
ಬರಗಾಲವಾಗಲೀ, ಭರಪೂರದ
ಮಳೆಯಾಗಲೀ ಇಲ್ಲಿ ಏನೂ ಅಲ್ಲ.

ಆದರೆ,
ದಿನನಿತ್ಯದ ಕೋಟಲೆಗಳೇ
ಬದುಕಿನಂಚಿಗೆ ಒಯ್ಯುವವು;
ಬಡತನದಿ ಬೆಂದವಗಾಗಲೀ,
ಸಂಸಾರಿಗನಿಗಾಗಲೀ-ರಸ್ತೆ ಬದಿ
ಯ ಸಾವು ಆಪ್ತವಲ್ಲ,
ಆಕಸ್ಮಿಕವೂ ಅಲ್ಲ.

ಹೀಗಿದ್ದೂ,
ಇಲ್ಲಿನ ಸಿರಿವಂತಿಕೆಯ ಅಟ್ಟಹಾಸ,
ಶೋಷಣೆಯ ಕಿರುನೋಟ,
ದಿನವೂ ಕೇಳುವುದು ಒಳಗೇ
ಯಾಕೆ-ಹೊಸ ಬೆಳಗಿಗೆ
ಒಳಗೊಳ್ಳಲಾರೆವೆಂದು...

○ ಶೈಲೇಂದ್ರ ಬಂದಗದ್ದೆ

ಬುದ್ಧ ನೀಡಿದ ಬೆಳಕು

ಸಾವಿರಾರು ವರ್ಷಗಳಾಚೆ
ಬುದ್ಧ ನೀಡಿದ ಬೆಳಕು
ರಕ್ಷಿಸುತ್ತಿದೆ ಇನ್ನೂ ನಮ್ಮನ್ನು, ಜಗತ್ತನ್ನು;
ಬಾಂಬುಗಳಿಂದ ತ್ರಸ್ತಗೊಂಡು ಚಡಪಡಿಸುವ ವಿಶ್ವವನ್ನು

ನಮಗಿರುವಂತೆ ಅಣುಬಾಂಬುಗಳ ಭೀತಿ
ಬುದ್ಧನಿಗಿಲ್ಲ ಅವನ ಅನುಯಾಯಿಗಳಿಗಿಲ್ಲ
ಬುದ್ಧ ನಡೆದು ಹೋದ ಹೆಜ್ಜೆ ಮೂಡದ ಹಾದಿಯಲ್ಲಿ
ಮಿಂಚಿ ಮರೆಯಾಗುತ್ತವೆ ಇನ್ನೂ
ಬೆಳ್ಳಿಯ ಖಡುವಿಂದ ಗೆರೆಕೊರೆದ ದಾರಿಗಳು.

ಗತಕಾಲಕ್ಕೂ-ಭವಿಷ್ಯತ್ತಿಗೂ ಮಧ್ಯಂತರದಲ್ಲಿ
ಉಕ್ಕು ಕಬ್ಬಿಣದ ಭದ್ರ ಸೇತುವೆ ಕಟ್ಟಿ
ತೊಡರಿಲ್ಲದೆ ಮುನ್ನುಗ್ಗುತ್ತಿವೆ ಇರುವೆಗಳ ಸಾಲು ಸಾಲು;
ಝಂಡಾ ಉಂಚಾ ರಹೇ ಎಂದು ಹಾಡುತ್ತಾ,
ತ್ರಿರಂಗಿ ಬಾವುಟಗಳ ಎತ್ತಿ ಹಿಡಿದು



ರಾಷ್ಟ್ರೀಗಿತ ಹಾಡುತ್ತ, ಹೆಜ್ಜೆ ಹಾಕುತ್ತಿವೆ
ಮುಂದುಮುಂದಕ್ಕೆ ವರ್ತಮಾನದ
ನೂರಾರು ಸವಾಲುಗಳು-ಅಹವಾಲುಗಳು
ಜಾತಿ-ಮತ ಪಂಥದ ಭೂತಗಳನ್ನು ಓಡಿಸಿ ದೂರಕ್ಕಟ್ಟಿ
ಸೇರುತ್ತಿವೆ ಭೂತಕಾಲದ ಗವಿಯನ್ನು
ಹುಟ್ಟು ಜರಾಮರಣ ಪ್ರಶ್ನೆಗಳು ಮೊಟಕಾಗಿ
ಕುಂಟುತ್ತಿವೆ ಶತಮಾನಗಳ ಬಯಲಿನಲ್ಲಿ
'ತಮಸೋಮಾಜ್ಯೋತಿರ್ಗಮಯದ ಕಡಲಿನೊಡಲಿನಲ್ಲಿ
ಬುದ್ಧ ನೀಡಿದ ಬೆಳಕು
ರಕ್ಷಿಸುತ್ತಿದೆ ಇನ್ನೂ ನಮ್ಮನ್ನು, ಜಗತ್ತನ್ನು.

○ ಡಾ|| ಬುದ್ದಣ್ಣ ಹಿಂಗಮಿರೆ

ಇದು ನನ್ನ ಭಾರತ

ಇದು ನನ್ನ ಭಾರತ
ಇಲ್ಲಿ ಎಲ್ಲದಕ್ಕೂ ಜಾಗವಿದೆ
ಉರಿದೇಳುವ ಕಾಳುಗಳಿಗೂ
ಬೇರಿಳಿವ ಬೀಜಗಳಿಗೂ
ಗಾಂಧೀಗೂ ನನಗೂ ನಿನಗೂ ಕೂಡ
ಇಲ್ಲಿ ಕಟ್ಟಬಹುದು ಕೆಡವಬಹುದು
ಪ್ರಾಣ ಕೂಡ
ಶಾಂತಿಗಾಗಿ ಕಚ್ಚಾಡು ಉರಿದೇಳು
ಒಡಲೊಳಗೆ ಕರುಳ ಈಚೀ
ಮಲವ ಬಂದ್ ಮಾಡು
ಇದು ನನ್ನ ಭಾರತ
ತೂಕಡಿಸು ಧ್ಯಾನಿಸು
ಇಲ್ಲಿ ನೆಲಕ್ಕೂ ಚಲನೆ ಇಲ್ಲ
ಕೂರು ನಿಲ್ಲು ಓಡು
ಗಡಿಯಾರದ ಮುಳ್ಳು ನಿನ್ನ ಕೈಯಲ್ಲಿದ್ದರೆ ಸಾಕು

ಅಮೇರಿಕಾ ಇಂಗ್ಲೆಂಡ್ ಇರಾಕ್ ತಾಲಿಬಾನ್
ಚೀನಾ ಪಾಕಿಸ್ತಾನ
ಅವನ್ನೇಕೆ ಹೊಗಳಲಿ
ಇದು ನನ್ನ ಭಾರತ
ಇಲ್ಲಿ ಭೂತ ವರ್ತ ಭವಿಷ್ಯತ್ತುಗಳಿಗೂ
ಸಿಡುಬು
ಡಾಕ್ಟರ್‌ಗಾಗಿ ಕಾಯುತ್ತಿವೆ
ಹರಿದು ಬರುವ ಎಲ್ಲದಕ್ಕೂ ಮೌಲ್ಯವಿದೆ
ಬೆಲೆ ತೆತ್ತು ಜೀರ್ಣಿಸು ಸಾಕು.
ಸಿಂಗಪುರ್ ಸಿಲಿಕಾನ್ ಸಿಟಿಗಳ ಯಾಕೆ ಹೊಗಳಲಿ
ಇದು ನನ್ನ ಭಾರತ
ಬುಲ್ಡೋಜರ್ ಹರಿಸಿ
ಜೋಪಡಿಗಳ ಪರಿಸಿ
ಕಣ್ಣಲ್ಲೂ ಜಡಿ ಮಳೆ ಬರಿಸಿ
ಟೆರೇಸ್ ಮೇಲೆ ನಳನಳಿಸುವ
ಸಹಜ ಕೃಷಿ, ಕೈತೋಟ ಹಬ್ಬುತಿವೆ
ಇದು ನನ್ನ ಭಾರತ
ಇಲ್ಲಿ ಎಲ್ಲಾದಕ್ಕೂ ಜಾಗವಿದೆ
ಕಪ್ಪಿಡಿದ ಉಸಿರಿಗೂ
ತುಕ್ಕಿಡಿದ ಕಾಸಿಗೂ
ನನಗೂ ನಿನಗೂ ಪ್ರಜಾಪ್ರಭುತ್ವಕ್ಕೂ.

○ ಹಾಲ್ಕುರಿಕೆ ಶಿವಶಂಕರ್

ಬುದ್ಧನ ಅನನ್ಯತೆ

ಬುದ್ಧ ಹುಟ್ಟಿ (ಕ್ರಿ.ಪೂ. 560-480) ಇಲ್ಲಿಗೆ ಎರಡೂವರೆ ಸಾವಿರದ ನಲವತ್ತು ವರ್ಷಗಳ ಮೇಲಾಗಿದೆ. ಈ ದೀರ್ಘಾವಧಿಯಲ್ಲಿ ಅವನು ಪ್ರವೇಶಿಸದ ದೇಶವಿಲ್ಲ. ಪ್ರಭಾವಿಸಿದ ಮನಸ್ಸಿಲ್ಲ. ಪ್ರಪಂಚದ ಸಾಹಿತ್ಯ ಕಲಾ ವಿಜ್ಞಾನಗಳೆಲ್ಲ ಅವನ ಬೆಳಕಿನಿಂದ ಪಲ್ಲವಿಸಿವೆ. ಈ ಶತಮಾನ ಕಂಡ ಮಹಾಮೇಧಾವಿಗಳಾದ ತತ್ವಜ್ಞಾನಿ ಬರ್ಟ್‌ಂಡ್ ರಸೆಲ್ ಮತ್ತು ಮಹಾ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಅವರುಗಳು "ಬುದ್ಧ ಧಮ್ಮವೆ ನಾಳಿನ ಮಾನವ ಜನಾಂಗದ ಧರ್ಮವಾಗುತ್ತದೆ" ಎಂದು ಪ್ರವಾದಿಗಳಂತೆ ನುಡಿದಿದ್ದಾರೆ. ಅವರ ಈ ಮಾತುಗಳಲ್ಲಿ, ಅವರು ಬೇರೆ ದೇಶದವರೂ ಅನ್ಯಧರ್ಮೀಯರೇ ಆದರೂ, ಬುದ್ಧ ಧಮ್ಮದ ದೊಡ್ಡತನವನ್ನು ಗುರುತಿಸಬಹುದು. ಪರಿಪಕ್ವ ಮನಸ್ಸು ಜಾತಿಮತಾತೀತವಾದ ಕಾಲಾದೇಶಾತೀತ ನೆಲೆಯಲ್ಲಿ ಚಿಂತಿಸುತ್ತದೆ.

ಸಾಮಾನ್ಯವಾಗಿ ಪ್ರತಿಯೊಂದು ಧರ್ಮವೂ ಬೇರೆ ಮತದವರನ್ನು ತಮ್ಮ ಸಮಾನರಲ್ಲ, ತಮ್ಮಂಥ ಮನುಷ್ಯರಲ್ಲ ಎಂಬ ಭಾವನೆಯನ್ನು ತಮ್ಮ ಅನುಯಾಯಿಗಳ ಮನಸ್ಸಿನಲ್ಲಿ ಬಿತ್ತಿವೆ ಎಂದು ತಿಳಿದು ಬರುತ್ತದೆ. ಕ್ರೈಸ್ತಮತ ಕ್ರಿಸ್ತೀಯರಲ್ಲದವರನ್ನು 'ಪೇಗನಂ' ಎನ್ನುತ್ತದೆ. ಇಸ್ಲಾಂ ತನ್ನಲ್ಲಿ ನಂಬಿಕೆ ಇಡದವರನ್ನು 'ಕಾಫಿರ್' ಎಂದು ಕರೆಯುತ್ತದೆ; ಬ್ರಾಹ್ಮಣ ಧರ್ಮ ಅರ್ಥಾತ್ ಹಿಂದೂ ಧರ್ಮ ಚಾತುರ್ ವರ್ಣವನ್ನು ಒಪ್ಪದ ಜನರನ್ನು ಪಾಖಂಡಿ ಅಥವಾ ಪಾಷಂಡಿ ಎಂದು ಹೇಳುತ್ತದೆ. ಈ ಎಲ್ಲ ಶಬ್ದಗಳ ಅರ್ಥ ಹೆಚ್ಚು ಕಡಿಮೆ ಒಂದೇ ಆಗಿದೆ. ಅಂದರೆ ಎಲ್ಲ ಧರ್ಮಗಳೂ ಮನುಷ್ಯ ವಿರೋಧಿಗಳಾಗಿವೆ. ಆದರೆ ಬುದ್ಧ ಧಮ್ಮ ಈ ಅಸಹಜ ಭಾವನೆಯನ್ನು ತಾಳದೆ ಎಲ್ಲರೂ ಒಂದು ಎಂದು ಭಾವಿಸಿ ಆಚರಿಸುತ್ತಿದೆ. ಒಮ್ಮೆ ಭಗವಾನ್ ಬುದ್ಧದೇವ ತನ್ನ ಅನುಯಾಯಿಗಳಾದ ಭಿಕ್ಕುಗಳನ್ನೆಲ್ಲ ಒಂದೆಡೆ ಕೂಡಿಸಿ ಹೀಗೆ ಹೇಳಿದ: "ನೋಡಿ, ಸೋದರರೇ, ನೀವೆಲ್ಲ ಸಂಘವನ್ನು ಸೇರಿದ್ದೀರಿ. ನೀವೆಲ್ಲ ಒಂದು. ಹೇಗೆ? ಸಮುದ್ರಕ್ಕೆ ಬೇರೆ ಬೇರೆ ದಿನಗಳು ಹರಿದು ಬರುತ್ತವೆ. ಅವುಗಳಿಗೆ ಪ್ರತ್ಯೇಕ ಹೆಸರು, ಆಕಾರ ಇರುತ್ತವೆ. ಗಂಗಾ, ಯಮುನಾ, ಬ್ರಹ್ಮಪುತ್ರ, ಸರಸ್ವತಿ ಅಚಿರಾವತಿ, ಇತ್ಯಾದಿ. ಅವುಗಳೆಲ್ಲ ಸಮುದ್ರ ಸೇರಿದ ಮೇಲೆ ತಮ್ಮ ಹೆಸರು ರೂಪ ಆಕಾರ ಎಲ್ಲವನ್ನೂ ಕಳೆದುಕೊಂಡು ಒಂದೇ ಆಗಿ ಬಿಡುತ್ತವೆ. ಹಾಗೆ ನೀವೆಲ್ಲ ಒಂದು" ಎಂದು ಮನಕರಗುವಂಥ ಮಾತುಗಳನ್ನು ಆಡಿದ್ದಾನೆ. 'ನನಗೆ ತಿಳಿದಂತೆ, ಮಾನವ ಜನಾಂಗವೆಲ್ಲ ಒಂದು' ಎಂಬ ಅದ್ಭುತ ಕಲ್ಪನೆಯನ್ನು ಪ್ರಪಂಚದ ಇತಿಹಾಸದಲ್ಲಿ ಮೊಟ್ಟ ಮೊದಲಿಗೆ ಕೊಟ್ಟವನು ಬುದ್ಧದೇವ. ಅಂಥ ಅಪೂರ್ವ ವಿಚಾರಕ್ಕೆ ಭರತಖಂಡ ಮಾತೃಭೂಮಿಯಾಗಿದೆ ಎಂಬುದು

ಬುದ್ಧ ಹುಟ್ಟಿ (ಕ್ರಿ.ಪೂ. 560-480) ಇಲ್ಲಿಗೆ ಎರಡೂವರೆ ಸಾವಿರದ ನಲವತ್ತು ವರ್ಷಗಳ ಮೇಲಾಗಿದೆ. ಈ ದೀರ್ಘಾವಧಿಯಲ್ಲಿ ಅವನು ಪ್ರವೇಶಿಸದ ದೇಶವಿಲ್ಲ. ಪ್ರಭಾವಿಸಿದ ಮನಸ್ಸಿಲ್ಲ. ಪ್ರಪಂಚದ ಸಾಹಿತ್ಯ ಕಲಾ ವಿಜ್ಞಾನಗಳೆಲ್ಲ ಅವನ ಬೆಳಕಿನಿಂದ ಪಲ್ಲವಿಸಿವೆ. ಈ ಶತಮಾನ ಕಂಡ ಮಹಾಮೇಧಾವಿಗಳಾದ ತತ್ವಜ್ಞಾನಿ ಬರ್ಟ್‌ಂಡ್ ರಸೆಲ್ ಮತ್ತು ಮಹಾ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಅವರುಗಳು "ಬುದ್ಧ ಧಮ್ಮವೆ ನಾಳಿನ ಮಾನವ ಜನಾಂಗದ ಧರ್ಮವಾಗುತ್ತದೆ" ಎಂದು ಪ್ರವಾದಿಗಳಂತೆ ನುಡಿದಿದ್ದಾರೆ.

○ ಡಾ|| ಕೆ.ಎಸ್. ಭಗವಾನ್

ಹೆಮ್ಮೆಯ ಅಂಶ. ಆದರೆ ಇದಕ್ಕೆ ವಿರುದ್ಧವಾಗಿಯೇ ಇಲ್ಲಿ ಕಗ್ಗಲಿಮುಳ್ಳಿನಂತೆ ಬೆಳೆಯಿತು ಎಂಬುದು ಅಷ್ಟೇ ಖೇದಕರ ಸಂಗತಿ.

ದೇವರ ಬಗ್ಗೆ ಬುದ್ಧ ಏನೂ ಹೇಳಲಿಲ್ಲ ಎನ್ನುವುದು ಗೊತ್ತಿರುವ ವಿಚಾರ. ಮನುಷ್ಯ ಈ ಗ್ರಹದ ಮೇಲೆ ಉಗಮವಾಗಿ ಆಲೋಚನೆ ಆರಂಭಿಸಿದಾಗಿನಿಂದಲೂ ಅವನನ್ನು ಕಾಡುತ್ತಾ ಬಂದಿರುವ ವಿಷಯ ದೇವರು. ಈ ಬಗ್ಗೆ ಉಂಟು, ಇಲ್ಲ ಎಂಬ ಪರ ವಿರೋಧದ ವಾದ ವಿವಾದಗಳು ಜಗತ್ತಿನ ಉದ್ದಗಲಕ್ಕೂ ಹರಡಿಕೊಂಡಿವೆ. ಇದು ಏಷ್ಟೆಂದರೂ ವೈಯಕ್ತಿಕ ನೆಲೆಯ ನಂಬಿಕೆ ಅಪನಂಬಿಕೆಗಳ ಸಂಗತಿಯಾಗುತ್ತದೆ. ಇದು ವೈಜ್ಞಾನಿಕವಾದ ವಸ್ತುನಿಷ್ಠ ವಿಷಯ ಎನ್ನಿಸುವುದಿಲ್ಲ. ದೇವರು ಸಾರ್ವತ್ರಿಕ ಎಂದರೂ ಅವನು ಎಲ್ಲ ಕಡೆಯೂ ಎಲ್ಲ ಜನರಲ್ಲೂ ಒಂದೇ ರೀತಿ ಮತ್ತು ರೂಪದಲ್ಲಿ ಇಲ್ಲ. ಎಲ್ಲಾ ಕಡೆ ನೀರು ಒಂದೇ, ಬೆಂಕಿ ಒಂದೇ, ಸೂರ್ಯ ಒಂದೇ, ಚಂದ್ರ ಒಂದೇ; ಬೇರೆ ಬೇರೆ ಆದರೆ ಅವು ಅವುಗಳಾಗಿ ಇರುವುದಿಲ್ಲ. ಹೀಗಿರುವುದರಿಂದ ಬುದ್ಧ ಈ ಬಗ್ಗೆ ಏನೂ ಹೇಳಲೂ ಇಚ್ಛಿಸಲಿಲ್ಲ. "ನಮ್ಮ ಸುತ್ತಮುತ್ತ ಕಷ್ಟವಿದೆ; ಜನರು ನರಳುತ್ತಿದ್ದಾರೆ; ಅವರ ದುಃಖವನ್ನು ಶಮಗೊಳಿಸಲು ನಾನು ಪ್ರಯತ್ನಿಸುತ್ತಿದ್ದೇನೆ, ಎಂದು ಹೇಳಿದ ಬುದ್ಧನ ಮಾತು ಭಾರಿ ಅರ್ಥಗರ್ಭಿತವಾಗಿದೆ. ಬೇರೆ ಯಾರಾದರೂ ಆಗಿದ್ದರೆ ಕೇಳುಗನನ್ನು ತಬ್ಬಿಬ್ಬು ಮಾಡುವಂತೆ ಮಾತನಾಡಿ ತನ್ನ ಚಾಣಾಕ್ಷತೆಯನ್ನು ತೋರಿಸುತ್ತಿದ್ದ. ಆದರೆ ಬುದ್ಧ, ತನ್ನ ಮೇಲೆ ಜನರಿಗೆ ಅಪಾರ ಪ್ರೀತಿ ವಿಶ್ವಾಸ ಭಕ್ತಿ ಗೌರವಗಳಿದ್ದರೂ, ಅದನ್ನು ದುರುಪಯೋಗಪಡಿಸಿಕೊಳ್ಳದೆ ಅತ್ಯಂತ ಪ್ರಾಮಾಣಿಕವಾಗಿ ಮಾತಾಡಿದ್ದಾನೆನ್ನಬಹುದು. ಕಾಣದ ಶಕ್ತಿ ಅಥವಾ ವ್ಯಕ್ತಿಯ ಬಗ್ಗೆ ಮಾತನಾಡುವುದಕ್ಕಿಂತ ಸಹಮಾನವನ ಕಷ್ಟದಲ್ಲಿ ಭಾಗಿಯಾಗುವುದು ಹೆಚ್ಚು ಶ್ರೇಯಸ್ಕರ ಎಂಬುದನ್ನು ಬುದ್ಧ ಅತ್ಯಂತ ಮನನೀಯವಾಗಿ ಆಚರಣೀಯವಾಗಿ ಹೇಳಿದ್ದಾನೆಂದು ತಿಳಿಯಬೇಕಾಗಿದೆ. ಬೋಧಕ ಬಾಯಿಗಿಂತ ಸಹಾಯಕ ಹಸ್ತ ಹೆಚ್ಚು ಪವಿತ್ರವಾದುದು. ಪ್ರಪಂಚದ ಯಾವ ಸಂತ ಮಹಾಂತರಾಗಲೀ ದೇವರನ್ನು ಕಂಡಿಲ್ಲ ಎಂದು ಧೈರ್ಯವಾಗಿ ಹೇಳಬಹುದು. ಏಕೆಂದರೆ ಇದುವರೆಗಿನ ಇತಿಹಾಸದಲ್ಲಿ ದೇವರನ್ನು ಕುರಿತು ನಡೆದಿರುವುದೆಲ್ಲ ಕೇವಲ ಕಲ್ಪನೆ, ವೈಯಕ್ತಿಕ ನಂಬಿಕೆ ಆಗಿದೆ; ಅದಕ್ಕೆ ಯಾವುದೇ ಸಾರ್ವತ್ರಿಕ ಆಧಾರವಿಲ್ಲ. ಮನುಷ್ಯ ತಾನು ಮೊದಲಿಂದ ಕೇಳಿಕೊಂಡು ಭಾವಿಸಿಕೊಂಡು ಬಂದ ರೂಪವೇ ಅವನಿಗೆ ದೇವರಾಗಿ ಕಾಣುತ್ತದೆ ಅಷ್ಟೆ, ಪ್ರೇಮಿಗಳಿಗೆ ತೀವ್ರಾಕಾಂಕ್ಷೆಯಲ್ಲಿ ತಮ್ಮ ಪ್ರೀತಿಪಾತ್ರರೇ ಕಣ್ಣೆದುರು ಕಾಣುವಂತೆ. ಇದಕ್ಕಿಂತ ಭಿನ್ನ ಬಗೆಯ ವಿವರಣೆ ಮಾನಸಿಕ ವಸ್ತುಸ್ಥಿತಿಯಾಗಲಾರದು.

ದೇವರ ವಿಷಯದಲ್ಲಿ ರಷ್ಯದ ಮಹಾನ್ ನಾಯಕ ಮತ್ತು ವಿಶ್ವದ ಧೀಮಂತರಲ್ಲಿ ಒಬ್ಬನಾದ ಲೆನಿನ್ ಆಡುವ ನುಡಿಗಳು ದಾರಿದೀಪವಾಗಿವೆ. ಒಮ್ಮೆ ಅವನನ್ನು ನೋಡಲು ಒಬ್ಬ ಹಳ್ಳಿಯ ಮುದುಕ ಬಂದ. ಅವನು ಹೆಗಲ ಮೇಲೆ ಕಂಬಳಿ ಹಾಕಿಕೊಂಡು ಕೈಯಲ್ಲಿ ಊರುದೊಣ್ಣೆ ಹಿಡಿದಿದ್ದ.

ಆತ 1917ರ ಅಕ್ಟೋಬರ್ ಮಹಾಕ್ರಾಂತಿಯ ಕಾಲದಲ್ಲಿ ಲೆನಿನ್ ಜೊತೆ ಕ್ರಿಯಾಶೀಲನಾಗಿದ್ದ ಎಂದು ಪ್ರತೀತಿ. ಲೆನಿನ್‌ಗೆ ಹಳ್ಳಿಗರೆಂದರೆ ಅಪೂರ್ವ ಆತ್ಮೀಯತೆ, ಮಾತನಾಡುತ್ತಿದ್ದಾಗ ಆತ, "ನೋಡಪ್ಪ, ಲೆನಿನ್, ನಾವೇನೊ ದೇವರಿಲ್ಲ ಅಂತ ಹೇಳಿ ಜನರನ್ನು ನಂಬಿಸಿ ಕ್ರಾಂತಿಯನ್ನು ತಂದುಬಿಟ್ಟಿದ್ದೀವಿ. ಈಗ ನೀನು ನಾನು ಇಬ್ಬರೇ ಇದೀವಿ. ನಿಜ ಹೇಳು. ನಿನಗೇನು ಅನ್ನಿಸುತ್ತೆ? ದೇವರು ಇದ್ದಾನೋ ಇಲ್ಲವೋ?" ಎಂದು ಕೇಳಿದ. ತೀರಾ ಮನಮುಟ್ಟುವ ಸಂದರ್ಭ. ಬೇರೆ ಯಾರೇ ಆಗಿದ್ದರೂ ಬಹುಶಃ ಎಚ್ಚರ ತಪ್ಪುತ್ತಿದ್ದರು. ಆದರೆ ಲೆನಿನ್ ಸದಾ ಜಾಗೃತ ಚೇತನ. ಅವನು ಹೇಳಿದ ಮಾತು ಸರ್ವಮಾನ್ಯವಾಗಿದೆ: "ನೋಡಿ, ದೇವರ ವಿಷಯದಲ್ಲಿ ವಿಜ್ಞಾನ ಇವತ್ತಲ್ಲ ನಾಳೆ ಒಂದು ತೀರ್ಮಾನಕ್ಕೆ ಬಂದೇ ಬರುತ್ತದೆ. ಆಗ ವಿಜ್ಞಾನ ದೇವರಿದ್ದಾನೆ ಅಂದರೆ ಇದ್ದಾನೆ ಎನ್ನೋಣ; ಇಲ್ಲ ಎಂದರೆ ಇಲ್ಲ ಎನ್ನೋಣ. ಅಲ್ಲಿಯವರೆಗೆ ಈಗ ನಾವು ಏನು ಹೇಳುತ್ತಿದ್ದೇವೆಯೋ, ಅದು ಸರಿ ಅಂತ ಕೆಲಸ ಮಾಡೋಣ". ಈ ಮಾತುಗಳು ಯಾವುದೇ ವಿಷಯದ ಬಗ್ಗೆ ತೆರೆದ ಮನಸ್ಸಿನ ಅವಶ್ಯಕತೆಯನ್ನು ಸೂಚಿಸುತ್ತವೆ. ತೆರೆದ ಮನಸ್ಸು ನಿರಂತರ ಅನ್ವೇಷಣೆಗೆ ದಾರಿ.

ಬುದ್ಧ ಯಾವತ್ತೂ ಪ್ರಾಯೋಗಿಕ ಮನಸ್ಸಿನವನಾಗಿದ್ದನು. ಅದರಲ್ಲಿ ಯಾವ ಗೊಂದಲಗಳಿರಲಿಲ್ಲ, ಅಸ್ಪಷ್ಟತೆ ಇರಲಿಲ್ಲ. ಅದು ಅತ್ಯಂತ ತಿಳಿಯಾದ ಮನಸ್ಸು, ಬೆಳ್ಳಂಬೆಳಕಾಗಿದ್ದ ಮನಸ್ಸು. ಅನುಷ್ಠಾನವೇ ಅನ್ವೇಷಣೆ ಮತ್ತು ಅನುಭಾವ ಎಂದು ಬುದ್ಧ ಬಲ್ಲವನಾಗಿದ್ದನು.

ಒಮ್ಮೆ ಐದು ಜನ ಬ್ರಾಹ್ಮಣ ಯುವಕರು ಬುದ್ಧನ ಬಳಿ ಬಂದರು. ಅವನಿಂದ ಸತ್ಯಮಾರ್ಗವನ್ನು ಅರಿಯಲು ಅವರು ಅಪೇಕ್ಷಿಸಿದರು. ಅವರಲ್ಲಿ ಒಬ್ಬ, "ನಮ್ಮ ಜನರು ಇದನ್ನು ಹೇಳುತ್ತಾರೆ. ಇದೇ ಸರಿಯಾದ ಮಾರ್ಗ" ಎಂದನು. ಇನ್ನೊಬ್ಬ "ಇದನ್ನು ನನಗೆ ಹೇಳಿದ್ದಾರೆ. ಇದೇ ಸತ್ಯಕ್ಕೆ ದಾರಿ" ಎಂದು ಹೇಳಿದನು. "ಇದರಿಂದ ನಮಗೆ ಗೊಂದಲವಾಗಿದೆ. ಸರಿಯಾದ ದಾರಿ ಯಾವುದು, ಭಗವಾನ್" ಎಂದು ಅವರು ಕೇಳಿದರು. "ನೋಡಿ, ನಿಮ್ಮ ಜನ 'ಇದು ಸತ್ಯ, ಇದೇ ದೇವರಿಗೆ ದಾರಿ" ಎಂದು ನಿಮಗೆ ಹೇಳಿ ಕೊಟ್ಟಿದ್ದಾರೆ. ಅಲ್ಲವೆ?" ಎಂದು ಬುದ್ಧ ಹೇಳಿದನು.

"ಹೌದು", ಎಂದು ಅವರೆಲ್ಲರೂ ಉತ್ತರಿಸಿದರು.

"ಆದರೆ ನೀವು ದೇವರನ್ನು ನೋಡಿದ್ದೀರಾ?"

"ಇಲ್ಲ, ಭಗವಾನ್"

"ನಿಮ್ಮ ತಂದೆತಾಯಿಗಳು?"

"ಇಲ್ಲ, ಸ್ವಾಮಿ"

"ನಿಮ್ಮ ತಾತ ಮುತ್ತಾತಂದಿರು?"

"ಇಲ್ಲ, ಸ್ವಾಮಿ"

"ಅವರ್‍ಯಾರೂ ದೇವರನ್ನು ಕಾಣಲಿಲ್ಲವೆ?"

"ಇಲ್ಲ, ಸ್ವಾಮಿ"

"ಸರಿ, ನಿಮ್ಮ ಗುರುಗಳು ಆಚಾರ್ಯರು ಯಾರೂ ದೇವರನ್ನು ಕಾಣಲಿಲ್ಲವೆ?"

ಕಾಣದ ಶಕ್ತಿ ಅಥವಾ ವ್ಯಕ್ತಿಯ ಬಗ್ಗೆ ಮಾತನಾಡುವುದಕ್ಕಿಂತ ಸಹಮಾನವನ ಕಷ್ಟದಲ್ಲಿ ಭಾಗಿಯಾಗುವುದು ಹೆಚ್ಚು ಶ್ರೇಯಸ್ಕರ ಎಂಬುದನ್ನು ಬುದ್ಧ ಅತ್ಯಂತ ಮನನೀಯವಾಗಿ ಆಚರಣೀಯವಾಗಿ ಹೇಳಿದ್ದಾನೆಂದು ತಿಳಿಯಬೇಕಾಗಿದೆ. ಬೋಧಕ ಬಾಯಿಗಿಂತ ಸಹಾಯಕ ಹಸ್ತ ಹೆಚ್ಚು ಪವಿತ್ರವಾದುದು. ಪ್ರಪಂಚದ ಯಾವ ಸಂತ ಮಹಾಂತರಾಗಲೀ ದೇವರನ್ನು ಕಂಡಿಲ್ಲ ಎಂದು ಧೈರ್ಯವಾಗಿ ಹೇಳಬಹುದು. ಏಕೆಂದರೆ ಇದುವರೆಗಿನ ಇತಿಹಾಸದಲ್ಲಿ ದೇವರನ್ನು ಕುರಿತು ನಡೆದಿರುವುದೆಲ್ಲ ಕೇವಲ ಕಲ್ಪನೆ, ವೈಯಕ್ತಿಕ ನಂಬಿಕೆ ಆಗಿದೆ; ಅದಕ್ಕೆ ಯಾವುದೇ ಸಾರ್ವತ್ರಿಕ ಆಧಾರವಿಲ್ಲ.

"ಯಾರೂ ಇಲ್ಲ, ಸ್ವಾಮಿ"

ಈ ಪ್ರಶ್ನೆಗಳನ್ನು ಬುದ್ಧ ಐವರು ಯುವಕರಿಗೂ ಕೇಳಿದನು. ಅವರೆಲ್ಲರೂ ತಾವು ದೇವರನ್ನು ನೋಡಿಲ್ಲ ಎಂದು ಘೋಷಿಸಿದರು. ಆಮೇಲೆ ಬುದ್ಧ ಹೀಗೆ ಹೇಳಿದ :

"ಒಂದು ಹಳ್ಳಿಗೆ ಒಬ್ಬ ಹುಡುಗ ಬಂದ. ಅವನು ಒಂದೇ ಸಮನೆ ಅಳುತ್ತಿದ್ದ. 'ಓ! ನಾನು ಅವಳನ್ನು ತುಂಬ ಪ್ರೀತಿಸುತ್ತಿದ್ದೇನೆ, ಅವಳನ್ನು ತುಂಬ ಪ್ರೀತಿಸುತ್ತಿದ್ದೇನೆ. ಎಂದು ಒರಲುತ್ತಿದ್ದ. ಆಗ ಹಳ್ಳಿಯವರೆಲ್ಲ ಬಂದು 'ಅವಳು ಯಾರು? ಎಲ್ಲಿದ್ದಾಳೆ? ಹೇಗಿದ್ದಾಳೆ?' ಎಂದು ಪ್ರಶ್ನಿಸಿದರು. 'ಓ! ಓ! ನನಗೆ ಗೊತ್ತಿಲ್ಲ. ಆದರೆ ಅವಳನ್ನು ನಾನು ತುಂಬ ಪ್ರೀತಿಸುತ್ತಿದ್ದೇನೆ' ಎಂದು ಹುಡುಗ ಬಿಕ್ಕಿಬಿಕ್ಕಿ ಅಳತೊಡಗಿದನು. ಈ ಹುಡುಗನನ್ನು ನೀವು ಏನೆಂದು ಕರೆಯುತ್ತೀರಿ?" ಎಂದು ಬುದ್ಧ ಆ ಯುವಕರನ್ನು ಕೇಳಿದನು.

"ಓ! ಬಿಡಿ, ಸ್ವಾಮಿ, ಅವನೊಬ್ಬ ಹುಚ್ಚ! ಅವನೊಬ್ಬ ಮೂರ್ಖ!" ಎಂದು ಆ ತರುಣರೆಲ್ಲ ಖಚಿತಪಡಿಸಿದರು.

"ನೀವೂ ಅವನ ಹಾಗೇ ಅಲ್ಲವೆ? ನಿಮ್ಮ ತಂದೆ ತಾತ ಮುತ್ತಾತ ಆಚಾರ್ಯ ಯಾರೂ ಕಾಣದ ದೇವರ ಬಗ್ಗೆ ನೀವು ವಾದಿಸುತ್ತಿದ್ದೀರಿ. ನೀವೂ, ನಿಮ್ಮ ಪೂರ್ವಿಕರು ಯಾರೂ ನೋಡದ ಇರುವುದರ ಬಗ್ಗೆ ನೀವು ಜಗಳವಾಡುತ್ತಿದ್ದೀರಿ. ಒಬ್ಬರೊಬ್ಬರ ಕುತ್ತಿಗೆಯನ್ನು ಕತ್ತರಿಸುವ ಮಟ್ಟಕ್ಕೆ ನೀವು ಇಳಿದಿದ್ದೀರಲ್ಲ". ಬುದ್ಧ ಮರುಕ ಪಟ್ಟ.

"ಹಾಗಾದರೆ ನಾವು ಏನು ಮಾಡಬೇಕು ಹೇಳಿ, ಭಗವಾನ್" ಯುವಕರು ಏಕ ಕಂಠದಿಂದ ಬುದ್ಧ ದೇವನನ್ನು ಒತ್ತಾಯಿಸಿದರು.

"ಈಗ ಹೇಳಿ, ನಿಮ್ಮ ತಂದೆ ತಾತಂದಿರು ಎಂದಾದರೂ ದೇವರು ಕೋಪಿಷ್ಟ ಎಂದು ನಿಮಗೆ ತಿಳಿಸಿದ್ದಾರೆಯೆ?"

"ಇಲ್ಲ, ಗುರುವೆ",

"ದೇವರು ದುಷ್ಟ ಎಂದು ಅವರು ನಿಮಗೆಂದಾದರೂ ಹೇಳಿದ್ದಾರೆಯೆ? ನಿಮ್ಮ ಧರ್ಮಗ್ರಂಥಗಳು ಹಾಗೆ ಬೋಧಿಸುತ್ತವೆಯೆ?"

"ಇಲ್ಲ, ಸ್ವಾಮಿ, ದೇವರು ಯಾವಾಗಲೂ ಪರಿಶುದ್ಧ, ಪರಮ ಪವಿತ್ರ"

"ಹಾಗಾದರೆ ನೀವು ಪರಿಶುದ್ಧರೂ ಒಳ್ಳೆಯವರೂ ಆದರೆ ನೀವು ಆ ದೇವರ ಸನಿಹಕ್ಕೆ ಬರಲು ಸಾಧ್ಯವಾಗುತ್ತದೆ. ಹೀಗೆಲ್ಲ ವಾದಿಸುವುದರಿಂದ ಅದು ಸಾಧ್ಯವಾಗುವುದಿಲ್ಲ. ಆದ್ದರಿಂದ ಪರಿಶುದ್ಧರಾಗಿ, ಒಳ್ಳೆಯವರಾಗಿ, ಎಲ್ಲರನ್ನೂ ಪ್ರೀತಿಸಿ", ಎಂದು ಆತ್ಮೀಯತೆಯಿಂದ ಬುದ್ಧ ಆದೇಶಿಸಿದ. ದೇವರಿಲ್ಲ ಎಂದು ನಕಾರಾತ್ಮಕವಾಗಿ ಹೇಳಿ, ಮನುಷ್ಯನನ್ನೇ ದೇವರನ್ನಾಗಿ ಬೆಳೆಸುವ ಸಕಾರಾತ್ಮಕ ಪ್ರಕ್ರಿಯೆ ಬುದ್ಧದೇವನದಾಗಿತ್ತು. ಅದು ಅವನಿಗೆ ಸ್ವಾನುಭವದಿಂದ ಸಿದ್ಧಿಸಿತ್ತು. ಇದು ಬುದ್ಧನ ಜೀವನ ಮತ್ತು ಉಪದೇಶಗಳ ಸಾರ ಎನ್ನಬಹುದು. ದೇವರೆಂಬುವ ವ್ಯಕ್ತಿ ಅಥವಾ ವಸ್ತು ಇಲ್ಲ. ಪಾವಿತ್ರ್ಯವೇ ದೇವರು. ಪರಿಶುದ್ಧತೆಯೇ ದೇವರು ಎಂದು ಈ ಸಂವಾದ ಸೂಚಿಸುತ್ತದೆ. ಹಾಗೂ ಕಾಣದ ದೇವರ ಬಗ್ಗೆ ನೂರಾರು ಬಗೆಯಲ್ಲಿ ಜಗಳ ಮಾಡುವ ಮೂರ್ಖತನವನ್ನೂ ಇದು ಗೇಲಿ ಮಾಡುತ್ತದೆ.

ಇಷ್ಟಾದರೂ ಬುದ್ಧನಿಗೆ ಸ್ವಂತ ಉದ್ದೇಶ ಯಾವುದೂ ಇರಲಿಲ್ಲ. ಎಲ್ಲವೂ ಲೋಕಕಾರುಣ್ಯ ಮತ್ತು ಲೋಕಹಿತಕ್ಕಾಗಿ ಪ್ರೇರೇಪಿತವಾಗಿತ್ತು. ಒಮ್ಮೆ ರಾಜನ ಯಾಗಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದ ಕುರಿಮಂದೆಯನ್ನು ನೋಡಿದಾಗ, "ಕುರಿಯನ್ನು ಬಲಿಕೊಡುವುದರಿಂದ ನೀವು ಸ್ವರ್ಗಕ್ಕೆ ಹೋಗಲು ಸಾಧ್ಯವಾಗುವುದಾದರೆ, ಮನುಷ್ಯನನ್ನು ಬಲಿಕೊಡುವುದು ಇನ್ನೂ ಉತ್ತಮ. ನನ್ನನ್ನೇ ಯಜ್ಞಕ್ಕೆ ಅರ್ಪಿಸಿ", ಎಂದು ಬುದ್ಧ ಮುಂದಾದನು. ರಾಜ ಆಶ್ಚರ್ಯಚಕಿತನಾದ. ಹೀಗೆ ಪಶು ಪಕ್ಷಿಗಳ ಮೇಲೆಲ್ಲ ಬುದ್ಧನಿಗೆ ಅಪಾರ ಮೈತ್ರಿಯಿತ್ತು. ಸಮಾನ ಪ್ರೀತಿಯಿತ್ತು. ಎಲ್ಲಿಯೂ ತಾರತಮ್ಯವಿರಲಿಲ್ಲ. ಜಗತ್ತು ಕಂಡ ಸಮಾನತಾ ತತ್ವಬೋಧಕರಲ್ಲಿ ಬುದ್ಧ ಮೊಟ್ಟ ಮೊದಲಿಗ. ಮಹೋನ್ನತ ದಾರ್ಶನಿಕ.

ಬುದ್ಧ ಬದುಕಿ ಉಪದೇಶ ನೀಡುತ್ತಿದ್ದ ವೇಳೆಗಾಗಲೇ ಸಂಸ್ಕೃತದ ಬಳಕೆ ತಪ್ಪಿಹೋಗಿತ್ತು. ಅವನ ಕೆಲವು ಬ್ರಾಹ್ಮಣ ಶಿಷ್ಯರು ಅವನ ಬೋಧನೆಯನ್ನು ಸಂಸ್ಕೃತ ಭಾಷೆಗೆ ತರ್ಜುಮೆ ಮಾಡಲು ಅವನ ಅನುಮತಿಯನ್ನು ಕೋರಿದರು. ಅದಕ್ಕೆ ಬುದ್ಧ, "ಬೇಡಿ, ನಾನು ಬಡವರಿಗಾಗಿ ಇದ್ದೇನೆ. ಸಾಮಾನ್ಯ ಜನತೆಗಾಗಿ ಇದ್ದೇನೆ. ಜನಸಾಮಾನ್ಯರ ಭಾಷೆಯಲ್ಲೇ ನಾನು ಮಾತನಾಡುತ್ತೇನೆ", ಎಂದು ಸ್ಪಷ್ಟವಾಗಿ ಹೇಳಿದ. ಆದ್ದರಿಂದ ಇವತ್ತಿಗೂ ಅವನ ಬೋಧನೆಯ ಭಾಗ ಒಟ್ಟು 'ತ್ರಿಪಿಟಕ'ಗಳಲ್ಲಿ ಜನಭಾಷೆಯಾದ ಪಾಳಿಯಲ್ಲೇ ಇದೆ.

ಸಾರ್ವತ್ರಿಕವಾಗಿ ಮೆಚ್ಚುಗೆಗೆ ಯೋಗ್ಯವಾಗುವಂಥ ಗುಣಗಳೇ ಬುದ್ಧನ ಬದುಕಿನುದ್ದಕ್ಕೂ ಹರಡಿಕೊಂಡಿವೆ.

ಅವನು ರಾತ್ರೋರಾತ್ರಿ ಎಲ್ಲರನ್ನೂ ತೊರೆದು ಓಡಿ ಹೋದನೆಂದು-ಅದು ದೋಷ ಎನ್ನುವುದಾದರೆ-ಆಕ್ಷೇಪಿಸಬಹುದು. ಉಳಿದಂತೆ ಅವನು ಪ್ರಪಂಚದ ಎಲ್ಲಾ ಮಹಾಪುರುಷರಿಗೂ ಮಾದರಿಯಾಗಿ ಇದ್ದಾನೆನ್ನಿಸುತ್ತದೆ. ರಾಮ, ಕೃಷ್ಣ, ಕ್ರಿಸ್ತ, ಮಹಮ್ಮದ್ (ಕ್ರಿ.ಶ. 570-632) ಮುಂತಾದವರೆಲ್ಲ ಬುದ್ಧನ ನಂತರ ಬಂದಿದ್ದರೂ ಬುದ್ಧನನ್ನು ಮೀರಿಸುವಂಥ ಗುಣಗಳು ಅವರಲ್ಲಿ ಕಾಣುವುದಿಲ್ಲ ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ಅವತಾರಿ ಎನ್ನಲಾದ ಶ್ರೀರಾಮ ಮರೆಯಲ್ಲಿ ನಿಂತು (ಅದಕ್ಕೆ ಏನೇ ಸಬೂಬು ಇರಲಿ) ವಾಲಿಯನ್ನು ಕೊಲ್ಲುವುದು ಅವನಿಗೆ ತಕ್ಕುದಾಗಿರಲಿಲ್ಲ. ಆಮೇಲೆ ಸೀತೆಯನ್ನು ಭೂದೇವಿ ತನ್ನ ಗರ್ಭದೊಳಕ್ಕೆ ಸೆಳೆದುಕೊಂಡಾಗ ಅವನು ಬಾಳಿನ ಕೊನೆಯಲ್ಲಿ ಹತಾಶನಾಗಿ ಸರಯೂ ನದಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಮತ್ತೊಬ್ಬ ಅವತಾರಿ ಶ್ರೀಕೃಷ್ಣ ತನ್ನ ಜನರಾದ ಯಾದವರು ತಮ್ಮ ತಮ್ಮಲ್ಲೇ ಕಚ್ಚಾಡಿ ಹೊಡೆದಾಡಿ ನಾಶವಾದುದನ್ನು ಕಂಡು, ಬೇಸರ ಜಿಗುಪ್ಸೆಗಳಿಂದ ಪ್ರತಿಹತನಾಗಿ ಕಾಡಿಗೆ ಹೋಗುತ್ತಾನೆ. ಅಲ್ಲಿ ಮರದ ಕೆಳಗೆ ಮಲಗಿದ್ದಾಗ ಬೇಡನೊಬ್ಬ ಅವನನ್ನು ಮೃಗವೆಂದು ತಪ್ಪಾಗಿ ತಿಳಿದು ಬಾಣ ಹೊಡೆದು ಕೊಲ್ಲುತ್ತಾನೆ. "ನಾನು ಮತ್ತು ನನ್ನ ತಂದೆ ಬಂದು" ಎಂದು ಏಸುಕ್ರಿಸ್ತ ಹೇಳುವಲ್ಲಿ ತಾನೆ ದೇವರು ಎಂಬ ಇಂಗಿತವಿದೆ. ಆತ ತನ್ನ ಬದುಕಿನ ಅಂತ್ಯದಲ್ಲಿ ವಿಫಲತೆಯನ್ನು ಅನುಭವಿಸಿದಂತೆ ಕಾಣುತ್ತದೆ. ಅವನನ್ನು ಶಿಲುಬೆಗೆ ಏರಿಸಿ ಮೊಳೆ ಬಡಿದು ನೇಣು ಹಾಕಿದಾಗ ಅತ್ಯಂತ ಆರ್ತನಾಗಿ "ಓ ತಂದೆಯೇ, ನನ್ನನ್ನೇಕೆ ಕೈಬಿಟ್ಟೆ?" ಎಂದು ಮೊರೆಯಿಡುತ್ತಾನೆ. ಮತ್ತೆ ಕೂಡಲೇ ಆತ "ಅವರನ್ನು ಕ್ಷಮಿಸು; ಅವರು ಏನು ಮಾಡುತ್ತಿದ್ದಾರೆಂದು ಅವರಿಗೆ ಗೊತ್ತಿಲ್ಲ" ಎಂದು ಆಡಿದನೆಂಬ ಮಾತಿನಲ್ಲಿ ದೊಡ್ಡತನ ಇರುವುದರ ಜೊತೆಗೆ ಅಹಂಕಾರವೂ ಇದೆ ಎನಿಸುತ್ತದೆ-ನನಗೆ ಗೊತ್ತು, ಅವರಿಗೆ ಗೊತ್ತಿಲ್ಲ ಎಂದು ಸೂಚಿತವಾಗುವುದರಿಂದ. ಮಹಮ್ಮದನ ಕೊನೆಗಾಲ ಸಹ ದುಃಖಮಯವಾಗಿದೆ. ಪ್ರಪಂಚದ ಎಲ್ಲಾ ಮಹಾಪುರುಷರೂ ತಾವು ದೇವರ ಅವತಾರ ಅಥವಾ ಅಂಶವೇ ಆಗಿದ್ದೇವೆ ಎಂಬ ನಂಬಿಕೆಯುಳ್ಳವರಾಗಿದ್ದಾರೆ. ಶ್ರೀರಾಮ ಮತ್ತು ಶ್ರೀಕೃಷ್ಣ ದೇವರೆಂದೇ ಪೂಜೆಗೊಳ್ಳುತ್ತಿದ್ದಾರೆ. ಶ್ರೀಕೃಷ್ಣ "ಎಲ್ಲವನ್ನೂ ಬಿಟ್ಟು ನನ್ನಲ್ಲಿ ಶರಣು ಹೋಗು. ನಿನ್ನನ್ನು ಎಲ್ಲ ಪಾಪಗಳಿಂದಲೂ ನಾನು ಬಿಡುಗಡೆ ಮಾಡುತ್ತೇನೆ ಶೋಕಿಸಬೇಡ-ಸರ್ವ ಧರ್ಮಾನ್ ಪರಿತ್ಯಜ್ಯ ಮಾಂ ಏಕಂ ಶರಣಂ ವ್ರಜ, ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ " ಎಂದು ಭಗವದ್ಗೀತೆಯಲ್ಲಿ (18.66) ಘೋಷಿಸಿದ್ದಾನೆ. ಇಸ್ಲಾಮಿನ ಸಂಸ್ಥಾಪಕನಾದ ಪ್ರವಾದಿ ಮಹಮ್ಮದ್, "ದಾರಿ ತೋರಲು ದೇವರು ಪ್ರಪಂಚಕ್ಕೆ ಆಗಾಗ್ಗೆ ಪ್ರವಾದಿಗಳನ್ನು ಕಳುಹಿಸುತ್ತಾನೆ. ಅವರಲ್ಲಿ ನಾನೇ ಕೊನೆಯ ಪ್ರವಾದಿ" ಎಂದು ಪವಿತ್ರ ಕುರಾನ್‌ನಲ್ಲಿ ಹೇಳುತ್ತಾನೆ. ಅಂದರೆ 'ನನ್ನ ಮಾತೇ ಕೊನೆ' ಎಂದು ಆದೇಶಿಸುವುದರ ಅಪರಿಪೂರ್ಣತೆ ಮತ್ತು ಅಹಂಕಾರದ ಲಕ್ಷಣವಾಗುತ್ತದೆ. ಆದರೆ ಬುದ್ಧ

ಪ್ರಪಂಚದ ಮಹಾಪುರುಷರು ಮತ್ತು ಧರ್ಮ ಸಂಸ್ಥಾಪಕರನ್ನು ನೋಡಿದರೆ ಅವರೆಲ್ಲ ತಮ್ಮ ಕೊನೆಗಾಲದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಹತಾಶರಾಗಿರುವುದು ಮತ್ತು ಶೋಕಭರಿತರಾಗಿರುವುದು ಕಂಡು ಬರುತ್ತದೆ. ಆದರೆ ಬುದ್ಧನ ಅವಸಾನ ಅತ್ಯಂತ ಆನಂದಕರವಾಗಿದೆ. ಚುಂದನೆಂಬ 'ಅಸ್ಪೃಶ್ಯ' ಅವನನ್ನು ತನ್ನ ಮನೆಗೆ ಕರೆದು ಹಂದಿ ಮಾಂಸವನ್ನು ಬಡಿಸಿದಾಗ ಬುದ್ಧ ಸಂತೋಷದಿಂದ ಊಟ ಮಾಡಿದ. ಆದರೆ ಮುಪ್ಪಿನಿಂದಾಗಿ ಅದನ್ನು ಜೀರ್ಣಿಸಿಕೊಳ್ಳಲು ಆಗದೆ ಆಮಶಂಕೆಗೆ ಗುರಿಯಾದ. ಸ್ವಲ್ಪ ಚೇತರಿಸಿಕೊಂಡರೂ ಅವನ ಆರೋಗ್ಯ ಕೆಟ್ಟಿತು. ಕೊನೆಯ ಗಳಿಗೆಯಲ್ಲಿ ಚುಂದ ಹೋಗಿ ಅಳುತ್ತಾ ನಿಂತಿದ್ದಾಗ ಬುದ್ಧ ಅವನನ್ನು ತನ್ನ ಬಳಿಗೆ ಕರೆದು ಮೈದಡವಿ "ಅಳಬೇಡ, ತಥಾಗತನಿಗೆ ಕೊನೆಯ ಊಟ ನೀಡಿದ ಪುಣ್ಯಾತ್ಮ ನೀನು" ಎಂದು ಸಾಂತ್ವನದ ನುಡಿಗಳನ್ನು ಆಡಿದ.

ದೇವತ್ವದ ಈ ಯಾವುದನ್ನೂ ಆರೋಪಿಸಿಕೊಳ್ಳದಿರುವುದು ಅವನ ವೈಶಿಷ್ಟ್ಯ. ಬುದ್ಧ ಮನುಷ್ಯನಾಗಿ ಹುಟ್ಟಿ 'ದೇವತ್ವ' ಸಂಪಾದಿಸಿ 'ದೇವರೇ ಆದರೂ ಅದನ್ನು ಕಡೆಗಣಿಸಿ ಮನುಷ್ಯನಂತೆ ನಡೆದುಕೊಂಡ ಏಕೆ ಮಾನವ. ನಾನೂ ನಿಮ್ಮ ಹಾಗೆ ಹುಟ್ಟಿದ ಮನುಷ್ಯ. ಈ ದಾರಿಯಲ್ಲಿ ನಾನು ನಡೆದು ಈ ಸತ್ಯಗಳನ್ನು ಕಂಡುಕೊಂಡಿದ್ದೇನೆ. ನೀವೂ ಈ ದಾರಿಯಲ್ಲಿ ಹೋಗಿ ನೋಡಿ. ಇವು ಸತ್ಯವೆಂದು ಗೊತ್ತಾದರೆ ಇವುಗಳನ್ನು ಒಪ್ಪಿಕೊಳ್ಳಿ; ಇಲ್ಲದಿದ್ದರೆ ತಿರಸ್ಕರಿಸಿ" ಎಂದು ಕರೆಕೊಟ್ಟಿರುವುದು ಅವನ ಜಿಜ್ಞಾಸೆಯ ಮನೋಭಾವವನ್ನು ತೋರಿಸುತ್ತದೆ. ಜಿಜ್ಞಾಸೆಯೆ ಜ್ಞಾನದ ಮೂಲ ಶೂಲ. ನಾನು ಹೇಳಿದ್ದೇ ಕೊನೆಯ ಮಾತು ಎಂಬ ಧೋರಣೆಯನ್ನು ಬುದ್ಧ ಎಂದೂ ತಾಳಲಿಲ್ಲ. ಆದ್ದರಿಂದ ಬುದ್ಧ ಧಮ್ಮ ಮೂಲಭೂತವಾದವಾಗಲು ಮತ್ತು ಅದರ ಅನುಯಾಯಿಗಳು ಮೂಲಭೂತವಾದಿಗಳಾಗಲು ಸಾಧ್ಯವಿಲ್ಲ, ಏಕೆಂದರೆ ಸಂಪೂರ್ಣ ಸ್ವತಂತ್ರ ಮನಸ್ಸು ಸಂಕುಚಿತವಾದಕ್ಕೆ ಸಿಡಿಲಿನ ಸಿಡಿಮದ್ದು'.

ಪ್ರಪಂಚದ ಮಹಾಪುರುಷರು ಮತ್ತು ಧರ್ಮ ಸಂಸ್ಥಾಪಕರನ್ನು ನೋಡಿದರೆ ಅವರೆಲ್ಲ ತಮ್ಮ ಕೊನೆಗಾಲದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಹತಾಶರಾಗಿರುವುದು ಮತ್ತು ಶೋಕಭರಿತರಾಗಿರುವುದು ಕಂಡು ಬರುತ್ತದೆ. ಆದರೆ ಬುದ್ಧನ ಅವಸಾನ ಅತ್ಯಂತ ಆನಂದಕರವಾಗಿದೆ. ಚುಂದನೆಂಬ 'ಅಸ್ಪೃಶ್ಯ' ಅವನನ್ನು ತನ್ನ ಮನೆಗೆ ಕರೆದು ಹಂದಿ ಮಾಂಸವನ್ನು ಬಡಿಸಿದಾಗ ಬುದ್ಧ ಸಂತೋಷದಿಂದ ಊಟ ಮಾಡಿದ. ಆದರೆ ಮುಪ್ಪಿನಿಂದಾಗಿ ಅದನ್ನು ಜೀರ್ಣಿಸಿಕೊಳ್ಳಲು ಆಗದೆ ಆಮಶಂಕೆಗೆ ಗುರಿಯಾದ. ಸ್ವಲ್ಪ ಚೇತರಿಸಿಕೊಂಡರೂ ಅವನ ಆರೋಗ್ಯ ಕೆಟ್ಟಿತು. ಕೊನೆಯ ಗಳಿಗೆಯಲ್ಲಿ ಚುಂದ ಹೋಗಿ ಅಳುತ್ತಾ ನಿಂತಿದ್ದಾಗ ಬುದ್ಧ ಅವನನ್ನು ತನ್ನ ಬಳಿಗೆ ಕರೆದು ಮೈದಡವಿ "ಅಳಬೇಡ, ತಥಾಗತನಿಗೆ ಕೊನೆಯ ಊಟ ನೀಡಿದ ಪುಣ್ಯಾತ್ಮ ನೀನು" ಎಂದು ಸಾಂತ್ವನದ ನುಡಿಗಳನ್ನು ಆಡಿದ. ತನ್ನ ಜೀವನದ ಉದ್ದಕ್ಕೂ ಸಮಾನತೆಯನ್ನು ಬೋಧಿಸಿ ಚಲಿಸುತ್ತಿದ್ದ ಬುದ್ಧ ತನ್ನ ಅಂತ್ಯದಲ್ಲಿ ಅದನ್ನು ಅತಿಶಯವಾಗಿ ಅನುಷ್ಠಾನ ಮಾಡಿದ್ದಾನೆ. ಆಗಿನ ಧರ್ಮ ಮತ್ತು ಸಮಾಜದಲ್ಲಿ ಪಾಪಿಗಳು 'ಕೆಳ' ಜಾತಿಯಲ್ಲಿ ಹುಟ್ಟುತ್ತಾರೆಂಬ ಭಾವನೆ ಮತ್ತು ಸಿದ್ಧಾಂತ ಪಾಚಿಗಟ್ಟಿತ್ತು. ಅದನ್ನು ಬುದ್ಧ ಕೇವಲ ಸಾಧಾರಣವಾಗಿ ತೋರುವ ಒಂದು ಮಾತಿನಿಂದ-"ನೀನು ಪುಣ್ಯಾತ್ಮ"-ಎನ್ನುವುದರಿಂದ ತೊಡೆದು ಹಾಕಿದ್ದಾನೆ. ಅವನ ಕಾಲದ ಇತಿಹಾಸ ಮತ್ತು ಜನರ ಮನೋಭಾವನೆಯನ್ನು ಗಮನಿಸಿದರೆ ಬುದ್ಧನ ಮಾತು ತೀರಾ ಕ್ರಾಂತಿಕಾರಕವಾಗಿದೆ. ಬುದ್ಧನ ಬದುಕೆಲ್ಲ ಕ್ರಾಂತಿ ಮಾಡುತ್ತೇನೆಂದು ಹೇಳಿಕೊಳ್ಳದೆ ಅಭೂತಪೂರ್ವ ಕ್ರಾಂತಿ ಮಾಡಿದ ಸಾಮಾನ್ಯ ಚಳುವಳಿಯಾಗಿದೆ; ಘರ್ಷಣೆ ಇಲ್ಲದೆ ನಯವಾಗಿ ಅರಿವಳಿಕೆ ನೀಡಿ ಮಾಡಿದ ಅಪರೂಪದ ಶಸ್ತ್ರಚಿಕಿತ್ಸೆಯಾಗಿದೆ. ಆಗಿನ ರಾಜಕೀಯ ವ್ಯವಸ್ಥೆ ಮತ್ತು ಆಡಳಿತದ ಪದ್ಧತಿಯ ಬಗ್ಗೆ ಬುದ್ಧನಿಗೆ ಯಾವ ವಿರೋಧವೂ ಇದ್ದಂತೆ ಕಾಣುವುದಿಲ್ಲ. ಅದನ್ನು ಅವನು ಬಹುವಾಗಿ ಒಪ್ಪಿಕೊಂಡಿರುವಂತೆ ತೋರುತ್ತದೆ. ಅಲ್ಲದಿದ್ದರೆ ಅಂದಿನ ರಾಜ ಮಹಾರಾಜರುಗಳು ಅವನ ಬರುವಿಕೆಗೆ ಹಾತೊರೆದು ಅವನಿಗೆ ನಡೆಮುಡಿ ಹಾಸುತ್ತಿರಲಿಲ್ಲ. ಬುದ್ಧನದೆಲ್ಲ ಬುದ್ಧಿಯ ಬದಲಾವಣೇ. ಭಾವದಲ್ಲಿ ಬದಲಾವಣೆ ಆದಾಗ ಮಾತ್ರ ಭವದಲ್ಲಿ ಬದಲಾವಣೆ ಸಾಧ್ಯ. ಆದ್ದರಿಂದ ಬುದ್ಧಿ ಬದಲಾದರೆ ಎಲ್ಲವೂ ಬದಲಾಗುತ್ತದೆಂದು ಅವನು ಸ್ವಾನುಭವದಿಂದ ಕಂಡುಕೊಂಡಿದ್ದನು. ಇಹವನ್ನು ಮೇಲು ಕೀಳಿಲ್ಲದೆ ಎಲ್ಲರೂ ಸುಖವಾಗಿ ಬಾಳುವ ನಡೆಸುವ ನೆಲೆಯನ್ನಾಗಿ ಮಾಡುವ ತವಕ ಅವನದಾಗಿತ್ತು. ಅದನ್ನು ಅವನು ತನ್ನ ಸಂಘ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಕೈಗೂಡಿಸಿಕೊಂಡು ಕೃತಾರ್ಥನಾಗಿದ್ದನು.

ಬುದ್ಧ ಧಮ್ಮದಲ್ಲಿ ಮೂರು ಮುಖ್ಯ ಅಂಶಗಳಿವೆ; ಬುದ್ಧ, ಧಮ್ಮ ಮತ್ತು ಸಂಘ ("ಬುದ್ಧಂ...ಧಮ್ಮಂ....ಸಂಘಂ....ಶರಣಂ ಗಚ್ಛಾಮಿ") "ಶರಣಂ" ಎಂಬುದಕ್ಕೆ ಅರ್ಪಿಸಿಕೊಳ್ಳುವುದು, ಅಡಿಯಾಳಾಗುವುದು, ಅಧೀನನಾಗುವುದು ಎಂದು ಸಾಧಾರಣವಾಗಿ ಅರ್ಥಮಾಡಿಕೊಂಡರೆ ಬುದ್ಧನಿಗೆ ದೊಡ್ಡ ಅಪಚಾರ ಎಸಗಿದಂತಾಗುತ್ತದೆ. ಬುದ್ಧ ಎಂದರೆ ಒಂದು ವ್ಯಕ್ತಿಯಲ್ಲ. ಅದು ಜ್ಞಾನದ ತುತ್ತ ತುದಿ: ಸಂಕೇತ. ಬುದ್ಧ ಮತ್ತು ಆತನ ಧಮ್ಮವನ್ನು ನಿಖರವಾಗಿ ಅರ್ಥ ಮಾಡಿಕೊಂಡರೆ, ಆ ದಾರಿಯಲ್ಲಿ ನಡೆದರೆ ಅದೇ ಸರಿ ಎಂದು ಅನುಭವವಾಗಿ ಅದನ್ನು ಒಪ್ಪಿಕೊಳ್ಳುವುದು ಎಂದು ಅರ್ಥ. ಅರ್ಥವಾಗದೆ ಅನುಭಾವವಾಗದೆ ಅಂಗೀಕರಿಸುವುದು ಮೌಢ್ಯವಾಗುತ್ತದೆ. ಹಾಗೆ ಮಾಡಿದರೆ ಬುದ್ಧ ಧಮ್ಮಕ್ಕೆ ಭಾರಿ ಹಾನಿಮಾಡಿದಂತೆಯೆ ಹೌದು. ಸರಿಯಾದುದನ್ನು ಅರಿತವನು ಬುದ್ಧ. ಅದನ್ನು ಆತ ಬದುಕಿ ತೋರಿಸಿದುದರಿಂದ ಅದು ಧಮ್ಮವಾಯಿತು. ಅದನ್ನು ಹರಡುವುದಕ್ಕಾಗಿ ಆತ ಕಟ್ಟಿದ ವ್ಯವಸ್ಥೆಯೆ ಸಂಘ. ಬುದ್ಧ ಧಮ್ಮ ಮನೋವಾಕ್ಕಾಯಗಳ ತ್ರಿಕರಣ/ಪೂರ್ವಕ ಸಾಧನೆಯ ಸಮೀಕರಣ; ಸಾಕ್ಷಾತ್ಕಾರ.

ಬುದ್ಧ ತನ್ನ ನಲವತ್ತು ಜನ ಶಿಷ್ಯರನ್ನು ಆರಿಸಿ, ಅವರನ್ನು ಪ್ರಪಂಚದೆಲ್ಲೆಡೆ ಕಳುಹಿಸುವಾಗ ಹೇಳಿದ ಮಾತು ದೊಡ್ಡದು; "ನೀವು ಹೋಗಿ ಎಲ್ಲ ಜನಾಂಗಗಳು ಮತ್ತು ಎಲ್ಲ ರಾಷ್ಟ್ರಗಳ ಜೊತೆ ಬೆರೆಯಿರಿ". ಕಾಲ ದೇಶ ಜಾತಿ ಮತ ಎಲ್ಲವನ್ನೂ ಮೀರಿ ಬುದ್ಧ ಧಮ್ಮ ಪ್ರಪಂಚದ ಹೃದಯವನ್ನು ಹೊಕ್ಕಿತು.

ಬುದ್ಧನ ಸ್ಮರಣೀಯ ಮಾತುಗಳು ಇವು: "ಪ್ರಾಚೀನ ಗ್ರಂಥವನ್ನು ತೋರಿಸಿ, ಇದು ಪ್ರಮಾಣವೆಂದು ಹೇಳಿದರೆ ನಂಬಬೇಡಿ. ಎಲ್ಲವನ್ನೂ ಪರೀಕ್ಷಿಸಿ. ಎಲ್ಲವನ್ನೂ ಪ್ರಯತ್ನಿಸಿ. ಅದರಲ್ಲಿ ಬಹು ಜನ ಹಿತ, ಬಹು ಜನ ಸುಖ ಕಂಡರೆ ಅದನ್ನು ಎಲ್ಲರಿಗೂ ನೀಡಿ" ಎಂದು ಹೇಳಿ ಬುದ್ಧ ದೇವ ಮಹಾ ಪರಿನಿರ್ವಾಣಕ್ಕೆ ಸಂದನು.

ಬುದ್ಧನ ಮಾನಸಿಕ ಸ್ವಾಸ್ಥತೆ ಅಪೂರ್ವವಾದುದು. ಅಲ್ಲಿ ದೇವರು, ದೇವತೆಗಳು, ದೇವದೂತರು, ಭೂತಗಣಗಳು ಯಾವುದಕ್ಕೂ ಜಾಗವಿಲ್ಲ. ಅವನದು ಸ್ವಚ್ಛ ಮನಸ್ಸು, ಪರಿಪೂರ್ಣವಾದ ಮನಸ್ಸು. ಸಾವಿನ ಗಳಿಗೆಯಲ್ಲೂ ಅವನ ಮಿದುಳಿನ ಪ್ರತಿಯೊಂದು ಜೀವಕೋಶವೂ ಸಂಪೂರ್ಣವಾಗಿ ಆರೋಗ್ಯಕರವಾಗಿತ್ತು. ಬುದ್ಧ ಪ್ರಪಂಚ ಕಂಡ ಅತ್ಯಂತ ಸ್ಪಷ್ಟ ಉಪದೇಶಕ, ದೊಡ್ಡ ಧರ್ಮಗುರು.

ಬುದ್ಧ ಮಹಾ ಪರಿನಿರ್ವಾಣ ಹೊಂದುವ ಸಮಯದಲ್ಲಿ ಆತನ ಶಿಷ್ಯರು ಗುರುವಿಗೆ ಹೀಗೆ ಭಿನ್ನವಿಸಿದರು: "ನಿಮ್ಮ ನಿರ್ವಾಣಾನಂತರ ನಾವು ಏನು ಮಾಡಬೇಕು? ತಿಳಿಸಿ".

"ಏನೂ ಇಲ್ಲ".

"ನಿಮಗೆ ನಾವೇನು ಸ್ಮಾರಕ ನಿರ್ಮಿಸೋಣ? "ಬುದ್ಧತ್ವ ವಿಗ್ರಹತ್ವದಿಂದ ಸಿದ್ಧಿಸುವುದೆ? ಭೌತಿಕ ಕೆಲಸ, ಬೌದ್ಧಿಕ ಕ್ರಿಯೆಗಿಂತ ಸುಲಭ, ನಿಜ.

"ನಿಮಗೆ ಇಷ್ಟವಿದ್ದರೆ ನನ್ನನ್ನು ಮಣ್ಣಿನಲ್ಲಿ ಮುಚ್ಚಿಬಿಡಿ, ಇಲ್ಲದಿದ್ದರೆ ಏನನ್ನೂ ಮಾಡಬೇಡಿ" ಎಂದು ಬುದ್ಧ ಹೇಳಿದರೂ ಅವನಿಗಾಗಿ ಅಸಂಖ್ಯಾತ ಮಂದಿರಗಳು ನಿರ್ಮಾಣವಾದವು.

ತನ್ನ ಶಿಷ್ಯರಿಗೆ ಬುದ್ಧ ಹೇಳಿದ: "ಈ ಮರದ ಕೆಳಗೆ ಏನಾದರೂ ಹಾಸಿ. ನನ್ನ ಕೊನೆಗಾಲ ಸಮೀಪಿಸುತ್ತಿದೆ ಎಂದು ನನಗನ್ನಿಸುತ್ತಿದೆ". ಬುದ್ಧ ಕುಳಿತುಕೊಳ್ಳಲು ಆಗದೆ ಕೆಳಗೆ ಮಲಗಿದ. ಅವನು ಕೂಡಲೇ ಹೇಳಿದ ಮೊದಲ ಕೆಲಸ : "ಹೋಗಿ ಚುಂದನಿಗೆ ತಿಳಿಸಿ. ಆತ ನನ್ನ ಅತ್ಯುತ್ತಮ ದಾನಿಗಳಲ್ಲಿ ಒಬ್ಬ. ಆತ ಕೊಟ್ಟ ಊಟದಿಂದ ನಾನು ನಿರ್ವಾಣ ಪಡೆಯುತ್ತಿದ್ದೇನೆ. ಈ ದೇಹದಿಂದ ಬಿಡುಗಡೆ ಹೊಂದುತ್ತಿದ್ದೇನೆ".

ಆಗ ಅನೇಕರು ಗುರುವಿನಿಂದ ಉಪದೇಶ ಪಡೆಯಲು ಬಂದರು. ಒಬ್ಬ ಭಿಕ್ಕು, "ಈಗ ಹತ್ತಿರ ಹೋಗಬೇಡಿ ಗುರುದೇವ ನಿರ್ವಾಣ ಹೊಂದುತ್ತಿದ್ದಾರೆ", ಎಂದ. ಅದನ್ನು ಕೇಳಿಸಿಕೊಂಡ ಗುರುದೇವ "ಅವರನ್ನು ನನ್ನ ಬಳಿ ಬಿಡಿ" ಎಂದನು. ಆಮೇಲೆ ಇನ್ನಾರೂ ಬಂದರು. ಆಗ ಸಾಯುವ ಸ್ಥಿತಿಯಲ್ಲಿದ್ದ ಗುರು ಹೇಳಿದ : "ಓ ಆನಂದ! ನಾನು ಗತಿಸುತ್ತಿದ್ದೇನೆ. ನನಗಾಗಿ ಅಳಬೇಡಿ. ನನ್ನನ್ನು ಹಚ್ಚಿಕೊಳ್ಳಬೇಡಿ. ನನ್ನ ಬದುಕು ಮುಗಿಯಿತು. ನಿಮ್ಮ ಬಿಡುಗಡೆಯನ್ನು ನೀವೇ ಎಚ್ಚರಿಕೆಯಿಂದ ಕಂಡುಕೊಳ್ಳಿ. ನಿಮ್ಮಲ್ಲಿ ಪ್ರತಿಯೊಬ್ಬರೂ ನನ್ನ ಹಾಗೇ ಇದ್ದೀರಿ. ನಿಮ್ಮಲ್ಲಿ ನಾನೂ ಒಬ್ಬ ಅಷ್ಟೆ, ಮತ್ತೇನೂ ಅಲ್ಲ. ಇವೊತ್ತು ನಾನು ಏನಾಗಿದ್ದೇನೆಯೊ ಅದು ನಾನು ನನ್ನನ್ನೆ ರೂಪಿಸಿಕೊಂಡಿದ್ದರ ಫಲ. ನೀವು ಶ್ರದ್ಧೆಯಿಂದ ಶ್ರಮಿಸಿ. ನಾನು ಏನಾಗಿದ್ದೇನೆಯೋ ಅದು ನೀವಾಗಬೇಕು".

ಪೂಜೆ, ಯಜ್ಞ, ವಿಧಿ ವಿಧಾನಗಳು ಧರ್ಮವಲ್ಲ. ಧರ್ಮವೆಂದರೆ ಒಂದು ಗಳಿಗೆ ಪ್ರಾರ್ಥನೆ ಸಲ್ಲಿಸಿ, ನಂತರ ದಿನವೆಲ್ಲ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದಲ್ಲ. ಇಡೀ ಬದುಕೇ ಪ್ರಾರ್ಥನೆಯ ಹಾಗೆ ಪವಿತ್ರವಾಗಿ ಇರಬೇಕು ಎಂದು ಬಾಳಿ ತೋರಿಸಿದ ಮಹಾನುಭಾವ ಬುದ್ಧ. ಇದರಿಂದಾಗಿ ದೇವತೆಗಳು ತೀರಾ ಅಸಂತುಷ್ಟರಾದರು ಎಂಬ ಒಂದು ಕತೆ ಇದೆ: "ಇವನು ಇದ್ದರೆ ನಮಗೆ ಉಳಿಗಾಲವಿಲ್ಲ. ಇವನಿಂದಾಗಿ ನಮಗೆ ಅರ್ಪಿತವಾಗುತ್ತಿದ್ದ ನೈವೇದ್ಯವೆಲ್ಲ ತಪ್ಪಿತು. ಏಕೆಂದರೆ ಇವನನ್ನು ನೋಡಿದರೇ ಜನರು ಪಾವನರಾಗುತ್ತಾರೆ.

ಇವನನ್ನು ಏನಾದರೂ ಮಾಡಿ ಮುಗಿಸಬೇಕು" ಎಂದು ದೇವತೆಗಳೆಲ್ಲ ಸೇರಿ ಸಂಚು ಹೂಡಿದರು. ಅವರೆಲ್ಲ ವೇಷ ಮರೆಸಿಕೊಂಡು ಬಂದು ಬುದ್ಧನನ್ನು ಬೇಡಿದರು: "ಭಗವಾನ್, ನಾವು ದೊಡ್ಡ ಯಾಗ ಮಾಡಬೇಕೆಂದಿದ್ದೇವೆ. ಅದಕ್ಕಾಗಿ ಸೂಕ್ತ ಸ್ಥಳವನ್ನು ಹುಡುಕುತ್ತಿದ್ದೇವೆ. ಎಲ್ಲಿಯೂ ಯೋಗ್ಯ ಸ್ಥಳ ಸಿಗಲಿಲ್ಲ. ತಾವು ಅಪ್ಪಣೆ ಕೊಡಿಸುವುದಾದರೆ ಅದನ್ನು ಅರಹುತ್ತೇವೆ" ಎಂದರು. "ಆಗಲಿ ಹೇಳಿ" ಎಂದು ಬುದ್ಧ ತಿಳಿಸಿದ. "ನಾವು ಮಾಡಬೇಕಾದ ಯಜ್ಞಕ್ಕೆ ಬಹಳ ಪ್ರಶಸ್ತ ಜಾಗ ತಮ್ಮ ಎದೆ" ಎಂದರು. ಬುದ್ಧ ಹಿಂದೆ ಮುಂದೆ ನೋಡದೆ, "ಆಗಲಿ, ನಿಮ್ಮ ಯಾಗ ಮಾಡಿ" ಎಂದು ಅಂಗಾತ ನೆಲದ ಮೇಲೆ ಮಲಗಿಬಿಟ್ಟನು.

ದೇವತೆಗಳು ಬಹಳ ಸಂತೋಷದಿಂದ ಅವನ ಎದೆಯ ಮೇಲೆ ಯಜ್ಞಕುಂಡವನ್ನು ರಚಿಸಿ ಬೆಂಕಿ ಹಾಕಿ ಬಹಳ ಹೊತ್ತು ಯಾಗ ಮಾಡಿ, ಯಜ್ಞಕುಂಡದ ಕೆಳಗಡೆ ಇದ್ದ ಬುದ್ಧನನ್ನು ತಾರಾಮಾರ ಜಜ್ಜಿ ಹೊಡೆದು ಎದ್ದರು. "ನಮ್ಮ ವೈರಿಯಾದ ಇವನನ್ನು ನಾವು ತೀರಿಸಿದೆವು. ಇನ್ನು ಮೇಲೆ ನಾವು ನಿರಾತಂಕವಾಗಿರಬಹುದು ಎಂದು ಮಾತಾಡಿಕೊಂಡರು. ಸ್ವಲ್ಪ ಹೊತ್ತಿನ ನಂತರ ಬುದ್ಧ ಮೇಲೆದ್ದು, "ನಿಮ್ಮ ಯಾಗ ಕ್ರಿಯೆ ಮುಗಿಯಿತೆ? ನಿಮಗೆಲ್ಲ ಆನಂದವಾಯಿತೆ?" ಎಂದು ಕೇಳಿದನು. ದೇವತೆಗಳು ತಮಗಾದ ಆಶ್ಚರ್ಯ ಮತ್ತು ದಿಗ್ಭ್ರಮೆಗಳನ್ನು ಮುಚ್ಚಿಕೊಳ್ಳುತ್ತಾ, "ನಾವು ಹೆದರಿಬಿಟ್ಟಿದ್ದೆವು ನಿಮಗೆ ಏನಾಯಿತೋ ಎಂದು" ಎಂದರು. ಅದಕ್ಕೆ ಬುದ್ಧ ನಸುನಗುತ್ತಾ, "ಪಾವಿತ್ರ್ಯವನ್ನು ನಾಶಮಾಡಲು ಸಾಧ್ಯವೆ? ಪಾವಿತ್ರ್ಯ ಹೋದರೆ ಜೀವನವಿಲ್ಲ, ಲೋಕವಿಲ್ಲ" ಎಂದು ದೇವತೆಗಳಿಗೆ ತಿಳುವಳಿಕೆ ನೀಡಿದನು.

ಬುದ್ಧ ಪರಮ ಪಾವನ ಮೂರ್ತಿಯಾಗಿದ್ದನು ಎಂಬುದನ್ನು ಈ ಕಥೆ ಧ್ವನಿಸುತ್ತದೆ. ಇಂಥ ಅದ್ಭುತ ರೂಪಕವನ್ನು ಕಟ್ಟಿದವರು ಬುದ್ಧನ ಅನುಯಾಯಿಗಳಲ್ಲ, ಅವನ ಕಡುವಿರೋಧಿಗಳು ಎಂಬುದನ್ನು ತಿಳಿದರೆ ಬುದ್ಧನ ಮಹತ್ತು ಚೆನ್ನಾಗಿ ಮನವರಿಕೆಯಾಗುತ್ತದೆ. "ದೇವರ ಬಗ್ಗೆ ನಿಮ್ಮ ನೂರಾರು ವಾದವಿವಾದಗಳೆಲ್ಲ ನನಗೆ ಬೇಕಿಲ್ಲ. ಒಳ್ಳೆಯವರಾಗಿರಿ, ಒಳ್ಳೆಯದು ಮಾಡಿ", ಎನ್ನುವುದೇ ಬುದ್ಧನ ಉಪದೇಶದ ಸಾರಸರ್ವಸ್ವ ಎಂದು ಹೇಳಬಹುದು. ಬುದ್ಧ ಒಳಿತಿನ ಅಪರಾವತಾರವಾಗಿದ್ದನು. ಒಳ್ಳೆಯತನ ಅಥವಾ ನೈತಿಕತೆಯನ್ನು ಧರ್ಮದ ಜೀವಾಳವನ್ನಾಗಿ ಮಾಡಿದ ಕೀರ್ತಿ ಬುದ್ಧನದು. ಅದುವರೆಗೆ ನೀತಿಗೆ ಬೆಲೆ ಇಲ್ಲದೆ ನಿಷೇಧಗಳ ಶಾಸ್ತ್ರಗಳ ಕಂತೆಯಾಗಿತ್ತು ಧರ್ಮ, ಅದು ಮಾನವೀಯತೆಯ ಊಟೆ ಎಂದು ಜಗತ್ತಿಗೆ ಮೊಟ್ಟಮೊದಲಿಗೆ ತೋರಿಸಿದವನು, ಮಾನವರಲ್ಲಿ ಮಾನವನಾದ ಬುದ್ಧ. ಅವನಷ್ಟು ಮಾನವೀಯಾಂತಃಕರಣವುಳ್ಳ ಮೇಧಾವಿಯನ್ನು ಪ್ರಪಂಚ ಕಂಡಿಲ್ಲವೆನಿಸುತ್ತದೆ.

ಪೂಜೆ, ಯಜ್ಞ, ವಿಧಿ ವಿಧಾನಗಳು ಧರ್ಮವಲ್ಲ. ಧರ್ಮವೆಂದರೆ ಒಂದು ಗಳಿಗೆ ಪ್ರಾರ್ಥನೆ ಸಲ್ಲಿಸಿ, ನಂತರ ದಿನವೆಲ್ಲ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದಲ್ಲ. ಇಡೀ ಬದುಕೇ ಪ್ರಾರ್ಥನೆಯ ಹಾಗೆ ಪವಿತ್ರವಾಗಿ ಇರಬೇಕು ಎಂದು ಬಾಳಿ ತೋರಿಸಿದ ಮಹಾನುಭಾವ ಬುದ್ಧ. ಬುದ್ಧನ ಮಾನಸಿಕ ಸ್ವಾಸ್ಥತೆ ಅಪೂರ್ವವಾದುದು. ಅಲ್ಲಿ ದೇವರು, ದೇವತೆಗಳು, ದೇವದೂತರು, ಭೂತಗಣಗಳು ಯಾವುದಕ್ಕೂ ಜಾಗವಿಲ್ಲ. ಅವನದು ಸ್ವಚ್ಛ ಮನಸ್ಸು, ಪರಿಪೂರ್ಣವಾದ ಮನಸ್ಸು. ಸಾವಿನ ಗಳಿಗೆಯಲ್ಲೂ ಅವನ ಮಿದುಳಿನ ಪ್ರತಿಯೊಂದು ಜೀವಕೋಶವೂ ಸಂಪೂರ್ಣವಾಗಿ ಆರೋಗ್ಯಕರವಾಗಿತ್ತು.

ಸಮಕಾಲೀನ ಒತ್ತಡಗಳು ಹಾಗೂ ದಲಿತರ ಹಕ್ಕುಗಳು

ವರ್ಣಾಶ್ರಮ ಪದ್ಧತಿಯ ಬಗ್ಗೆ ರೋಸಿ ಹೋಗಿದ್ದ ಡಾ|| ಅಂಬೇಡ್ಕರ್ ಅವರು "ನಾನು ಹಿಂದುವಾಗಿ, ಜನಿಸಿದ್ದರೂ ಹಿಂದೂವಾಗಿ ಸಾಯುವುದಿಲ್ಲ" ಎಂದು ಘಂಟಾಘೋಷವಾಗಿ ಸಾರಿದ್ದರು. ನಾಯಿ-ಬೆಕ್ಕುಗಳನ್ನು ಮನೆಯೊಳಗೆ ಸಾಕಿಕೊಂಡು ಅಸ್ಪೃಶ್ಯರನ್ನು ಊರಾಚೆ ಅಟ್ಟಿದ ಜಾತಿ ವ್ಯವಸ್ಥೆಯ ಬಗ್ಗೆ ಕುದಿಯುತ್ತಿದ್ದ ಬಾಬಾ ಸಾಹೇಬ್ ತಮ್ಮ ಸಹಸ್ರಾರು ಒಡನಾಡಿಗಳೊಂದಿಗೆ ಬೌದ್ಧಧರ್ಮ ಸ್ವೀಕರಿಸಿದರು. ದೇವರ ಹಂಗಿಲ್ಲದ ಬುದ್ಧನ ತರ್ಕಬದ್ಧ ವಿಚಾರಗಳಿಗೆ ಮಾರುಹೋದ ಬಾಬಾ ಸಾಹೇಬರು ಮತಾಂತರ ಹೊಂದಿದಾಗ ಲಕ್ಷಾಂತರ ಜನ ಅವರು ನಡೆದ ದಾರಿಯಲ್ಲೇ ಹೆಜ್ಜೆ ಇರಿಸಿದರು.

ಈ ಘಟನೆ ನಡೆದು ನಾಲ್ಕೂವರೆ ದಶಕಗಳು ಗತಿಸಿದ ನಂತರ ಅಂತಹುದೇ ಇನ್ನೊಂದು ಚಿರಿತ್ರಿಕ ಘಟನೆ ಕಳೆದ ನವೆಂಬರ್ ನಾಲ್ಕರಂದು ರಾಜಧಾನಿ ದಿಲ್ಲಿಯಲ್ಲಿ ನಡೆಯಿತು. ಅಖಿಲ ಭಾರತ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಬುಡಕಟ್ಟುಗಳ ಸರ್ಕಾರಿ ನೌಕರರ ಸಂಘಟನೆಯ ನಾಯಕರಾದ ರಾಮರಾಜು ಅವರು ತಮ್ಮ ಸಾವಿರಾರು ಸಂಗಾತಿಗಳೊಂದಿಗೆ ಹಿಂದೂಧರ್ಮವನ್ನು ತ್ಯಜಿಸಿ ಬೌದ್ಧಧರ್ಮ ಸ್ವೀಕರಿಸಿದರು. ಅಂಬೇಡ್ಕರ್ ಹಿಂದೂಧರ್ಮ ತ್ಯಜಿಸುವಾಗ ಅಧಿಕಾರದಲ್ಲಿದ್ದ ಜವಹರ್‌ಲಾಲ್ ನೆಹರು ಸರ್ಕಾರ ಮತಾಂತರ ಪ್ರಕ್ರಿಯೆಗೆ ಅಡ್ಡಿಯುಂಟುಮಾಡಿರಲಿಲ್ಲ. ಆದರೆ ಈಗ ಉದಿತ್‌ರಾಮ್ ಅವರು ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಿಂದ ಕಿರುಕುಳ ಅನುಭವಿಸುತ್ತಲೇ ಈ ಕಾರ್ಯಕ್ರಮ ನಡೆಸಿದರು. ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವ ಕಾರ್ಯಕ್ರಮವನ್ನು ದಿಲ್ಲಿಯ ವಿಶಾಲವಾದ ರಾಮಲೀಲಾ ಮೈದಾನದಲ್ಲಿ ನಡೆಸಲು ಉದಿತ್‌ರಾಮ್ ಪೂರ್ವಾನುಮತಿ ಪಡೆದಿದ್ದರು. ಆದರೂ ವಿಶ್ವ ಹಿಂದೂ ಪರಿಷತ್ತಿನ ಒತ್ತಡಕ್ಕೆ ಮಣಿದ ವಾಜಪೇಯಿ ಸರ್ಕಾರ ಕೊನೆಯ ಗಳಿಗೆಯಲ್ಲಿ ಅನುಮತಿ ರದ್ದುಗೊಳಿಸಿದ್ದರಿಂದ ದೇಶದ ಎಲ್ಲಾ ಭಾಗಗಳಿಂದ ಬಂದಿದ್ದ ದಲಿತ ಗೆಳೆಯರಿಗೆ ತೊಂದರೆಯಾಗಿ ಬೇರೊಂದು ಸಭಾಂಗಣದಲ್ಲಿ ಅದೇ ಕಾರ್ಯಕ್ರಮ ನಡೆಸಿದರು.

ಸ್ವಾತಂತ್ರ್ಯ ಬಂದು ಐದು ದಶಕಗಳ ನಂತರವೂ ದಲಿತರನ್ನು ಜೀವಂತ ಸುಟ್ಟು ಹಾಕುವ, ದಲಿತ ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸುವ ಹಾಗೂ ಕನಿಷ್ಠ ಕೂಲಿ ಕೇಳಿದರೆ ಗುಂಡಿಟ್ಟು ಕೊಲ್ಲುವ ಘಟನೆಗಳು ಸಂಭವಿಸುತ್ತಲೇ ಇವೆ. ಈವಂಚಿತ ಜನಾಂಗ ಉಸಿರೆತ್ತದಂತೆ, ಹೊಸಕಿಹಾಕಲು ಬಿಹಾರದಲ್ಲಿ ಭೂಮಾಲೀಕರು, ರಣವೀರಸೇನೆಯನ್ನು ಕಟ್ಟಿಕೊಂಡಿದ್ದಾರೆ. ಈ ಸೇನೆ ನೂರಾರು ಜನರನ್ನು ಕೊಂದು ಅಪರಾಧ ಚರಿತ್ರೆಯಲ್ಲಿ ದಾಖಲೆ ಸ್ಥಾಪಿಸಿದೆ. ಆದರೂ ಇದನ್ನು ನಿಷೇಧಿಸದ ವಾಜಪೇಯಿ ಸರ್ಕಾರ ಬಡವರ ಪರವಾಗಿ ಹೋರಾಡುವ ನಕ್ಸಲೀಯರ ಜನತಾ ಸಮರದಳವನ್ನು ನಿರ್ಬಂಧಿಸಿತು.

ಸ್ವಾತಂತ್ರ್ಯ ಬಂದು ಐದು ದಶಕಗಳ ನಂತರವೂ ದಲಿತರನ್ನು ಜೀವಂತ ಸುಟ್ಟು ಹಾಕುವ, ದಲಿತ ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸುವ ಹಾಗೂ ಕನಿಷ್ಠ ಕೂಲಿ ಕೇಳಿದರೆ ಗುಂಡಿಟ್ಟು ಕೊಲ್ಲುವ ಘಟನೆಗಳು ಸಂಭವಿಸುತ್ತಲೇ ಇವೆ. ಈವಂಚಿತ ಜನಾಂಗ ಉಸಿರೆತ್ತದಂತೆ, ಹೊಸಕಿಹಾಕಲು ಬಿಹಾರದಲ್ಲಿ ಭೂಮಾಲೀಕರು, ರಣವೀರಸೇನೆಯನ್ನು ಕಟ್ಟಿಕೊಂಡಿದ್ದಾರೆ. ಈ ಸೇನೆ ನೂರಾರು ಜನರನ್ನು ಕೊಂದು ಅಪರಾಧ ಚರಿತ್ರೆಯಲ್ಲಿ ದಾಖಲೆ ಸ್ಥಾಪಿಸಿದೆ.

○ ಸನತ್‌ಕುಮಾರ್ ಬೆಳಗಲಿ

ಕಳೆದು ಎರಡು ವರ್ಷಗಳ ಹಿಂದೆ ಪರಿಶಿಷ್ಟ ವರ್ಗದವರ ಮೇಲೆ ಹಾಗೂ ಪರಿಶಿಷ್ಟ ಬುಡಕಟ್ಟುಗಳ ಮೇಲೆ ಪೈಶಾಚಿಕ ಹಲ್ಲೆ ನಡೆದ 28,000 ಪ್ರಕರಣಗಳು ದಾಖಲಾಗಿವೆ. ದಾಖಲಾಗದೇ ಉಳಿದ ಪ್ರಕರಣಗಳು ಸಾವಿರಾರು. ಜಾತಿ ಪದ್ಧತಿಯ ಈ ಚಿತ್ರಹಿಂಸೆಯ ಕಾರಾಗೃಹದಿಂದ ದಲಿತರು ತಪ್ಪಿಸಿಕೊಂಡು ಹೋಗಬಾರದು. ಹೇಳಿದಂತೆ ಕೇಳಿಕೊಡು ನಾಯಿಯಂತೆ ಬಿದ್ದಿರಬೇಕೆಂದು ಒತ್ತಡ ಹೇರಲು ಮತಾಂತರದ ವಿರುದ್ಧ ಈಗ ದೊಡ್ಡ ಕೂಗೆದ್ದಿದೆ. ಹಿಂದುತ್ವದ ವಿಜೃಂಭಣೆ ನಡೆದಿದೆ. ಸಾಮಾಜಿಕ ಅನ್ಯಾಯದ ವಿರುದ್ಧ ನೆಡಯುವ ಹೋರಾಟದ ದಿಕ್ಕನ್ನು ಬದಲಿಸಲು ಕೋಮು ಉನ್ಮಾದ ಕೆರಳಿಸಲಾಗುತ್ತಿದೆ. ಹುಸಿ ರಾಷ್ಟ್ರಭಕ್ತಿಯ ಆವೇಶವನ್ನು ತುಂಬಿ ದೇಶವನ್ನು ಯುದ್ಧದ ಮಡುವಿಗೆ ತಳ್ಳುವ ಹುನ್ನಾರ ನಡೆದಿದೆ. ಈ ದೇಶದ ಯಾವುದೇ ಪ್ರಜೆ ತನಗಿಷ್ಟವಾದ ಧರ್ಮವನ್ನು ಆಯ್ಕೆ ಮಾಡಿಕೊಳ್ಳಲು ಸಂವಿಧಾನ ಅವಕಾಶ ನೀಡಿದೆ. ಸಂವಿಧಾನ ನೀಡಿರುವ ಈ ಹಕ್ಕು ದಲಿತರಿಗೆ ದಕ್ಕದಂತೆ ಮಾಡಲು ಪಿತೂರಿ ನಡೆಸಿರುವ ಮನುವಾದಿ ಶಕ್ತಿಗಳು ದೇಶದ ಅಧಿಕಾರ ಸೂತ್ರವನ್ನು ಹಿಡಿದಿರುವಾಗ ನಾವಿಲ್ಲಿ ಸೇರಿದ್ದೇವೆ.

ಮತಾಂತರಕ್ಕೆ ತಡೆಯೊಡ್ಡಿದ ಘಟನೆ ನಡೆದ ಕೆಲವೇ ದಿನಗಳ ನಂತರ, ಅದೇ ದಿಲ್ಲಿಯಲ್ಲಿ ದಶಕಗಳ ಹಿಂದೆಯೇ ನಿರ್ಮಾಣಗೊಂಡಿದ್ದ ವಿಚಾರವಾದಿ ಕೇಂದ್ರವಾಗಿದ್ದ "ಪೆರಿಯಾರ್ ಭವನ"ವನ್ನು ಕೋಮುವಾದಿ ಸರ್ಕಾರವು ನೆಲಸಮಗೊಳಿಸಿತು. ಪುರೋಹಿತ ಶಾಹಿ ಶೋಷಣೆ ವಿರುದ್ಧ ಬಂಡೆದ್ದ ಪೆರಿಯಾರ್ ರಾಮಸ್ವಾಮಿ ನಾಯಕರ್ ಅವರ ನೆನಪಿಗೆ ನಿರ್ಮಿಸಲಾಗಿದ್ದ ಈ ಕಟ್ಟಡ ಉರುಳಿಬಿದ್ದಾಗ ಮಾಧ್ಯಮಗಳಲ್ಲಿ ಸುದ್ದಿಯಾಗಲೇ ಇಲ್ಲ. ಇವೆರಡು ಘಟನೆಗಳು ದಲಿತರಿಗೆ ಮತ್ತು ದಲಿತ ಹೋರಾಟಕ್ಕೆ ಮಾತ್ರವಲ್ಲ ಒಟ್ಟಾರೆಯಾಗಿ ಪ್ರಗತಿಪರ ಜಾತ್ಯತೀತ ಚಳುವಳಿಗೆ ಎದುರಾಗಿರುವ ಗಂಡಾಂತರವನ್ನು ಸಂಕೇತಿಸುತ್ತವೆ. ಜಾತಿಪದ್ಧತಿಯ ವಿರುದ್ಧ ಹಾಗೂ ಸಮಾನತೆಯ ಪರವಾಗಿ ಧ್ವನಿಯೆತ್ತುವ ಹಕ್ಕನ್ನು ತುಳಿತಕ್ಕೊಳಗಾದ ಜನ ಕಳೆದುಕೊಳ್ಳುವ ದಿನ ದೂರವಿಲ್ಲ.

ಒಂದೆಡೆ ಭಾರತದಂತಹ ಬಡದೇಶಗಳನ್ನು ನುಂಗಲು ಬಾಯ್ತೆರೆದು ನಿಂತಿರುವ ಜಾಗತೀಕರಣ, ಇನ್ನೊಂದೆಡೆ ಮನುಕುಲದ ನೆಮ್ಮದಿಗೆ ಕೊಳ್ಳಿಯಿಡುತ್ತಿರುವ ಮೂಲಭೂತವಾದ, ಇವುಗಳ ನಡುವೆ ಸಿಲುಕಿರುವ ದಲಿತ ಸಮುದಾಯ ಈ ಹೊಸ ಸವಾಲುಗಳ ಹೊಡೆತಕ್ಕೆ ಸಿಕ್ಕಿ ದಿಕ್ಕುತಪ್ಪಿದಂತಾಗಿದೆ. ತೊಂಬತ್ತರ ದಶಕದ ಆರಂಭದಲ್ಲಿ ಸೋವಿಯತ್ ಸಮಾಜವಾದಿ ವ್ಯವಸ್ಥೆಯು ಕುಸಿದುಬಿದ್ದ ನಂತರ ಜಗತ್ತಿನೆಲ್ಲೆಡೆ ದುಡಿಯುವ ವರ್ಗದ, ಶೋಷಿತ ವರ್ಗದ ಧ್ವನಿ ಉಡುಗುತ್ತಲೇ ಬಂದಿದೆ. ಸಕಲರಿಗೂ ಸಮಾನ ಅವಕಾಶವಿರುವ ಹೊಸ ಸಮಾಜವೊಂದು ಈ ಜಗತ್ತಿನಲ್ಲಿ ಉದಯಿಸಬೇಕೆಂಬ ಕನಸು ಭಗ್ನಗೊಂಡು ಸಮತೆಯ ಪರವಾಗಿ ಮಾತನಾಡುವುದೇ ಅಪ್ರಸ್ತುತವೆನಿಸುವಷ್ಟರಮಟ್ಟಿಗೆ ವಾತಾವರಣ ಬದಲಾಗಿದೆ.

ಈ ಜಾಗತಿಕ ವಿದ್ಯಮಾನದ ಪರಿಣಾಮ ಭಾರತದ ಮೇಲಾಗಿದೆ. ದೇಶದಲ್ಲಿ ವರ್ಣಾಶ್ರಮ ಪದ್ಧತಿಯನ್ನು ಪ್ರತಿಪಾದಿಸುವ ಹಿಂದೂ ಮೂಲಭೂತವಾದಿಗಳು ಬಾಲ ಬಿಚ್ಚಿವೆ. ಶೋಷಣೆ, ಅಸಮಾನತೆ ಹಾಗೂ ಜಾತಿ ಪದ್ಧತಿಯ ವಿರುದ್ಧ ಅನ್ಯಾಯಕ್ಕೊಳಗಾದ ಜನ ನಡೆಸುತ್ತಿರುವ ಹೋರಾಟವನ್ನು ದಿಕ್ಕು ತಪ್ಪಿಸಲು ಅಯೋಧ್ಯೆಯ ಮಂದಿರ ನಿರ್ಮಾಣ ಪ್ರಶ್ನೆಯನ್ನೆತ್ತಿ ಬಾಬ್ರಿ ಮಸೀದಿಯನ್ನು ನೆಲಸಮಗೊಳಿಸಲಾಯಿತು. "ಹಿಂದೂ ಬಂಧು ಒಂದು" ಎಂದು ಹೇಳುತ್ತಲೇ ವಂಚಿತ ದಲಿತ ಸಮುದಾಯವನ್ನು ಧೃತರಾಷ್ಟ್ರಾಲಿಂಗನಕ್ಕೆ ಗುರಿಪಡಿಸಿ ಹೋರಾಟದ ದಿಕ್ಕನ್ನೇ ಬದಲಿಸಲು ಈ ಮೂಲಭೂತವಾದಿ ಶಕ್ತಿಗಳು ಹುನ್ನಾರ ನಡೆಸಿ ಕೊಂಚಮಟ್ಟಿಗೆ ಯಶಸ್ವಿಯಾಗಿವೆ. ಹಿಂದುಳಿದ ವರ್ಗಗಳು ಮಾತ್ರವಲ್ಲ, ದಲಿತ ಸಮುದಾಯದ ಅನೇಕ ಯುವಕರು ಸಂಘಪರಿವಾರದ ಸಿಹಿಲೇಪಿತ ಸಿದ್ಧಾಂತಕ್ಕೆ ಮಾರುಹೋಗಿ ಮಸೀದಿ ನಾಶದ ರಥಯಾತ್ರೆಯಲ್ಲಿ ಪಾಲ್ಗೊಂಡಿದ್ದರೆಂಬುದು ಕಳವಳಕಾರಿ ಸಂಗತಿಯಾಗಿದೆ. ಹಿಂದುತ್ವದ ಸೋಗಿನಲ್ಲಿ ಕೇಂದ್ರದ ಅಧಿಕಾರ ಸೂತ್ರವನ್ನು ಕಬಳಿಸಿ ಸಂಘಪರಿವಾರದ ಫ್ಯಾಸಿಸ್ಟ್ ಅಜೆಂಡಾವನ್ನು ದೇಶದ ಮೇಲೆ ಹೇರಲು ಈ ಶಕ್ತಿಗಳು ಮುಂದಾಗಿವೆ. ಇದರ ಮೊದಲ ಹೆಜ್ಜೆಯಾಗಿ ಕೇಸರೀಕರಣದ ಕಾರ್ಯ ಆರಂಭವಾಗಿದೆ. ಶಿಕ್ಷಣದ ಕೇಸರೀಕರಣವೆಂದರೆ, ವೈದಿಕೀಕರಣವಲ್ಲದೆ ಬೇರೇನೂ ಅಲ್ಲ. ಡಾ|| ಮುರಳಿ ಮನೋಹರ ಜೋಶಿಯವರ ಕೈಯಲ್ಲಿರುವ ಮಾನವ ಸಂಪನ್ಮೂಲ ಇಲಾಖೆ ಈ ಕಾರ್ಯಕ್ಕೆ ಮುಂದಾಗಿದೆ.

ವಿಶ್ವವಿದ್ಯಾಲಯಗಳಲ್ಲಿ "ಜ್ಯೋತಿಷ್ಯಶಾಸ್ತ್ರ", "ಅಪರಕರ್ಮ" ಡಿಗ್ರಿ ಕೋರ್ಸ್‌ಗಳನ್ನು ಆರಂಭಿಸ ಲಾಗುತ್ತಿದೆ. ಇತಿಹಾಸ ಪಠ್ಯ ಪುಸ್ತಕಗಳಿಗೆ ಕತ್ತರಿ ಪ್ರಯೋಗ ನಡೆದಿದೆ. ಐದು ಸಾವಿರ ವರ್ಷಗಳ ಹಿಂದೆ ಒಂದು ಜಾತಿಯವರು ಗೋಮಾಂಸ ತಿನ್ನುತ್ತಿದ್ದರೆಂದು ಖ್ಯಾತ ಇತಿಹಾಸಕಾರ ಡಿ.ಎನ್.ಝಾ ಆಧಾರಸಹಿತವಾಗಿ ವಿಶ್ಲೇಷಿಸಿದ ಇತಿಹಾಸದ ಪಾಠವನ್ನು ನಿಷೇಧಿಸಲಾಗಿದೆ. ಆರ್ಯರು ಭಾರತಕ್ಕೆ ಹೊರಗಿನಿಂದ ಬಂದವರೆಂಬ ಅಂಶವನ್ನು ಕತ್ತರಿಸಿಹಾಕಲಾಗಿದೆ. ಜಾತಿಪದ್ಧತಿಗೆ ಕಾರಣವಾದ ಅಂಶಗಳನ್ನು ಈ ಪುಸ್ತಕಗಳಿಂದ ಕಣ್ಮರೆ ಮಾಡಲಾಗಿದೆ. ಈ ದೇಶದ ದಲಿತರಿಗೂ ಒಂದು ತಾತ್ವಿಕ ಪರಂಪರೆಯಿದೆ. ಲೋಕಾಯತ, ಚಾರ್ವಾಕರ ನಿರೀಶ್ವರವಾದ, ಬುದ್ಧನ ಆಜ್ಞೇಯವಾದ ಹಾಗೂ ಬಸವಣ್ಣನವರ ಶರಣ ಚಳುವಳಿ ಮಾತ್ರವಲ್ಲ, ಅಂಬೇಡ್ಕರ್, ಲೋಹಿಯಾ, ಮಾರ್ಕ್ಸ್ ಹೀಗೆ ದಮನಿತ ಜನತೆಯ ಪರವಾಗಿರುವ ಪರಂಪರೆಯನ್ನೇ ನಾಶಮಾಡಿ ನಾಥೂರಾಂ ಗೋಡ್ಸೆ, ಗೋಳ್ವಲಕರ್‌ರ ಫ್ಯಾಸಿಸ್ಟ್ ಸಿದ್ಧಾಂತವನ್ನು ದೇಶದ ಮೇಲೆ ಹೇರಲು ಮಸಲತ್ತು ನಡೆದಿದೆ. ಡಾ|| ಅಂಬೇಡ್ಕರ್ ಅವರನ್ನು ಹೀನಾಯವಾಗಿ ಟೀಕಿಸಿದ ಅರುಣ ಶೌರಿಯವರು ವಾಜಪೇಯಿ ಸಂಪುಟದಲ್ಲಿ ಮಂತ್ರಿಯಾಗಿದ್ದಾರೆ. ಇದನ್ನೆಲ್ಲಾ ಸಹಿಸಿಕೊಂಡು ಜಾರ್ಜ್ ಫರ್ನಾಂಡೀಸ್, ರಾಮ್‌ವಿಲಾಸ್ ಪಾಸ್ವಾನ್ ಅವರಂತಹ ಸಮಾಜವಾದಿಗಳು ಅಧಿಕಾರಕ್ಕಾಗಿ ರಾಜಿ ಮಾಡಿಕೊಂಡಿದ್ದಾರೆ.

ದಲಿತ ಹಕ್ಕುಗಳ ರಕ್ಷಣೆಗಾಗಿ ಅನೇಕ ಕಾನೂನುಗಳಿವೆಯಾದರೂ ಅವುಗಳಿಂದಲೂ ದಲಿತರು ವಂಚಿತರಾಗುತ್ತ ಬಂದಿದ್ದಾರೆ. ಈ ದೇಶದ ಕೃಷಿ ಕಾರ್ಮಿಕರಲ್ಲಿ ಅತಿ ಹೆಚ್ಚು ಜನ, ಅಂದರೆ ಶೇಕಡ 49ರಷ್ಟು, ದಲಿತರಿದ್ದಾರೆ. ಉಳಿದ ಹಲವು ದಲಿತರು ಸಣ್ಣಪುಟ್ಟ ಹಿಡುವಳಿಗಳನ್ನು ಹೊಂದಿದ್ದರೂ ಕೂಡ ಅವುಗಳನ್ನು ಉಳಿಸಿಕೊಳ್ಳಲಾಗದೆ ಬೀದಿಗೆ ಬಿದ್ದು ಕೃಷಿ ಕಾರ್ಮಿಕರಾಗಿದ್ದಾರೆ. ಖಾಸಗೀಕರಣ, ಉದಾರೀಕರಣಗಳು ಕರಾಳ ನಾಲಿಗೆ ಚಾಚಿದ 90ರ ದಶಕದ ಆರಂಭದಲ್ಲಿ ಇನ್ನಷ್ಟು ಜನ ದಲಿತರು ಭೂಮಿಯನ್ನು ಕಳೆದುಕೊಂಡು ಬೀದಿ ಪಾಲಾದರು. ಜಾಗತೀಕರಣದ ಪರಿಣಾಮವಾಗಿ ಭಾರತದ ಕೃಷಿರಂಗ ದಿವಾಳಿಯೆದ್ದು ರೈತರು ಸಾಲ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇಂತಹ ರೈತರಲ್ಲಿ ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವ ದಲಿತರ ಪರಿಸ್ಥಿತಿ ಇನ್ನೂ ಶೋಚನೀಯವಾಗಿದೆ. 1987ರಲ್ಲಿ ಗ್ರಾಮೀಣ ದಲಿತರಲ್ಲಿ ಶೇಕಡ 63.14ರಷ್ಟಿದ್ದ ಕೃಷಿ ಕೂಲಿಕಾರರ ಸಂಖ್ಯೆ ಈಗ ಶೇಕಡ 86ರಷ್ಟು ಆಗಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಇಥಿಯೋಪಿಯಾದಂತೆ ಇಲ್ಲೂ ಕೋಟ್ಯಾಂತರ ಜನ ಹಸಿವಿನಿಂದ ಸಾಯುವ ದಿನ ದೂರವಿಲ್ಲ.

1976ರಲ್ಲಿ ಜೀತಪದ್ಧತಿ ನಿರ್ಮೂಲನ ಕಾಯಿದೆಯು ಜಾರಿಗೆ ಬಂದಿದ್ದರೂ, ಗ್ರಾಮೀಣ ಪ್ರದೇಶದಲ್ಲಿ ಅದು ಇನ್ನೂ ಜೀವಂತವಾಗಿದೆ. ಭಾರತದ ನಾಲ್ಕು ಕೋಟಿ ಜೀತದಾಳುಗಳಲ್ಲಿ ಬಹುಪಾಲು ಜನ ದಲಿತ ವರ್ಗಕ್ಕೆ ಸೇರಿದವರು. ದಲಿತ ಸಮುದಾಯದಿಂದ ಬಂದ ಮಹಿಳಾ ಕಾರ್ಮಿಕರಲ್ಲಿ ಶೇಕಡ ಮೂವತ್ತೊಂದರಷ್ಟು ಮಂದಿ ಬಾಲಕಾರ್ಮಿಕರಾಗಿದ್ದಾರೆ. ಶೇಕಡ ತೊಂಬತ್ತರಷ್ಟು ದಲಿತ ಮಹಿಳೆಯರಿಗೆ ಪೌಷ್ಟಿಕ ಆಹಾರವಿಲ್ಲ. ಶೇಕಡ ಇಪ್ಪತ್ತರಷ್ಟಿರುವ ದಲಿತ ಕುಟುಂಬಗಳಿಗೆ ವಿದ್ಯುತ್ ಸೌಕರ್ಯವಿಲ್ಲ. ಶೇಕಡ 90ರಷ್ಟು ಕುಟುಂಬಗಳು ಅತ್ಯಂತ ಹೀನಾಯವಾದ ಅಶುದ್ಧ ಪರಿಸರದಲ್ಲಿ ಬದುಕುತ್ತಿವೆ. ಬಡತನ ರೇಖೆಯ ಕೆಳಗಿರುವವರ ಸಂಖ್ಯೆಯಲ್ಲಿ ದಲಿತರೇ ಹೆಚ್ಚಾಗಿದ್ದಾರೆ. 1993-94ರ ಅಂಕಿ ಸಂಖ್ಯೆಗಳ ಪ್ರಕಾರ ಇವರಲ್ಲಿ ಶೇಕಡ 49.48 ಗ್ರಾಮೀಣ ಪ್ರದೇಶದಲ್ಲಿ ಹಾಗೂ

ಶೇಕಡ 48.11 ನಗರ ಪ್ರದೇಶದಲ್ಲಿದ್ದರು. ಆರ್ಥಿಕ ಸುಧಾರಣಾ ಕ್ರಮಗಳ ಮಾರುಕಟ್ಟೆ ಅರ್ಥ ವ್ಯವಸ್ಥೆಗೆ ದಲಿತರೇ ಮೊದಲ ಬಲಿಪಶುವಾಗಿದ್ದಾರೆ. ಹಸಿರು ಕ್ರಾಂತಿಯ ನಂತರ ಆಹಾರ ಉತ್ಪಾದನಾ ಪ್ರಮಾಣ ಹೆಚ್ಚಾಗಿದ್ದರೂ, ಆಹಾರ ಭದ್ರತೆಯ ಹಕ್ಕಿನಿಂದ ದಲಿತರು ವಂಚಿತರಾಗಿದ್ದಾರೆ. ಸಂವಿಧಾನ ನೀಡಿದ ಮೀಸಲಾತಿ ಸೌಕರ್ಯವು ಸರಿಯಾಗಿ ಜಾರಿಯಾಗಿಲ್ಲ, ಎಂದು ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟುಗಳಿಗೆ ಸಂಬಂಧಿಸಿದ ಆಯೋಗದ 6ನೇ ವರದಿ ತಿಳಿಸಿದೆ. ವಿಶ್ವ ಬ್ಯಾಂಕ್ ಹಾಗೂ ಜಾಗತಿಕ ಹಣಕಾಸು ಸಂಸ್ಥೆಗಳ ಸೂಚನೆಯಂತೆ ರೂಪುಗೊಳ್ಳುತ್ತಿರುವ ಧೋರಣೆಗಳಿಂದಾಗಿ ಸರ್ಕಾರಿ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿವೆ. ಕರ್ನಾಟಕದಲ್ಲಿ ಈಗಿರುವ 27,000 ಸರ್ಕಾರಿ ಹುದ್ದೆಗಳನ್ನು ರದ್ದುಮಾಡಲು ಸೂಚಿಸಿದ ಹಾರ್ನಳ್ಳಿ ರಾಮಸ್ವಾಮಿ ನೇತೃತ್ವದ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸು ದಲಿತರ ಹೊಟ್ಟೆಯ ಮೇಲೆ ಹಾಕಿದ ಬರೆಯಾಗಿದೆ.

ದಲಿತರಿಗೆ ಮೀಸಲಾತಿ ನೀಡಿದ್ದಾಗಿ ಸರ್ಕಾರ ಬೊಬ್ಬೆ ಹಾಕುತ್ತಿದ್ದರೂ, ವಾಸ್ತವ ಸಂಗತಿಗಳು ಭಿನ್ನವಾಗಿವೆ. ಜವಾನರು-ಕಸಗುಡಿಸುವವರು-ಗುಮಾಸ್ತರಂತಹ ಕೆಳಹಂತದ ನೌಕರಿಗಳಲ್ಲಿ ಮಾತ್ರ ಕೊಂಚ ಮೀಸಲಾತಿ ಲಭಿಸಿದ್ದರೂ ಉನ್ನತಮಟ್ಟದ ಹುದ್ದೆಗಳಲ್ಲಿ ಅವಕಾಶ ದೊರಕಿಲ್ಲ. ನ್ಯಾಯಾಂಗ, ಖಾಸಗೀ ಉದ್ಯಮ ಹಾಗೂ ಸ್ವಾಯತ್ತ ಸಂಸ್ಥೆಗಳಲ್ಲಿ ಇಂದಿಗೂ ಮೀಸಲಾತಿ ಅನ್ವಯಿಸುವುದಿಲ್ಲ. ಅನೇಕ ಸರ್ಕಾರಿ ಇಲಾಖೆಗಳಲ್ಲಿ ಅದರಲ್ಲೂ ವಿಶೇಷವಾಗಿ ಎ ಮತ್ತು ಬಿ ಶ್ರೇಣಿ ಹುದ್ದೆಗಳಲ್ಲಿ ದಲಿತರಿಗೆ ನ್ಯಾಯವಾದ ಪಾಲು ದೊರಕಿಲ್ಲ.

ಸ್ವಾತಂತ್ರ್ಯದ ಐದು ದಶಕಗಳ ನಂತರವೂ ಸಾರ್ವಜನಿಕ ಹಾಗೂ ಖಾಸಗೀ ಸ್ಥಳಗಳಲ್ಲಿ ಸವರ್ಣೀಯರೊಂದಿಗೆ ಸಮಾನವಾಗಿ ಕುಳಿತುಕೊಳ್ಳುವ ಅವಕಾಶ ದಲಿತರಿಗಿಲ್ಲ. ಅನೇಕ ಹಳ್ಳಿಗಳಲ್ಲಿ ಮೀಸಲು ಸ್ಥಾನದಲ್ಲಿ ಗೆದ್ದ ದಲಿತ ಪಂಚಾಯಿತಿ ಸದಸ್ಯರನ್ನು ಚಾವಡಿಯ ಕಟ್ಟೆಯ ಕೆಳಗೆ ಕೂಡಿಸಿ ಉಳಿದವರು ಕುರ್ಚಿಯ ಮೇಲೆ ಕುಳಿತು ಸಭೆಗಳನ್ನು ನಡೆಸುವ ಉದಾಹರಣೆಗಳು ಸಾಕಷ್ಟಿವೆ. ಅನೇಕ ಹಳ್ಳಿಗಳಲ್ಲಿ ಅಲ್ಲಿನ ಹೋಟೆಲ್‌ಗಳಲ್ಲಿ ಇಂದಿಗೂ ದಲಿತರಿಗೆ ಪ್ರತ್ಯೇಕವಾಗಿರಿಸಿದ ಅಲ್ಯೂಮಿನಿಯಂ ಇಲ್ಲವೇ ಮಣ್ಣಿನ ಲೋಟದಲ್ಲಿ ಚಹ ಕೊಡಲಾಗುತ್ತಿದೆ. ಇಂತಹ ಹೋಟೆಲುಗಳಲ್ಲಿ ದಲಿತರು ತಮ್ಮ ಲೋಟವನ್ನು ತಾವೇ ತೊಳೆದು ಇಡಬೇಕಾಗಿದೆ. ದೇಶದ ಶೇಕಡ 75ರಷ್ಟು ಹಳ್ಳಿಗಳಲ್ಲಿ ದೇವಸ್ಥಾನಗಳಲ್ಲಿ ದಲಿತರಿಗೆ ಇಂದಿಗೂ ಪ್ರವೇಶವಿಲ್ಲ. ಗ್ರಾಮೀಣ ಪ್ರದೇಶಕ್ಕೆ ವರ್ಗವಾಗಿ ಹೋಗುವ ದಲಿತ ಶಿಕ್ಷಕರಿಗೆ ಹಾಗೂ ಸರ್ಕಾರಿ ನೌಕರರಿಗೆ ಬಾಡಿಗೆಗೆ ಮನೆಗಳು ಸಿಕ್ಕುವುದಿಲ್ಲ.

ದೇಶವನ್ನು ಶತಮಾನದಷ್ಟು ಹಿಂದಕ್ಕೆ ಕೊಂಡೊಯ್ಯುವ ಶಕ್ತಿಗಳು ರಣಕಹಳೆ ಮೊಳಗಿಸುತ್ತಿರುವಾಗ ದಲಿತರಲ್ಲೇ ಹೊಲೆಯರು, ಮಾದಿಗರು ಎಂಬ ಕಚ್ಚಾಟ ಆರಂಭವಾಗಿದೆ. ಮೀಸಲಾತಿಯಲ್ಲಿನ ಅಸಮಾನತೆಯಿಂದಾಗಿ ವೈಮನಸ್ಸು ಉಂಟಾಗಿ ಅದು ದ್ವೇಷದ ರೂಪ ತಾಳುತ್ತಿದೆ. ಈ ಭಿನ್ನಾಭಿಪ್ರಾಯಗಳನ್ನು ದಲಿತ ಸಂಘಟನೆಗಳು ಒಂದೆಡೆ ಸೇರಿ ಬಗೆಹರಿಸಿಕೊಳ್ಳದಿದ್ದರೆ, ಇರುವ ಹಕ್ಕುಗಳಿಂದಲೂ ವಂಚಿತರಾಗ ಬೇಕಾಗುತ್ತದೆ. ಸಮಾನತೆಯ ಕನಸನ್ನು ನನಸು ಮಾಡಲು ಇದಕ್ಕೆ ವಿರೋಧವಾದ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ದಲಿತರು ಏಕಾಕಿಯಾಗಿ ಹೋರಾಡಿದರೆ ಮಾತ್ರ ಸಾಲದು. ಉಳಿದ ಪ್ರಗತಿಪರ ಶಕ್ತಿಗಳ ಜೊತೆ ಸೇರಿ ಹೊಸ ಸಮಾಜದ ನಿರ್ಮಾಣಕ್ಕಾಗಿ ಹೋರಾಟ ಮಾಡುವುದೊಂದೇ ಉಳಿದ ದಾರಿಯಾಗಿದೆ. ಬರೀ ಮೀಸಲಾತಿಗೆ ಜೋತು ಬೀಳದೆ, ಡಾ|| ಅಂಬೇಡ್ಕರ್ ಮತ್ತು ಕೆ.ಆರ್. ನಾರಾಯಣನ್ ಅವರಂತೆ ಉಳಿದವರೊಂದಿಗೆ ಸ್ಪರ್ಧಿಸಿ ಮುಂದೆ ಬರುವ ಛಲ ದಲಿತ ಯುವಕರಲ್ಲಿ ಮೂಡಿಬರಬೇಕಾಗಿದೆ. ●

ಸೌಜನ್ಯ : ಹೊಸತು

ಅಂತರ್ಜಾತೀಯ-ಧರ್ಮೀಯ ವಿವಾಹಿತರಿಗೆ ಮೀಸಲಾತಿ

ಅಂತರ್ಜಾತೀಯ ಮದುವೆಗಳು ಜಾತಿ ಪದ್ಧತಿಯಷ್ಟೇ ಪುರಾತನವಾದವು. ಭಾರತೀಯ ಪುರಾಣಗಳಲ್ಲಿ 'ಇಂಥ' ಮದುವೆಗಳ ಅಸಂಖ್ಯಾತ ಉದಾಹರಣೆಗಳಿವೆ. ಶಿವ, ಕೃಷ್ಣ, ವೆಂಕಟರಮಣ, ಬಿಳಿಗಿರಿ ರಂಗಯ್ಯ ಮೊದಲಾದ ದೇವರುಗಳೆಲ್ಲ ತಂತಮ್ಮ ಜಾತಿಯ ಹೊರಗೆ ಮದುವೆಯಾದವರು ಎಂದು ಹೇಳಲಾಗಿದೆ. ಚೆಲುವನಾರಾಯಣಸ್ವಾಮಿ ಅಂತರ್ಧರ್ಮೀಯ ವಿವಾಹವಾದವನು. ಹಾಗೆ ನೋಡಿದರೆ ಮಹಾಭಾರತವೇ ಅಂತರ್ಜಾತೀಯ ವಿವಾಹವಾದ ದಂಪತಿಗಳ, ಮತ್ತವರ ಮಕ್ಕಳ ಕತೆಯಾಗಿದೆ. ಹತ್ತಾರು ಋಷಿ ಮುನಿಗಳು ಜಾತಿ ಮೀರಿ ಮದುವೆಯಾದವರೆಂದು ಹೇಳಲಾಗಿದೆ. ವಸಿಷ್ಠ-ಅರುಂಧತಿ, ಜಮದಗ್ನಿ-ರೇಣುಕಾ, ಪರಾಶರ-ಮತ್ಸ್ಯಗಂಧಿ, ವಿಶ್ವಾಮಿತ್ರ-ಮೇನಕೆ ಇಂಥ ಕೆಲವು ಜೋಡಿಗಳು.

ಈ ವಿಷಯದಲ್ಲಿ ಆಧುನಿಕ ಭಾರತವೇನೂ ಹಿಂದೆ ಬಿದ್ದಿಲ್ಲ. ಭಾರತದ ಪ್ರಧಾನ ಮಂತ್ರಿಗಳಾಗಿದ್ದ ಇಂದಿರಾಗಾಂಧಿ ಮತ್ತವರ ಮಗ ರಾಜೀವ್ ಗಾಂಧಿ ಅಂತರ್‌ಧರ್ಮೀಯ ವಿವಾಹವಾದವರು. ಜಿನ್ನಾ, ಛಾಗಲಾ ಹಾಗೂ ಹುಮಾಯೂನ್ ಕಬೀರರು ಕೂಡ ಅಂತರ್‌ಧರ್ಮೀಯ ವಿವಾಹವಾದವರು.

ಈ ಮದುವೆಗಳಲ್ಲೆಲ್ಲ ಅತ್ಯುತ್ತಮ ಮಾದರಿಯೆಂದರೆ ನಮ್ಮ ಪ್ರೀತಿಯ ಮಾಜಿ ರಾಷ್ಟ್ರಪತಿಗಳಾದ ಕೆ.ಆರ್. ನಾರಾಯಣನ್ ಅವರ ಮದುವೆ. ಇದೊಂದು ಅಂತರ್ಜಾತೀಯ, ಅಂತರ್ಧರ್ಮೀಯ, ಅಂತರ್ಜನಾಂಗೀಯ ಹಾಗೂ ಅಂತರ್‌ರಾಷ್ಟ್ರೀಯ ಮದುವೆ.

ಕರ್ನಾಟಕದಲ್ಲಿ ಅಂತರ್ಜಾತೀಯ ಮದುವೆಗಳ ಕುತೂಹಲಕರ ಇತಿಹಾಸವಿದೆ. ಬಸವಣ್ಣನವರು ಇಂಥ ಮದುವೆಗಳ ಬಹುದೊಡ್ಡ ಪ್ರೇರಕರಾಗಿದ್ದರು. ಕವಿ ಸರ್ವಜ್ಞನೂ ಅಂತರ್ಜಾತೀಯ ವಿವಾಹವಾದವನೇ.

ಮಹಾತ್ಮಾಗಾಂಧಿಯವರು ಅಂತರ್ಜಾತೀಯವಲ್ಲದ ವಿವಾಹಗಳಿಗೆ ತಾವು ಬರುವುದಿಲ್ಲವೆಂದು ಶಪಥ ಮಾಡಿದ್ದರು. ಸ್ವಾಮಿ ವಿವೇಕಾನಂದರು ಜಾತಿಯೊಳಗೆ ನಡೆಯುವ ಮದುವೆಗಳನ್ನು ಖಂಡಿಸಿದ್ದರು. ಪಂಡಿತ್ ಜವಹರಲಾಲ್ ನೆಹರೂ ತಮ್ಮ ಮನೆಯಲ್ಲೇ ಅಂತರ್ಜಾತೀಯ ವಿವಾಹಗಳ ಪರಂಪರೆಯನ್ನು ಹುಟ್ಟು ಹಾಕಿದರು. ಡಾ. ಬಾಬಾಸಾಹೇಬ್ ಅಂಬೇಡ್ಕರರು ಅಂತರ್ಜಾತೀಯ ವಿವಾಹವಾದವರು ಹಾಗೂ ಅಂತರ್ಜಾತೀಯ ವಿವಾಹಗಳ ಮೂಲಕ ಜಾತಿ ವಿನಾಶ ಮಾಡಬಹುದೆಂದು ಒತ್ತಿ ಹೇಳಿದವರು. ಡಾ. ರಾಮಮನೋಹರ ಲೋಹಿಯಾ ಅವರು ಅಂತರ್ಜಾತೀಯ ವಿವಾಹಗಳ ಅಗತ್ಯಗಳನ್ನು ಒತ್ತಿ ಹೇಳಿದರು ಮತ್ತು ಎಲ್ಲ ಗೆಜೆಟೆಡ್ ಹುದ್ದೆಗಳನ್ನು ಅಂತರ್ಜಾತೀಯ ವಿವಾಹಿತರ ಕುಟುಂಬಗಳಿಗೆ ನೀಡಬೇಕೆನ್ನುವ ಹಂತದವರೆಗೂ ಹೋದರು. ಚರಣ್ ಸಿಂಗರು 22-5-1954ರಲ್ಲೇ ಅಂದಿನ ಪ್ರಧಾನಮಂತ್ರಿಯವರಿಗೆ ಪತ್ರ ಬರೆದು ಅಂತರ್ಜಾತೀಯ ವಿವಾಹವಾದ ಕುಟುಂಬದ ಸದಸ್ಯರಿಗೆ ಮೀಸಲಾತಿ ನೀಡಬೇಕೆಂದು ಒತ್ತಾಯಿಸಿದರು. ಕ್ರಾಂತಿಕಾರಿ ಕನ್ನಡ ಕವಿ ಹಾಗೂ ಶಾಸಕ ಡಾ. ಸಿದ್ಧಲಿಂಗಯ್ಯ ಕರ್ನಾಟಕದ ವಿಧಾನ ಪರಿಷತ್ತಿನಲ್ಲಿ ಖಾಸಗಿ ನಿರ್ಣಯವೊಂದನ್ನು ಮಂಡಿಸಿ ಅಂತರ್ಜಾತೀಯ ವಿವಾಹಿತರಿಗೆ ಶೇ. 5ರಷ್ಟು ಹುದ್ದೆಗಳನ್ನು ಮೀಸಲಾಗಿರಿಸಬೇಕೆಂದು ಕೋರಿದ್ದರು.

ಪ್ರೊ. ರವಿವರ್ಮ ಕುಮಾರ್

ಸಂವಿಧಾನದ ಆಶಯದಂತೆ ಜಾತ್ಯಾತೀತ ಮೌಲ್ಯವನ್ನು ನಿಜವಾಗಿಯೂ ಸಾಕಾರಗೊಳಿಸುತ್ತಿರುವವರು ಈ ದೇಶದ ಅನೇಕ ಅಂತರ್ಜಾತಿ ಮತ್ತು ಅಂತರ್ಧರ್ಮೀಯ ವಿವಾಹಿತರು. ಅತ್ತ ಸಮಾಜದ ಅಸಹನೆಗೂ ಗುರಿಯಾಗಿ ಸರ್ಕಾರದ ಅಲಕ್ಷ್ಯಕ್ಕೂ ಒಳಗಾಗುತ್ತಿರುವ ಇವರ ರಕ್ಷಣೆಗೆ ಧಾವಿಸಿದ್ದು, ಕರ್ನಾಟಕ ರಾಜ್ಯ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ. ಆಯೋಗದ ಹಿಂದಿನ ಅಧ್ಯಕ್ಷರಾಗಿದ್ದ ಪ್ರೊ. ರವಿವರ್ಮ ಕುಮಾರ್‌ರವರು ಅಂತರ್ಜಾತಿ/ ಅಂತರ್ಧರ್ಮೀಯ ವಿವಾಹಿತರಿಗೆ ಮೀಸಲಾತಿ ಕೋರಿ ಸರ್ಕಾರಕ್ಕೆ ಶಿಫಾರಸು ಸಲ್ಲಿಸಿದ್ದರು.

ಇಷ್ಟೆಲ್ಲ ಪ್ರಯತ್ನಗಳು ನಡೆಯುತ್ತಿದ್ದರೂ ಕೇಂದ್ರ ಸರ್ಕಾರವಾಗಲೀ ಅಥವಾ ರಾಜ್ಯ ಸರ್ಕಾರವಾಗಲೀ ಈ ಕುರಿತು ನೀತಿಯೊಂದನ್ನು ಜಾರಿಗೊಳಿಸಲಾಗಿಲ್ಲ. ತಮಿಳುನಾಡಿನಲ್ಲಿ ಮಾತ್ರ ವೈದ್ಯಕೀಯ ಕಾಲೇಜುಗಳಲ್ಲಿ ಅಂತರ್ಜಾತೀಯ ವಿವಾಹಿತರ ಕುಟುಂಬದ ಸದಸ್ಯರಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅಂತರ್ಜಾತೀಯ ವಿವಾಹವಾದ ದಂಪತಿಗಳನ್ನು ಹಾಗೂ ಮಕ್ಕಳನ್ನು ಹಿಂದುಳಿದ ವರ್ಗವೆಂದು ಪರಿಗಣಿಸಬೇಕೆಂಬ ಬೇಡಿಕೆಗಳನ್ನು ನಮ್ಮ ಆಯೋಗ ಸ್ವೀಕರಿಸಿದೆ.

ಸಾಮಾಜಿಕ ಅನ್ಯಾಯಕ್ಕೊಳಗಾದ ವರ್ಗ : ಅಂತರ್ಜಾತೀಯ ವಿವಾಹಿತರು ಮತ್ತವರ ಕುಟುಂಬಗಳು ಸಾಮಾಜಿಕ ಕಿರುಕುಳಗಳಿಗೆ ತುತ್ತಾಗಿರುವುದನ್ನು ತೋರಿಸುವ ಸಾಕಷ್ಟು ಸಾಕ್ಷ್ಯಾಧಾರಗಳನ್ನು ನಮ್ಮೆದುರು ನೀಡಲಾಗಿದೆ. ಶ್ರೇಣೀಕೃತ ಅಸಮಾನತೆಯುಳ್ಳ ಈ ಜಾತಿಪೀಡಿತ ಸಮಾಜದಲ್ಲಿ ಸಂವಿಧಾನವು ಸ್ವಾತಂತ್ರ್ಯ ಹಾಗೂ ಸಮಾನತೆಗಳನ್ನು ನೀಡಿ 50 ವರ್ಷವಾದ ನಂತರವೂ ಅಂತರ್ಜಾತೀಯ ವಿವಾಹ ಇನ್ನೂ ನಿಷಿದ್ಧವಾಗಿಯೇ ಉಳಿದಿದೆ ಎನ್ನುವುದನ್ನು ಅರ್ಜಿದಾರರು ಸಮರ್ಥವಾಗಿ ತೋರಿಸಿದ್ದಾರೆ. ಇಂಥ ಕುಟುಂಬಗಳು ಸಾಮಾಜಿಕ ಸಂಕಷ್ಟಗಳಿಗೆ ಹಾಗೂ ಭೇದ ಭಾವಗಳಿಗೆ ತುತ್ತಾಗಿವೆ ಎನ್ನುವುದನ್ನು ಅರ್ಜಿದಾರರು ಮನಮುಟ್ಟುವಂತೆ ಮಂಡಿಸಿದ್ದಾರೆ. ಈ ಎಲ್ಲ ಸಮಸ್ಯೆಗಳು 'ಇಂಥ' ವಿವಾಹಗಳಿಂದಾಗಿ ಈ ಜೋಡಿಗಳು ಎದುರಿಸಬೇಕಾಗಿ ಬಂದಂಥವು. ಈ ಅರ್ಜಿಗಳಲ್ಲಿ ದೂರಲಾಗಿರುವ ಸಾಮಾಜಿಕ ಕಿರುಕುಳ, ಬೇಧಭಾವ ಹಾಗೂ ಅಡ್ಡಿ ಆತಂಕಗಳು ಅವರ ವಿವಾಹಪೂರ್ವ ಸ್ಥಾನದಲ್ಲಿ ಅವರ ಮೇಲೆ ಹೇರಲ್ಪಟ್ಟವಲ್ಲ. ಹೀಗಾಗಿ ಅವರು ವಿವಾಹವಾಗುವ ತನಕ ಸಾಮಾಜಿಕವಾಗಿ ಪ್ರತಿಕೂಲ ಪರಿಸ್ಥಿತಿಯಲ್ಲಿದ್ದ ವರ್ಗಕ್ಕೆ ಸೇರಿದವರಾಗಿರಲಿಲ್ಲ. ಹೀಗಾಗಿ ಈ ಕಾರಣದಿಂದ ಅವರ ಶಿಕ್ಷಣಕ್ಕೆ ಅಡ್ಡಿಯಾಗಿರಲಿಲ್ಲ. ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳು ಹಾಗೂ ಬುಡಕಟ್ಟುಗಳಂತೆ ಈ ವರ್ಗ ಸಾಮಾಜಿಕವಾಗಿ ಪ್ರತಿಕೂಲ ಸ್ಥಿತಿಯಲ್ಲಿರುವ ಮತ್ತು ಬೇಧಭಾವಕ್ಕೆ ತುತ್ತಾಗಿರುವ ಜನವರ್ಗವಲ್ಲ. ಹೀಗಿರುವಾಗ ಈ ವರ್ಗವನ್ನು ಸಾಮಾಜಿಕವಾಗಿ ಹಿಂದುಳಿದ ವರ್ಗವೆಂದು ಕರೆಯುವುದು ಕಷ್ಟ. ಇಂಥ ವಿವಾಹಗಳು ಸಮಾಜದ ಬಡವರ್ಗಗಳ ನಡುವೆ, ಕಡಿಮೆ ಶಿಕ್ಷಣ ಪಡೆದ ಹಾಗೂ ಹೆಚ್ಚು ಮುಂದುವರಿಯದ ವರ್ಗಗಳ ನಡುವೆ ನಡೆದಿವೆ ಎಂಬುದನ್ನೂ ನಾವು ಮನಗಂಡಿದ್ದೇವೆ. ಆದರೆ ಮದುವೆಯೊಂದೇ ಅವರ ವಿವಾಹಪೂರ್ವದ ಸಾಧನೆಗಳನ್ನು ಕಿತ್ತುಕೊಂಡು ಅವರನ್ನು ಸಾಮಾಜಿಕವಾಗಿ ಕೆಳಸ್ತರಕ್ಕೆ ತಳ್ಳಿತೆಂದು ಹೇಳಲಾಗದು. ಆದರೆ ಅವರ ಯಾತನೆಯು ಕೆಳಜಾತಿಗಳಲ್ಲಿ ಅಥವಾ ಅಸ್ಪೃಶ್ಯ ಜಾತಿಗಳಲ್ಲಿ ಹುಟ್ಟಿದವರಿಗಿಂತ ಮಿಗಿಲಾದುದು. ಇವರು ಜಾತಿ ನಿಯಮಗಳನ್ನು ಉಲ್ಲಂಘಿಸಿದರೆಂಬ ಕಾರಣಕ್ಕಾಗಿ ಮುಂದುವರಿದ ಜಾತಿಗಳ ಅಥವಾ ಹಿಂದುಳಿದ ಜಾತಿಗಳ ಇಡೀ ಸಮಾಜವೇ ಇವರಿಗೆ ಕಿರುಕುಳ ನೀಡಿದೆ. ಅವರು ಎದುರಿಸಿದ ಅಮಾನವೀಯ ಹಾಗೂ ನೀಚ ದಮನಗಳನ್ನು ಸಿದ್ಧಮಾಡಿ ತೋರಿಸುವ ಸಾಕ್ಷ್ಯ ನಮ್ಮೆದುರು ಸಾಕಷ್ಟಿದೆ. ಸಮಾಜವು ಇವರಿಗೆ ಮಾಡಿರುವ ಗಾಯಗಳಿಗೆ ಉಪಶಮನ ನೀಡಲು ಪ್ರತ್ಯೇಕವಾದ ಸಹಾನುಭೂತಿಯುತ ವ್ಯವಸ್ಥೆಯೊಂದನ್ನು ಮಾಡಬೇಕೆಂದು ನಮ್ಮನ್ನು

ಒತ್ತಾಯಿಸಲು ಸಾಕಷ್ಟು ಸಾಕ್ಷ್ಯ ಇಲ್ಲಿದೆ. ಆದ್ದರಿಂದ ನಾವು ಇವರನ್ನು ಸಾಮಾಜಿಕವಾಗಿ ಅನ್ಯಾಯಕ್ಕೊಳಗಾದ (Socially Deprived Class) ವರ್ಗವೆಂದು ಘೋಷಿಸುತ್ತೇವೆ.

ಈ ವರ್ಗ ಅನುಭವಿಸಿರುವ ಯಾತನೆ ಹಾಗೂ ಹಾನಿಗಳು ನಿಜವಾದ ಸಂಗತಿಗಳಾಗಿದ್ದು, ಅವನ್ನು ನಮ್ಮೆದುರು ಮನಮುಟ್ಟುವಂತೆ ಸಿದ್ಧಪಡಿಸಿ ತೋರಲಾಗಿದೆ. ಈ ದುಃಖ, ಹಾನಿ ಹಾಗೂ ಕಿರುಕುಳಗಳಿಗೆ ಕೊನೆ ಹೇಳಲೇಬೇಕು. ಈ ಹೊಸವರ್ಗವು ತಾನು ಇರುವುದನ್ನೆಲ್ಲಾ ಕಳೆದುಕೊಳ್ಳುವುದರ ಬದಲು ಹೊಸತೇನನ್ನಾದರೂ ಗಳಿಸುವಂತೆ ಮಾಡಬೇಕಾಗಿದೆ. ಈ ವಾಸ್ತವಾಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅಂತರ್ಜಾತೀಯ ಹಾಗೂ ಅಂತರ್ಧರ್ಮೀಯ ವಿವಾಹಗಳ ಲಾಭದಾಯಕ ಫಲಗಳನ್ನು ಒಗ್ಗೂಡಿಸುವ ಹಾಗೂ ಇವನ್ನೆಲ್ಲಾ ಸಾಂಸ್ಥೀಕರಣಗೊಳಿಸಿ ಜಾತಿರಹಿತವಾದ, ಸಮಾನತಾಭಾವದ, ಜಾತ್ಯತೀತ ಸಮಾಜದ ಬೀಜಗಳನ್ನಾಗಿಸುವ ಕೆಲಸ ಮಾಡಬೇಕಾಗಿದೆ. ಜಾತಿ ಪದ್ಧತಿಯನ್ನು ಮುರಿದು ಅಂತರ್ಜಾತೀಯ ವಿವಾಹವಾಗುವವರನ್ನು ಜಾತಿ ಮತಗಳ ಚೌಕಟ್ಟಿಗೆ ಮತ್ತೆ ದೂಡಬಾರದು. ಇದು ಸಾಧ್ಯವಾಗಬೇಕಾದರೆ, ಅಂತರ್ಜಾತೀಯ ಹಾಗೂ ಅಂತರ್ಧರ್ಮೀಯ ವಿವಾಹವಾದವರಿಗೆ ಮತ್ತು ಅವರ ಮಕ್ಕಳಿಗೆ ಈ ವಿವಾಹದ ಕಾರಣಕ್ಕಾಗಿ ಏನೂ ಕೊರತೆಯುಂಟಾಗದು ಎಂಬ ಭರವಸೆಯಿರುವಂತೆ ಮಾಡಬೇಕು. ಪರ್ಯಾಯವಾದ ಕಲ್ಯಾಣ ಯೋಜನೆಗಳಿಂದ ಅವರಿಗೆ ಲಾಭ ದೊರೆಯುವಂತಾಗಬೇಕು.

"ಎಲ್ಲ ಸಾಮಾಜಿಕ ಗುಂಪುಗಳನ್ನೂ ಸಮಾನ ಸಾಂಸ್ಕೃತಿಕ ಪಾತಳಿಯ ಮೇಲೆ ತರುವ ತನಕ, ಈ ಗುಂಪುಗಳ ನಡುವೆ ಸಾಮಾಜಿಕ ಹೊಕ್ಕುಬಳಕೆ ಅಸಾಧ್ಯವಾಗಿಬಿಡುತ್ತದೆ. ಈ ತನಕ ಅಂತರ್ಜಾತೀಯ ವಿವಾಹಗಳು ಯಾವುದೇ ಹಿಂಜರಿಕೆಗಳಿಲ್ಲದೆ ಒಬ್ಬರೊಡನ್ನೊಬ್ಬರು ಬೆರೆಯುವ ಮಾಧ್ಯಮವಾಗಿ ಒಬ್ಬರೊಡನ್ನೊಬ್ಬರು ಬೆರೆಯುವ ಮಾಧ್ಯಮವಾಗಿ ಸಾಮಾಜಿಕ ಭಾವೈಕ್ಯದ ಅತ್ಯಂತ ಶಕ್ತ ಸಾಧನಗಳಾಗಿವೆ".

-ಜಸ್ಟೀಸ್ ಸಾವಂತ್

(1992 Supp (3) Sc (217)

ಥಾಮಸ್ V/S ಕೇರಳ ರಾಜ್ಯ ಸರ್ಕಾರ ಕೇಸಿನಲ್ಲಿ ಸುಪ್ರೀಂಕೋರ್ಟು ಹೀಗೆ ಹೇಳಿದೆ :

ಕೊನೆಯದಾಗಿ, ಈ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯುವುದು-ಸಾಮಾಜಿಕ ಪರಿಸರವನ್ನು ಉತ್ತಮಗೊಳಿಸುವುದರಿಂದ, ಶೈಕ್ಷಣಿಕ ಸವಲತ್ತುಗಳನ್ನು ಹೆಚ್ಚಿಸುವುದರಿಂದ ಹಾಗೂ ಪ್ರಭುತ್ವದ ಬೃಹತ್ ಕಾರ್ಯಕ್ರಮವು ಬೆಂಬಲಕ್ಕೆ ನಿಂತು ಪ್ರಾಯೋಜಿಸುವ ಅಂತರ್ಜಾತೀಯ ಹಾಗೂ ಅಂತರ್‌ವರ್ಗೀಯ ಮದುವೆಗಳಲ್ಲಿ ಜಾತಿಗಳ ಮಿಶ್ರಣದ ಮೂಲಕ.

-ಜಸ್ಟೀಸ್ ಕೃಷ್ಣಅಯ್ಯರ್ (AIR 1976 SC 490)

ಸಾಮಾಜಿಕ ಹಾಗೂ ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಗಳನ್ನು ಸಾಧಿಸುವ ಸಾಧನವಾಗಿ ವಿಭಿನ್ನ ಅಭ್ಯಾಸ, ಪದ್ಧತಿ ಮತ್ತು ಸಂಪ್ರದಾಯಗಳ ಮದುವೆಗಳು ಒಂದರೊಡನೊಂದು ಬೆರೆಯುವಂತೆ ಮಾಡುವ, ಹಾಗೂ ಸಾಮರಸ್ಯ, ಪ್ರೀತಿಭಾವ ಹಾಗೂ ವ್ಯಕ್ತಿಗಳಲ್ಲಿ ಆತ್ಮಗೌರವ ಇವನ್ನೆಲ್ಲಾ ಉಂಟು ಮಾಡುವಂತೆ ಭಾರತೀಯ ಸಂಸ್ಕೃತಿಯನ್ನು ರೂಪಿಸುವ ಮಾರ್ಗವೇ ಅಂತರ್ಜಾತೀಯ, ಅಂತರ್‌ಪಂಗಡ ಹಾಗೂ ಅಂತರ್ಧರ್ಮೀಯ ವಿವಾಹಗಳಿಗೆ ಉತ್ತೇಜನ ನೀಡುವಂಥ ಮಾರ್ಗವಾಗಿದೆ.

(ವಲ್ಸಮ್ಮ ಪಾಲ್ ಕೇಸಿನಲ್ಲಿ ಸುಪ್ರೀಂಕೋರ್ಟಿನ ಒಕ್ಕೊರಲಿನ ಹೇಳಿಕೆ, AIR 1996 SC 1011 ಪ್ಯಾರಾ 22)

> "ಆಡಳಿತಾತ್ಮಕ ಸೇವೆ ಹಾಗೂ ಸೇನೆಯ ನೇಮಕಾತಿಗೆ ಇನ್ನಿತರ ಅರ್ಹತೆಗಳ ಜೊತೆಗೆ ಶೂದ್ರ ಮತ್ತು ಬ್ರಾಹ್ಮಣರ ನಡುವಣ ವಿವಾಹವೂ ಒಂದು ಅರ್ಹತೆಯೆಂದು ನಿರ್ದೇಶಿಸಿದ ದಿನ, ಹಾಗೂ ಸಹಭೋಜನಕ್ಕೆ ಸಮ್ಮತಿಸದಿರುವುದನ್ನು ಈ ಸೇವೆಗಳಿಗೆ ಅನರ್ಹತೆಯೆಂದು ಪರಿಗಣಿಸಿದ ದಿನ, ಜಾತಿಪದ್ಧತಿಯ ವಿರುದ್ಧ ಪ್ರಾಮಾಣಿಕವಾದ ಯುದ್ಧ ಆರಂಭವಾಗುತ್ತದೆ"
>
> —ಡಾ|| ರಾಮಮನೋಹರ ಲೋಹಿಯಾ

ಈ ಎಲ್ಲ ವಾಸ್ತವಾಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಹಾಗೂ ಮೀಸಲಾತಿಯ ಪ್ರಮುಖ ಗುರಿಯನ್ನು ನಮ್ಮೆದುರು ಇರಿಸಿಕೊಂಡು ನೋಡಿದಾಗ, ಅಂತರ್ಜಾತೀಯ ವಿವಾಹಿತರನ್ನು ಹಾಗೂ ಅವರ ಮಕ್ಕಳನ್ನು ಸಂವಿಧಾನದ 14ನೇ ಪರಿಚ್ಛೇದದಡಿ ಪ್ರತ್ಯೇಕವಾದ ಹಾಗೂ ವಿಶಿಷ್ಟವಾದ ವರ್ಗವೆಂದು ಗುರುತಿಸಬಹುದೆಂದು ನಮ್ಮ ಸರ್ವಾನುಮತದ ಅಭಿಪ್ರಾಯವಾಗಿದೆ. ಸಂವಿಧಾನದ 15(4)ನೇ ವಿಧಿ ಹಾಗೂ 16(4)ನೇ ಪರಿಚ್ಛೇದದ ಅವಕಾಶಗಳನ್ನು ಉಲ್ಲೇಖಿಸದೆಯೇ, ಸೇನಾ ಸಿಬ್ಬಂದಿ, ಕ್ರೀಡಾ ಪಟುಗಳು ಹಾಗೂ ಎನ್.ಸಿ.ಸಿ. ಅಭ್ಯರ್ಥಿಗಳನ್ನು ಅವರ ಪ್ರಗತಿಗಾಗಿ ವಿಶೇಷ ಅವಕಾಶಗಳನ್ನು ಕಲ್ಪಿಸಿಕೊಡಲು ಗುರುತಿಸಿರುವ ಮಾದರಿಯಲ್ಲಿಯೇ ಅಂತರ್ಜಾತೀಯ ವಿವಾಹಿತರನ್ನು ವರ್ಗೀಕರಿಸಬೇಕೆಂದು ನಾವು ಶಿಫಾರಸು ಮಾಡುತ್ತಿದ್ದೇವೆ. ಸುಪ್ರೀಂ ಕೋರ್ಟಿನ ಭಾಷೆಯಲ್ಲಿಯೇ ಹೇಳುವುದಾದರೆ, ಇವರು ಲಂಬ ಮೀಸಲಾತಿಯ (Vertical reservation) ವಿಭಾಗಕ್ಕೆ ಸೇರುವುದಿಲ್ಲ. ಆದರೆ ಸಮಮಟ್ಟದ ಮೀಸಲಾತಿಯ (horizontal reservation) ಪಟ್ಟಿಗೆ ಸೇರುತ್ತಾರೆ. ಸಮಾಜದ ಈ ವರ್ಗ ಕುರಿತಂತೆ ವ್ಯಾಪಕವಾದ ಹಾಗೂ ಸವಿವರವಾದ ಸಮೀಕ್ಷೆಯನ್ನು ಕೈಗೊಳ್ಳುವುದು ಸಾಧ್ಯವಾಗುವ ತನಕ, ತಾತ್ಕಾಲಿಕವಾಗಿ ಈ ವರ್ಗಕ್ಕೆ ಕೊನೆಯ ಪಕ್ಷ ಶೇಕಡಾ 1ರಷ್ಟು ಮೀಸಲಾತಿಯನ್ನು ನೀಡಬೇಕೆಂಬುದು ನಮ್ಮ ಅಭಿಪ್ರಾಯವಾಗಿದೆ. ಈ ಮೀಸಲಾತಿಯನ್ನು ಕೇವಲ ಸರ್ಕಾರಿ ಸೇವೆಗಳಲ್ಲಿ ಮಾತ್ರವಲ್ಲದೆ ವೃತ್ತಿಪರ ಶಿಕ್ಷಣದಲ್ಲೂ ನೀಡಬೇಕಾಗಿದೆ. ಇನ್ನುಳಿದ ಎಲ್ಲ ಕ್ಷೇತ್ರಗಳಲ್ಲಿ ಎಲ್ಲೆಲ್ಲಿ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ವಿಶೇಷ ಅವಕಾಶಗಳನ್ನು ಕಲ್ಪಿಸಲಾಗಿದೆಯೋ ಅಂಥ ಎಲ್ಲ ಕ್ಷೇತ್ರಗಳಲ್ಲಿ ಈ ವರ್ಗವನ್ನೂ ವಿಶೇಷ ಅವಕಾಶಗಳಿಗಾಗಿ ಪರಗಣಿಸಬಹುದಾಗಿದೆ. ಇಂಥ ಎಲ್ಲ ಕಟುಂಬಗಳ ವ್ಯಾಪಕ ಸಮೀಕ್ಷೆಯ ನಂತರ ಈ ಶೇಕಡಾ 1ರ ಮೀಸಲಾತಿಯನ್ನು ಪುನರ್ ಪರಿಶೀಲಿಸಬೇಕು ಹಾಗೂ ಇಂಥ ಮದುವೆಗಳು ಕಾಲದಿಂದ ಕಾಲಕ್ಕೆ ಹೆಚ್ಚುತ್ತಿರುವುದನ್ನು ವಸ್ತುಸತ್ಯದ ಅಂಕಿ ಅಂಶಗಳು ಸೂಚಿಸುತ್ತಿದ್ದರೆ, ಈ ಮೀಸಲಾತಿಯ ಪ್ರಮಾಣ ಹೆಚ್ಚುವಂತಾಗಬೇಕು. ಸಾಮಾಜಿಕ ಅನ್ಯಾಯಕ್ಕೊಳಗಾದ ಈ ವರ್ಗ (socially deprived class) ಕುರಿತ ದೃಢನಿಶ್ಚಯದ ಕಾರ್ಯಕ್ರಮ (affirmative action) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಹಿಂದುಳಿದ ವರ್ಗಗಳ ಮೀಸಲಾತಿಗಳ ಜೊತೆಗೇ ಸಮವ್ಯಾಪಕವಾಗಿರಬೇಕು.

ಅರ್ಜಿದಾರನು ಎತ್ತಿರುವ ಗಂಭೀರ ಪ್ರಶ್ನೆಗಳ ಪರಿಣಾಮಗಳನ್ನೂ, ಅವರು ಎದುರಿಸುತ್ತಿರುವ ಸಮಸ್ಯೆಗಳ ಅಗಾಧತೆಯನ್ನೂ ಅದೆಲ್ಲಕ್ಕಿಂತ ಮುಖ್ಯವಾಗಿ ಮೀಸಲಾತಿಯ ಅಂತಿಮ ಗುರಿಯನ್ನೂ ಪರಿಶೀಲಿಸಿದ ಮೇಲೆ ಇದು ಸಾರ್ವಜನಿಕ ಮಹತ್ವವುಳ್ಳ ಪ್ರಕರಣವೆಂದು ಪರಿಗಣಿಲು ಅತ್ಯಂತ ಸೂಕ್ತವಾದದ್ದೆಂಬುದನ್ನು ನಾವು ಕಂಡುಕೊಂಡಿದ್ದೇವೆ. ಅದರ ಪ್ರಕಾರ ನಾವು ಕರ್ನಾಟಕ ಸರ್ಕಾರಕ್ಕೆ ಈ ಸಲಹೆಗಳನ್ನು ನೀಡುತ್ತಿದ್ದೇವೆ.

1) ಅಂತರ್ಜಾತೀಯ ಮತ್ತು ಅಂತರ್ಧರ್ಮೀಯ ವಿವಾಹಿತರು ಮತ್ತವರ ಮಕ್ಕಳನ್ನು ಹಿಂದುಳಿದ ವರ್ಗಗಳೆಂದು ಪರಿಗಣಿಸಬೇಕೆಂಬ ಬೇಡಿಕೆಯನ್ನು ತಿರಸ್ಕರಿಸಬೇಕು.

2) ಇವರನ್ನು ಸಂವಿಧಾನ 14ನೇ ಪರಿಚ್ಛೇದದಡಿ ಪ್ರತ್ಯೇಕ ವರ್ಗವಾಗಿ ಗುರುತಿಸಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಹಾಗೂ ಉಳಿದ ಹಿಂದುಳಿದ ವರ್ಗಗಳಿಗೆ ನೀಡಿರುವ ಶೇಕಡಾವಾರು ಮೀಸಲಾತಿಯಲ್ಲಲ್ಲದೆ ಪ್ರತ್ಯೇಕವಾಗಿ ಸಮಮಟ್ಟದ ಮೀಸಲಾತಿಯ (horizontal reservation) ಮೂಲಕ ಶೇಕಡಾ 1ರ ಮೀಸಲಾತಿಯನ್ನು ಈ ವರ್ಗಕ್ಕೆ ಒದಗಿಸಬೇಕು. ಈ ಮೀಸಲಾತಿಯು ಸರ್ಕಾರಿ ಸೇವೆಗಳು ಹಾಗೂ ವೃತ್ತಿ ಶಿಕ್ಷಣಗಳಿಗೆ ಪ್ರವೇಶಗಳಲ್ಲಿ; ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಎಲ್ಲೆಲ್ಲಿ ಈಗ ವಿಶೇಷ ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆಯೋ ಅಂಥ ಕ್ಷೇತ್ರಗಳಿಗೆಲ್ಲಾ ಅನ್ವಯಿಸುವಂತಿರಬೇಕು.

3) ಕಾಲಕಾಲಕ್ಕೆ ಈ ಮೀಸಲಾತಿ ಯೋಜನೆಯನ್ನು ಪುನರ್ ವಿಮರ್ಶೆ ಮಾಡಬೇಕು ಹಾಗೂ ಸಮೀಕ್ಷೆ ಮೇಲ್ಮುಖ ಪುನರ್ ಪರಿಶೀಲನೆಯನ್ನು (up word revision) ಸೂಚಿಸಿದರೆ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸಬೇಕು. ●

(ಇಂಗ್ಲಿಷಿನಲ್ಲಿ ಸಲ್ಲಿಸಲಾದ ಈ ವರದಿಯ ಕನ್ನಡ ಅನುವಾದ : 'ಒಲವು')

ದೇಶದ ಅವನತಿಗೆ ಪುರೋಹಿತರೇ ಕಾರಣ

> ನಾಡು ಬದುಕಿರುವುದೇ ದೀನರ ಜೋಪಡಿಗಳಲ್ಲಿ ಎಂಬುದನ್ನು ಜ್ಞಾಪಕದಲ್ಲಿಡಿ. ಅಯ್ಯೋ! ಆದರೆ ಅವರಿಗೆ ಯಾರೂ ಸಹಾಯ ಮಾಡಿಲ್ಲ...ಅವರನ್ನು ಮೇಲೆತ್ತಬಲ್ಲಿರಾ? ಅವರೊದಿಗೆ ಬಂದಿರುವ ಆಧ್ಯಾತ್ಮಿಕ ಪ್ರವೃತ್ತಿಯನ್ನು ನಾಶಮಾಡದೆ, ಕಳೆದುಕೊಂಡ ವ್ಯಕ್ತಿತ್ವವನ್ನು ಅವರಿಗೆ ಪುನಃ ಕೊಡಬಲ್ಲಿರಾ? ಸ್ವಾತಂತ್ರ್ಯದಲ್ಲಿ, ಕ್ರಿಯೆಯಲ್ಲಿ, ಶಕ್ತಿಯಲ್ಲಿ ಪಾಶ್ಚಾತ್ಯರನ್ನು ಕೂಡ ಮೀರಿಸಿ, ಅದೇ ಸಮಯದಲ್ಲಿ ಧಾರ್ಮಿಕ ಸಂಸ್ಕೃತಿ ಸ್ವಭಾವಗಳಲ್ಲಿ ಪೂರ್ಣ ಭಾರತೀಯರಾಗಬಲ್ಲಿರಾ?...ಪ್ರಾಣಹೋದರೂ ಸರಿ. ದೀನರಿಗೆ ದಲಿತರಿಗೆ ದಯೆ ತೋರುವುದು ನಮ್ಮ ಗುರಿ.
>
> ○ ಜ. ಹೊ. ನಾರಾಯಣಸ್ವಾಮಿ

(ಹಿಂದಿನ ಸಂಚಿಕೆಯಿಂದ)

ಮೃತಗತ ಭಾರತದ ರಕ್ತಮಾಂಸ ವಿಹೀನ ಅಸ್ಥಿಪಂಜರಗಳಿರಾ ನೀವೇಕೆ ಆದಷ್ಟು ಬೇಗನೆ ಹುಡಿಯಲ್ಲಿ ಹುಡಿಯಾಗಿ ಗಾಳಿಯಲ್ಲಿ ಗಾಳಿಯಾಗಿ ಹೋಗಬಾರದು? ಹೌದು, ನಿಮ್ಮ ಎಲುಬಿನ ಬೆರಳಿನಲ್ಲಿ ನಿಮ್ಮ ಪೂರ್ವಿಕರು ತೊಡಿಸಿದ ಅತ್ಯಮೂಲ್ಯರತ್ನದುಂಗುರವಿನ್ನೂ ಬಿದ್ದು ಹೋಗದೆ ಸಿಕ್ಕಿಕೊಂಡಿದೆ. ಕೊಳೆತು ಹೋಗುತ್ತಿರುವ ನಿಮ್ಮ ಹೆಣದ ಅಸಹ್ಯ ಆಲಿಂಗನದಲ್ಲಿ ಪೂರ್ವಿಕರತ್ತ ಐಶ್ವರ್ಯ ಮಂಜೂಷೆಯಿನ್ನೂ ನಾಶವಾಗದೆ ಇದೆ. ಇದುವರೆಗೂ ಅದನ್ನು ದಾನಮಾಡುವ ಪುಣ್ಯಾವಕಾಶ ನಿಮಗೆ ಲಭಿಸಿರಲಿಲ್ಲ. ಉದಾರ ವಿದ್ಯಾ ಪ್ರಚಾರವಾಗುತ್ತಿರುವ ಇಂದು, ಹೊಸಬೆಳಕು ಹಬ್ಬುತ್ತಿರುವ ಇಂದು ನಿಮಗೆ ಶುಭಾವಕಾಶ ದೊರೆತಿದೆ. ನಿಮ್ಮ ಸಂತಾನದವರಿಗೆ ಅದನ್ನು ದಾನಮಾಡಿ, ಆದಷ್ಟು ಬೇಗನೆ ದಾನ ಮಾಡಿ. ಶೂನ್ಯದಲ್ಲಿ ಐಕ್ಯವಾಗಿ ಕಾಣದೆ ತೊಲಗಿ ಹೋಗಿ. ನಿಮ್ಮ ಸ್ಥಾನದಲ್ಲಿ ನವೀನ ಭಾರತವೇಳಲಿ, ಕೃಷಿಕ ದರಿದ್ರ ನಿವಾಸದಿಂದ ನೇಗಿಲನ್ನು ಹಿಡಿದ ನವೀನ ಭಾರತಾಂಬೆ ಮೈದೋರಲಿ. ಬೆಸ್ತನ ಜೋಪಡಿಯಿಂದಾಕೆ ಮೂಡಲಿ. ಮಳಿಗೆಯಿಂದ, ಕಾರ್ಖಾನೆಯಿಂದ, ಸಂತೆಯಿಂದ ಆಕೆ ಪ್ರತ್ಯಕ್ಷವಾಗಲಿ, ಪರ್ವತ ಕಾನನದಿಂದ ಕಂದರ ವನಗಳಿಂದ ಆಕೆಯ ಮೂರ್ತಿ ರೂಪುಗೊಳ್ಳಲಿ. ಸಾಮಾನ್ಯ ಜನರು ಸಹಸ್ರಾರು ವರ್ಷಗಳಿಂದ ಪದದಲಿತರಾಗಿದ್ದಾರೆ. ಉಚ್ಚ ವರ್ಗದವರ ಕ್ರೂರ ಪದಾಘಾತವನ್ನು ಗೊಣಗಾಡದೆ, ಸಹಿಸಿ ಸಹಿಸಿ ಅದರಲ್ಲೊಂದು ಅದ್ಭುತ ಸಹಿಷ್ಣುತೆ ತಲೆದೋರಿದೆ. ಅನಂತ ದುಃಖಭಾಜಕರಾದುದರಿಂದ ಅಮಿತ ಶಕ್ತಿಶಾಲಿಗಳಾಗಿದ್ದಾರೆ. ಬೊಗಸೆ ಗಂಜಿಯನ್ನು ಕುಡಿದು ಜೀವಿಸುತ್ತಿದ್ದರೂ, ಅವರು ಲೋಕವನ್ನೆ ಅಲುಗಿಸಲು ಸಮರ್ಥರಾಗಿದ್ದಾರೆ. ಇನ್ನೊಂದು ಮುಷ್ಟಿ ಅನ್ನವನ್ನು ಅವರಿಗೆ ನೀಡಿ, ಅವರ ಶಕ್ತಿಯನ್ನು ಒಳಗೊಳ್ಳಲು ಜಗತ್ತು ಸಾಲದಾಗುತ್ತದೆ. ರಕ್ತಬೀಜನಿಗೆ ಇದ್ದಂತಹ ಅಕ್ಷಯ ವಿದ್ಯೆ ಅವರಲ್ಲಿದೆ. ಅದಲ್ಲದೆ, ನಿರ್ಮಲ ಜೀವನದಿಂದ ಮಾತ್ರ ಸಾಧ್ಯವಾಗುವ ಅದ್ಭುತ ಓಜಸ್ಸು ಅವರಲ್ಲಿದೆ. ಅದಲ್ಲದೆ, ಅಂತಹ ಓಜಸ್ಸು ಪ್ರಪಂಚದ ಬೇರಾವ ಭಾಗದಲ್ಲಿಯೂ ಅಲಭ್ಯ. ಅಂತಹ ಶಾಂತಿ, ಅಂತಹ ತೃಪ್ತಿ, ಅಂತಹ ಪ್ರೀತಿ, ಅಂತಹ ಮಾನ, ನಿರಂತರ ಕಾರ್ಯದಕ್ಷತೆ, ಕಾರ್ಯನಿರ್ವಾಹ, ಸಮಯದಲ್ಲಿ ಅವಶ್ಯಕವಾದ ಸಿಂಹಸದೃಶ ಸಬಲತೆ-ಇವನ್ನು ಇನ್ನೆಲ್ಲಿ ಕಾಣುವಿರಿ? ಗತಕಾಲದ ಅಸ್ಥಿಪಂಜರಗಳಿರಾ, ನಿಮ್ಮ ಮುಂದೆ ನಿಂತಿದ್ದಾರೆ ನಿಮ್ಮ ಸಂತಾನದವರು, ಅವಿರ್ಭವಿಸಲಿರುವ ಭರತವರ್ಷದೋಪಾದಿಯಲ್ಲಿ! ನಿಮ್ಮ ಐಶ್ವರ್ಯ ಮಂಜೂಷೆಯನ್ನೂ, ರತ್ನದುಂಗುರವನ್ನೂ, ಆದಷ್ಟು ಬೇಗನೆ ಅವರಿಗೆ ದಾನ ಮಾಡಿ. ತರುವಾಯ ನೀವು ಗಾಳಿಯಾಗಿ ಮಾಯವಾಗಿ; ಕಿವಿಗೊಟ್ಟು ಮಾತ್ರ ಆಲಿಸುತ್ತೀರಿ. ನೀವು ಮಾಯವಾದ ಕೂಡಲೇ ಸದ್ಯ ಪ್ರಸೂತ ನವಭಾರತ ಮಹಾ ಪ್ರಾರಂಭ ಗಾನ ಮೇಘ ಗಂಭೀರ ಧ್ವನಿಯಂತೆ ವಿಶ್ವದ ದಿಕ್ತಟಗಳಿಂದ ಅನುರಣಿತವಾಗುವುದು.

ಯಾರ ದೇಹದ ದುಡಿತದಿಂದ ಮಾತ್ರ ಬ್ರಾಹ್ಮಣರ ಕೀರ್ತಿ, ಕ್ಷತ್ರಿಯರ ಪ್ರಾಬಲ್ಯ, ವೈಶ್ಯರ ಐಶ್ವರ್ಯ ಸಾಧ್ಯವಾಯಿತೊ ಅವರು ಎಲ್ಲಿ ಇರುವರು? ನಿಜವಾಗಿ ಸಮಾಜದ ಮುಖ್ಯ ಭಾಗವಾದರೂ ಎಲ್ಲ ದೇಶದಲ್ಲಿಯೂ, ಎಲ್ಲ ಕಾಲದಲ್ಲಿಯೂ 'ಅವರು ಅಂತ್ಯಜರು' ಎಂದು ಕರೆಯಲ್ಪಡುವವರ ಗತಿ ಏನಾಗಿರುವುದು? ದಯಾಳುವಾದ ಭರತಖಂಡ, ಮೇಲಿನ ವರ್ಗದವರಿಗೆ ಮಾತ್ರ ಮೀಸಲಾದ ಧರ್ಮದಲ್ಲಿ ಮತ್ತು ಜ್ಞಾನದಲ್ಲಿ ಅಲ್ಪ ಸ್ವಲ್ಪ ಭಾಗವನ್ನು ಪಡೆಯಲು ಯತ್ನಿಸಿದ ಮಹಾತಪ್ಪಿಗಾಗಿ ಶೂದ್ರನಿಗೆ "ಅವನ ನಾಲಗೆಯನ್ನು ಕತ್ತರಿಸಿ, ಚರ್ಮ ಸುಲಿಯಿರಿ" ಮುಂತಾದ ಸೌಮ್ಯ ಶಿಕ್ಷೆಯನ್ನು ವಿಧಿಸಿತು! ಭರತಖಂಡದಲ್ಲಿ ಚಲಿಸುವ ಸ್ಮಶಾನಗಳಂತೆ, ಇತರ ದೇಶಗಳಲ್ಲಿ ಭಾರವನ್ನು ಹೊರುವ ಪಶುಗಳಂತೆ ಇರುವ ಶೂದ್ರರ ಗತಿಯೇನು? ಭರತ ಖಂಡದ ವಿಚಾರವಾಗಿ ನಾನು ಏನು ಹೇಳಲಿ? ಇಲ್ಲಿಯ ಶೂದ್ರರ ಮಾತಂತಿರಲಿ, ಭರತಖಂಡದ ಈಗಿನ ಬ್ರಾಹ್ಮಣ ವರ್ಗವೆಂದರೆ ಪಾಶ್ಚಾತ್ಯ ವಿದ್ವಾಂಸರ ತಂಡ. ಕ್ಷತ್ರಿಯವೆಂದರೆ ಆಳುತ್ತಿರುವ ಆಂಗ್ಲೇಯರು. ವೈಶ್ಯರು ಕೂಡ ಆಂಗ್ಲೇಯರೇ. ಅವರ ರಕ್ತದಲ್ಲಿ ಮತ್ತು ಮೂಳೆಯಲ್ಲಿಯೆ ವ್ಯಾಪಾರದ ಹುಟ್ಟುಗುಣವಿದೆ. ಈಗ ಭಾರತೀಯರಿಗೆ ಉಳಿದಿರುವುದು ಒಂದೇ. ಅದೇ ಶೂದ್ರತ್ವ, ಪರಿಚಾರಿಕೆ. ಅಭೇದ್ಯವಾದ ಕಾರ್ಮೋಡ ಇಂದು ನಮ್ಮನ್ನೆಲ್ಲಾ ಆವರಿಸಿದೆ! ಉದ್ದೇಶದ ದೃಢತ್ವವಿಲ್ಲ. ಅಥವಾ ಉದ್ಯಮದ ಸಾಹಸವಿಲ್ಲ. ಕೆಚ್ಚೆದೆಯ ಧೈರ್ಯವಾಗಲೀ ಅಥವಾ ದೃಢಮನಸ್ಸಾಗಲೀ ಇಲ್ಲ. ಇನ್ನೊಬ್ಬರು ನಮ್ಮನ್ನು ಹೀನವಾಗಿ ಕಂಡರೆ ಜಿಗುಪ್ಸೆಯಾಗಲೀ ಅಥವಾ ಗುಲಾಮಗಿರಿ ವಿರೋಧವಾಗಲೀ ಇಲ್ಲ. ಹೃದಯದಲ್ಲಿ ಭರವಸೆಯಾಗಲೀ ಸಾಹಸವಾಗಲೀ ಇಲ್ಲ. ಆಳವಾದ ಮತ್ತು ಸ್ವಭಾವಸಿದ್ಧವಾದವುಗಳಾದ ಪರಸ್ಪರ ಅಸೂಯೆ ಮತ್ತು ದ್ವೇಷ ಹೇಗಾದರೂ ಮಾಡಿ ದುರ್ಬಲರನ್ನು ನಾಶಮಾಡುವುದು, ನಾಯಿಯಂತೆ ಬಲಾಢ್ಯರ ಕಾಲನ್ನು ನೆಕ್ಕುವುದು ಇದೇ ನಮ್ಮಲ್ಲಿರುವುದು. ಈಗ ತೃಪ್ತಿಯ ಪರಾಕಾಷ್ಠತೆ ಇರುವುದು ಐಶ್ವರ್ಯವನ್ನು ಮತ್ತು ಅಧಿಕಾರವನ್ನು ಪ್ರದರ್ಶಿಸುವುದರಲ್ಲಿ, ಭಕ್ತಿ ಇರುವುದು ಸ್ವಾರ್ಥತೆಯ ತೃಪ್ತಿಯಲ್ಲಿ; ಚಾತುರ್ಯ, ನಶ್ವರ ವಸ್ತುಗಳನ್ನು ಸಂಗ್ರಹಿಸುವುದರಲ್ಲಿ; ಯೋಗ ಅತಿ ಅಸಹ್ಯಕರವಾದ ಪೈಶಾಚಿಕ ಆಚಾರಗಳಲ್ಲಿ; ಕರ್ಮ, ಮತ್ತೊಬ್ಬರ ಊಳಿಗದಲ್ಲಿ; ವಾಚಾಳತ್ವ, ನಿಂದಾಸ್ಪದವಾದ ಭಾಷೆಯನ್ನು ಉಪಯೋಗಿಸುವುದರಲ್ಲಿ; ಸಾಹಿತ್ಯದ ಪರಾಕಾಷ್ಠೆ, ಶ್ರೀಮಂತರನ್ನು ಅತಿಶಯವಾಗಿ ಹೊಗಳುವುದರಲ್ಲಿ ಅಥವಾ ಅಸಹ್ಯಕರವಾದ ದೃಶ್ಯಗಳನ್ನು ವಿವರಿಸುವುದರಲ್ಲಿ! ಎಲ್ಲಿ ನಿಜವಾಗಿ ಜನಾಂಗವೆಲ್ಲಾ ಶೂದ್ರರ ಮಟ್ಟಕ್ಕೆ ಇಳಿದಿರುವುದೋ ಅಂತಹ ದೇಶದಲ್ಲಿ ಪ್ರತ್ಯೇಕವಾಗಿರುವ ಶೂದ್ರ ವರ್ಣದವರನ್ನು ಏತಕ್ಕೆ ಬೇರೆ ವಿವರಿಸಬೇಕು? ಭರತಖಂಡವನ್ನು ಬಿಟ್ಟು ಉಳಿದ ಕಡೆ ಇರುವ ಶೂದ್ರರು ಸ್ವಲ್ಪ ಜಾಗ್ರತರಾಗಿರುವಂತೆ ಕಾಣುವರು. ಆದರೆ ಅವರಲ್ಲಿ ವಿದ್ಯೆಯ ಅಭಾವವಿದೆ. ಶೂದ್ರರಲ್ಲಿ ಸಾಮಾನ್ಯವಾಗಿ ಪರಸ್ಪರ ದ್ವೇಷಿಸುವ ಚಾಳಿಯಿದೆ. ಉಳಿದ ಪಂಗಡದವರನ್ನು ಇವರು ಸಂಖ್ಯೆಯಲ್ಲಿ ಮೀರಿದರೆ ಏನು ಪ್ರಯೋಜನ? ಹತ್ತು ಜನರು ಹತ್ತು ಲಕ್ಷ ಜನರ ಶಕ್ತಿಯನ್ನು ಸಂಪಾದಿಸುವಂತಹ ಐಕ್ಯತೆ ಇನ್ನೂ ಶೂದ್ರರ ಪಾಲಿಗೆ ಬಂದಿಲ್ಲ. ಆದ ಕಾರಣವೆ ಪ್ರಕೃತಿನಿಯಮಾನುಸಾರ ಶೂದ್ರರು ಸಾಧಾರಣವಾಗಿ ಆಶ್ರಿತ ಜನಾಂಗವಾಗಿರುವರು.

> **ನಾಲ್ಕು ವರ್ಣಗಳಲ್ಲಿ ಕೇವಲ ಬ್ರಾಹ್ಮಣರನ್ನು ಮತ್ತು ಶೂದ್ರರನ್ನು ನೋಡುತ್ತೇವೆ. ಕ್ಷತ್ರಿಯ ವೈಶ್ಯರಿದ್ದರೆ ಎಲ್ಲಿ? ಬ್ರಾಹ್ಮಣರು ಅವರಿಗೆ ಯಜ್ಞೋಪವೀತವನ್ನು ಕೊಟ್ಟು ವೇದಗಳನ್ನು ಏತಕ್ಕೆ ಅಧ್ಯಯನ ಮಾಡುವಂತೆ ಹೇಳಕೊಡದು? ಇದು ಹಿಂದೂಗಳ ಕರ್ತವ್ಯ. ವೈಶ್ಯರು ಮತ್ತು ಕ್ಷತ್ರಿಯರಿಲ್ಲದೆ ಕೇವಲ ಬ್ರಾಹ್ಮಣರು ಮತ್ತು ಶೂದ್ರರು ಮಾತ್ರ ಇದ್ದರೆ, ಅಂತಹ ಸ್ಥಳದಲ್ಲಿ ಬ್ರಾಹ್ಮಣರು ಇರಕೂಡದು. ಗಂಟು ಮೂಟೆ ಕಟ್ಟಿ ಹೊರಡಲಿ!**

ಆದರೆ ನಿರಾಶರಾಗಬೇಕಾಗಿಲ್ಲ, ಅನಂತ ಕಾಲದ ಅಗಾಧ ಪ್ರವಾಹದಲ್ಲಿ ಬ್ರಾಹ್ಮಣರೇ ಮೊದಲಾದ ಮೇಲಿನ ವರ್ಣದವರು ಶೂದ್ರರ ಮಟ್ಟಕ್ಕೆ ಇಳಿದು, ಶೂದ್ರರು ಮೇಲಿನ ಹಂತಕ್ಕೆ ಏರುವರು. ಒಂದಾನೊಂದು ಕಾಲದಲ್ಲಿ ರೋಮಿನ ಆಳ್ವಿಕೆಗೆ ಒಳಪಟ್ಟ ಶೂದ್ರರ ದೇಶವಾದ ಯೂರೋಪಿನಲ್ಲಿ ಈಗ ಕ್ಷಾತ್ರವೀರ್ಯ ತುಂಬಿದೆ. ನಮ್ಮ ಕಣ್ಣೆದುರಿಗೇ ಹಿಂದೆ ಬಲಾಢ್ಯವಾದ ಚೀನಾದೇಶ ಶೂದ್ರರ ಗುಂಪಿಗೆ ಇಳಿಯುತ್ತಿದೆ. ಕೆಲಸಕ್ಕೆ ಬಾರದ ಜಪಾನು ತಕ್ಷಣವೆ ಆಕಾಶ ಬಾಣದಂತೆ ಮೇಲೇರಿ, ಶೂದ್ರ ಸ್ವಭಾವವನ್ನು ಕೊಡಹಿ, ಕ್ರಮೇಣ ಮೇಲಿನ ವರ್ಗದವರ ಹಕ್ಕನ್ನು ಆಕ್ರಮಿಸುತ್ತಿದೆ. ಆಧುನಿಕ ಗ್ರೀಸ್ ಮತ್ತು ಇಟಲಿ ಕ್ಷತ್ರಿಯ ಸ್ಥಾನಕ್ಕೆ ಬಂದಿವೆ. ಟರ್ಕಿ, ಸ್ಪೈಯಿನ್ ಮುಂತಾದ ದೇಶಗಳ ಅವನತಿಯನ್ನು ನಾವು ಇಲ್ಲಿ ಗಮನಿಸಬೇಕಾಗಿದೆ.

ಶೂದ್ರರು ಕೇವಲ ತಮ್ಮ ತಮ್ಮ ಶೂದ್ರತ್ವದಿಂದಲೇ ಮೇಲೇಳುವ ಒಂದು ಕಾಲ ಬರುವುದು. ಅಂದರೆ ಈಗಿನ ಶೂದ್ರರು ವೈಶ್ಯರ ಅಥವಾ ಕ್ಷತ್ರಿಯರ ಗುಣವನ್ನು ಅನುಕರಿಸಿ ಪ್ರಾಮುಖ್ಯತೆಗೆ ಬರುವಂತೆ ಅಲ್ಲ. ಪ್ರತಿಯೊಂದು ದೇಶದ ಶೂದ್ರರು-ವೈಶ್ಯ ಅಥವಾ ಕ್ಷತ್ರಿಯರಂತೆ ಆಗದೆ, ತಮ್ಮ ಹುಟ್ಟುಗುಣವಾದ ಶೂದ್ರ ಸ್ವಭಾವದಿಂದ ಮತ್ತು ಅಭ್ಯಾಸದಿಂದಲೇ. ಪ್ರತಿಯೊಂದು ಸಮಾಜದಲ್ಲಿಯೂ ನಿರಂಕುಶ ಅಧಿಕಾರವನ್ನು ಪಡೆಯುವ ಒಂದು ಸಮಯ ಬರುವುದು. ಹೊಸ ಶಕ್ತಿಯ ಅರುಣೋದಯದ ಚಿಹ್ನೆ ಪಾಶ್ಚಾತ್ಯ ದೇಶಗಳಲ್ಲಿ ಕ್ರಮೇಣ ತೋರಲು ಮೊದಲಾಗಿದೆ. ಈ ಹೊಸ ಶಕ್ತಿಯ ಪರಿಣಾಮ ಹೇಗೆ ಆಗುವುದೆಂದು ಊಹಿಸುವುದಕ್ಕೆ ಪ್ರಾಜ್ಞರಿಗೆ ಅಸಾಧ್ಯವಾಗಿರುವುದು. ಸಮತಾವಾದ (socialism), ಅರಾಜಕವಾದ (anarchism), ಶೂನ್ಯವಾದ (nihilism) ಇವುಗಳೇ ಮುಂದಾಗಲಿರುವ ಸಮಾಜ ಕ್ರಾಂತಿಯ ಅರುಣೋದಯ ಅನೇಕ ಕಾಲಗಳಿಂದಲೂ ದಬ್ಬಾಳಿಕೆಗೆ ಮತ್ತು ಬಲಾತ್ಕಾರಕ್ಕೆ ತುತ್ತಾದ ಪರಿಣಾಮವಾಗಿ ಶೂದ್ರರು ಸಾಧಾರಣವಾಗಿ ಮೇಲಿನವರ ಕಾಲನ್ನು ನೆಕ್ಕುವ ನಾಯಿಯಂತಹ ನೀಚ ಊಳಿಗದ ಸ್ವಭಾವದವರಾಗಿರುವರು; ಅಥವಾ ಕ್ರೂರ ಮೃಗಗಳಂತೆ ಅಮಾನುಷರಾಗಿರುವರು. ಯಾವಾಗಲೂ ಅವರ ಆಸೆ ಮತ್ತು ಆಕಾಂಕ್ಷೆ ಭಗ್ನವಾದುದರಿಂದ, ಕೆಲಸದಲ್ಲಿ ದೃಢತೆಯಾಗಲೀ, ಫಲವಾಗಲೀ ಇಲ್ಲ...ಹಿಂದಿನ ಕಾಲದಲ್ಲಿ ಭರತಖಂಡದಲ್ಲಿದ್ದ ಗುಣ ಪ್ರಧಾನವಾದ ವರ್ಣದಿಂದಲೇ ಶೂದ್ರಪಂಗಡದವರು ಸ್ವಾತಂತ್ರ್ಯವಿಲ್ಲದೆ ಬದ್ಧರಾಗಿದ್ದರು. ಮೊದಲನಯದಾಗಿ ಅವರಿಗೆ ಹಣ ಸಂಗ್ರಹಕ್ಕೆ ಅಥವಾ ಸರಿಯಾದ ವಿದ್ಯೆಯನ್ನು ಕಲಿಯುವುದಕ್ಕೆ ಅವಕಾಶವನ್ನೇ ಕೊಡಲಿಲ್ಲ. ಈ ಕೊರತೆ ಮತ್ತೂ ಉತ್ಕಟವಾಗುವುದಕ್ಕೆ ಕಾರಣ. ಏನಾದರೂ ಅಸಾಧಾರಣ ಕುಶಲತೆಯನ್ನು ಪಡೆದ ಪ್ರತಿಭಾಶಾಲಿ ಶೂದ್ರನಲ್ಲಿ ಹುಟ್ಟಿದನೆಂದರೆ ಉತ್ತಮ ವರ್ಣದವರು ಅವನಿಗೆ ಬೇಕಾದಷ್ಟು ಕೀರ್ತಿ ಗೌರವಗಳನ್ನು ಕೊಟ್ಟು ಅವನನ್ನು ತಮ್ಮ ಗುಂಪಿಗೆ ಸೆಳೆದುಕೊಳ್ಳುತ್ತಿದ್ದರು. ಅವನ ಬುದ್ಧಿಶಕ್ತಿ ಮತ್ತು ಜಾಣತನ ಬೇರೆ ವರ್ಣದ ಉಪಯೋಗಕ್ಕೆ ಆಯಿತು. ಅವನ ವರ್ಣದವರಿಗೆ ಆತನ ಪ್ರತಿಭೆಯಿಂದ ಯಾವ ಪ್ರಯೋಜನವೂ ಆಗಲಿಲ್ಲ. ಇದು ಮಾತ್ರವಲ್ಲ, ಮೇಲಿನ ವರ್ಗದವರು ತಮ್ಮಲ್ಲಿ ಕೆಲಸಕ್ಕೆ ಬಾರದವರನ್ನೆಲ್ಲಾ ತ್ಯಜಿಸಿ ಅವರನ್ನು ಶೂದ್ರ ಪಂಗಡಕ್ಕೆ ಎಸೆಯುತ್ತಿದ್ದುದರಿಂದ ಅವರ ಸಂಖ್ಯೆ ಹೆಚ್ಚಾಯಿತು.

ಪುರೋಹಿತರು ಎಷ್ಟು ಕೂಗಾಡಿದರೇನು? ಜಾತಿ ಎಂಬುದು ಸಮಾಜದಲ್ಲಿ ಒಂದು ಆಂತರಿಕ ಭಾಗ. ಹಿಂದೆ ಅದು ವಿಕಾಸವಾಗುತ್ತಿತ್ತು; ಈಗ ಅದು ಘನೀಭೂತವಾಗಿರುವುದು. ಈ ಕಟ್ಟಿನ ಕೆಲಸ ಮುಗಿದು, ಅದರ ದುರ್ಗಂಧದಿಂದ ಭಾರತದ ವಾತವರಣವೆಲ್ಲ ತುಂಬಿದೆ. ಜನರು ಕಳೆದುಕೊಂಡ ಸಾಮಾಜಿಕ ವ್ಯಕ್ತಿತ್ವವನ್ನು ಅವರಿಗೆ ಮರಳಿ ಕೊಡುವುದರಿಂದ ಈ ಕಟ್ಟು ತಾನೇ ಮಾಯವಾಗುವುದು. ಅಮೆರಿಕಾ ದೇಶದಲ್ಲಿ ಹುಟ್ಟಿದ ಪ್ರತಿಯೊಬ್ಬನಿಗೂ ತಾನು ಮನುಷ್ಯನೆಂಬುದು ಗೊತ್ತು. ಇಂಡಿಯಾ ದೇಶದಲ್ಲಿ ಹುಟ್ಟಿದ ಪ್ರತಿಯೊಂದು ವ್ಯಕ್ತಿಯೂ ತಾನು ಸಮಾಜದ ಗುಲಾಮನೆಂದು ತಿಳಿದುಕೊಂಡಿರುವನು. ಬೆಳವಣಿಗೆಗೆ ಬೇಕಾಗಿರುವುದು ಮುಖ್ಯವಾಗಿ ಸ್ವಾತಂತ್ರ್ಯ, ಅದು ಮಾಯವಾದರೆ ಅವನತಿಯೇ ಫಲ.

ಪೌರೋಹಿತ್ಯವೇ ಭರತಖಂಡದ ವಿನಾಶಕ್ಕೆ ಕಾರಣ. ಒಬ್ಬ ಇತರರನ್ನು ಅಧೋಗತಿಗೆ ಸೆಳೆದು ತಾನು ಮಾತ್ರ ಆ ಸ್ಥಿತಿಯಿಂದ ಪಾರಾಗಬಲ್ಲನೆ?" ಬ್ರಾಹ್ಮಣರೇ! ನಿಮ್ಮ ಜಾತಿಕುಲಗಳ ಹೆಮ್ಮೆ ವ್ಯರ್ಥ. ಅದರಿಂದ ಪಾರಾಗಿ, ನಿಮ್ಮ ಶಾಸ್ತ್ರಪ್ರಕಾರದ ಬ್ರಾಹ್ಮಣ ನಿಮ್ಮಲ್ಲಿ ಇಂದು ಇಲ್ಲ. ಏಕೆಂದರೆ ಮ್ಲೇಚ್ಛರ ಕೈಕೆಳಗೆ ನೀವು ಬಹಳ ದಿನಗಳಿಂದ ಇರುವಿರಿ. ನಿಮ್ಮ ಪೂರ್ವಿಕರ ಮಾತಿನಲ್ಲಿ ನಿಮಗೆ ಇನ್ನೂ ನಂಬಿಕೆ ಇದ್ದರೆ, ಈ ಕ್ಷಣವೆ ಹಿಂದೆ ಕುಮಾರಿಲ ಒಬ್ಬ ಬೌದ್ಧ ಗುರುವಿನಲ್ಲಿ ಕಲಿತು, ಅನಂತರ ಅವರನ್ನು ಸೋಲಿಸಿ, ಹಲವು ಬೌದ್ಧರ ಸೋಲಿಗೆ ಕಾರಣನಾದನೆಂದು ಅದರ ಪ್ರಾಯಶ್ಚಿತಕ್ಕಾಗಿ ತುಕ್ಷಾನಲದಲ್ಲಿ ಬಿದ್ದಂತೆ ನೀವು ಬಿದ್ದು ಪ್ರಾಯಶ್ಚಿತ್ತಮಾಡಿಕೊಳ್ಳಿ. ಅದನ್ನು ಮಾಡುವುದಕ್ಕೆ ನಿಮಗೆ ಧೈರ್ಯವಿಲ್ಲದೆ ಇದ್ದರೆ, ನಿಮ್ಮ ತಪ್ಪನ್ನು ಒಪ್ಪಿಕೊಂಡು ಎಲ್ಲರಿಗೂ ಸಹಾಯ ಮಾಡಿ.

ಸಮಾಜದ ನಾಯಕತ್ವ, ಜ್ಞಾನವನ್ನು ತನಗೇ ಮೀಸಲಾಗಿಟ್ಟುಕೊಂಡಿರುವವನ ಕೈಯಲ್ಲಿ ಇರಲಿ ಅಥವಾ ಐಶ್ವರ್ಯವನ್ನು ಇಲ್ಲ ಅಸ್ತ್ರಶಸ್ತ್ರಗಳ ಶಕ್ತಿಯನ್ನು ಪಡೆದವನ ಕೈಯಲ್ಲಿ ಇರಲಿ, ಅದರ ಶಕ್ತಿಗೆ ಮೂಲಾಧಾರ ಜನ ಸಾಮಾನ್ಯರು. ಈ ಮೂಲದಿಂದ ಅಧಿಕಾರದಲ್ಲಿರುವ ಪಂಗಡ ಎಷ್ಟು ದೂರವಾದರೆ ಅಷ್ಟು ದುರ್ಬಲವಾಗುವುದು. ಆದರೆ ವಿಧಿಯ ವಿಚಿತ್ರ ಲೀಲೆ ಇದು. ಮಾಯೆಯ ವಿಲಕ್ಷಣ ನಟನೆ ಇದು. ಯಾರಿಂದ ಈ ಶಕ್ತಿಯನ್ನು ಕಂಡಂತೆಯೋ ಕಾಣದಂತೆಯೋ; ನ್ಯಾಯವಾಗಿಯೋ ಅನ್ಯಾಯವಾಗಿಯೋ; ಮೋಸ, ಉಪಾಯ, ಬಲತ್ಕಾರ ಇವುಗಳ ಮೂಲಕವೋ ಅಥವಾ ಸ್ವೇಚ್ಛೆಯಿಂದ ಮಾಡಿದ ದಾನದ ಮೂಲಕವೋ, ಪಡೆದರೋ ಅವರನ್ನು ಅಧಿಕಾರದಲ್ಲಿರುವ ಪಂಗಡದವರು ಗಮನಕ್ಕೆ ತೆಗೆದುಕೊಳ್ಳುವುದೇ ಇಲ್ಲ.

ನಾಡು ಬದುಕಿರುವುದೇ ದೀನರ ಜೋಪಡಿಗಳಲ್ಲಿ ಎಂಬುದನ್ನು ಜ್ಞಾಪಕದಲ್ಲಿಡಿ. ಅಯ್ಯೋ! ಆದರೆ ಅವರಿಗೆ ಯಾರೂ ಸಹಾಯ ಮಾಡಿಲ್ಲ...ಅವರನ್ನು ಮೇಲೆತ್ತಬಲ್ಲಿರಾ? ಅವರೊದಿಗೆ ಬಂದಿರುವ ಆಧ್ಯಾತ್ಮಿಕ ಪ್ರವೃತ್ತಿಯನ್ನು ನಾಶಮಾಡದೆ, ಕಳೆದುಕೊಂಡ ವ್ಯಕ್ತಿತ್ವವನ್ನು ಅವರಿಗೆ ಪುನಃ ಕೊಡಬಲ್ಲಿರಾ? ಸ್ವಾತಂತ್ರ್ಯದಲ್ಲಿ, ಕ್ರಿಯೆಯಲ್ಲಿ, ಶಕ್ತಿಯಲ್ಲಿ ಪಾಶ್ಚಾತ್ಯರನ್ನು ಕೂಡ ಮೀರಿಸಿ, ಅದೇ ಸಮಯದಲ್ಲಿ ಧಾರ್ಮಿಕ ಸಂಸ್ಕೃತಿ ಸ್ವಭಾವಗಳಲ್ಲಿ ಪೂರ್ಣ ಭಾರತೀಯರಾಗಬಲ್ಲಿರಾ?...ಪ್ರಾಣಹೋದರೂ ಸರಿ. ದೀನರಿಗೆ ದಲಿತರಿಗೆ ದಯೆ ತೋರುವುದು ನಮ್ಮ ಗುರಿ. ಚಂಡಾಲನ ಸಹಿತ ವಿಶ್ವಕ್ಕೆ ನಾವು ಹಿತವನ್ನು ಮಾಡಬೇಕು. ಇದು ನಮ್ಮ ಶಪಥ. ಮುಕ್ತಿಯೋ, ನರಕವೋ ಯಾವುದಾದರೂ ಬರಲಿ, ಎಲ್ಲವನ್ನೂ ಸ್ವೀಕರಿಸಿ, ದೀನರ ದಲಿತರ ಮನೆಯ ಬಾಗಿಲಿಗೆ, ಅವರ ಜೀವನದಲ್ಲಿ ಶಾಂತಿ, ನೀತಿ, ಧರ್ಮ ಬರುವಂತೆ ಮಾಡುವೆನು. ಇದನ್ನು ನಾನು ಮಾಡುವೆನು. ಇಲ್ಲ ಮಡಿಯುವೆನು. ನನ್ನ ದೇಶದ ಜನರು ಉಪವಾಸದಿಂದ ನರಳುವುದನ್ನು ನೋಡಿದಾಗ ನನಗೆ ಈ ವಿಧಿಯುಕ್ತ ಪೂಜೆ, ಪಾಂಡಿತ್ಯವೆಲ್ಲವನ್ನೂ ಕಿತ್ತೊಗೆದು ಗ್ರಾಮ ಗ್ರಾಮಗಳಿಗೂ ಹೋಗಿ ಅಲ್ಲಿಯ ಹಣವಂತರಿಗೆ ತಮ್ಮ ಸಾಧನೆ ಮತ್ತು ಶೀಲದ ಬಲದಿಂದ ಮನದಟ್ಟು ಮಾಡಿಸಿ ಹಣವನ್ನು ಕೊಡಿಸಿ ಬಡವರಿಗೆ ಸೇವೆ ಮಾಡುತ್ತಾ ಇಡೀ ಜೀವನವೆಲ್ಲಾ ಕಳೆಯಬೇಕೆನಿಸುವುದು.

ಜನ ಸಾಮಾನ್ಯರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಅವರನ್ನು ಮೇಲಕ್ಕೆ ಎತ್ತಬೆಕು. ಇದರಿಂದ ಮಾತ್ರ ಒಂದು ಜನಾಂಗವಾಗುವುದಕ್ಕೆ ಸಹಾಯವಾಗುವುದು. ನಮ್ಮ ಸಮಾಜ ಸುಧಾರಕರು ಗಾಯವೆಲ್ಲಿದೆ ಎಂದು ನೋಡುವುದಿಲ್ಲ...ಜನಾಂಗದ ಬಹುಮುಖ್ಯವಾದ ಭಾಗ ಬಡ ಜೋಪಡಿಗಳಲ್ಲಿ ವಾಸವಾಗಿರುವರು. ಅವರು ತಮ್ಮ ಪುರುಷತ್ವವನ್ನು ಮರೆತಿರುವರು. ತಪ್ಪೆಲ್ಲಾ ಇರುವುದು ಇಲ್ಲಿಯೇ. ಅನವರತವೂ ಹಿಂದೂಗಳು, ಮುಸಲ್ಮಾನರು, ಕ್ರೈಸ್ತರು ಇವರುಗಳಿಂದ ತುಳಿಸಿಕೊಂಡು ಕ್ರಮೇಣ ಅವರು ಯಾರ ಜೇಬಿನಲ್ಲಿ ಹೆಚ್ಚು ದುಡ್ಡಿದೆಯೇ ಅವರಿಂದ ತುಳಿಸಿಕೊಳ್ಳುವುದೇ ತಮ್ಮ ಕರ್ತವ್ಯವೆಂದು ತಿಳಿಯಲು ಮೊದಲು ಮಾಡಿರುವರು. ಅವರು ಕಳೆದುಕೊಂಡ ವ್ಯಕ್ತಿತ್ವವನ್ನು ಪುನಃ ಕೊಡಬೇಕು. ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಹಿಂದೂಗಳೆಲ್ಲರೂ ಅಣ್ಣತಮ್ಮಂದಿರು. ಮುಟ್ಟಬೇಡ ಮುಟ್ಟಬೇಡ ಎಂದು ಹೇಳಿ ಹೇಳಿ ನಾವೇ ಅವರನ್ನು ಕೀಳು ಮಾಡಿ ಕೂರಿಸಿದ್ದೇವೆ.

ವಿವೇಕಾನಂದರ ವಿಚಾರಗಳು

> ಪೌರೋಹಿತ್ಯವೇ ಭರತಖಂಡದ ವಿನಾಶಕ್ಕೆ ಕಾರಣ. ಒಬ್ಬ ಇತರರನ್ನು ಅಧೋಗತಿಗೆ ಸೆಳೆದು ತಾನು ಮಾತ್ರ ಆ ಸ್ಥಿತಿಯಿಂದ ಪಾರಾಗಬಲ್ಲನೆ?" ಬ್ರಾಹ್ಮಣರೇ! ನಿಮ್ಮ ಜಾತಿಕುಲಗಳ ಹೆಮ್ಮೆ ವ್ಯರ್ಥ. ಅದರಿಂದ ಪಾರಾಗಿ, ನಿಮ್ಮ ಶಾಸ್ತ್ರಪ್ರಕಾರದ ಬ್ರಾಹ್ಮಣ ನಿಮ್ಮಲ್ಲಿ ಇಂದು ಇಲ್ಲ. ಏಕೆಂದರೆ ಮ್ಲೇಚ್ಛರ ಕೈಕೆಳಗೆ ನೀವು ಬಹಳ ದಿನಗಳಿಂದ ಇರುವಿರಿ.

ಇದೇ ದೇಶದ ಹೀನತೆ, ಭೀರುತೆ, ಮೂರ್ಖತೆ, ಕಾಪುರುಷತೆ, ಇವುಗಳ ಪರಾಕಾಷ್ಠೆಯಲ್ಲಿ ಪರಿಣಮಿಸಿದೆ. ಇವರನ್ನು ಮೇಲಕ್ಕೆ ಎತ್ತಬೇಕು. ಅಭಯದ ಮಾತನ್ನು ಹೇಳಬೇಕು. "ನೀವೂ ನಮ್ಮ ಹಾಗೆ ಮನುಷ್ಯರು. ನಿಮಗೂ ನಮ್ಮ ಹಾಗೆ ಎಲ್ಲ ಅಧಿಕಾರವೂ ಇದೆ" ಎಂದು ಹೇಳಬೇಕು. ಭರತ ವರ್ಷದಲ್ಲಿರುವ ದೌರ್ಭಾಗ್ಯಕ್ಕೆಲ್ಲ ಮೂಲ ಅಲ್ಲಿರುವ ಬಡಜನರ ಸ್ಥಿತಿ...ಪುರೋಹಿತರ ದರ್ಪ ಮತ್ತು ಪರದೇಶದ ಜನರ ಕೈಯಲ್ಲಿ ಪಡೆದ ಸೋಲು ಅನೇಕ ಶತಮಾನಗಳಿಂದ ಅವರನ್ನು ನೆಲಕ್ಕೆ ತುಳಿದಿದೆ. ಕೊನೆಗೆ ಭರತಖಂಡದ ಬಡವರು ತಾವು ಮಾನವರೆಂಬುದನ್ನೇ ಮರೆತುಬಿಟ್ಟಿದ್ದಾರೆ.

ಎಲ್ಲೋ ಒಬ್ಬಿಬ್ಬರು ಆಂಗ್ಲೇಯರು ನಮ್ಮನ್ನು "ದೇಶೀಯರು" "ನೀಗ್ರೋ ಜನರು" "ಅನಾಗರಿಕರು" ಎಂದು ಹೇಳಿದರೆ ಅದರಿಂದ ಲಾಭನಷ್ಟಗಳಿಲ್ಲ. ವರ್ಣಭೇದದಿಂದ ನಮ್ಮ ನಮ್ಮಲ್ಲಿಯೆ ಅದಕ್ಕಿಂತ ಪ್ರಬಲವಾದ ದ್ವೇಷದ ಮತ್ತು ಅಸೂಯೆಯ ಭಾವನೆಗಳು ತುಂಬಿವೆ. ಕೆಲಸಕ್ಕೆ ಬಾರದ ಮೂರ್ಖ ಕ್ಷತ್ರಿಯ ರಾಜನೊಬ್ಬನು ಬ್ರಾಹ್ಮಣರಿಗೆ ಸಹಾಯಕನಾದರೆ, ಮತ್ತೊಮ್ಮೆ ಬಹಳ ದಯೆಯಿಂದ "ಶೂದ್ರರ ನಾಲಗೆಯನ್ನು ಕತ್ತರಿಸಿ, ಅವರ ದೇಹವನ್ನು ತುಂಡು ಮಾಡಿಸುವುದಿಲ್ಲ" ಎಂದು ಹೇಗೆ ಹೇಳುವುದು? ಭರತಖಂಡದಲ್ಲೆಲ್ಲಾ ಲಕ್ಷಾಂತರ ಮಂದಿ ಹೊಲೆಯರಿರುವರು. ಇವರು ಸಮಾಜದಲ್ಲಿ ಬಹಳ ಕೆಳಮಟ್ಟದಲ್ಲಿರುವರು. ಬ್ರಾಹ್ಮಣನೇನಾದರೂ ಮನೆಯಿಂದ ಬರುತ್ತಾ ಹೊಲೆಯನ ಮುಖವನ್ನು ನೋಡಿದರೆ ಅಂದಿನ ದಿನ ಉಪವಾಸವಿದ್ದು ಮಂತ್ರೋಚ್ಚಾರಣೆಯಿಂದ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ನಮ್ಮ ಶಾಸ್ತ್ರ ಹೇಳುತ್ತದೆ. ಕೆಲವು ವೇಳೆ ಹಿಂದೂಗಳ ಊರಿಗೆ ಹೊಲೆಯನು ಪ್ರವೇಶಿಸುವಾಗ ತಾನು ಹೊಲೆಯನೆಂದು ತೋರಿಸಿಕೊಳ್ಳುವುದಕ್ಕೆ ಕಾಗೆಯ ಒಂದು ಪುಕ್ಕವನ್ನು ಧರಿಸಿ ಗಟ್ಟಿಯಾಗಿ "ಪಾರಾಗಿ, ಹೊಲೆಯ ದಾರಿಯಲ್ಲಿ ಬರುತ್ತಿರುವನು" ಎಂದು ಅರಚಿಕೊಳ್ಳಬೇಕು. ಜನರು ಅವನೆಡೆಯಿಂದ ಇದ್ದಕ್ಕಿದ್ದಂತೆ ಓಡಿ ಹೋಗುವುದನ್ನು ನೋಡುವಿರಿ. ಏಕೆಂದರೆ ಅಕಸ್ಮಾತ್ ಅವನನ್ನು ಮುಟ್ಟಿದರೆ ಬಟ್ಟೆ ಬದಲಾಯಿಸಿ ಸ್ನಾನ ಮಾಡಿ, ಇನ್ನೂ ಹಲವಾರು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಸಹಸ್ರಾರು ವರ್ಷಗಳಿಂದಲೂ ಹೊಲೆಯನು, ತನ್ನ ಸ್ಪರ್ಶ ಎಲ್ಲರನ್ನೂ ಅಪವಿತ್ರಮಾಡುವುದು, ಇದು ಸತ್ಯ ಎಂದು ನಂಬಿರುವನು...ಅವನು ನೆಡದ ಸ್ಥಳಗಳನ್ನೆಲ್ಲಾ ಗಂಗಾ ನೀರನ್ನು ಚೆಲ್ಲಿ ಪವಿತ್ರಮಾಡುವರು.

ನಾಲ್ಕು ವರ್ಣಗಳಲ್ಲಿ ಕೇವಲ ಬ್ರಾಹ್ಮಣರನ್ನು ಮತ್ತು ಶೂದ್ರರನ್ನು ನೋಡುತ್ತೇವೆ. ಕ್ಷತ್ರಿಯ ವೈಶ್ಯರಿದ್ದರೆ ಎಲ್ಲಿ? ಬ್ರಾಹ್ಮಣರು ಅವರಿಗೆ ಯಜ್ಞೋಪವೀತವನ್ನು ಕೊಟ್ಟು ವೇದಗಳನ್ನು ಏತಕ್ಕೆ ಅಧ್ಯಯನ ಮಾಡುವಂತೆ ಹೇಳಕೊಡದು? ಇದು ಹಿಂದೂಗಳ ಕರ್ತವ್ಯ. ವೈಶ್ಯರು ಮತ್ತು ಕ್ಷತ್ರಿಯರಿಲ್ಲದೆ ಕೇವಲ ಬ್ರಾಹ್ಮಣರು ಮತ್ತು ಶೂದ್ರರು ಮಾತ್ರ ಇದ್ದರೆ, ಅಂತಹ ಸ್ಥಳದಲ್ಲಿ ಬ್ರಾಹ್ಮಣರು ಇರಕೂಡದು. ಗಂಟು ಮೂಟೆ ಕಟ್ಟಿ ಹೊರಡಲಿ! ಯಾರು ಮ್ಲೇಚ್ಛರ ಕೆಳಗೆ ಇರುವರೊ, ಅವರ ಆಹಾರವನ್ನು ಸ್ವೀಕರಿಸುವರೊ, ಅಂತಹವರಿಗೆ ಶಾಸ್ತ್ರ ಏನು ಪ್ರಾಯಶ್ಚಿತ್ತ ಹೇಳುವುದು ಗೊತ್ತೆ? ತಾವೇ ಚಿತೆಗೆ ಬೆಂಕಿ ಹಚ್ಚಿಕೊಂಡು ಬೇಯುವುದು, ನೀವು ಸಾವಿರ ವರ್ಷಗಳಿಂದ ಹಾಗೆ ಮಾಡುತ್ತಿರುವಿರಿ. ಗುರುಗಳಂತೆ ನಟಿಸಿ ಕಪಟಿಗಳಂತೆ ಆಚರಿಸುವಿರೇನು? ಅಲೆಗ್ಸಾಂಡರನೊಂದಿಗೆ ಹೋದ ಬ್ರಾಹ್ಮಣನಂತೆ ನೀವೂ ಮಾಡಿಕೊಳ್ಳಿ. ಆತ ಮ್ಲೇಚ್ಛರ ಆಹಾರ ತಿಂದಿರಬಹುದೆಂದು ಆತ್ಮಹತ್ಯೆ ಮಾಡಿಕೊಂಡನು. ನೀವು ಹಾಗೆ ಮಾಡಿಕೊಳ್ಳಿ. ಆಗ ಇಂಡಿಯಾ ದೇಶ ನಿಮ್ಮ ಪದತಲಕ್ಕೆ ಬೀಳುವುದು. ನಿಮಗೆ ಶಾಸ್ತ್ರದಲ್ಲಿ ನಂಬಿಕೆ ಇಲ್ಲ. ಆದರೂ ಇತರರನ್ನು ನಂಬಿಸುವುದಕ್ಕೆ ಪ್ರಯತ್ನ ಪಡುತ್ತಿರುವಿರಿ. ಈಗ ಅದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ನಿಮ್ಮ ದುರ್ಬಲತೆಯನ್ನು ಒಪ್ಪಿಕೊಂಡರೆ, ಇತರರ ದುರ್ಬಲತೆಯನ್ನೂ ಕ್ಷಮಿಸಿ, ಇತರ ವರ್ಣದವನರನ್ನೂ ಸ್ವೀಕರಿಸಿ ಮೇಲೆತ್ತಿ. ಅವರೂ ವೇದವನ್ನು ಓದಲಿ.

ಇಷ್ಟೊಂದು ಮಂದಿ ಭಿಕ್ಷುಕರಿರುವ ಜನಾಂಗ ಪ್ರಪಂಚದಲ್ಲಿ ಮತ್ತೆಲ್ಲಿಯೂ ಇಲ್ಲ. ನಮ್ಮಲ್ಲಿ ಅಧಿಕ ಸಂಖ್ಯೆಯಲ್ಲಿರುವ ಕೀಳು ಜಾತಿಯ ಜನರು ಮೇಲು ಜಾತಿಯವರ ನಿರಂತರ ದಬ್ಬಾಳಿಕೆಯಿಂದಲೂ ಮತ್ತು ಅವರಿಂದ ಹೆಜ್ಜೆ ಹೆಜ್ಜೆಗೂ ಹೊಡೆತ ಒದೆತಗಳನ್ನು ತಿಂದು ಕಡೆಗೆ ತಮ್ಮ ಪುರುಷತ್ವವನ್ನೇ ಕಳೆದುಕೊಂಡು ವೃತ್ತಿಯಿಂದಲೇ ಭಿಕ್ಷುಕರಾಗಿದ್ದಾರೆ. ಇದರಿಂದ ಒಂದು ಹೆಜ್ಜೆ ಮುಂದೆ ಹೋದವರು ಒಂದೆರಡು ಪುಟ ಇಂಗ್ಲೀಷನ್ನೋದಿ ಕೈಯಲ್ಲಿ ಅರ್ಜಿಯನ್ನಿಡಿದು ಸಾರ್ವಜನಿಕ ಕಛೇರಿಗಳ ಬಾಗಿಲಲ್ಲಿ ಬಿದ್ದಿದ್ದಾರೆ. ಇಪ್ಪತ್ತು ಅಥವಾ ಮೂವತ್ತು ರೂಪಾಯಿಗಳ ಸಂಬಳವಿರುವ ಕೆಲಸ ಖಾಲಿ ಬಿದ್ದಿದ್ದರೆ ಐನೂರು ಮಂದಿ ಬಿ.ಎ. ಮತ್ತು ಎಂ.ಎ.ಗಳು ಅದಕ್ಕೆ ಅರ್ಜಿಹಾಕಿಕೊಳ್ಳುವರು. ಆಹಾ! ಆ ಅರ್ಜಿಗಳಾದರೂ ಎಂತಹ ವಿಚಿತ್ರ ಪದಗಳಿಂದ ಕೂಡಿರುತ್ತದೆ. "ನನಗೆ ಮನೆಯಲ್ಲಿ ತಿನ್ನಲಿಕ್ಕೆ ಏನೂ ಇಲ್ಲ. ನನ್ನ ಹೆಂಡತಿ ಮಕ್ಕಳು ಉಪವಾಸ. ಸ್ವಾಮಿ ನನಗೆ ಮತ್ತು ನನ್ನ ಸಂಸಾರಕ್ಕೆ ಒಂದು ಹಾದಿಯನ್ನು ಕಲ್ಪಿಸಿಕೊಡಬೇಕೆಂದು ನಿಮ್ಮನ್ನು ಸೆರಗೊಡ್ಡಿ ಬೇಡಿಕೊಳ್ಳುತ್ತಿದ್ದೇನೆ. ಇಲ್ಲದಿದ್ದಲ್ಲಿ ನಾವೆಲ್ಲ ಉಪವಾಸದಿಂದ ಸಾಯುವೆವು. ಅವರು ಕೆಲಸಕ್ಕೆ ಸೇರಿದ ಮೇಲೂ ಕೂಡ ತಮ್ಮ ಆತ್ಮಗೌರವವನ್ನೆಲ್ಲಾ ಗಾಳಿಗೆ ತೂರಿ ಬಿಡುತ್ತಾರೆ. ಅವರು ಸಾಧಿಸುವುದು ಅತ್ಯಂತ ಕೀಳು ದರ್ಜೆಯ ಗುಲಾಮಗಿರಿ. ನಮ್ಮ ದೇಶದ ಜನ ಸಾಮಾನ್ಯರ ಪರಿಸ್ಥಿತಿ ಹೀಗಿದೆ.

ಬ್ರಾಹ್ಮಣ ಜಾತಿ ಮತ್ತು ಬ್ರಾಹ್ಮಣ್ಯ ಗುಣಗಳು ಎರಡೂ ಭಿನ್ನವಾದ ವಿಷಯಗಳು. ಭರತಖಂಡದಲ್ಲಿ ಜಾತಿಯಿಂದ ಬ್ರಾಹ್ಮಣರೆಂದು ನಿಷ್ಕರ್ಷಿಸುವರು. ಪಶ್ಚಿಮದಲ್ಲಿ ಬ್ರಾಹ್ಮಣ್ಯ ಗುಣಗಳಿಂದ ಬ್ರಾಹ್ಮಣರೆಂದು ಗುರಿತಿಸುವರು. ಸತ್ವ, ರಜಸ್ಸು, ತಮಸ್ಸುಗಳೆಂಬ ಮೂರು ಗುಣಗಳಿರುವಂತೆಯೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ತೋರಿಸಲು ಗುಣಗಳಿವೆ. ಬ್ರಾಹ್ಮಣ ಅಥವಾ ಕ್ಷತ್ರಿಯ ಯೋಗ್ಯವಾದ ಗುಣಗಳು ದೇಶದಿಂದ ಕಣ್ಮರೆಯಾಗುತ್ತಲಿವೆ. ಆದರೆ ಪಶ್ಚಿಮದಲ್ಲಿ ಅವರು ಕ್ಷತ್ರಿಯ ಪದವಿ ಪಡೆದಿದ್ದಾರೆ. ಅದರ ಮುಂದಿನ ಮೆಟ್ಟಿಲೇ ಬ್ರಾಹ್ಮಣ ಪದವಿ. ಆ ಪದವಿಗೆ ಅರ್ಹತೆ ಪಡೆದವರೂ ಅಲ್ಲಿ ಅನೇಕರಿದ್ದಾರೆ...ಸಾತ್ವಿಕ, ರಾಜಸ, ತಾಮಸ ಗುಣಗಳಲ್ಲಿ ಯಾವುದಾದರೊಂದು ಕೊಂಚ ಹೆಚ್ಚು ಕಡಿಮೆ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಇರುವ ಹಾಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ಗುಣಗಳಲ್ಲೂ ಕೂಡ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಹೆಚ್ಚು ಕಡಿಮೆ ಅಂತರ್ಗತವಾಗಿರುವುವು...ಪಶ್ಚಿಮದಲ್ಲಿ ಬ್ರಾಹ್ಮಣರಿದ್ದಾರೆಯೋ ಇಲ್ಲವೋ ಎಂದು ನನಗೆ ಈಗ ಅರ್ಥವಾಗಲಿದೆ! ನಮ್ಮಲ್ಲಿ ಬ್ರಾಹ್ಮಣರಿದ್ದಾರೆ. ಅವರು ತಮ್ಮ ತೀವ್ರ ದಬ್ಬಾಳಿಕೆಯಿಂದ ದೇಶವನ್ನು ತೀರ ಅಧೋಗತಿಗೆ ಇಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಸಹಜವಾಗಿ ಅವರಲ್ಲಿದ್ದುದು ಕ್ರಮೇಣ ಮಾಯವಾಗುತ್ತಿದೆ. ಗುರು ಶಿಷ್ಯನಿಗೆ ಮಂತ್ರ ದೀಕ್ಷೆ ಕೊಡುತ್ತಾನೆ. ಆದರೆ ಅವನಿಗೆ ಅದೇ ಒಂದು ವ್ಯಾಪಾರವಾಗಿ ಹೋಗಿದೆ. ಮತ್ತು ಈಗಿನ ಕಾಲದಲ್ಲಿ ಗುರು ಶಿಷ್ಯರ ಮಧ್ಯೆ ಇರುವ ಸಂಬಂಧ ಎಷ್ಟು ವಿಸ್ಮಯಕರವಾಗಿದೆಯೋ! ಪ್ರಾಯಶಃ ಗುರುವಿಗೆ ತಿನ್ನಲು ಮನೆಯಲ್ಲಿ ಏನೇನೂ ಇರುವುದಿಲ್ಲ. ಹೆಂಡತಿ ಇದನ್ನು ಅವನ ಲಕ್ಷ್ಯಕ್ಕೆ ತಂದು "ದಯಮಾಡಿ, ನಿಮ್ಮ ಶಿಷ್ಯರ ಬಳಿ ಮತ್ತೊಮ್ಮೆ ಹೋಗಿ, ನೀವು ದಿನವೆಲ್ಲ ಪಗಡೆಯಾಡುತ್ತಿದ್ದರೆ ನಿಮ್ಮ ಹಸಿವು ಹಿಂಗುವುದೇನು?" ಎನ್ನುವಳು. ಬ್ರಾಹ್ಮಣ ಉತ್ತರ ಕೊಡುತ್ತಾ ಹೇಳುವನು. "ಸರಿ ನಾಳೆ, ಬೆಳಿಗ್ಗೆ ನನಗೆ ಜ್ಞಾಪಿಸು. ನನ್ನ ಶಿಷ್ಯನೊಬ್ಬನಿಗೆ ಅದೃಷ್ಟ ಖುಲಾಯಿಸಿದೆ ಎಂದು ಕೇಳಿದೆ..." ಎನ್ನುವನು. ಇದೇ ಗುರುಕುಲಗಳಿಗೆ ಪ್ರಾಪ್ತವಾಗಿರುವ ದುರವಸ್ಥೆ.

ಪ್ರತಿಯೊಂದು ದೇಶದಲ್ಲಿಯೂ ಪುರೋಹಿತರು ಯಾವಾಗಲೂ ಸಂಪ್ರದಾಯಸ್ಥರು...ಇದೇ ಅವರ ಜೀವನೋಪಾಯಕ್ಕೆ ಕಾರಣ...

ಪುರೋಹಿತರೆಲ್ಲಾ ಬಲಾಢ್ಯರಲ್ಲ; ಜನರು ಎರಡು ಸಾವಿರ ದೇವರುಗಳನ್ನು ಬೋಧಿಸಿ ಎಂದು ಪುರೋಹಿತರಿಗೆ ಹೇಳಿದರೆ, ಅವರು ಅದನ್ನು ಮಾಡಲು ಸಿದ್ಧ. ಯಾರು ಅವರಿಗೆ ದಕ್ಷಿಣೆ ಕೊಡುತ್ತಾರೆಯೋ ಅವರ ಸೇವಕರು, ದೇವರು ಅವರಿಗೆ ಕೊಡುವುದಿಲ್ಲ. ಆದ ಕಾರಣವೇ ಪುರೋಹಿತರನ್ನು ದೂರುವುದಕ್ಕೆ ಮುಂಚೆ ನಮ್ಮನ್ನು ದೂರಿಕೊಳ್ಳಬೇಕು. ನೀವು ಯಾವುದಕ್ಕೆ ಯೋಗ್ಯರೋ ಅಂತಹ ಸರ್ಕಾರ, ಧರ್ಮ ಮತ್ತು ಪುರೋಹಿತರು ನಿಮಗೆ ದೊರಕುವರು. ಅದಕ್ಕಿಂತ ಮೇಲಿನದು ದೊರಕುವುದಿಲ್ಲ.

ಮನುಷ್ಯರ ಸಂಖ್ಯೆಗಿಂತ ಹೆಚ್ಚಾಗಿ ದೇವರುಗಳಿರುವರು. ಆದರೂ ಯಾವ ಸಹಾಯವೂ ಒದಗಲಿಲ್ಲ. ಈ ಪ್ರಪಂಚದ ದೇವರುಗಳಿಗೆಲ್ಲ ನೀವು ಪ್ರಾರ್ಥಿಸುವಿರಿ. ನಿಮ್ಮ ದುಃಖ ಕೊನೆಗೊಂಡಿದೆಯೇ? ಇಂಡಿಯಾ ದೇಶದಲ್ಲಿ ಜನರು ಆರು ಕೋಟಿ ದೇವರಿಗೆ ಗೋಳಿಡುವರು. ಆದರೂ ನಾಯಿಗಳಂತೆ ಸಾಯುವರು. ಆ ದೇವತೆಗಳೆಲ್ಲ ಎಲ್ಲಿರುವರು?" ●

(ಈ ವಿಚಾರ ಲಹರಿಗಳನ್ನು ಮೈಸೂರಿನ ಶ್ರೀ ರಾಮಕೃಷ್ಣಾಶ್ರಮ ಪ್ರಕಟಿಸಿದ 'ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ'ಯ ಹತ್ತು ಸಂಪುಟಗಳಿಂದ ಆಯ್ದುಕೊಳ್ಳಲಾಗಿದೆ.)

ಭಾರತದಲ್ಲೆಲ್ಲೂ ಭಾರತೀಯನಿಲ್ಲ !

ಧಾರ್ಮಿಕ ಗ್ರಂಥಗಳಲ್ಲಿ ಕಣ್ಣಿಗೆ ರಾಚುವ ಅಸಹಿಷ್ಣುತೆ ಭಾರತದಲ್ಲೆಲ್ಲೂ ಭಾರತೀಯನಿಲ್ಲ!

ಇದನ್ನು ಕೇಳಿ ನೀವು ನಗಬಹುದು. ಆದರೆ ಇಲ್ಲಿ ಮನುಷ್ಯನೂ ಇಲ್ಲ!

ಹೌದು. ಬೇಕಿದ್ದರೆ ನಿಮ್ಮ ಸುತ್ತಮುತ್ತಲಿನವರಲ್ಲಿ ವಿಚಾರಿಸಿ. ನಿಮಗೆ ದೊರೆಯಬಹುದಾದ ಉತ್ತರ-ನಾನು ಹಿಂದೂ, ನಾನು ಮುಸಲ್ಮಾನ, ನಾನು ಕ್ರೈಸ್ತ...ಇತ್ಯಾದಿ. ಎಲ್ಲರೂ ಭಗವದ್ಗೀತೆ, ಖುರಾನ್, ಬೈಬಲ್ ಇದೆಯೆನ್ನುತ್ತಾರೆಯೇ ಹೊರತು ಪ್ರೀತಿ ಇದೆ ಮನುಷ್ಯತ್ವ ಇದೆ ಎನ್ನುವುದಿಲ್ಲ. ಅಖಂಡ ಭಾರತ ಭಾರತೀಯರಿಲ್ಲದೆ ನರಳುವುದನ್ನು ಕಂಡು ಭಾರತಾಂಬೆ ಅದೆಷ್ಟು ಕಣ್ಣೀರು ಸುರಿಸುತ್ತಿದ್ದಾಳೋ?

ಧರ್ಮ ಮತ್ತು ಅಸಹಿಷ್ಣುತೆ: 'ಮನುಷ್ಯ ಮನುಷ್ಯನನ್ನು ಪ್ರೀತಿಸುವಂತೆ ಮಾಡುವ ಧರ್ಮಗಳು ನಮ್ಮಲ್ಲಿ ಇಲ್ಲ. ಆದರೆ ದ್ವೇಷಿಸುವಂತೆ ಮಾಡುವ ಧರ್ಮಗಳು ಬೇಕಾದಷ್ಟಿವೆ" ಎಂಬ ಜೋನಾಥನ್ ಸ್ವಿಫ್ಟ್‌ರ ಮಾತು ಅಕ್ಷರಶಃ ನಿಜ. ಜನರ ನಡುವೆ ಹಬ್ಬುತ್ತಿರುವ ದ್ವೇಷ ಭಾವನೆಯನ್ನು, ತ್ವೇಷಮಯ ವಾತಾವರಣವನ್ನು ಯಾವ ಧರ್ಮಗಳು ತಾನೆ ಶಮನ ಮಾಡಲು ಯತ್ನಿಸಿವೆ? ಅದರ ಬದಲು ಧಗಧಗನೆ ಉರಿಯುತ್ತಿರುವ ದ್ವೇಷಾಗ್ನಿಗೆ ಇನ್ನಷ್ಟು ಹವಿಸ್ಸು ತುಪ್ಪಗಳನ್ನು ಸುರಿದು ಜ್ವಾಲೆಗಳನ್ನು ಹೆಚ್ಚಿಸುತ್ತಿವೆ. ಅಷ್ಟೇ. ಧರ್ಮಗಳು ಸ್ನೇಹ, ಪ್ರೇಮ, ಶಾಂತಿ-ಸೌಹಾರ್ದತೆಗಳನ್ನು ಹರಡಲು ಅಸಮರ್ಥವಾಗಿವೆ. ಯಾವುದೇ ಧರ್ಮವಿರಲಿ, ತನ್ನ ಅನುಯಾಯಿಗಳಲ್ಲಿ ಅಸಹಿಷ್ಣುತೆಯನ್ನು ಬೆಳೆಸಿ ಅನ್ಯಧರ್ಮದವರ ಹತ್ಯೆ, ಹಿಂಸಾಚಾರಕ್ಕೆ ಪ್ರೇರಣೆ ನೀಡಿದೆ; ಅಂತರಂಗದಲ್ಲಿ ಮತಾಂಧತೆಗೆ ಕಂಕಣಬದ್ಧವಾಗಿದೆ.

"ನಾನು ಧರ್ಮವನ್ನು ಒಂದು ರೋಗವೆಂದು ಪರಿಗಣಿಸುತ್ತೇನೆ. ಅದು ಭೀತಿಯಿಂದ ಉಗಮವಾಗಿ ಮಾನವ ಜನಾಂಗದ ಹೇಳಿಕೊಳ್ಳಲಾಗದ ದುಃಖ-ದುಮ್ಮಾನಗಳಿಗೆ ಕಾರಣವಾಗಿದೆ" ಎಂದು ಬರೆಯುತ್ತಾರೆ ರಸೆಲ್ ತಮ್ಮ 'ಧರ್ಮವು ನಾಗರಿಕತೆಗೆ ಉಪಯೋಗಕರವಾದ ಕಾಣಿಕೆಯನ್ನು ನೀಡಿದೆಯೆ?' ಎಂಬ ಕೃತಿಯಲ್ಲಿ ಏಕೆಂದರೆ ಚರಿತ್ರೆಯುದ್ದಕ್ಕೂ ಇದಕ್ಕೆ ಹಲವಾರು ಉದಾಹರಣೆಗಳಿವೆ.

ಯಹೂದಿ ಧರ್ಮ : ಅನ್ಯಮತದ ದ್ವೇಷಕ್ಕೆ ಕಾರಣವಾಗುವ-ಅಸಹಿಷ್ಣುತೆಯ ಉಗಮ ಮೊದಲ ದೈವಾಜ್ಞೆ (First Commandment)ಯಿಂದಲೇ ಆರಂಭವಾಗುತ್ತದೆ. ದೇವರು ಮೋಸೆಸ್‌ನಿಗೆ 'ನೀನು ನನ್ನ ಮುಂದೆ ಇತರ ದೇವರುಗಳನ್ನು ಹೊಂದಿರಕೂಡದು' ಎಂದು ಆಜ್ಞೆ ಮಾಡುತ್ತಾನೆ. ಕ್ರಮೇಣ ಜನರ ಮನದಲ್ಲಿ ಈ ಕಲ್ಪನೆ ಆಳವಾಗಿ ಬೇರೂರಿತು. ಅನೇಕ ಹಿಂಸಾಚಾರಕ್ಕೂ ಕಾರಣವಾಯಿತು.

ಬೈಬಲ್ (Olf testament)ನಲ್ಲಿ ಒಂದೆಡೆ ಯಹೋವನೆಂಬ ದೇವತೆಯ ಕತೆ ಬರುತ್ತದೆ. ಅದು,

> ಭಾರತದಲ್ಲೆಲ್ಲೂ ಭಾರತೀಯನಿಲ್ಲ! ಇದನ್ನು ಕೇಳಿ ನೀವು ನಗಬಹುದು. ಆದರೆ ಇಲ್ಲಿ ಮನುಷ್ಯನೂ ಇಲ್ಲ! ಹೌದು. ಬೇಕಿದ್ದರೆ ನಿಮ್ಮ ಸುತ್ತಮುತ್ತಲಿನವರಲ್ಲಿ ವಿಚಾರಿಸಿ, ನಿಮಗೆ ದೊರೆಯಬಹುದಾದ ಉತ್ತರ-ನಾನು ಹಿಂದೂ, ನಾನು ಮುಸಲ್ಮಾನ, ನಾನು ಕ್ರೈಸ್ತ...ಇತ್ಯಾದಿ. ಎಲ್ಲರೂ ಭಗವದ್ಗೀತೆ, ಖುರಾನ್, ಬೈಬಲ್ ಇದೆಯೆನ್ನುತ್ತಾರೆಯೇ ಹೊರತು ಪ್ರೀತಿ ಇದೆ ಮನುಷ್ಯತ್ವ ಇದೆ ಎನ್ನುವುದಿಲ್ಲ.
>
> ○ ಶ್ರೀಶ ಉಡುಪ

ಸ್ತ್ರೀ ಶೋಷಣೆ ಕೆಲವೇ ಧರ್ಮಕ್ಕೆ ಸೀಮಿತವಾದುದು ಅಲ್ಲ ಎಂಬ ಕಟುಸತ್ಯಕ್ಕೆ ಪೂರಕ ಕತೆಯಾಗಿದೆ. ಯಹೋವ (ಅಥವಾ ಜೆಹೋವ)ನ ಪ್ರಕಾರ ಹೆಂಗಸು ಚರ ಆಸ್ತಿ. ಗಂಡಸು ಬೇಕೆನ್ನಿಸಿದಾಗ ಬೇಕೆನಿಸಿದಂತೆ ಹೆಂಗಸನ್ನು ಉಪಯೋಗಿಸಿ ಸಾಕೆನಿಸಿದಾಗ ಬಿಡಬಹುದು (Deuteronomy XX) ಹೀಗೆಂದ ಯಹೋವನಿಗೆ ಆತನ ಆದೇಶಕ್ಕನುಗುಣವಾಗಿ ಮೂವತ್ತೆರಡು ಸಾವಿರ ಕನ್ಯೆಯರನ್ನು ಸಂಭೋಗಿಸಲು ಒಪ್ಪಿಸಲಾಯಿತು ಎನ್ನಲಾಗಿದೆ. (ಅಂಕಿ ಅಂಶ ಉತ್ಪ್ರೇಕ್ಷಿತಗೊಂಡಿದೆಯೋ ಎಂಬ ಸಂದೇಹ ವಿಚಾರ ಮಾಡಿದಾಗ ಹುಟ್ಟಿಕೊಳ್ಳುತ್ತದೆ).

ಕ್ರೈಸ್ತ ಧರ್ಮ :

'ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವುದಕ್ಕೆ ಬಂದೆನೆಂದು ಅಂದುಕೊಳ್ಳಬೇಡಿ. ಸಮಾಧಾನವನ್ನು, ಶಾಂತಿಯನ್ನು ಹುಟ್ಟಿಸುವುದಕ್ಕೆ ನಾನು ಬಂದಿಲ್ಲ. ನಾನು ಶಾಂತಿಯೊಂದಿಗೆ ಬರಲಿಲ್ಲ. ಆದರೆ ಖಡ್ಗದೊಂದಿಗೆ ಬಂದೆ. ಹೇಗೆಂದರೆ ಮಗನಿಗೂ, ತಂದೆಗೂ, ಮಗಳಿಗೂ, ತಾಯಿಗೂ, ಸೊಸೆಗೂ, ಅತ್ತೆಗೂ ಭೇದ ಹುಟ್ಟಿಸುವುದಕ್ಕೆ ಬಂದೆ. ನನ್ನ ಮೇಲೆ ಇಡುವುದಕ್ಕಿಂತ ಹೆಚ್ಚಾದ ನಂಬಿಕೆಯನ್ನು ಇತರರ ಮೇಲಿರಿಸಿದವನು ಬದುಕಲು ಯೋಗ್ಯನಲ್ಲ. ಹೀಗೆ ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವಂತೆ ಮಾಡುತ್ತೇನೆ' ಎನ್ನುತ್ತಾನೆ ಕ್ರಿಸ್ತ (Mothews, 10:34-37). 'ಕ್ರೈಸ್ತವೇದದ ಮಾರ್ಗದಲ್ಲಿ ಅಡ್ಡನಿಂತಿರುವ ದುಷ್ಟರನ್ನು ವೈರಿಗಳೆಂದು ಪರಿಗಣಿಸಿ ಆ ನನ್ನ ವೈರಿಗಳನ್ನು ಇಲ್ಲಿಗೆ ಕರೆದು ತನ್ನಿ. ನನ್ನ ಮುಂದೆಯೇ ಅವರನ್ನು ಕಡಿದು ಹಾಕಿ' ಎನ್ನುವುದು ಏಸುಕ್ರಿಸ್ತ ತನ್ನ ಅನುಯಾಯಿಗಳಿಗೆ ನೀಡಿದ ಮನಪೂರ್ವಕ ಆಜ್ಞೆ. (ಲೂಕ್, 19:27)

ಇನ್ನು, ಸ್ತ್ರೀಯನ್ನು ಏಸುಕ್ರಿಸ್ತನು ಎರಡನೆಯ ದರ್ಜೆಯ ಪ್ರಜೆಯನ್ನಾಗಿಯೇ ಪರಿಗಣಿಸುತ್ತಾನೆ. ಪರದಾ ಪದ್ಧತಿಯಂತಹ ಅತ್ಯಂತ ಕೀಳುಮಟ್ಟದ ಪದ್ಧತಿ ಇರುವುದು ಇಸ್ಲಾಂನಲ್ಲಿ ಮಾತ್ರವೆಂದು ನೀವು ತಿಳಿದಿರಬಹುದು. ಇಲ್ಲ, ಅದು ಕ್ರೈಸ್ತ ಧರ್ಮದಲ್ಲೂ ಇದೆ. ಹಿಂದೂ ಧರ್ಮದಲ್ಲೂ ಕೂಡಾ. (ನೋಡಿ, ಶಂಖಸ್ಮೃತಿ, ಸ್ತ್ರೀಯರು ಮಾತನಾಡುವಾಗ ಅಥವಾ ನಗುವಾಗ ಬಾಯಿಗೆ ಸೆರಗು ಮುಚ್ಚಿಕೊಂಡು ಇರಬೇಕು ಎಂದಿದೆ). ಕ್ರಿಸ್ತನು, ಸ್ತ್ರೀಯು ಮುಸುಕು ಹಾಕಿಕೊಳ್ಳದಿದ್ದಲ್ಲಿ ಆಕೆಯ ತಲೆಯನ್ನು ಬೋಳಿಸಿಬಿಡಬೇಕು ಎಂದಿದ್ದೇನೆ. ಏಕೆಂದರೆ-ಪುರುಷನು, ದೇವರ ಪ್ರತಿರೂಪವಾಗಿದ್ದಾನೆ. ಆದರೆ ಸ್ತ್ರೀಯು ಪುರುಷನ ಪ್ರತಿರೂಪವಾಗಿದ್ದಾಳೆ; ಪುರುಷನು ಸ್ತ್ರೀಯಿಂದ ಉತ್ಪತ್ತಿಯಾಗಲಿಲ್ಲ. ಆದರೆ ಸ್ತ್ರೀಯು ಪುರುಷನ ಕಾರಣದಿಂದ ಉತ್ಪತ್ತಿಯಾಗಿದ್ದಾಳೆ; ಇದಲ್ಲದೆ ಪುರುಷನು ಸ್ತ್ರೀಯ ನಿಮಿತ್ತವಾಗಿ ನಿರ್ಮಾಣವಾಗಲಿಲ್ಲ. ಆದರೆ ಸ್ತ್ರೀಯು ಪುರುಷನಿಮಿತ್ತವಾಗಿ ಉತ್ಪತ್ತಿಯಾಗಿದ್ದಾಳೆ. ಈ ಎಲ್ಲ ಕಾರಣದಿಂದ ಸ್ತ್ರೀಯು ಪುರುಷನ ಅಧಿಕಾರ ಸೂಚಿಸುವ ಮುಸುಕನ್ನು ತಲೆಯ ಮೇಲೆ ಹಾಕಿಕೊಂಡಿರಲೇಬೇಕು. (ಪೌಲ್, 11:6-10) ವೈರಿಯನ್ನು ಪ್ರೀತಿಸು, ಎಡಗೆನ್ನೆಗೆ ಹೊಡೆದರೆ ಬಲಗೆನ್ನೆ ತೋರಿಸು ಎಂಬೆಲ್ಲಾ ಶಾಂತಿ ಸಂದೇಶವನ್ನು ಜಗಕ್ಕೆ ಸಾರಿದ ಧರ್ಮವೆಂದು ಜನಪ್ರಿಯವಾದ ಕ್ರೈಸ್ತಧರ್ಮದ ಉದ್ದೇಶಪೂರ್ವಕವಾಗಿ ಮುಚ್ಚಿಡಲ್ಪಟ್ಟ ಆಂತರಿಕ ಕರಾಳ ಮುಖವಿದು: ಅಷ್ಟೇ...

ಇಸ್ಲಾಂ : ಪ್ರತಿಯೊಬ್ಬ ಮುಸ್ಲಿಮನನ್ನು ಸೋದರನಂತೆ ಕಾಣಲು ಉಪದೇಶಿಸುವ ಇಸ್ಲಾಂ ಧರ್ಮ ಇತರ ಧರ್ಮೀಯರ ಪಾಲಿಗೆ ಯಾಕೆ ಕಟುವಾಗಿದೆ? ದೇವರ ಹಾಗೂ ಧರ್ಮದ ಹೆಸರಿನಲ್ಲಿ 'ಜೆಹಾದ್' ಘೋಷಿಸುವುದು ಪ್ರತಿಯೊಬ್ಬ ಮುಸ್ಲಿಮನ ಹಕ್ಕು ಎಂದು ಘೋಷಿಸುವ ಇಸ್ಲಾಂ ಇಂದಿನ ಜನರಲ್ಲಿ ಈ ಆಜ್ಞೆಯೇ ಚೆನ್ನಾಗಿ ಮನನವಾಗುವಂತೆ ಮಾಡಿ ಇತರರನ್ನು ಭೀತಿಯ ಕೂಪಕ್ಕೆ ತಳ್ಳಿದೆ. 'ಕಾಫಿರ'ರನ್ನು ಸಂಹರಿಸಿ ಇಡಿಯ ಜಗತ್ತಿನಲ್ಲಿ ಇಸ್ಲಾಂ ಏಕಮೇವ ಧರ್ಮವಾಗಿ ನೆಲೆಗೊಳ್ಳಬೇಕು ಎಂಬ ಹುಚ್ಚು ಕಲ್ಪನೆಯ ಸಾಕಾರಕ್ಕಾಗಿ ಇದು ನಡೆಯುತ್ತಿರುವುದು

(37ನೇ ಪುಟಕ್ಕೆ)

ದಲಿತರೆಂಬ ವಾಣಿಜ್ಯ ವಸ್ತುಗಳು !

ಮೂಲ : ಮರಿಯನಾದನ್
ಕನ್ನಡಕ್ಕೆ : ಎಸ್. ಬಾಬು

ರಾಜಕೀಯ ಪಕ್ಷಗಳು ದಲಿತರನ್ನು ಒಗ್ಗೂಡಿಸಿ, ಕ್ರೋಢೀಕರಿಸಿ, ಶಾಶ್ವತ ಓಟ್ ಬ್ಯಾಂಕ್‌ಗಳನ್ನು ನಿರ್ಮಿಸಿಕೊಳ್ಳುತ್ತಿದ್ದರೆ, ಸ್ವಯಂ ಸೇವಾ ಸಂಸ್ಥೆಗಳು, ಸಾಮಾಜಿಕ ಸಂಘಟನೆಗಳು ಮತ್ತು ಧಾರ್ಮಿಕ ಸಂಸ್ಥೆಗಳು ದಲಿತ ಎಂಬ ಪದದ ಹಿಂದಿರುವ ಪ್ರಾಜೆಕ್ಟ್‌ಗಳನ್ನು ರೂಪಿಸಲು ದಲಿತ ಸಂಪನ್ಮೂಲದ ಬೆನ್ನ ಹಿಂದೆ ಬಿದ್ದಿವೆ.



ದಲಿತ ಎಂಬ ಪದ ಇಂದಿನ ಜಾಗತಿಕ ಮಾರುಕಟ್ಟೆಯಲ್ಲಿ ಬಹುರೂಪಿ ವಸ್ತುವಾಗಿ ಮಾರ್ಪಟ್ಟಿದೆ. ದಲಿತ ಎಂಬ ಪದದ ಹಿಂದೆ ಬಿದ್ದು ಅದನ್ನು ಕಬಳಿಸಲು ಯತ್ನಿಸುತ್ತಿರುವ ಹಲವಾರು ರಾಜಕೀಯ ಪಕ್ಷಗಳು, ಸ್ವಯಂಸೇವಾ ಸಂಸ್ಥೆಗಳು, ಹುಸಿ ಸಾಮಾಜಿಕ ಕಾರ್ಯಕರ್ತರು, ಧಾರ್ಮಿಕ ಸಂಸ್ಥೆಗಳು ಹಾಗೂ ಸಾಮಾಜಿಕ ಸಂಘಟನೆಗಳು ಒಂದಕ್ಕೊಂದು ಪ್ರತಿಸ್ಪರ್ಧೆ ಕೊಡುತ್ತಿರುವುದು ಕೂಡಾ ತೀರಾ ಆಸಕ್ತಿದಾಯಕವಾದಂತಹ ವಿದ್ಯಮಾನ. ಇವರೆಲ್ಲಾ ಸೇರಿ ದಲಿತ ಎಂಬ ಪದದ ಹಿಂದಿರುವ ಒಂದು ದೊಡ್ಡ ಉದ್ಯಮವನ್ನು ಕಬಳಿಸಲು ತಮ್ಮ್ಮಷ್ಟಕ್ಕೆ ತಾವೇ ಸ್ಪರ್ಧೆಯನ್ನು ಹಾಕಿಕೊಂಡಂತಿದೆ.

ರಾಜಕೀಯ ಪಕ್ಷಗಳು ದಲಿತರನ್ನು ಒಗ್ಗೂಡಿಸಿ, ಕ್ರೋಢೀಕರಿಸಿ, ಶಾಶ್ವತ ಓಟ್ ಬ್ಯಾಂಕ್‌ಗಳನ್ನು ನಿರ್ಮಿಸಿಕೊಳ್ಳುತ್ತಿದ್ದರೆ, ಸ್ವಯಂಸೇವಾ ಸಂಸ್ಥೆಗಳು, ಸಾಮಾಜಿಕ ಸಂಘಟನೆಗಳು ಮತ್ತು ಧಾರ್ಮಿಕ ಸಂಸ್ಥೆಗಳು ದಲಿತ ಎಂಬ ಪದದ ಹಿಂದಿರುವ ಪ್ರಾಜೆಕ್ಟ್‌ಗಳನ್ನು ರೂಪಿಸಲು ದಲಿತ ಸಂಪನ್ಮೂಲದ ಬೆನ್ನ ಹಿಂದೆ ಬಿದ್ದಿವೆ. ಅಷ್ಟೇ ಅಲ್ಲ, ಕೆಲವು ಹುಸಿ ಸಾಮಾಜಿಕ ಕಾರ್ಯಕರ್ತರಿಗೆ ಹಾಗೂ ಬುದ್ಧಿಜೀವಿಗಳಿಗೆ ಕಾಗದದಲ್ಲಿ ಆತ್ಮರತಿಯನ್ನು ಕಾರಿಕೊಳ್ಳುವ, ಕಾಗದದ ಮೇಲೆ ಕ್ರಾಂತಿ ಮಾಡುವುದಕ್ಕೆ ತುಂಬಾ ಒಳ್ಳೆಯ ವಸ್ತು ಮತ್ತು ವಿಷಯವಾಗಿದೆ ಈ ದಲಿತ ಎಂಬ ಪದ, ಕೋಮುಗಲಭೆ ಇರಲಿ, ರಾಜಕೀಯ ವಿದ್ವೇಷವಿರಲಿ, ಅಥವಾ ಯಾವುದೇ ರೀತಿಯ ಮಾನವ ನಿರ್ಮಿತ ಬಿಕ್ಕಟ್ಟಿರಲಿ, ದಲಿತರನ್ನು ಮತ್ತು ಆದಿವಾಸಿ ಜನಸಮುದಾಯಗಳನ್ನು ಬಲಿಪಶುಗಳನ್ನಾಗಿ ಮಾಡಲಾಗುತ್ತದೆ. 'ವಿಶೇಷವೆಂದರೆ ಯಾವುದೇ ರಾಜಕೀಯ ಪಕ್ಷದ ಕಾರ್ಯಕ್ರಮವಿರಲಿ, ಧಾರ್ಮಿಕ ಸಭೆ ಇರಲಿ, ಅಥವಾ ಸಾರ್ವಜನಿಕ ಸಭೆ ಇರಲಿ ಇಲ್ಲೆಲ್ಲಾ ಹೆಚ್ಚಿನ ಸಂಖ್ಯೆಯಲ್ಲಿ ದಲಿತರು ಮತ್ತು ಆದಿವಾಸಿಗಳು ಸೇರಿರುತ್ತಾರೆ.

ಡಬ್ಲ್ಯು.ಸಿ.ಸಿ.ಯಿಂದ ಹಾಗೂ ಇನ್ನಿತರ ದಾನಿ ಸಂಸ್ಥೆಗಳಿಂದ ಕೋಟ್ಯಂತರ ರೂಪಾಯಿಗಳು ಸ್ವಯಂಸೇವಾ ಸಂಸ್ಥೆಗಳಿಗೆ ಮತ್ತು ಇತರ ಸಂಘಟನೆಗಳಿಗೆ ಹರಿದುಬಂದಿದೆ. ಪ್ರಾಜೆಕ್ಟ್ ಸಂಬಂಧಿತ ಕಾರ್ಯಕ್ರಮಗಳಾದ, ತರಬೇತಿ ಶಿಬಿರಗಳು, ಸೆಮಿನಾರುಗಳು, ಸಭೆಗಳು, ಸಾರ್ವಜನಿಕ ಕಾರ್ಯಕ್ರಮಗಳು ಮತ್ತು ಪ್ರತಿಭಟನೆಗಳು ನಡೆದಿವೆ. ಇವುಗಳನ್ನು ಅತ್ಯಂತ ಸ್ಪರ್ಧಾತ್ಮಕವಾಗಿ ಈ ಸ್ವಯಂಸೇವಾ ಸಂಸ್ಥೆಗಳು ತೆಗೆದುಕೊಂಡು ಕಾರ್ಯನಿರ್ವಹಿಸುತ್ತಿವೆ. ವಿಭಿನ್ನವಾದ ಸಂಶೋಧನಾ ವಿಷಯಗಳು, ಪ್ರಬಂಧಗಳು, ದಲಿತರ ಬದುಕಿನ ಬಗ್ಗೆ, ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿವೆ, ಪ್ರಕಟಗೊಂಡಿವೆ. ಈ ಎಲ್ಲಾ ನಾಟಕಗಳು ದಲಿತರ ಬದುಕಿನ ಮೇಲೆ ಏನಾದರೂ ಪರಿಣಾಮ ಬೀರಿವೆಯೇ? ದಲಿತರು ಸ್ವಾವಲಂಬಿಗಳಾಗಿದ್ದಾರೆಯೇ? ಸ್ವಯಮಾಡಳಿತ ಮಾಡುವ ಹಂತಕ್ಕೆ ಬಂದಿದ್ದಾರೆಯೇ? ಕಾಶ್ಮೀರದ ಅಗೋಚರ ಹಳ್ಳಿಗಳಿಂದ ಹಿಡಿದು, ಕನ್ಯಾಕುಮಾರಿಯ ಹಳ್ಳಿಗಳವರೆಗೆ ಕಾಣಿಸುವುದು ನೋವು ತರುವಂಥ, ಮಧ್ಯಕಾಲೀನ ಆಚರಣೆಗಳ ಬದುಕನ್ನು ನೆನಪಿಸುವಂಥ ಅಸ್ಪೃಶ್ಯತೆಯ ವಿವಿಧ ರೂಪಗಳು, ಆಚರಣೆಗಳು ಮಾತ್ರ.

ಬಂಡವಾಳಶಾಹಿಗಳು ಮತ್ತು ಪುರೋಹಿತಶಾಹಿ ವರ್ಗ ಈ ಮೊದಲಿನಿಂದಲೂ ಬಹಳ ಜಾಗರೂಕತೆಯಿಂದ, ಸಮತಾವಾದದ ಮೌಲ್ಯಗಳನ್ನು, ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಒಪ್ಪಿಕೊಳ್ಳಲೇ ಇಲ್ಲ. ಜೊತೆಗೆ, ಮಾನವ ಹಕ್ಕುಗಳು ಮತ್ತು ದಲಿತ ಅಜೆಂಡಾವನ್ನು ತಮ್ಮ ಸ್ವಾಮ್ಯಕ್ಕೆ ಸ್ವಯಂ ಸೇವಾಸಂಸ್ಥೆಗಳ ಮೂಲಕ ತೆಗೆದುಕೊಂಡಿವೆ.

ಕರ್ನಾಟಕದಲ್ಲಿ, ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ, ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಮತ್ತು ಹುಸಿ ಸಾಮಾಜಿಕ ಕಾರ್ಯಕರ್ತರು ದಲಿತ ವಿಷಯವನ್ನು ತೆಗೆದುಕೊಂಡು ತಮ್ಮ ವಾಣಿಜ್ಯ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಒಂದು ಕಡೆ, ಸಂಘ ಪರಿವಾರ ತನ್ನ ಸ್ವನಿರ್ಮಿತ ಎನ್‌ಜಿಓಗಳ ಮುಖಾಂತರ ದಲಿತರನ್ನು ಮತ್ತು ಆದಿವಾಸಿಗಳನ್ನು ಕೇಸರೀಕರಣ ಮಾಡುತ್ತಿದ್ದರೆ ಮತ್ತೊಂದು ಕಡೆ, ಕೆಲವು ಕ್ರಿಶ್ಚಿಯನ್ ಮತ್ತಿತರ ಅಲ್ಪಸಂಖ್ಯಾತ ಸಂಘಟನೆಗಳು ಸಂಘಪರಿವಾರದಷ್ಟೇ ಅಪಾಯಕಾರಿಯಾಗಿದ್ದು, ಸ್ಪರ್ಧಾತ್ಮಕವಾಗಿ ದಲಿತರನ್ನು ವಾಣಿಜ್ಯೀಕರಣದ ವಸ್ತುಗಳನ್ನಾಗಿ ಮಾಡಲು ಹಾತೊರೆಯುತ್ತಿವೆ.

ಆದಿವಾಸಿಗಳು ಮತ್ತು ದಲಿತರು ಏಕಾಂಗಿತನದಲ್ಲಿ ಮತ್ತು ಅವಲಂಬಿತರಾಗಿ ಜೀವನ ಪರ್ಯಂತ ಇರುವ ಹಾಗೆ ಇಲ್ಲಿನ ಮೇಲ್ಜಾತಿ ಮತ್ತು ಬ್ರಾಹ್ಮಣಶಾಹಿ ವರ್ಗ ಒಂದು ವ್ಯವಸ್ಥೆಯನ್ನು ನಿರ್ಮಾಣ ಮಾಡಿದೆ. ದಲಿತರು ಮತ್ತು ಆದಿವಾಸಿಗಳು, ದೈಹಿಕವಾಗಿ, ಆರ್ಥಿಕವಾಗಿ, ಸಾಮಾಜಿಕ ಹಾಗೂ ರಾಜಕೀಯವಾಗಿ, ಧರ್ಮ ಹಾಗೂ ಸಾಂಸ್ಕೃತಿಕವಾಗಿ ಏಕಾಂಗಿತನವನ್ನು ಅನುಭವಿಸುತ್ತಿದ್ದಾರೆ. ಜೊತೆಗೆ ಅವಲಂಬಿತನವೂ ಇದೆ. ಇದು ಇಲ್ಲಿನ ಮೌನ ಸಂಸ್ಕೃತಿಯ ಭಾಗವಾಗಿರುವಂತೆ ಮೇಲ್ಜಾತಿ ಹಾಗೂ ಬ್ರಾಹ್ಮಣ ಶಾಹಿ ವ್ಯವಸ್ಥೆ, ವ್ಯವಸ್ಥಿತವಾಗಿ ಮತ್ತು ಚಾರಿತ್ರಿಕವಾಗಿ ನಿರ್ಮಾಣ ಮಾಡಿದೆ. ಚಾರಿತ್ರಿಕವಾಗಿ ಸೃಷ್ಟಿಸಿರುವ ಏಕಾಂಗಿತನ ಮತ್ತು ಅವಲಂಬಿತನವನ್ನು ಮುರಿಯಲೇಬೇಕಾದ ಅನಿವಾರ್ಯತೆ ನಮ್ಮ ಮುಂದಿದೆ. ಇದನ್ನು ಮುರಿದೇ ಶೋಷಣೆಗೊಳಗಾದ ಜನವರ್ಗವನ್ನು ಜನಪರ ಜನಾಂದೋಲನವನ್ನಾಗಿ ರೂಪಿಸುವ ಮೂಲಕ ನಿಜವಾದ ಸಮುದಾಯ ಬಲಗೊಳಿಸುವಿಕೆ ಅಥವಾ ಶಕ್ತ ಸಮುದಾಯವನ್ನು ನಿರ್ಮಾಣ ಮಾಡಬೇಕಿದೆ. ಇದೇ ನಿಜವಾದ ಜನಪರ ಚಳವಳಿ. ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ತುಂಬಾ ಶಕ್ತಿಶಾಲಿಯಾದ ಜನಾಂದೋಲನವಾಗಿ ರೂಪುಗೊಂಡಿದೆ. ತಮಿಳುನಾಡಿನಲ್ಲಿ ದಲಿತ ಪ್ಯಾಂಥರ್ಸ್ ಮುಂತಾದ ಸಂಘಟನೆಗಳು ಹಾಗೂ ಇತರ ದಲಿತ ಸಂಘಟನೆಗಳು ತಮ್ಮ ಕ್ರಾಂತಿಕಾರಿ ಹಾಡುಗಳು, ಸಾಂಸ್ಕೃತಿಕ

ಅಭಿವ್ಯಕ್ತಿಗಳ ಮೂಲಕ ಈ ಏಕಾಂಗಿತನವನ್ನು ಹೋಗಲಾಡಿಸಿ ಸಾಮೂಹಿಕತನವನ್ನು ತರುವಂಥ ಪ್ರಯತ್ನ ಮಾಡಿವೆ. ಆದರೆ ಈ ಎನ್‌ಜಿಓಗಳು ತಮ್ಮ ಸಾಂಸ್ಥಿಕ ರೂಪ ಮತ್ತು ಹಣದ ಬಲದಿಂದ ದಲಿತ ಚಳವಳಿಗಳ ಪ್ರಯತ್ನಗಳನ್ನು ಮತ್ತು ಕೊಡುಗೆಗಳನ್ನು ನುಂಗಿವೆ.

ದಲಿತ ಚಳವಳಿಗಳೆಲ್ಲವೂ ತಾವೇ ಸೃಷ್ಟಿಸಿದ್ದು ಎನ್ನುವಂತೆ ಪ್ರಚಾರ ಮಾಡಿ ಪ್ರಾಜೆಕ್ಟ್‌ಗಳನ್ನು ರೂಪಿಸಿ ಹಣ ಗಳಿಸಿವೆ. ರಾಜಕೀಯ ಪಕ್ಷಗಳೂ ಕೂಡ ಎನ್‌ಜಿಓಗಳ ಜೊತೆಗೂಡಿ ದಲಿತ ಚಳವಳಿಯನ್ನು ಛಿದ್ರಗೊಳಿಸಿವೆ. ಇಡೀ ದಲಿತ ಚಳವಳಿಯ ಸಿದ್ಧಾಂತಕ್ಕೆ ವಾಣಿಜ್ಯ ರೂಪಕೊಟ್ಟಿವೆ. ಆಶಾದಾಯಕ ಬೆಳವಣಿಗೆಯೆಂದರೆ, ದಲಿತರಲ್ಲಿ ಇಂದು ಕಾಣುತ್ತಿರುವ ಎಚ್ಚರಿಕೆಯ ಪ್ರಕ್ರಿಯೆಗಳು. ದಲಿತ ಚಳವಳಿಗಳು ಮತ್ತು ಜನಪರ ಚಳವಳಿಗಳು ಇಂದು ಸ್ವಯಂ ಸೇವಾಸಂಸ್ಥೆಗಳಿಂದ ಮತ್ತು ರಾಜಕೀಯ ಪಕ್ಷಗಳಿಂದ ದೂರ ಉಳಿಯುವ ನಿರ್ಧಾರವನ್ನು ತಡವಾಗಿಯಾದರೂ ಅರ್ಥ ಮಾಡಿಕೊಂಡು ಜಾರಿಗೆ ತರುತ್ತಿವೆ.

ಕೆಲವು ಎನ್‌ಜಿಓಗಳು ಜಾಗತಿಕ ಬಂಡವಾಳಶಾಹಿಗಳ ಏಜೆಂಟರಂತೆ ವರ್ತಿಸುತ್ತಿದ್ದು, ಏಕಾಂಗಿತನ ಮತ್ತು ಅವಲಂಬಿತನನವನ್ನು ದಲಿತ ಮತ್ತು ಆದಿವಾಸಿ ವರ್ಗಗಳ ಮೇಲೆ ಹೇರುತ್ತಿವೆ. ದುರಾದೃಷ್ಟ ವಶಾತ್, ದಲಿತರ, ಬಡವರ ಪರವಾಗಿ ಕೆಲಸ ಮಾಡುತ್ತಿರುವ ಅನೇಕ ಸಂಸ್ಥೆಗಳು ಗೊತ್ತಿದ್ದೋ, ಗೊತ್ತಿಲ್ಲದೆಯೋ ನಿಧಾನವಾಗಿ ಜಾಗತಿಕ ಅಸ್ಪೃಶ್ಯತೆಯ ಭಾಗವಾಗುತ್ತಾ ಜಾಗತಿಕ ಅಸ್ಪೃಶ್ಯತೆಯನ್ನು ಪ್ರಪಂಚದ ಎಲ್ಲಾ ಬಡವರ ಮೇಲೆ, ದಲಿತರ ಮೇಲೆ, ಶೋಷಣೆಗೊಳಗಾಗುತ್ತಿರುವವರ ಮೇಲೆ ಹೇರಲಾಗುತ್ತಿದೆ, ಆಚರಣೆಗೆ ತರಲಾಗುತ್ತಿದೆ. ಕ್ಲಿಂಟನ್, ಬುಷ್ ತಂತ್ರಗಾರಿಕೆಯು ಇಂಡಿಯಾದ ಮನುಧರ್ಮ ಶಾಸ್ತ್ರಕ್ಕೆ ಹತ್ತಿರವಾಗಿದ್ದು ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸುತ್ತಿರುವಂತೆ ಕಾಣುತ್ತಿದೆ. ಮಾನವ ಹಕ್ಕುಗಳನ್ನು ಏಕಸ್ವಾಮ್ಯಕ್ಕೆ ಒಳಪಡಿಸಿಕೊಂಡಿರುವ ಅನೇಕ ಸ್ವಯಂ ಸೇವಾಸಂಸ್ಥೆಗಳು ಕೇವಲ ಅಮೆರಿಕಾ ಬಂಡವಾಳ ಶಾಹಿ ಯುದ್ಧವನ್ನು ಮತ್ತಷ್ಟೂ ಬಲಗೊಳಿಸುತ್ತಿವೆ. ನಾವು ಮಾನವ ಹಕ್ಕುಗಳನ್ನು ಬಂಡವಾಳಶಾಹಿ ದೃಷ್ಟಿಕೋನದಲ್ಲಿ ಅರ್ಥಮಾಡಿಕೊಳ್ಳುವುದು ಬೇಕಾಗಿಲ್ಲ, ಬದಲಿಗೆ ಮಾನವಹಕ್ಕುಗಳನ್ನು ಸಮತಾವಾದದ ದೃಷ್ಟಿಯಲ್ಲಿ, ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಿದೆ. ಆದ್ದರಿಂದ ದಲಿತ, ಆದಿವಾಸಿ ಮತ್ತು ಇತರ ಹಿಂದುಳಿದ ಜನವರ್ಗಗಳ ಜನಾಂದೋಲನಗಳು, ಜನಪರ ಚಳವಳಿಗಳು ಸಮತಾವಾದದ ದೃಷ್ಟಿಕೋನವನ್ನು ಮೈಗೂಡಿಸಿಕೊಳ್ಳಬೇಕು ಮತ್ತು ಅದರ ಮೂಲಕ ಬಲಗೊಳ್ಳಬೇಕು. ಈಗಾಗಲೇ ದ್ವೇಷ ಬಿತ್ತುವಂತಹ ಹಣಕಾಸು ಮೂಲಗಳನ್ನು ಮತ್ತು ದಾನಿ ಸಂಸ್ಥೆಗಳನ್ನು ವಿರೋಧಿಸುವ ನಾವು ಯಾಕೆ ದಲಿತರನ್ನು ವಾಣಿಜ್ಯೀಕರಣಕ್ಕೊಳಪಡಿಸುವ ಹಣದ ಮೂಲಗಳ/ದಾನಿ ಸಂಸ್ಥೆಗಳ ವಿರುದ್ಧ ಜನಾಂದೋಲನವನ್ನು ಹಮ್ಮಿಕೊಳ್ಳಬಾರದು? ●

ಕೃಪೆ : ಜನವಾಹಿನಿ

ಭಾರತದಲ್ಲೆಲ್ಲೂ ಭಾರತೀಯನಿಲ್ಲ !

(36ನೇ ಪುಟದಿಂದ)

ಮುಗ್ದರ ಹತ್ಯಾಕಾಂಡ. ಇತಿಹಾಸದಲ್ಲೇ ಮೊದಲ ಬಾರಿಗೆ ಸ್ತ್ರೀಗೆ ಆಸ್ತಿಯ ಹಕ್ಕು ನೀಡಿದ ಇಸ್ಲಾಂ ಧರ್ಮ ಆಕೆಯ ಹತ್ತು ಹಲವು ಸ್ವಾತಂತ್ರ್ಯಗಳನ್ನು ಕಿತ್ತುಕೊಂಡು ಆಕೆ ನರಳುವಂತೆ ಮಾಡಿದೆ. ಇದರ ಆವಾಂತರಕಾರಿ ಪರಿಣಾಮಕ್ಕೆ ತಾಲೀಬಾನ್ ಆಡಳಿತವೇ ಉತ್ತಮ ಉದಾಹರಣೆಯಾಗಿದೆ.

ಇಸ್ಲಾಂನ ಧರ್ಮಗ್ರಂಥ ಖುರ್‌ಆನ್‌ನಲ್ಲಿ ನೂರ ಹದಿನಾಲ್ಕು ಸೂರಾ ಅಥವಾ ಆಯತ್‌ಗಳಿವೆ. ಇವುಗಳಲ್ಲಿರುವ ಶ್ಲೋಕಗಳ ಸಂಖ್ಯೆ ಸುಮಾರು ಆರು ಸಾವಿರದ ನೂರು. ಇಷ್ಟೊಂದು ಶ್ಲೋಕಗಳಲ್ಲಿ ಖಚಿತವಾಗಿ ಅರ್ಥವನ್ನು ಹೇಳಲು ಸಾಧ್ಯವಾದ ಶ್ಲೋಕಗಳ ಸಂಖ್ಯೆ ಕೇವಲ ಮೂರು ನೂರು. ಉಳಿದ ಶ್ಲೋಕಗಳ ಅರ್ಥಗಳ ಭಿನ್ನಾಭಿಪ್ರಾಯದಿಂದಾಗಿ-ಅವುಗಳಲ್ಲಿ 'ತಲಾಖ್' ಪದ್ಧತಿಯೂ ಒಂದು-ಇಸ್ಲಾಂನಲ್ಲೇ ಹಲವಾರು ಪಂಗಡಗಳು ಹುಟ್ಟಿಕೊಂಡಿವೆ. ತಮ್ಮ ಧರ್ಮಗ್ರಂಥದ ಶ್ಲೋಕಗಳಲ್ಲಿ ಕೇವಲ ಶೇಕಡ ಐದರಷ್ಟಕ್ಕೆ ಮಾತ್ರ ಅರ್ಥಕಂಡುಕೊಂಡಿರುವವರು ಇಡೀ ಜಗತ್ತನ್ನೇ ಧರ್ಮದ ಆಧಾರದಲ್ಲಿ ಆಳಲು ಹೊರಟಿರುವುದು ವಿಪರ್ಯಾಸ!

ಸಿಖ್ ಧರ್ಮ :

ಧರ್ಮಗಳಲ್ಲೆಲ್ಲ ಸಿಖ್ ಧರ್ಮವೇ ಶ್ರೇಷ್ಠ, ಗುರುದ್ವಾರವೇ ಅತ್ಯಂತ ಪವಿತ್ರವಾದ ದೇವಮಂದಿರ ಎಂದು ಸಿಖ್ ಧರ್ಮ ಸಾರುತ್ತದೆ.

(ಅಷ್ಟಪದಿ 3, ಪೌರಿ 8) ●

ಮೀಸಲಾತಿಯ ಮಹಾ ಚರ್ಚೆ

(17ನೇ ಪುಟದಿಂದ)

ತಿಂಗಳುಗಳ ನಂತರ ಪಾಟ್ನಾದಲ್ಲಿ ಬೆಲ್ಚಿ ಘಟನೆ ನಡೆದು, 14 ಮಂದಿ ದಲಿತರನ್ನು ಕತ್ತರಿಸಿ ಹಾಕುತ್ತಾರೆ. ಆಧುನಿಕ ಭಾರತದಲ್ಲಿ ಪ್ರಪ್ರಥಮವಾಗಿರುವ ಈ ಕೊಲೆಯು ಕಮ್ಮರಂಥ ಶೂದ್ರ ಕುರ್ಮಿಗಳಿಂದಲೇ ನಡೆದದ್ದು. ಇದು ಶೂದ್ರರ ಸಾಮಾಜಿಕ ವಿರುವಿಕೆಯನ್ನು ತೋರಿಸುತ್ತದೆ. ಅನೇಕ ದಲಿತ ಹತ್ಯೆಗಳು ಶೂದ್ರರಿಂದಲೇ ನಡೆದಿರುವುದು. ಶೂದ್ರರಿಗೆ ಹಿಂಸೆಯೊಂದು ಉದ್ಯಮವಾಗಿ ಬಿಟ್ಟಿದೆ. ಕೆಲವು ವರ್ಷಗಳ ಹಿಂದೆ ರಾಜಸ್ತಾನದ ಧೃಲಾಪುರ್ ಜಿಲ್ಲೆಯಲ್ಲಿ ಒಂದು ಭಯಾನಕ ಘಟನೆ ನಡೆಯಿತು. ನಾಕ್ಸೋಡಾ ಅನ್ನುವ ಹಳ್ಳಿಯಲ್ಲಿ ರಾಮೇಶ್ವರ್ ಜಾತವ್ ಎನ್ನೋ ದಲಿತ ಯುವಕ ಒಬ್ಬ ಗುಜ್ಜರ್ ಯುವಕನೊಂದಿಗೆ ವಾದಕ್ಕಿಳಿದ. ಹಳ್ಳಿಯ ಶೂದ್ರ ಮುಖ್ಯಸ್ಥ ಈ ದಲಿತ ಯುವಕನಿಗೆ ಪಾಠ ಕಲಿಸಲು ನಿರ್ಧರಿಸಿದ. ರಾಮೇಶ್ವರ ಮೂಗನ್ನು ಗೋಣಿಚೀಲ ಹೊಳೆಯುವ ಸೂಚಿಯಿಂದ ಚುಚ್ಚಿ, ಅದರೊಳಗೆ ಒಂದು ದಾರವನ್ನು ತುರುಕಿ, ರಕ್ತ ಸುರಿಯುತ್ತಿರುವಾಗಲೇ ಆ ಯುವಕನನ್ನು ಹಳ್ಳಿಯಲ್ಲಿ ಮೆರವಣಿಗೆ ಮಾಡಲಾಯಿತು. ಆಗ ಯಾರು ಸಹಾಯ ನೀಡಲು ಮುಂದೆ ಬಂದರೋ ಅವರನ್ನು ಈ ಗುಜ್ಜರರು ಹೊಡೆದು ಅಟ್ಟಿದರು. ಹಾಗೆಯೇ ಕರ್ನಾಟಕ ಮತ್ತು ತಮಿಳ್ನಾಡಿನಲ್ಲಿ ಅನೇಕ ದಲಿತರಿಗೆ ಶಿಕ್ಷೆಯಾಗಿ ಹೇಲನ್ನು ತಿನ್ನಿಸಲಾಗಿದೆ. ಈ ಹಿಂಸಕರೆಲ್ಲರೂ ಶೂದ್ರರೇ.

ಅನೇಕ ದಲಿತ ಚಿಂತಕರು ಈಗ ನನ್ನೊಡನೆ ಸಹ ಮತಕ್ಕೆ ಬಂದು, ಭೌತಿಕವಾದ ಹಿಂಸೆ, ಹತ್ಯೆ, ಕೊಲೆ, ಹಿಂಸೆ, ಆಕ್ರಮಣ, ದೊಂಬಿ, ಅತ್ಯಾಚಾರ ಇತ್ಯಾದಿ... ಶೂದ್ರರಿಂದಲೇ ಆಗುತ್ತಿದ್ದು, ಅನೇಕ ಭಾರಿ ಹಿಂಸೆಗೆ ಒಳಗಾದವರು ದಲಿತ ಕೃಷಿ ಕೂಲಿಯಾಳಾಗಲೇ ಆಗಿದ್ದಾರೆ. ಆದರೆ ಅನೇಕ ದಲಿತರು ನಗರಗಳಲ್ಲಿ ಕುಳಿತು ಉಸಿರುಗಟ್ಟುವಂತೆ ಮಾನಸಿಕ ಹಿಂಸೆಯನ್ನೇ ಅತಿ ಮಾಡುತ್ತಾ, ಬ್ರಾಹ್ಮಣರೇ, ತಮ್ಮ ಮೊದಲ ಗುರಿಯೆಂದು ವಾದಿಸುತ್ತಿದ್ದಾರೆ. ಮೂರು ವರ್ಷಗಳ ಹಿಂದೆ ಹೈದ್ರಾಬಾದ್‌ನಲ್ಲಿರುವ ಒಂದು ಮಹಿಳಾ ಸಂಶೋಧನಾ ಸಂಸ್ಥೆಯಾದ "ಅನ್ವೇಷಿ" ಇದೇ ಧ್ವನಿಯನ್ನು ಗಮನಿಸಿತ್ತು. ಆಗ ನಾನು ಅಲ್ಲಿ ಮಾತನಾಡಲು ಹೋಗಿದ್ದೆ. ಆ ಒಂದು ಫಲಪ್ರದವಾದ ಚರ್ಚೆಯಲ್ಲಿ ಉತ್ತರ ಪ್ರದೇಶದಲ್ಲಿ ಆಗುವ ಹೊಂದಾಣಿಕೆಯನ್ನು ಮುನ್ಸೂಚಿಸಿದ್ದೆ. ಈ ಬಗ್ಗೆ ನಾನು ಮತ್ತಷ್ಟು ಯೋಚಿಸುತ್ತಿದ್ದೇನೆ ಮತ್ತು ಮಾನಸಿಕ-ದೈಹಿಕ ಹಿಂಸೆಯೆಂದು ಪ್ರತ್ಯೇಕಿಸಬಹುದೇ ಎಂಬುದನ್ನು ಸಂದೇಹಿಸುತ್ತಿದ್ದೇನೆ.

ರಾಮೇಶ್ವರ್ ಜಾತವ್ ತನ್ನ ವಿರುದ್ಧವೇ ತಿರುಗಿಬೀಳುವಂತಾಯಿತಷ್ಟೆ. ಹಿಂಸ ಮುಕ್ತವಾಗಿ ಓಡಾಡಿಕೊಂಡಿದ್ದಾನೆ. ಪ್ರತಿಯೊಂದು ದಿನವೂ ಮನೆಯಿಂದ ಹೊರ ಬಂದಾಗಲೂ ಆತ ನಂಥಹ ಘನತೆಯನ್ನು ಹೊಂದಿರುತ್ತಾನೆ? ತನ್ನ ಹೇಲನ್ನೇ ತಿಂದ ದಲಿತನು ಅದೇ ಹಳ್ಳಿಯಲ್ಲಿ ಓಡಾಡುವಾಗ ಆತನ ಮನಸ್ಥಿತಿ ಹೇಗಿರಬಹುದು? ಇಡೀ ಹಳ್ಳಿಯ ಎದುರಿನಲ್ಲೇ ತಾನು, ತನ್ನ ಹೆಂಡತಿ ಮತ್ತು ಮಕ್ಕಳು ಹಿಂಸೆಗೆ ಒಳಗಾದಾಗ ಎಂಥ ಮನೋಸ್ಥಿತಿಯನ್ನು ಆ ದಲಿತ ಹೊಂದಿರುತ್ತಾನೆ? ಇಲ್ಲಿ ಹಿಂಸೆಗೆ ಒಳಗಾದವರು ಮಾತ್ರ ಅನುಭವಿಸಬಹುದೇ ಹೊರತು, ಉಳಿದವರು ಹಿಂಸೆಯ ಬಗ್ಗೆ ಯೋಚಿಸಬಹುದಷ್ಟೆ. ಬ್ರಾಹ್ಮಣರನ್ನು ದೂಷಿಸುವ ದಲಿತರು ಸರಿಯಾಗಿ ಅರ್ಥಮಾಡಿಕೊಳ್ಳದಿರುವ ಸಂಗತಿಯೆಂದರೆ, ಮಾನಸಿಕ ಹಿಂಸೆಯೆನ್ನುವುದು ಮಾನಸಿಕವಾಗಿಯೇ ನಿಲ್ಲುತ್ತದೆ; ಆದರೆ ದೈಹಿಕ ಹಿಂಸೆ ಎರಡು ಬಗೆಯ ಏಟನ್ನು ಒಮ್ಮೆಗೇ ನೀಡುತ್ತದೆ. ಕೊನೆಗೆ ಅದು ಮಾನಸಿಕವಾಗಿ ಬೇರೂರುತ್ತದೆ. ಬ್ರಾಹ್ಮಣ ಮಾನಸಿಕ ಹಿಂಸೆಯನ್ನುಂಟುಮಾಡುವುದರಲ್ಲಿ ಸಮರ್ಥನಿದ್ದರೆ, ಶೂದ್ರ ದೇಹಕ್ಕೆ ಏಟು ಕೊಡುವಾಗಲೇ ಮನಸ್ಸಿಗೂ ನೋವನ್ನುಂಟು ಮಾಡುತ್ತಾನೆ. ●

ಶಾಪವಾಗಿ ಕಾಡಿದ ಜಾತಿ ಭೂತ

ಯೂರೋಪ್ ಮತ್ತು ಅಮೇರಿಕದಲ್ಲಿ ನಾನು ಐದು ವರುಷಗಳನ್ನು ಕಳೆಯುವುದರಲ್ಲಿ, ಅಲ್ಲಿನ ವಾತಾವರಣವು ನಾನೊಬ್ಬ ಅಸ್ಪೃಶ್ಯನೆಂಬ ಪ್ರಜ್ಞೆಯನ್ನೇ ನನ್ನಿಂದ ದೂರ ಮಾಡಿತ್ತು. ಇಂಡಿಯಾದಲ್ಲಿ, ಅಸ್ಪೃಶ್ಯನು ಹೋಗುವೆಡೆಯಲ್ಲೆಲ್ಲಾ ತನಗೂ ಸಮಸ್ಯೆಯನ್ನು ತಂದೊಡ್ಡಿಕೊಳ್ಳುತ್ತಾನೆ ಮತ್ತು ಇತರರಿಗೂ ಸಮಸ್ಯೆಯಾಗುತ್ತಾನೆ.

○ ಡಾ. ಬಿ.ಆರ್. ಅಂಬೇಡ್ಕರ್

ಅನು : ಸಿ.ವಿ. ಲಕ್ಷ್ಮಿ ಮತ್ತು ಎಂ. ಮಾತಂಗಿ

1918ರಲ್ಲಿ ನಾನು ಇಂಡಿಯಾಗೆ ಹಿಂದಿರುಗಿದೆ. ಬರೋಡದ ಮಹಾರಾಜರು ಉನ್ನತ ವ್ಯಾಸಂಗಕ್ಕಾಗಿ ನನ್ನನ್ನು ಅಮೇರಿಕಕ್ಕೆ ಕಳಿಸಿದ್ದರು. ನ್ಯೂಯಾರ್ಕಿನ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ನಾನು 1913ರಿಂದ 1917ರ ತನಕ ವ್ಯಾಸಂಗಮಾಡಿದೆ. 1947ರಲ್ಲಿ ಲಂಡನ್ನಿಗೆ ಬಂದು ಅಲ್ಲಿನ ಸ್ಕೂಲ್ ಆಫ್ ಎಕಾನಮಿಕ್ಸ್‌ನ ಪೋಸ್ಟ್ ಗ್ರಾಜುಯೇಟ್ ವಿಭಾಗಕ್ಕೆ ಪ್ರವೇಶ ಪಡೆದೆನು. 1918ರಲ್ಲಿ, ನನ್ನ ವ್ಯಾಸಂಗವನ್ನು ಪೂರ್ಣಗೊಳಿಸಲಾಗದೆ ನಾನು ಇಂಡಿಯಾಗೆ ವಾಪಸ್ಸಾಗಬೇಕಾಯಿತು. ನನ್ನ ವ್ಯಾಸಂಗದ ಖರ್ಚೆಲ್ಲವನ್ನು ಬರೋಡಾ ರಾಜ್ಯ ಸಾರ್ಕರವು ಭರಿಸಿದ್ದರಿಂದ, ನಾನು ಬರೋಡ ಸರ್ಕಾರಕ್ಕೆ ಸೇವೆ ಸಲ್ಲಿಸಬೇಕಾಗಿತ್ತು. ನಾನು ಬರೋಡ ಸರ್ಕಾರದ ಸೇವೆಯನ್ನು ಬಿಡಬೇಕಾದ ಕಾರಣಗಳ ಬಗ್ಗೆ ಇಲ್ಲಿ ವಿವರಿಸುವುದು ಅನಗತ್ಯವಾಗಿದೆ. ಬರೋಡಾದಲ್ಲಿ ನನಗೆ ಎದುರಾದ ಸಾಮಾಜಿಕ ಸಮಸ್ಯೆಗಳ ಬಗ್ಗೆ ಮಾತ್ರ ನಾನು ವಿವರಿಸಲು ಬಯಸುತ್ತೇನೆ.

ಯೂರೋಪ್ ಮತ್ತು ಅಮೇರಿಕದಲ್ಲಿ ನಾನು ಐದು ವರುಷಗಳನ್ನು ಕಳೆಯುವುದರಲ್ಲಿ, ಅಲ್ಲಿನ ವಾತಾವರಣವು ನಾನೊಬ್ಬ ಅಸ್ಪೃಶ್ಯನೆಂಬ ಪ್ರಜ್ಞೆಯನ್ನೇ ನನ್ನಿಂದ ದೂರ ಮಾಡಿತ್ತು. ಇಂಡಿಯಾದಲ್ಲಿ, ಅಸ್ಪೃಶ್ಯನು ಹೋಗುವೆಡೆಯಲ್ಲೆಲ್ಲಾ ತನಗೂ ಸಮಸ್ಯೆಯನ್ನು ತಂದೊಡ್ಡಿಕೊಳ್ಳುತ್ತಾನೆ ಮತ್ತು ಇತರರಿಗೂ ಸಮಸ್ಯೆಯಾಗುತ್ತಾನೆ. ಬರೋಡಾ ನಿಲ್ದಾಣದಲ್ಲಿ ಇಳಿಯುತ್ತಿದ್ದಂತೆ, "ಎಲ್ಲಿಗೆ ಹೋಗುವುದು? ನನಗೆ ನೆರಳು ನೀಡುವವರು ಯಾರು?" ಎಂಬ ಪ್ರಶ್ನೆಯು ನನ್ನನ್ನು ಕಾಡಹತ್ತಿತ್ತು. ಮನಸ್ಸಿನೊಳಗೆ ತೀವ್ರತರದ ಬೇಗುದಿ ಶುರುವಾಯಿತು. ವೈಶ್ಯರು ಎಂಬ ಹಿಂದೂಗಳು ನಡೆಸುವ ಹೋಟೆಲುಗಳಿರುವುದು ನನಗೆ ಗೊತ್ತಿತ್ತು. ಅವರು ಖಂಡಿತವಾಗಿಯೂ ನನಗೆ ಜಾಗ ಕೊಡುವುದಿಲ್ಲ. ತಂಗಲು ವಸತಿಯನ್ನು ಪಡೆಯಲು ಇದ್ದಂತಹ ಏಕೈಕ ಮಾರ್ಗವೆಂದರೆ, ನನ್ನ ಜಾತಿಯನ್ನು ಮುಚ್ಚಿಟ್ಟು ಸುಳ್ಳು ಹೇಳುವುದು. ಆದರೆ ಆ ರೀತಿ ಸುಳ್ಳು ಹೇಳಲು ನಾನು ಸಿದ್ಧನಿರಲಿಲ್ಲ. ಏಕೆಂದರೆ, ನಾನು ಯಾರು ಎಂಬ ನಿಜ ಗೊತ್ತಾದ ಮೇಲೆ ಆಗಬಹುದಾದ ಭಯಂಕರ ಪರಿಣಾಮಗಳ ಬಗ್ಗೆ ನನಗೆ ಚೆನ್ನಾಗಿ ಗೊತ್ತಿತ್ತು. ಅಮೇರಿಕಾದಲ್ಲಿ ನನ್ನೊಂದಿಗೆ ವ್ಯಾಸಂಗ ಮಾಡಿದ ಸ್ನೇಹಿತರು ಬರೋಡಾದಲ್ಲಿದ್ದರು. ಅವರ ಬಳಿಗೆ ನಾನು ಹೋದರೆ, ಅವರು ನನ್ನನ್ನು ಬರಮಾಡಿಕೊಳ್ಳುವರೆ? ನನಗೆ ಯಾವ ಭರವಸೆಯೂ ಇರಲಿಲ್ಲ. ಒಬ್ಬ ಅಸ್ಪೃಶ್ಯನನ್ನು ತಮ್ಮ ಮನೆಯೊಳಗೆ ಸೇರಿಸಿಕೊಳ್ಳಲು ಅವರಿಗೆ ಮುಜುಗರವಾದಬಹುದು. "ಎಲ್ಲಿಗೆ ಹೋಗುವುದು? ಏನು ಮಾಡುವುದ?" ಎಂದು ಯೋಚಿಸುತ್ತಾ ನಿಲ್ದಾಣದಲ್ಲೇ ಬಹಳ ಹೊತ್ತು ನಿಂತು ಬಿಟ್ಟೆ ಅಲ್ಲಿನ ಕ್ಯಾಂಪ್ ಪ್ರದೇಶದಲ್ಲಿ ಯಾವುದಾದರೂ ಸಾರ್ವಜನಿಕ ಪ್ರವಾಸಿ ತಾಣವಿರುವುದರ ಬಗ್ಗೆ ವಿಚಾರಿಸಬಾರದೇಕೆ ಎಂಬ ಆಲೋಚನೆ ತಟ್ಟನೆ ಹೊಳೆಯಿತು. ಅಷ್ಟೊತ್ತಿಗಾಗಲೇ ಎಲ್ಲಾ ಪ್ರಯಾಣಿಕರೂ ಹೊರಟು ಹೋಗಿದ್ದರು. ನಾನೊಬ್ಬನೇ ಉಳಿದಿದ್ದೆ. ಕೆಲವು ಕುದುರೆ ಗಾಡಿಯವರು, ಗಿರಾಕಿಗಳು ಸಿಗದೆ, ನಾನೇನಾದರೂ ಬರಬಹುದೇನೋ ಎಂಬ ಆಸೆಯಿಂದ ನನಗಾಗಿ ಕಾಯುತ್ತಿದ್ದರು. ನಾನು ಅವರಲ್ಲಿ ಒಬ್ಬನನ್ನು ಕರೆದು, ಯಾವುದಾದರೂ ಪ್ರವಾಸಿಗೃಹವು ಹತ್ತಿರದಲ್ಲಿರುವುದೇನು ಎಂದು ವಿಚಾರಿಸಿದೆ. ಸಮೀಪದಲ್ಲೇ ಒಂದು ಪಾರ್ಸಿ ಅತಿಥಿ ಗೃಹವಿರುವುದಾಗಿಯೂ, ಅಲ್ಲಿ ಹಣ ಕೊಟ್ಟು ಉಳಿದುಕೊಳ್ಳಬಹುದು ಎಂದು ಆ ಗಾಡಿಯವನು ಹೇಳಿದನು. ಪಾರ್ಸಿಗಳು ನಡೆಸುತ್ತಿರುವ ಅತಿಥಿಗೃಹವೆಂದು ತಿಳಿದು ನನಗೆ ಬಹಳ ಆನಂದವಾಯಿತು. ಪಾರ್ಸಿಗಳು ಜೋರಾಸ್ಟ್ರಿಯಾ ಧರ್ಮವನನು ಪಾಲಿಸುವವರು. ಪಾರ್ಸಿಗಳು ನನ್ನನ್ನು ಅಸ್ಪೃಶ್ಯನನ್ನಾಗಿ ಕಾಣುವ ಭೀತಿಯಿರಲಿಲ್ಲ. ಏಕೆಂದರೆ, ಅಸ್ಪೃಶ್ಯತೆಯ ಆಚರಣೆಯು ಅವರ ಧರ್ಮದಲ್ಲಿಲ್ಲ. ಧನ್ಯತೆ ತುಂಬಿದ ಹೃದಯನೊಂದಿಗೆ ಆಶಾಭಾವನೆ ಹೊತ್ತು, ನಿರಾತಂಕವಾಗಿ ನನ್ನ ಲಗ್ಗೇಜನ್ನು ಕುದುರೆ ಗಾಡಿಯಲ್ಲಿಟ್ಟು, ಆ ಪಾರ್ಸಿ ಪ್ರವಾಸಿ ಮಂದಿರಕ್ಕೆ ನಡೆಯುವಂತೆ ಗಾಡಿಯವನಿಗೆ ಹೇಳಿದೆ.

ಆ ಪಾರ್ಸಿ ಪ್ರವಾಸಿ ಮಂದಿರವು ಎರಡಂತಿಸ್ತಿನ ಮಾಳಿಗೆಯಾಗಿತ್ತು. ನೆಲಂತಸ್ತಿನಲ್ಲಿ, ಒಬ್ಬ ವಯಸ್ಸಾದ ಪಾರ್ಸಿಯು ತನ್ನ ಕುಟುಂಬದೊಂದಿಗೆ ವಾಸಿಸುತ್ತಿದ್ದ. ಆತನೇ ಅತಿಥಿ ಗೃಹದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ. ಅಲ್ಲಿ ತಂಗುವ ಪ್ರವಾಸಿಗರಿಗೆ ಊಟದ ವ್ಯವಸ್ಥೆಯನ್ನೂ ಮಾಡುತ್ತಿದ್ದ. ಪಾರ್ಸಿಯು ನನಗೆ ಮೊದಲಂತಸ್ತಿನಲ್ಲಿದ್ದ ಕೊಠಡಿಯನ್ನು ಕೊಟ್ಟನು ನಾನು ಮೇಲೆ ನಡೆಯುತ್ತಿದ್ದಂತೆ, ಕುದುರೆಗಾಡಿಯ ಚಾಲಕನು ನನ್ನ ಲಗ್ಗೇಜು ಹೊತ್ತುಕೊಂಡು ಹಿಂಬಾಲಿಸಿದನು. ಅವನಿಗೆ ಹಣ ಕೊಟ್ಟು ಕಳಿಸಿದೆ. ಕೊನೆಗೂ ತಂಗುವುದಕ್ಕೆ ಒಂದು ಜಾಗ ಸಿಕ್ಕಿತಲ್ಲಾ ಎಂಬ ಸಂತೋಷದಿಂದ ಮನಸ್ಸು ಹಗುರಾಯಿತು. ಆರಾಮಾಗಿ ಮೈ ಚೆಲ್ಲಿ ವಿಶ್ರಾಂತಿ ಪಡೆಯಲು, ನನ್ನ ಬಟ್ಟೆಗಳನ್ನು ಕಳಚತೊಡಗಿದೆ. ಅಷ್ಟರಲ್ಲಿ, ಆ ಉಸ್ತುವಾರಿ ಪಾರ್ಸಿಯು ಕೈಯಲ್ಲಿ ಒಂದು ಪುಸ್ತಕ ಹಿಡಿದು ನೇರವಾಗಿ ಕೊಠಡಿಯೊಳಗೆ ಬಂದನು. ನನ್ನ ಕೋಟು ಮತ್ತು ಷರ್ಟುಗಳನ್ನು ಕಳಚಿದ್ದರಿಂದ, ನನ್ನ ಮೈಮೇಲೆ ಪಾರ್ಸಿಗಳು ಧರಿಸುವ ಸದ್ರ ಮತ್ತು ಕಸ್ತಿಗಳು ಇಲ್ಲದಿರುವುದನ್ನು ಆ ಪಾರ್ಸಿಯು ನೋಡಿದನು. ಅವನು ನನ್ನತ್ತಲೇ ನೋಡುತ್ತಾ, "ಯಾರು ನೀನು?" ಎಂದು ತೀಕ್ಷ್ಣವಾಗಿ ಪ್ರಶ್ನಿಸಿದ. ಪಾರ್ಸಿಗಳಿಗಂತಲೇ ಪಾರ್ಸಿಗಳು ನಡೆಸುತ್ತಿರುವ ಅಥಿತಿ ಮಂದಿರ ಇದೆಂಬುದನ್ನು ಅರಿಯದೆ ನಾನು, ನಾನೊಬ್ಬ ಹಿಂದೂ ಎಂದು ಹೇಳಿದೆ. ಆತನಿಗೆ ಗರಬಡಿದಂತಾಗಿ, "ನೀನು ಈ ತಂಗು ದಾಣದಲ್ಲಿ ಉಳಿಯುವಂತಿಲ್ಲ" ಎಂದು ಹೇಳಿದನು. ಅವನ ಮಾತನ್ನು ಕೇಳಿ ನನಗೆ ಸಿಡಿಲೆರಗಿದಂತಾಗಿ, ಮೈಯಲ್ಲಿ ತಣ್ಣಗಾಗತೊಡಗಿತು. "ಎಲ್ಲಿಗೆ ಹೋಗುವುದು?" ಎಂಬ ಪ್ರಶ್ನೆ ಮತ್ತೆ ತಲೆಗೆ ಬಂದಿತು. ನಿಧಾನವಾಗಿ ಸಾವರಿಸಿಕೊಳ್ಳುತ್ತಾ, ನಾನೊಬ್ಬ ಹಿಂದೂವೇ ಆಗಿದ್ದರೂ, ಆತನಿಗೆ ಯಾವುದೇ ಅಭ್ಯಂತರವಿಲ್ಲದಿದ್ದಲ್ಲಿ, ಅಲ್ಲಿ ಉಳಿದುಕೊಳ್ಳುವುದಕ್ಕೆ ನನಗೂ ಯಾವ ಅಭ್ಯಂತರವಿಲ್ಲ ಎಂದೆನು. "ಅದು ಹೇಗೆ ಸಾಧ್ಯ? ಇಲ್ಲಿ ತಂಗುವ ಪ್ರವಾಸಿಗರ ವಿವರಗಳನ್ನೆಲ್ಲಾ ನಾನು ರಿಜಿಸ್ಟರಿನಲ್ಲಿ ದಾಖಲು ಮಾಡಬೇಕು" ಎಂಬುದು ಆತನ ಉತ್ತರವಾಗಿತ್ತು. ಆತನ ಕಷ್ಟ ನನಗೆ ಅರ್ಥವಾಯಿತು. ರಿಜಿಸ್ಟರಿನಲ್ಲಿ ದಾಖಲು ಮಾಡುವ ಸಲುವಾಗಿ ನಾನು ಪಾರ್ಸಿ ಹೆಸರನ್ನು ಇಟ್ಟುಕೊಳ್ಳಲು ಸಿದ್ಧವಿರುವುದಾಗಿ ಹೇಳಿದೆ. "ಇಲ್ಲಿ ತಂಗಲು ನನಗೆ ಯಾವ ಅಭ್ಯಂತರವಿಲ್ಲದಿರುವಾಗ ನಿನಗೇನು ತೊಂದರೆ? ನೀನೇನು ಕಳೆದುಕೊಳ್ಳುವುದಿಲ್ಲ. ಬದಲಿಗೆ ನಾನು ಇಲ್ಲಿ ತಂಗುವುದರಿಂದಾಗಿ, ನಿನಗೆ ಸಂಪಾದನೆಯೂ ಆಗುತ್ತದೆ" ಎಂದು ಹೇಳಿದೆ. 'ಸಂಪಾದನೆ' ಎಂದು ಹೇಳಿದ ಕೂಡಲೇ ಆತನು ಮೆತ್ತಗಾಗುತ್ತಿರುವುದನ್ನು ನಾನು ಗಮಿಸಿದೆ. ಬಹಳ ಕಾಲದಿಂದ ಆ ಪ್ರವಾಸಿ ಮಂದಿರಕ್ಕೆ ಯಾವ ಪ್ರವಾಸಿಗರೂ ಬಂದಿರಲಿಲ್ಲ. ಆದಕಾರಣ, ಸ್ವಲ್ಪ ಸಂಪಾದನೆಯಾಗುವ ಅವಕಾಶವನ್ನು ಅವನು ಕಳೆದುಕೊಳ್ಳಲು ಸಿದ್ಧನಿರಲಿಲ್ಲ. ನಾನು ಅಲ್ಲಿ ಉಳಿದುಕೊಳ್ಳುವುದಕ್ಕೆ ಅವನು ಸಮ್ಮತಿಸಿದ. ಪ್ರತಿ ದಿನದ

ಊಟ ಮತ್ತು ವಸತಿಗೆ ಬಿಂದೂವರೆ ರೂಪಾಯಿ ಕೊಡಬೇಕಾಗಿ ಹೇಳಿದ. ಅಲ್ಲದೆ, ಆತನ ಪುಸ್ತಕದಲ್ಲಿ ನಾನು ಪಾರ್ಸಿಯ ಹೆಸರಿನಲ್ಲಿ ನೋಂದಾಯಿಸುವಂತೆ ಷರತ್ತು ಹಾಕಿದ. ಎಲ್ಲಾ ಮುಗಿದ ಮೇಲೆ ಅವನು ಕೆಳಗಿಳಿದು ಹೋದ. ನಾನು ಸಮಾಧಾನದ ನಿಟ್ಟುಸಿರುಬಿಟ್ಟೆ ಸಮಸ್ಯೆ ಬಗೆಹರಿದಿದ್ದರಿಂದ, ನನಗೆ ಬಹಳ ಖುಷಿಯಾಯಿತು. ಆದರೆ, ಈ ನನ್ನ ಸಂತೋಷವು ಬಹಳ ಅಲ್ಪಕಾಲದ್ದು ಎಂಬುದು ಆಗ ನನಗೆ ಹೊಳೆಯಲಿಲ್ಲ. ಈ ತಂಗುದಾಣದಿಂದ ನಾನು ಹೇಗೆ ಹೊರಬರಬೇಕಾಯಿತು ಎಂಬುದನ್ನು ವಿವರಿಸುವುದಕ್ಕೆ ಮೊದಲು, ಇಲ್ಲಿದ್ದ ಅಲ್ಪಾವಧಿಯನ್ನು ನಾನು ಹೇಗೆ ಕಳೆದೆನೆಂಬುದನ್ನು ವಿವರಿಸುತ್ತೇನೆ.

ಮೊದಲಂತಸ್ತಿನಲ್ಲಿದ್ದ ನನ್ನ ಕೊಠಡಿಯಲ್ಲಿ ಒಂದು ಸಣ್ಣ ಬೆಡ್‌ರೂಮ್ ಇತ್ತು. ಅದಕ್ಕೆ ಹೊಂದಿಕೊಂಡೇ ಒಂದು ಸಣ್ಣ ಜಳಕದ ಕೊಠಡಿಯಿತ್ತು. ಅದರಲ್ಲಿ ನೀರಿನನಲ್ಲಿಯೂ ಇತ್ತು. ಉಳಿದಂತೆ ಒಂದು ದೊಡ್ಡ ಹಜಾರವಿತ್ತು. ಹಜಾರದ ತುಂಬಾ ಹಳೆಯ ಸಾಮಾನುಗಳು, ಮುರಿದ ಕುರ್ಚಿಗಳು, ಮೇಜುಗಳು, ಹಲಗೆಗಳು ಮುಂತಾದ ಹಳೆಯ ಸರುಕಗಳನ್ನು ತುಂಬಿಡಲಾಗಿತ್ತು. ಇದೆಲ್ಲದರ ಮಧ್ಯೆ ನಾನು ಒಂಟಿ ಜೀವಿಯಾಗಿಯೇ ವಾಸಿಸುತ್ತಿದ್ದೆ. ಉಸ್ತುವಾರಿ ಪಾರ್ಸಿಯು ಮುಂಜಾನೆ ಚಹಾ ತೆಗೆದುಕೊಂಡು ಬರುತ್ತಿದ್ದ. ನಂತರ ಬೆಳಿಗ್ಗೆ 9-30ಕ್ಕೆ ಉಪಹಾರ ತೆಗೆದುಕೊಂಡು ಬರುತ್ತಿದ್ದ. ತೀರ ಅಗತ್ಯವಿದ್ದ ಸಮಯದಲ್ಲಿ ಮಾತ್ರ ಆತ ಮೇಲೆ ಬರುತ್ತಿದ್ದ. ಬಂದಾಗ, ಹೆಚ್ಚು ಮಾತಾಡದೆ ತನ್ನ ಕೆಲಸ ಮುಗಿಸಿಕೊಂಡು ಹೋಗುತ್ತಿದ್ದ. ದಿನಗಳು ಹೇಗೋ ಕಳೆಯತೊಡಗಿದವು.

ಬರೋಡಾ ಮಹಾರಾಜರ ಅಕೌಂಟೆಂಟ್ ಜನರಲ್ ಕಛೇರಿಯಲ್ಲಿ, ನಾನು ಪ್ರೊಬೇಷನರ್ ಆಗಿ ನೇಮಕಗೊಂಡೆ. ಪ್ರತಿದಿನ ವಸತಿ ಗೃಹವನ್ನು ಬೆಳಿಗ್ಗೆ 10 ಗಂಟೆಗೆ ಬಿಡುತ್ತಿದ್ದೆ. ರಾತ್ರಿ ವಾಪಸ್ಸಾಗುವಷ್ಟರಲ್ಲಿ 8ಗಂಟೆ ಆಗುತ್ತಿತ್ತು. ಸಾಧ್ಯವಾದಷ್ಟು ತಡವಾಗಿ ಪ್ರವಾಸಿ ಮಂದಿರಕ್ಕೆ ಬರುವ ಸಲುವಾಗಿ ನಾನು ಸಂಜೆಯ ವೇಳೆ, ಸ್ನೇಹಿತರೊಟ್ಟಿಗೆ ಹೆಚ್ಚು ಸಮಯ ಕಳೆಯುತ್ತಿದ್ದೆ. ಆ ಪಾರ್ಸಿ ಪ್ರವಾಸಿ ಮಂದಿರಕ್ಕೆ ವಾಪಸ್ಸಾಗಿ ರಾತ್ರಿ ಕಳೆಯುವುದೆಂದರೆ, ಅತ್ಯಂತ ಭಯಂಕರ ಅನುಭವವಾದಂತೆ ಆಗುತ್ತಿತ್ತು. ವಿಶಾಲ ಆಗಸದ ಕೆಳಗಡೆ ರಾತ್ರಿ ಒರಗಲು ಇನ್ನಾವುದೇ ಜಾಗ ಗತಿಯಿಲ್ಲದ್ದರಿಂದ, ನಾನು ಈ ಪ್ರವಾಸಿ ಮಂದಿರಕ್ಕೆ ವಾಪಸ್ಸು ಬರಬೇಕಿತ್ತು. ಮೊದಲಂತಸ್ತಿನ ದೊಡ್ಡ ಹಜಾರದಲ್ಲಿ ನನ್ನೊಂದಿಗೆ ಮಾತಾಡಲು ಮತ್ತೊಬ್ಬ ಸಹಜೀವಿಯಿರಲಿಲ್ಲ. ಇಡೀ ಹಜಾರದಲ್ಲಿ ನಾನು ಒಂಟಿ ಜೀವಿಯಾಗಿದ್ದೆ. ಮೊದಲಂತಸ್ತಿನಲ್ಲಿ ದೀಪಗಳೇ ಇಲ್ಲದೇ ಸದಾ ಕತ್ತಲು ತುಂಬಿತ್ತು. ಕನಿಷ್ಠಪಕ್ಷ ಚಿಮಣಿಗಳೂ ಅಲ್ಲಿರಲಿಲ್ಲ. ಆ ಉಸ್ತುವಾರಿ ಪಾರ್ಸಿಯು ನನ್ನ ಬಳಕೆಗಾಗಿ ಒಂದು ಲಾಂದ್ರವನ್ನು ತಂದಿಡುತ್ತಿದ್ದನು. ಆ ಲಾಂದ್ರದ ಬೆಳಕಂತೂ ಕೆಲವು ಇಂಚುಗಳವರೆಗೆ ಮಾತ್ರ ಬೆಳಕು ಚೆಲ್ಲುತ್ತಿತ್ತು. ನಾನು ಯಾವುದೋ ಕತ್ತಲೆಗವಿಯ ಬಂಧಿಖಾನೆಯಲ್ಲಿರುವಂತೆ

ನಾನು ತಲ್ಲಣಿಸಿಹೋಗಿದ್ದೆ. ನನ್ನ ಗುಂಡಿಗೆಯು ನನ್ನೊಳಗೇ ಕುಸಿದುಹೋಗಿತ್ತು. ಒಂದು ಕಡೆಯಿಂದ ಎಲ್ಲರನ್ನೂ ಶಪಿಸುತ್ತಾ ಕಣ್ಣೀರು ಸುರಿಸತೊಡಗಿದೆ. ಅತ್ಯಮೂಲ್ಯವಾದ ವಸತಿ ನೆಲೆಯನ್ನು ನನ್ನಿಂದ ಕಸಿದುಕೊಳ್ಳಲಾಗಿತ್ತು. ಆ ಕೊಠಡಿಯು ಕೈದಿಗಳ ಕತ್ತಲ ಸೆರೆಮನೆಗಿಂತ ಉತ್ತಮವಾಗಿರಲಿಲ್ಲ. ಆದರೆ ನನಗೆ ಅದು ಬಹಳ ಅಮೂಲ್ಯ ಜಾಗವಾಗಿತ್ತು.

ನನಗೆ ಭಾಸವಾಗುತ್ತಿತ್ತು. ಯಾರಾದರೂ ಮನುಷ್ಯ ಜೀವಿಯು ಮಾತಾಡಲು ಸಿಗುವರೇನೋ ಎಂದು ತವಕಿಸುತ್ತಿದ್ದೆ. ಆದರೆ ಅಲ್ಲಿ ಯಾರೂ ಇರಲಿಲ್ಲ. ಮನುಷ್ಯರಾರೂ ಜತೆಗೆ ಇಲ್ಲದ್ದರಿಂದ, ನನ್ನ ವೇಳೆಯೆಲ್ಲಾ ಪುಸ್ತಕಗಳ ಸಂಗಡ ಕಳೆಯುತ್ತಿತ್ತು. ಸದಾಕಾಲ ಓದುವುದು, ಓದುವುದರಲ್ಲೇ ತಲ್ಲೀನನಾಗಿ ನಾನು ಒಂಟಿಯಾಗಿರುವುದನ್ನು ಮರೆತು ಬಿಡುತ್ತಿದ್ದೆ. ಆದರೆ, ಮೊದಲಂತಸ್ತನ್ನು ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದ ಅಸಂಖ್ಯಾತ ಬಾವಲಿಗಳು ತಮ್ಮ ಕಿರುಚಾಟ ಮತ್ತು ಹಾರಾಟಗಳಿಂದ ನನ್ನನ್ನು ಎಚ್ಚರಿಸುತ್ತಿದ್ದವು. ನಾನು ವಿಚಿತ್ರವಾದ ಸನ್ನಿವೇಶದಲ್ಲಿ ವಿಚಿತ್ರ ರೀತಿಯಲ್ಲಿ ಬದುಕುತ್ತಿರುವುದನ್ನು ಮರೆಯಬೇಕೆಂದಿದ್ದೆ. ಆದರೆ ಬಾವಲಿಗಳು ನಿಜಸ್ಥಿತಿಯನ್ನು ಮತ್ತೆ ಮತ್ತೆ ತಣ್ಣಗೆ ನೆನಪಿಸುತ್ತಿದ್ದವು. ಬಹಳಷ್ಟು ಬಾರಿ ನನಗೆ ಸಿಟ್ಟುನೆತ್ತಿಗೇರುತ್ತಿತ್ತು. ಆದರೆ ನನ್ನ ಕೋಪ ದುಮ್ಮಾನಗಳನ್ನು ನಾನೇ ನುಂಗಿಕೊಳ್ಳುತ್ತಿದ್ದೆ. ನಾನು ವಾಸಿಸುತ್ತಿರುವುದು ಒಂದು ಕತ್ತಲೆಯ ಬಂದಿಖಾನೆಯೇ ಆಗಿದ್ದರೂ ಅದೊಂದು ವಸತಿ ಎಂಬುದು ನಿಜ. ಯಾವುದೇ ವಸತಿ ಇಲ್ಲದಿರುವಾಗ ಇಷ್ಟಾದರೂ ಇದೆಯಲ್ಲ ಎಂದು ಸಮಾಧಾನಪಟ್ಟುಕೊಳ್ಳುತ್ತಿದ್ದೆ.

ನಾನು ಇಲ್ಲಿಗೆ ಬರುವಾಗ, ಸ್ವಲ್ಪ ಲಗ್ಗೇಜನ್ನು ಬೊಂಬಾಯಿಲ್ಲೇ ಬಿಟ್ಟು ಬಂದಿದ್ದೆ. ಕೆಲ ದಿನಗಳ ನಂತರ ನನ್ನ ಅಕ್ಕನ ಮಗನು ಆ ಲಗ್ಗೇಜನ್ನು ಹೊತ್ತುಕೊಂಡು ಬರೋಡಕ್ಕೆ ಬಂದ. ಅವನು ನಾನಿರುವ ಸ್ಥಿತಿಯನ್ನು ನೋಡಿ ಗೋಳೋ ಎಂದು ಅಳಲಾರಂಭಿಸಿದ. ಅವನ ಗೋಳಾಟವನ್ನು ನೋಡಿ ಸಹಿಸಲಾಗದೆ, ನಾನು ಅವನನ್ನು ಕೂಡಲೆ ವಾಪಸ್ಸು ಕಳಿಸಬೇಕಾಯಿತು. ನನ್ನ ಪರಿಸ್ಥಿತಿಯು ಅಷ್ಟರಮಟ್ಟಿಗೆ ಹದಗೆಟ್ಟಿತ್ತು. ಹೀಗೆ, ಒಂದು ಪಾರ್ಸಿಗಳ ಅತಿಥಿ ಗೃಹದಲ್ಲಿ ಪಾರ್ಸಿಯ ವೇಷ ತೊಟ್ಟು ನನ್ನ ಜೀವನ ಸಾಗುತ್ತಿತ್ತು. ಒಂದಲ್ಲ ಒಂದು ದಿನ ನನ್ನ ಪಾರ್ಸಿ ವೇಷವು ಕಳಚಿ ಬೀಳುವುದು ಖಚಿತ ಎಂಬುದು ನನಗೆ ಗೊತ್ತಿತ್ತು. ಬಹಳ ದಿನ ಈ ನಾಟಕ ನಡೆಯಲಾರದು ಎಂಬುದು ತಿಳಿದಿತ್ತು. ಆದ ಕಾರಣ, ರಾಜ್ಯ ಸರ್ಕಾರದ ಪ್ರವಾಸಿ ಮಂದಿರದಲ್ಲಿ ಜಾಗ ಪಡೆಯಲು ನಾನು ಪ್ರಯತ್ನಿಸತೊಡಗಿದೆ. ಆದರೆ, ನನ್ನ ಅವಸರಕ್ಕೆ ತಕ್ಕಂತೆ ಪ್ರಧಾನಮಂತ್ರಿಯು ಚುರುಕಾಗಿ ಕ್ರಮಕೈಗೊಳ್ಳಲಿಲ್ಲ. ನನ್ನ ಅರ್ಜಿಯು ಒಬ್ಬ ಅಧಿಕಾರಿಯಿಂದ ಮತ್ತೊಬ್ಬ ಅಧಿಕಾರಿಗೆ ತೆವಳುತ್ತಾ ಸಾಗುತ್ತಿತ್ತು. ಅವರಿಂದ ನನಗೆ ಅಂತಿಮ ಉತ್ತರವು ಬರುವಷ್ಟರಲ್ಲಿ, ಪಾರ್ಸಿ ಪ್ರವಾಸಿ ಮಂದಿರದಲ್ಲಿ ಅಂತಿಮ ದಿನವು ಬಂದಿತ್ತು!

ಈ ಪಾರ್ಸಿ ಅತಿಥಿ ಗೃಹದಲ್ಲಿ ನಾನು ಕಳೆದ ಹನ್ನೊಂದನೇ ದಿನವದು. ಆಗ ತಾನೇ ನನ್ನ ಬೆಳಗಿನ ಉಪಹಾರವನ್ನು ಮುಗಿಸಿದ್ದೆ. ಉಡುಪನ್ನು ಧರಿಸಿ, ಕಛೇರಿಗೆ ಹೊರಡುವ ಸಿದ್ಧತೆಯಲ್ಲಿದೆ. ಹಿಂದಿನ ದಿನ ಲೈಬ್ರರಿಯಿಂದ ತಂದಿದ್ದ ಪುಸ್ತಕಗಳನ್ನು ಹಿಂದಿರುಗಿಸಲು, ಅವುಗಳನ್ನು ತೆಗೆದುಕೊಳ್ಳುತ್ತಿರುವಾಗಲೇ, ಹಲವಾರು ಮಂದಿ ಮೆಟ್ಟಿಲೇರಿ ಬರುತ್ತಿರುವ ಹೆಜ್ಜೆಗಳ ಶಬ್ದ ಕೇಳತೊಡಗಿತು. ಯಾರೋ ಪ್ರವಾಸಿಗರು ತಂಗಲು ಬಂದಿರಬಹುದೆಂದು ತಿಳಿದು, ಅವರನ್ನು ನೋಡುವ ಸಲುವಾಗಿ ತಲೆಯನ್ನು ಹೊರಹಾಕಿದೆ. ಆ ದೃಶ್ಯವನ್ನು ನೋಡಿ ನನಗೆ ಮಾತೇ ಹೊರಡದಾಯಿತು. ಹತ್ತು ಹನ್ನೆರಡು ಮಂದಿ ಭಾರಿ ಗಾತ್ರದ, ಕೋಪಗೊಂಡಂತೆ ಕಾಣುತ್ತಿದ್ದ ಒರಟು ಪಾರ್ಸಿಗಳು ದೊಣ್ಣೆಗಳನ್ನು ಹಿಡಿದುಕೊಂಡು ನನ್ನ ಕೊಠಡಿಯತ್ತ ಬರುತ್ತಿದ್ದರು. ಅವರು ಪ್ರವಾಸಿ ವಸತಿಗಾರರಲ್ಲ ಎಂಬುದು ನನಗೆ ತಕ್ಷಣ ಹೊಳೆಯಿತು. ನನ್ನ ಊಹೆ ನಿಜವಾಗಲೂ ಬಹಳ ಹೊತ್ತು ಕಾಯಬೇಕಿರಲಿಲ್ಲ. ಅವರೆಲ್ಲರೂ ನನ್ನ ಕೊಠಡಿಯ ಮುಂದೆ ಸಾಲುಗಟ್ಟಿ ನಿಂತುಕೊಂಡು ಪ್ರಶ್ನೆಯ ಬೆಂಕಿ ಮಳೆಯನ್ನು ಸುರಿಯತೊಡಗಿದರು. "ಯಾರು ನೀನು? ಇಲ್ಲಿಗೇಕೆ ಬಂದೆ? ಪಾರ್ಸಿಯ ಹೆಸರನ್ನು ಇಟ್ಟುಕೊಳ್ಳಲು ಎಷ್ಟು ಧೈರ್ಯ ನಿನಗೆ? ಘಟಿಂಗ, ದಗಾಕೋರ! ಪಾರ್ಸಿ ಪ್ರವಾಸಿ ಮಂದಿರವನ್ನು ಮೈಲಿಗೆ ಮಾಡಿಬಿಟ್ಟೆಯಲ್ಲ? "ನಾನು ಮೌನವಾಗಿ ನಿಂತಿದ್ದೆ. ನನ್ನ ಬಳಿ ಯಾವ ಉತ್ತರವೂ ಇರಲಿಲ್ಲ. ನಾನು ಪಾರ್ಸಿಯವನೇ' ಎಂದು ನಾನು ಪಟ್ಟು ಹಿಡಿಯಲಿಲ್ಲ. ನಾನು ಮಾಡಿದ್ದು ತಪ್ಪು ಮತ್ತು ಆ ತಪ್ಪು ಬಯಲಾಗಿತ್ತು. ನಾನು ಮಾಡಿರುವ ತಪ್ಪನ್ನೇ ಸರಿಯೆಂದು ವಾದಿಸಿದರೆ, ಕೋಪದಿಂದ ಹುಚ್ಚರಾಗಿದ್ದ ಆ ಪಾರ್ಸಿ ಗುಂಡಾಗಳು ನನ್ನನ್ನು ಚಚ್ಚುವ ಅಪಾಯವಿತ್ತು. ಅಷ್ಟೇಕೆ, ಕೊಲ್ಲುವುದಕ್ಕೂ ಅವರು ಹಿಂಜರಿಯುವವರಲ್ಲ. ನನ್ನ ಮೌನ ಮತ್ತು ಸಾಧು ಸ್ವಭಾವವು ಅಂತಹ ವಿಪರೀತಕ್ಕೆ ಎಡೆ ಕೊಡಲಿಲ್ಲ. ನಾನು ಯಾವಾಗ ಖಾಲಿಮಾಡಬೇಕೆಂದಿದ್ದೀನೆ ಎಂದು ಅವರಲ್ಲೊಬ್ಬ ಕೇಳಿದ. ಆ ಸಮಯದಲ್ಲಿ, ವಸತಿಯೆಂಬುದು ನನ್ನ ಪ್ರಾಣಕ್ಕಿಂತ ಮಿಗಿಲಾದ ಬೆಲೆಯುಳ್ಳದ್ದಾಗಿತ್ತು. ಅವನ ಪ್ರಶ್ನೆಯಲ್ಲಿದ್ದ ಬೆದರಿಕೆಯಂತೂ ಬಹಳ ಭೀಕರವಾದದ್ದಾಗಿತ್ತು. ನಾನು ಬಾಯಿ ಬಿಡಲೇಬೇಕಾಯ್ತು. ಸರ್ಕಾರಿ ಬಂಗಲೆಗಾಗಿ ನಾನು ಹಾಕಿರುವ ಅರ್ಜಿಯು ಒಂದು ವಾರದೊಳಗೆ ಫಲ ನೀಡಬಹುದೆಂದು ತಿಳಿದು, ನಾನು ಆ ಪಾರ್ಸಿಗಳಿಗೆ ಒಂದು ವಾರ ಗುಡುವು ನೀಡುವಂತೆ ಬೇಡಿಕೊಂಡೆನು. ಆದರೆ ಅವರು ನನ್ನ ಪ್ರಾರ್ಥನೆಯನ್ನು ಕೇಳುವ ಮನಸ್ಥಿತಿ ಯಲ್ಲಿರಲಿಲ್ಲ. ಅವರು ತಮ್ಮದೇ ಆದ ಗಡುವು ನೀಡಿದರು. ಅದೇ ದಿನ ಸಂಜೆ, ಅವರು ಪ್ರವಾಸಿ ಮಂದಿರಕ್ಕೆ ಬಂದಾಗ ನಾನು ಅವರ ಕಣ್ಣಿಗೆ ಬೀಳಕೂಡದೆಂದು ಕಟ್ಟಪ್ಪಣೆ ನೀಡಿದರು. ಆ ದಿನವೇ ನಾನು ಗಂಟು ಮೂಟೆ

ಕಟ್ಟಬೇಕಾಗಿತ್ತು. ತಪ್ಪಿದಲ್ಲಿ, ಭೀಕರ ಪರಿಣಾಮಗಳಾಗುತ್ತವೆ ಎಂಬ ಎಚ್ಚರಿಕೆ ಕೊಟ್ಟು ಅವರು ಹೊರಟುಹೋದರು. ನಾನು ತಲ್ಲಣಿಸಿಹೋಗಿದ್ದೆ. ನನ್ನ ಗುಂಡಿಗೆಯು ನನ್ನೊಳಗೇ ಕುಸಿದುಹೋಗಿತ್ತು. ಒಂದು ಕಡೆಯಿಂದ ಎಲ್ಲರನ್ನೂ ಶಪಿಸುತ್ತಾ ಕಣ್ಣೀರು ಸುರಿಸತೊಡಗಿದೆ. ಅತ್ಯಮೂಲ್ಯವಾದ ವಸತಿ ನೆಲೆಯನ್ನು ನನ್ನಿಂದ ಕಸಿದುಕೊಳ್ಳಲಾಗಿತ್ತು. ಆ ಕೊಠಡಿಯು ಕೈದಿಗಳ ಕತ್ತಲ ಸೆರೆಮನೆಗಿಂತ ಉತ್ತಮವಾಗಿರಲಿಲ್ಲ. ಆದರೆ ನನಗೆ ಅದು ಬಹಳ ಅಮೂಲ್ಯ ಜಾಗವಾಗಿತ್ತು. ಆ ಪಾರ್ಸಿ ಗೂಂಡಾಗಳು ಹೊರಟು ಹೋದ ಮೇಲೆ, ಮುಂದೇನು ಮಾಡುವುದು ಎಂದು ಯೋಚಿಸುತ್ತಾ ಸುಮಾರು ಹೊತ್ತು ಅಲ್ಲಿಯೆ ಕುಳಿತುಬಿಟ್ಟೆ.

ಶೀಘ್ರದಲ್ಲೇ ಸರ್ಕಾರಿ ಬಂಗಲೆಯೊಂದು ದೊರಕುವ ಭರವಸೆಯಿತ್ತು. ನನ್ನ ಎಲ್ಲಾ ಸಮಸ್ಯೆಗಳೂ ಬಗೆಹರಿಯುವ ದಿನಗಳೂ ದೂರವಿಲ್ಲ ಅನಿಸಿತ್ತು. ಆದ ಕಾರಣ, ನನ್ನ ಈಗಿನ ಸಮಸ್ಯೆಯು ತಾತ್ಕಾಲಿಕವಾದದ್ದು ಎನ್ನಿಸಿ, ತಕ್ಷಣಕ್ಕೆ ಸ್ನೇಹಿತರಲ್ಲಿಗೆ ಹೋಗುವುದು ಉಚಿತವೆನಿಸಿತು. ಬರೋಡದ ಅಸ್ಪೃಶ್ಯರ ಪೈಕಿ, ನನಗೆ ಯಾವ ಸ್ನೇಹಿತರೂ ಇರಲಿಲ್ಲ. ಆದರೆ ಇತರ ಜಾತಿಗಳಲ್ಲಿ ಸ್ನೇಹಿತರಿದ್ದರು. ಅವರಲ್ಲಿ ಒಬ್ಬ ಹಿಂದೂ, ಮತ್ತೊಬ್ಬನು ಇಂಡಿಯನ್ ಕ್ರೈಸ್ತನು. ಮೊದಲಿಗೆ ನಾನು ಹಿಂದೂ ಸ್ನೇಹಿತನಲ್ಲಿಗೆ ಹೋದೆ ಮತ್ತು ನನಗೆ ಒದಗಿದ ದುರವಸ್ಥೆಯನ್ನು ಅವನಿಗೆ ತಿಳಿಸಿದೆ. ಆತನು ಬಹಳ ಒಳ್ಳೆಯವನು ಮತ್ತು ನನ್ನ ಆತ್ಮೀಯ ಗೆಳೆಯನಾಗಿದ್ದ. ನನ್ನ ಕತೆಯನ್ನು ಕೇಳಿ ಅವನಿಗೆ ದುಃಖ ಕೋಪಗಳೂ ಒಟ್ಟಿಗೆ ಬಂದವು. ಅದೇ ವೇಳೆಗೆ, ಆತನು ಒಂದು ಮಾತನ್ನು ಸೂಕ್ಷ್ಮವಾಗಿ ಹೇಳಿದ. "ನೀನು ನಮ್ಮ ಮನೆಗೆ ಬಂದರೆ, ನನ್ನ ಕೆಲಸಗಾರರೆಲ್ಲರೂ ಹೊರಟು ಹೋಗುತ್ತಾರೆ" ಎಂದನು. ನನಗೆ ಅವನ ಮಾತಿನ ಸುಳಿವು ಸಿಕ್ಕಿತು. ಅವನಲ್ಲಿ ಜಾಗ ಕೇಳುವ ಮನಸ್ಸಾಗಲಿಲ್ಲ. ಇಂಡಿಯನ್ ಕ್ರೈಸ್ತ ಸ್ನೇಹಿತನ ಮನೆಗೆ ಹೋಗಲು ನನಗೆ ಇಷ್ಟವಾಗಲಿಲ್ಲ. ಒಮ್ಮೆ ಆತನು ತನ್ನೊಂದಿಗೆ ತಂಗಲು ಕರೆನೀಡಿದ್ದ. ಆದರೆ ನಾನು ಅವನ ಕರೆಯನ್ನು ನಿರಾಕರಿಸಿ, ಪಾರ್ಸಿ ಗೃಹದಲ್ಲಿ ತಂಗಿದ್ದೆ. ಕಾರಣವೇನೆಂದರೆ, ಅವನಲ್ಲಿದ್ದ ಅಭ್ಯಾಸಗಳು ನನಗೆ ಸರಿಹೊಂದಿರಲಿಲ್ಲ. ಈಗ ಅವನಲ್ಲಿಗೆ ಹೋಗುವುದು ಮುಖಭಂಗಕ್ಕೆ ಆಹ್ವಾನವಾದೀತೆಂದು ತಿಳಿದು ಸುಮ್ಮನಾದೆ. ನೇರವಾಗಿ ಕಛೇರಿಗೆ ಹೋದೆ. ಆದರೆ ನೆಲೆ ಹುಡುಕಿಕೊಳ್ಳುವ ಪ್ರಯತ್ನವನ್ನು ಬಿಡುವಂತಿರಲಿಲ್ಲ. ತಲೆ ತುಂಬಾ ಅದೇ ಯೋಚನೆ ತುಂಬಿತ್ತು. ಮತ್ತೊಬ್ಬ ಸ್ನೇಹಿತನನ್ನು ಕಂಡು ನನ್ನ ಕಷ್ಟಗಳನ್ನು ಹೇಳಿಕೊಂಡಾಗ, ಅವನು ಅದೇ ಇಂಡಿಯನ್ ಕ್ರೈಸ್ತ ಮಿತ್ರನನ್ನು ಕಂಡು, ಆತನ ಮನೆಯಲ್ಲಿ ನನಗೆ ಜಾಗ ದೊರೆಯುವುದೇ ಎಂದು ಕೇಳಿದೆ. ಮರುದಿನ ನನ್ನ ಹೆಂಡತಿಯು ಬರೋಡಾಕ್ಕೆ ಬರುವವಳಿದ್ದು, ತಾನು ಅವಳ ಸಲಹೆ ಪಡೆಯಬೇಕಾಗಿದೆ ಎಂದು ಆತನು ಹೇಳಿದ. ಸಾಧ್ಯವಿಲ್ಲ ಎಂದು ನೇರವಾಗಿ ಹೇಳುವುದಕ್ಕೆ ಬದಲು, ಬಹಳ ನಾಜೂಕಾಗಿ ಹೇಳುವ ಸಬೂಬು ಇದು ಎಂದು ನಂತರ ನನಗೆ ತಿಳಿಯಿತು. ಆತನು ಮತ್ತು ಆತನ ಹೆಂಡತಿಯು ಮೂಲತಃ ಬ್ರಾಹ್ಮಣ ಜಾತಿಯವರಿದ್ದು ಕ್ರಮೇಣ ಕ್ರೈಸ್ತರಾಗಿದ್ದರು.

ಒಂದು ಡಜನ್ ಪಾರ್ಸಿಗಳು, ದೊಣ್ಣೆ ಲಾಠಿಗಳನ್ನು ತಿರುಗಿಸುತ್ತಾ, ಕೆಂಗಣ್ಣುಗಳಿಂದ ನನ್ನತ್ತ ದುರುಗುಟ್ಟಿ ನೋಡುವುದು ಮತ್ತು ಅವರ ಮುಂದೆ ನಾನು ದೈನ್ಯತೆಯಿಂದ ಅವರ ಕರುಣೆಗಾಗಿ ಕಾಯುತ್ತಾ ನಿಂತ ಆ ದೃಶ್ಯವು ನನ್ನ ನೆನಪಿನಲ್ಲಿ ಬಲವಾಗಿ ಉಳಿದುಬಿಟ್ಟಿದೆ. ಆ ಘಟನೆ ನಡೆದು 18 ವರುಷಗಳಾದರೂ ನಾನು ಮರೆಯಲು ಸಾಧ್ಯವಾಗಿಲ್ಲ. ಈಗಲೂ ಆ ಘಟನೆಯು ನನ್ನ ಮನಸ್ಸಿಗೆ ಮರುಕಳಿಸುತ್ತಾ ಇರುತ್ತದೆ. ಮತ್ತು ಆ ಘಟನೆ ನೆನಪಾದಾಗಲೆಲ್ಲಾ ಕಣ್ಣೀರು ಹರಿಯುವುದನ್ನು ನನ್ನಿಂದ ತಡೆಯಲಾಗುವುದಿಲ್ಲ. ಹಿಂದೂಗೆ ಅಸ್ಪೃಶ್ಯನಾದ ವ್ಯಕ್ತಿಯು, ಒಬ್ಬ ಪಾರ್ಸಿಗೂ ಸಹ ಅಸ್ಪೃಶ್ಯನಾಗುತ್ತಾನೆ ಎಂಬ ಸತ್ಯವು ನನಗೆ ಮೊಟ್ಟ ಮೊದಲ ಬಾರಿಗೆ ಈ ಘಟನೆಯ ಮೂಲಕ ಅರಿವಿಗೆ ಬಂತು.

ಗಂಡನಾದವನು ಸ್ವಲ್ಪಮಟ್ಟಿಗೆ ಉದಾರ ಮನೋಭಾವವನ್ನು ಬೆಳೆಸಿಕೊಂಡಿದ್ದರೂ ಆತನ ಹೆಂಡತಿಯು ಇನ್ನೂ ಸಹ ಸಂಪ್ರದಾಯಸ್ಥ ಬ್ರಾಹ್ಮಣ ಕಟ್ಟುಪಾಡುಗಳನ್ನು ಅನುಸರಿಸುತ್ತಿದ್ದಳು. ನನ್ನಂತಹ ಅಸ್ಪೃಶ್ಯನಿಗೆ ಜಾಗ ಕೊಡುವುದಕ್ಕೆ ಅವಳು ಖಂಡಿತವಾಗಿ ಒಪ್ಪುತ್ತಿರಲಿಲ್ಲ. ನನಗಿದ್ದ ಏಕೈಕ ಆಶಾಕಿರಣವೂ ಕಣ್ಮರೆಯಾಗಿ ಹೋಯಿತು. ಇಂಡಿಯನ್ ಕ್ರೈಸ್ತ ಗೆಳೆಯನ ಮನೆಯನ್ನು ಬಿಟ್ಟಾಗ, ಸಂಜೆ 4 ಗಂಟೆಯಾಗಿತ್ತು. ಎಲ್ಲಿಗೆ ಹೋಗುವುದು ಎಂಬ ಪ್ರಶ್ನೆಯು ಬೆಟ್ಟದಂತೆ ಕಣ್ಮುಂದೆ ನಿಂತಿತ್ತು. ನಾನು ಅತಿಥಿಗೃಹವನ್ನು ಖಾಲಿಮಾಡಬೇಕಿತ್ತು. ಮತ್ತು ನನಗಾಗಿ ವಸತಿ ನೀಡುವ ಗೆಳೆಯರಾರೂ ಇಲ್ಲ! ನನಗಿದ್ದಂತಹ ಏಕೈಕ ಮಾರ್ಗವೆಂದರೆ, ವಾಪಸ್ಸು ಬೊಂಬಾಯಿಗೆ ಹೋಗುವುದು.

ಬರೋಡಾದಿಂದ ಬೊಂಬಾಯಿಗೆ ಹೊರಡುವ ರೈಲು ರಾತ್ರಿ 9 ಗಂಟೆಗೆ ಬಿಡುವುದಿತ್ತು. ಇನ್ನು ಐದು ಗಂಟೆಗಳನ್ನು ಕಳೆಯಬೇಕಿತ್ತು. ಐದು ಗಂಟೆಗಳನ್ನು ಎಲ್ಲಿ ಕಳೆಯುವುದು? ವಾಪಸ್ಸು ಆ ಪಾರ್ಸಿ ಪ್ರವಾಸಿ ಮಂದಿರಕ್ಕೆ ಹೋಗುವುದೆ? ಅಥವಾ ನನ್ನ ಸ್ನೇಹಿತರ ಮನೆಗೆ ಹೋಗುವುದೆ? ಪ್ರವಾಸಿ ಮಂದಿರಕ್ಕೆ ವಾಪಸ್ಸು ಹೋಗುವಷ್ಟು ಧೈರ್ಯ ನನಗಿರಲಿಲ್ಲ. ಪಾರ್ಸಿಗೂಂಡಾಗಳು ವಾಪಸ್ಸು ಬಂದು ಮತ್ತೆ ಎಲ್ಲಿ ಹಲ್ಲೆ ಮಾಡುವರೋ ಎಂಬ ಭಯ. ನನ್ನ ಸ್ನೇಹಿತರ ಮನೆಗೆ ಹೋಗುವುದೂ ನನಗೆ ಇಷ್ಟವಾಗಲಿಲ್ಲ. ನನ್ನ ಪರಿಸ್ಥಿತಿಯು ಬಹಳ ಚಿಂತಾಜನಕವಾಗಿದ್ದರೂ ಯಾರ ಕರುಣೆಯೂ ನನಗೆ ಬೇಕಿರಲಿಲ್ಲ. ಕೊನೆಗೆ, ನಗರದ ಗಡಿಯಂಚಿನಲ್ಲಿರುವ ಕಾಮಾಟಿಬಾಗ್ ಎಂಬ ಸಾರ್ವಜನಿಕ ಉದ್ಯಾನವನದಲ್ಲಿ ಉಳಿದ ಐದು ಗಂಟೆಗಳನ್ನು ಕಳೆಯಲು ನಿರ್ಧರಿಸಿದೆ. ಅಲ್ಲಿ ಸುಮಾರು ಹೊತ್ತು ದಿಕ್ಕೆಟ್ಟ ಮನಸ್ಸಿನಿಂದ ಕುಳಿತಿದ್ದೆ. ನಾನಿರುವ ಪರಿಸ್ಥಿತಿಯನ್ನು ಆಲೋಚಿಸುತ್ತಿದ್ದಂತೆ ದುಃಖ ಉಮ್ಮಳಿಸಿ ಬಂತು. ನನ್ನ ತಂದೆ-ತಾಯಿಯವರು ತಮ್ಮ ಸಣ್ಣ ವಯಸ್ಸಿನಲ್ಲಿ ಇಂತಹ ಕಷ್ಟಗಳು ಎದುರಾದ ಅಸಹಾಯಕ ಪರಿಸ್ಥಿತಿಯಲ್ಲಿ ಏನು ಮಾಡಿದ್ದಿರಬಹುದು ಎಂದು ಆಲೋಚಿಸತೊಡಗಿದೆ. ರಾತ್ರಿ 8 ಗಂಟೆಗೆ ಉದ್ಯಾನವನದಿಂದ ಹೊರಬಂದೆ. ಒಂದು ಟಾಂಗಾ ಹಿಡಿದು ಪಾರ್ಸಿ ಅತಿಥಿ ಗೃಹಕ್ಕೆ ಹೋದೆ. ನನ್ನ ಕೊಠಡಿಯಲ್ಲಿದ್ದ ಲಗ್ಗೇಜನ್ನು ಹೊತ್ತುಕೊಂಡು ಕೆಳಗೆ ಬಂದೆ. ಅಲ್ಲಿದ್ದ ಉಸ್ತುವಾರಿ ಪಾರ್ಸಿಯು ಹೊರಗೆ ಬಂದ. ಆದರೆ ಅವನಾಗಲೀ ನಾನಾಗಲೀ ಒಂದೇ ಒಂದು ಮಾತನ್ನು ಆಡಲಿಲ್ಲ. ನಾನು ಇಂತಹ ತೊಂದರೆಯಲ್ಲಿ ಸಿಕ್ಕಿಕೊಳ್ಳಲು ತಾನೇ ಜವಾಬ್ದಾರ ಎಂಬ ಅಪರಾಧಿ ಮನೋಭಾವವು ಅವನನ್ನು ಕಾಡುತ್ತಿತ್ತು. ನಾನು ಅತಿಥಿಗೃಹದ ಹಣ ಸಂದಾಯ ಮಾಡಿದೆ. ಅವನು ಮೌನವಾಗಿ ಹಣವನ್ನು ಪಡೆದ. ನಾನೂ ಸಹ ಯಾವ ಮಾತನ್ನೂ ಆಡದೆ ಅಲ್ಲಿಂದ ಹೊರನಡೆದೆ.

ನಾನು ಬರೋಡಾ ರಾಜ್ಯಕ್ಕೆ ಭಾರಿ ಕನಸುಗಳನ್ನು ಹೊತ್ತುಕೊಂಡು ಬಂದಿದ್ದೆ. ಅದು ಯುದ್ಧ ನಡೆಯುತ್ತಿದ್ದ ಕಾಲ. ಅನೇಕ ಅವಕಾಶಗಳು ನನ್ನನ್ನು ಹುಡುಕಿಕೊಂಡು ಬಂದಿದ್ದವು. ಇಂಡಿಯಾದ ವಿದ್ಯಾ ಇಲಾಖೆಯಲ್ಲಿ ಅನೇಕ ಹುದ್ದೆಗಳು ಖಾಲಿಯಿದ್ದವು. ಲಂಡನ್ನಿನಲ್ಲೂ ಸಹ ಅತ್ಯಂತ ಪ್ರಭಾವಿ ವ್ಯಕ್ತಿಗಳು ನನಗೆ ಪರಿಚಯವಿದ್ದರು. ಆದರೆ ನಾನು ಅದಾವುದನ್ನೂ ಬಯಸಲಿಲ್ಲ. ನನ್ನ ವ್ಯಾಸಂಗಕ್ಕೆ ಸಹಾಯ ನೀಡಿದ ಬರೋಡಾ ಸರ್ಕಾರಕ್ಕೆ ನಾನು ಸೇವೆ ಸಲ್ಲಿಸಬೇಕಾದದ್ದು ನನ್ನ ಮೊದಲ ಕರ್ತವ್ಯ ಎಂದು ಬಲವಾಗಿ ನಂಬಿದ್ದೆ. ಆದರೆ ನಾನು ಕೇವಲ ಹನ್ನೊಂದೇ ದಿನಗಳಲ್ಲಿ, ಈ ಬರೋಡಾ ರಾಜ್ಯವನ್ನು ಬಿಟ್ಟು ಬೊಂಬಾಯಿಗೆ ಬರಬೇಕಾಯಿತು.

ಒಂದು ಡಜನ್ ಪಾರ್ಸಿಗಳು, ದೊಣ್ಣೆ ಲಾಠಿಗಳನ್ನು ತಿರುಗಿಸುತ್ತಾ, ಕೆಂಗಣ್ಣುಗಳಿಂದ ನನ್ನತ್ತ ದುರುಗುಟ್ಟಿ ನೋಡುವುದು ಮತ್ತು ಅವರ ಮುಂದೆ ನಾನು ದೈನ್ಯತೆಯಿಂದ ಅವರ ಕರುಣೆಗಾಗಿ ಕಾಯುತ್ತಾ ನಿಂತ ಆ ದೃಶ್ಯವು ನನ್ನ ನೆನಪಿನಲ್ಲಿ ಬಲವಾಗಿ ಉಳಿದುಬಿಟ್ಟಿದೆ. ಆ ಘಟನೆ ನಡೆದು 18 ವರುಷಗಳಾದರೂ ನಾನು ಮರೆಯಲು ಸಾಧ್ಯವಾಗಿಲ್ಲ. ಈಗಲೂ ಆ ಘಟನೆಯು ನನ್ನ ಮನಸ್ಸಿಗೆ ಮರುಕಳಿಸುತ್ತಾ ಇರುತ್ತದೆ. ಮತ್ತು ಆ ಘಟನೆ ನೆನಪಾದಾಗಲೆಲ್ಲಾ ಕಣ್ಣೀರು ಹರಿಯುವುದನ್ನು ನನ್ನಿಂದ ತಡೆಯಲಾಗುವುದಿಲ್ಲ. ಹಿಂದೂಗೆ ಅಸ್ಪೃಶ್ಯನಾದ ವ್ಯಕ್ತಿಯು, ಒಬ್ಬ ಪಾರ್ಸಿಗೂ ಸಹ ಅಸ್ಪೃಶ್ಯನಾಗುತ್ತಾನೆ ಎಂಬ ಸತ್ಯವು ನನಗೆ ಮೊಟ್ಟ ಮೊದಲ ಬಾರಿಗೆ ಈ ಘಟನೆಯ ಮೂಲಕ ಅರಿವಿಗೆ ಬಂತು. ●

ಫುಲೆ, ಶಾಹು, ಅಂಬೇಡ್ಕರ್



ಲೇ : ಡಾ|| ಎಚ್.ಟಿ. ಪೋತೆ ಬೆಲೆ : ರೂ. 75-00

ಅರ್ಥವಿಲ್ಲದ ವ್ಯರ್ಥ ಸಂಪ್ರದಾಯಗಳು ಮತ್ತು ಧಾರ್ಮಿಕ ಕಂದಾಚಾರಗಳಲ್ಲಿ ಮುಳುಗಿಹೋಗಿದ್ದ ಭಾರತೀಯ ಸಮಾಜವನ್ನು ತಮ್ಮ ಕ್ರಾಂತಿಕಾರಿ ನಿಲುವು ಮತ್ತು ಸುಧಾರಣಾ ಕಾರ್ಯಗಳ ಮೂಲಕ ಸಮಾನತೆಯತ್ತ ಕೊಂಡೊಯ್ದ ಮಹಾನ್ ಮಾನವತಾವಾದಿಗಳಲ್ಲಿ ಜ್ಯೋತಿಭಾಫುಲೆ, ಶಾಹುಮಹರಾಜ್ ಮತ್ತು ಅಂಬೇಡ್ಕರ್ ಪ್ರಮುಖರು. ಇವರ ಜೀವನ ಮತ್ತು ಸಾಧನೆಗಳ ಸಮಗ್ರ ಪರಿಚಯ ಕುರಿತು ಬೆಳಕು ಚೆಲ್ಲುವ ಕೃತಿ : ಫುಲೆ, ಶಾಹು, ಅಂಬೇಡ್ಕರ್

ವೇದಗಳಲ್ಲಿ ಜನ ಸಾಮಾನ್ಯರು



ಲೇ : ಬಿ.ವಿ. ವೀರಭದ್ರಪ್ಪ ಬೆಲೆ : ರೂ. 65-00

ವೇದಗಳು ಹಿಂದುಗಳ ಪವಿತ್ರ ಗ್ರಂಥವೆಂದು ಭಾವಿಸಲಾಗಿದೆ. ಇದರ ಸತ್ಯಾಸತ್ಯತೆಯ ಜತೆಗೆ, ಆರ್ಯ-ಅನಾರ್ಯರ ನಡುವಿನ ತಿಕ್ಕಾಟಗಳನ್ನು, ವೈದಿಕ ಜನರ ಆಚರಣೆ ಮತ್ತು ಮೂಢನಂಬಿಕೆಗಳನ್ನು ಕುರಿತು ಮಾಹಿತಿ ನೀಡುವ ಈ ಕೃತಿ, ವೇದಗಳ ಹಿನ್ನೆಲೆಯಲ್ಲಿ ಜನಸಾಮಾನ್ಯರ ಸಮಕಾಲೀನ ಸ್ಥಿತಿ-ಗತಿಯನ್ನು ಪರಿಚಯಿಸುವ ಪ್ರಯತ್ನ ಮಾಡಿದೆ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-560 001

ಬೀದಿ ರಂಗಭೂಮಿ

ಲೇ : ಡಾ|| ನಾಗೇಶ್ ಬೆಟ್ಟಕೋಟೆ ಬೆಲೆ : ರೂ. 120-00

ರಂಗಭೂಮಿಯಲ್ಲಿ ವಿಶಿಷ್ಟವಾದ ಸಾಂಸ್ಕೃತಿಕ ನೆಲೆಯನ್ನು ಕಂಡುಕೊಂಡಿರುವ ಬೀದಿ ರಂಗಭೂಮಿಯು, ವ್ಯವಸ್ಥೆಯ ವಿರುದ್ಧದ ಧ್ವನಿಯಾಗಿ ಸಾಮಾಜಿಕ ಕಳಕಳಿ ಹೊತ್ತು ಪ್ರತಿಭಟನೆಯ ಘೋಷಣೆಯಾಗಿ, ಬಂಡಾಯದ ಸೆಲೆಯಾಗಿ ಪುರಾತನ ಕಾಲದಿಂದಲೂ ಬೀದಿ ರಂಗಭೂಮಿಯು ಜನರ ಒಡಲಾಳದಿಂದಲೇ ಪುಟಿಯುತ್ತಿದೆ. ಆದರೆ ಅಧ್ಯಯನದ ದೃಷ್ಟಿಯಿಂದ ಪುಸ್ತಕ ರೂಪದಲ್ಲಿ ಬೀದಿ ರಂಗಭೂಮಿ ಬಗೆಗಿನ ಮಾಹಿತಿಗಳು ವಿರಳ, ಡಾ. ನಾಗೇಶ್ ಬೆಟ್ಟಕೋಟೆಯವರ ಈ ಕೃತಿಯು ಕನ್ನಡ ರಂಗಭೂಮಿಯ ಅಧ್ಯಯನಕ್ಕೆ ಹೆಚ್ಚು ಉಪಯುಕ್ತವಾಗಿದೆ.

ಪ್ರಕಾಶಕರು : ಧ್ವನಿ ಪ್ರಕಾಶನ, ಸಂಖ್ಯೆ 13, ಅಧ್ಯಾಪಕರ ನಿವಾಸ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56

ಸಾಂಖ್ಯದರ್ಶನ



ಲೇ : ಎಸ್.ಎಸ್. ಹಿರೇಮಠ ಬೆಲೆ : ರೂ. 35-00

ಭಾರತದ ಚರಿತ್ರೆ, ಮೂಲಭೂತವಾದಿಗಳ ಕೈಗೆ ಸಿಕ್ಕು ಕೇಸರೀಕರಣಗೊಳ್ಳುತ್ತಿರುವ ಇಂದು, ದಲಿತ ತತ್ವಜ್ಞಾನವನ್ನು ದಾಖಲಿಸಿ, ಅದನ್ನು ದ್ರಾವಿಡ ಪರಂಪರೆಗೆ ಕಟ್ಟಿಕೊಡುವ ಪ್ರಯತ್ನದಲ್ಲಿ ಪ್ರಕೃತಿಯೇ ಪ್ರಧಾನವೆಂದು ಹೇಳುವ ನಾಡಿನ ಮೂಲ ಕೃಷಿಕ ಸಂಸ್ಕೃತಿಯ ಬಗ್ಗೆ ಚರ್ಚಿಸುವ ಲೇಖನಗಳನ್ನು ಈ ಕೃತಿ ಹೊಂದಿದೆ.

ಪ್ರಕಾಶಕರು : ಸಮತಾ ಪ್ರಕಾಶನ, ಹರಪನಹಳ್ಳಿ-583 131

ಲಯ (ಕವನ ಸಂಕಲನ)

ಲೇಖಕರು : ಜ.ನಾ. ತೇಜಶ್ರೀ ಬೆಲೆ : ರೂ. 45-00

ಜ.ನಾ. ತೇಜಶ್ರೀಯವರ ಕವಿತೆಗಳು ಜೀವಂತವಾಗಿರುವುದು ಅವರ ಹಸಿ ಹಸಿ ಅನುಭವಗಳು, ಅಭಿವ್ಯಕ್ತಿಗಳಿಂದ, ಎಲ್ಲೂ 'ಲಯ ತಪ್ಪದಂತೆ ಭಾಷೆಯನ್ನು ದುಡಿಸಿಕೊಂಡಿರುವುದು ಈ ಕವನ ಸಂಕಲನದ ಯಶಸ್ಸಿಗೆ ಕಾರಣವಾಗಿದೆ. ಸೂಕ್ಷ್ಮ ಸಂವೇದನೆಗಳನ್ನು ಅತಿಭಾವುಕರಾಗಿ ಚಿತ್ರಿಸಲು ಹೋಗದೆ ತನ್ನಂತರಂಗದ ಕಾವನ್ನು ಹೇಳುವ ಕಲೆಗಾರಿಕೆಯನ್ನು ಸಿದ್ಧಿಸಿಕೊಂಡಿರುವುದು ಈ ಕೃತಿಯ ಮಹತ್ವವಾಗಿದೆ.

ಪ್ರಕಾಶನ : ಮಾನವ ಪ್ರಕಾಶನ, ನಂ. 2064/ಎ, ಮಾನವ, ಉತ್ತರ ಬಡಾವಣೆ, ಹಾಸನ- 573 201

ಶಂಕರಾಚಾರ್ಯ ಮತ್ತು ಪ್ರತಿಗಾಮಿತನ



ಲೇ : ಡಾ|| ಕೆ.ಎಸ್. ಭಗವಾನ್ ಬೆಲೆ : ರೂ. 60-00

ನಮ್ಮ ನಡುವಿನ ವೈಚಾರಿಕ ಸಾಹಿತ್ಯ ಕೃಷಿಕರಲ್ಲಿ ಸಾಹಿತಿ ವಿಮರ್ಶಕರಾದ ಡಾ|| ಕೆ.ಎಸ್. ಭಗವಾನ್‌ರದು ಜನಪ್ರಿಯ ಹೆಸರು. ಅವರ ಈ ಕೃತಿ ಸಂಸ್ಕೃತಿ ಇತಿಹಾಸದಲ್ಲಿ ಹಿಂದೆಂದೂ ಪ್ರಕಟವಾಗದಿರುವಂಥ ಐತಿಹಾಸಿಕ ಸತ್ಯವನ್ನು ದಾಖಲಿಸಿದೆ.

ಪ್ರಕಾಶಕರು : ಮಹಿಮಾ ಪ್ರಕಾಶನ, ನಂ. 10, ಹುಡ್ಕೊ ಮನೆ 1ನೇ ಹಂತ, ಕುವೆಂಪುನಗರ, ಮೈಸೂರು-570 023

ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು

ಲೇ : ಸುಬ್ಬು ಹೊಲೆಯಾರ್ ಬೆಲೆ : ರೂ. 50-00

ನಾಡಿನ ಪ್ರಗತಿಪರ ಸಾಹಿತ್ಯ, ಸಂಘಟನೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಕ್ರಿಯರಾಗಿ ಪ್ರಜ್ಞಾಪೂರ್ವಕವಾಗಿ ಗುರುತಿಸಿ ಕೊಳ್ಳುತ್ತಿರುವ ಇತ್ತೀಚಿನ ತಲೆಮಾರಿನ ಕವಿಗಳಲ್ಲಿ ಸುಬ್ಬು ಹೊಲೆಯಾರ್ ಕೂಡ ಒಬ್ಬರು. ವ್ಯವಸ್ಥೆಯಲ್ಲಿನ ಹುಳುಕುಗಳ ಬಗ್ಗೆ ಲೇವಡಿ ಮಾಡುತ್ತಲೇ ಮಾನವೀಯ ಅಂತಃಕರಣಕ್ಕಾಗಿ ಹುಡುಕಾಡುವ ಇವರ ಬರವಣಿಗೆಯಿಂದ ಕೂಡಿದ ಚೊಚ್ಚಲ ಕವನ ಸಂಕಲನ "ಸೂಜಿ ಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು" ಬದಲಾವಣೆ ಬಯಸುವ ಓದುಗರಿಗೆ ಇದೊಂದು ಉತ್ತಮ ಕೃತಿ.

ಪ್ರಕಾಶಕರು : ದ್ರಾವಿಡ ಪಬ್ಲಿಕೇಷನ್ಸ್, C/o ಪ್ರೊ. ಮಾದೇವ ಭರಣಿ ಕನ್ನಡ ವಿಭಾಗ, ಎಂ.ಇ.ಎಸ್. ಕಾಲೇಜ್, ಮಲ್ಲೇಶ್ವರಂ, ಬೆಂಗಳೂರು-560 003

ಅಸ್ಪೃಶ್ಯರು



ಲೇ : ಎಂ. ವೆಂಕಟಸ್ವಾಮಿ ಬೆಲೆ : ರೂ. 70-00

ಅಸಂಖ್ಯ ಜಾತಿಗಳನ್ನು ಸೃಷ್ಟಿಸಿದ್ದೂ ಅಲ್ಲದೆ ಅಸ್ಪೃಶ್ಯತೆಯಂಥ ಕ್ರೂರ ವ್ಯವಸ್ಥೆಯನ್ನು ಪೋಷಿಸುತ್ತಾ ಬರುತ್ತಿರುವುದು ಭಾರತದ ವೈಶಿಷ್ಟ್ಯ. ಅಸ್ಪೃಶ್ಯತೆಯ ಮೂಲವನ್ನು ಹುಡುಕುತ್ತಲೇ ಅದರ ಕಾರಣಗಳನ್ನು ಪರಿಶೀಲಿಸುವ ಪ್ರಯತ್ನದ ಫಲವೇ ಈ ಕೃತಿ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-560 001

ಬೌದ್ಧಧಮ್ಮ ಮತ್ತು ದೇವರ ಕಲ್ಪನೆ

ಪರಸ್ಪರ ಪ್ರೀತಿ-ಗೌರವ, ಶಾಂತಿ-ಸಮಾನತೆ ಮತ್ತು ಶಾಂತಿ ಮುಂತಾದ ಮಾನವೀಯ ಮೌಲ್ಯಗಳ ಪ್ರತೀಕವಾದ ಬೌದ್ಧದಮ್ಮ ಜಗತ್ತಿನೆಲ್ಲೆಡೆ ವ್ಯಾಪಿಸುತ್ತಿರುವ ಈ ಸಂದರ್ಭದಲ್ಲಿ ಅದರ ಮೂಲ ಸ್ವರೂಪ ಮತ್ತು ಆಚರಣೆಗಳನ್ನು ಕುರಿತ ತಿಳುವಳಿಕೆ ಕೂಡ ಅನಿವಾರ್ಯ. ಇದನ್ನು ಮನಗಂಡಿರುವ 'ಸಂವಾದ'ವು ಬುದ್ಧ ಜ್ಯೋತಿ ಪ್ರಕಾಶನ ಪ್ರಕಟಿಸಿರುವ ಪೂಜ್ಯ ಎಸ್. ಧಮ್ಮಿಕರವರ Good Question and Good Answer ಪುಸ್ತಕ ಕನ್ನಡಾನುವಾದವನ್ನು ಓದಿಗರಿಗಾಗಿ ನೀಡುತ್ತಿದೆ. ಅನುವಾದಿಸಿರುವವರು

ಡಾ|| ಪಿ.ವಿ. ನಾರಾಯಣ್

1) ಬೌದ್ಧರು ದೇವರನ್ನು ನಂಬುತ್ತಾರೆಯೇ?

ಇಲ್ಲ, ನಾವು ನಂಬುವುದಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಬುದ್ಧನು, ಆಧುನಿಕ ಕಾಲದ ಸಮಾಜಶಾಸ್ತ್ರಜ್ಞರು ಹಾಗೂ ಮನೋವಿಜ್ಞಾನಿಗಳಂತೆಯೇ, ಮತದ ಮೂಲವು ಭಯದಲ್ಲಿದೆ ಎಂದು ನಂಬಿದ್ದವನು. ಬುದ್ಧ ಹೇಳಿದ್ದೆಂದರೆ :

"ಭಯದಿಂದ ಆವೃತರಾಗಿ ಜನ ಪವಿತ್ರ ಗಿರಿಗಳಿಗೆ, ಪವಿತ್ರ ವನಗಳಿಗೆ, ಪವಿತ್ರ ಮರಗಳಿಗೆ ಹಾಗೂ ಪವಿತ್ರ ಮಂದಿರಗಳಿಗೆ ಶರಣು ಹೋಗುತ್ತಾರೆ"

-ಧಮ್ಮಪದ 188

ಆದಿಮ ಕಾಲದ ಮಾನವನಿಗೆ ಸುತ್ತಲಿನ ಜಗತ್ತು ಅಪಾಯಕಾರಿಯಾಗಿ ಹಾಗೂ ಭಯಂಕರವಾಗಿ ಕಾಣಿಸಿತು. ಕಾಡು ಪ್ರಾಣಿಗಳ ಭಯ, ಸಾಕಷ್ಟು ಆಹಾರ ಕಾಣದ ಸ್ಥಿತಿ, ರೋಗ ಅಥವಾ ಗಾಯಗೊಳ್ಳುವ ಭಯ, ಮಿಂಚು-ಗುಡುಗು-ಜ್ವಾಲಾಮುಖಿಗಳಂತಹ ಪ್ರಕೃತಿವಿಕೋಪಗಳ ಭಯ ಅವನನ್ನು ಸದಾ ಕಾಡುತ್ತಿತ್ತು. ಇವುಗಳಿಂದ ರಕ್ಷಿಸಿಕೊಳ್ಳುವ ಸಾಧನಗಳನ್ನು ಕಾಣದೆ, ಒಳ್ಳೆಯ ಕಾಲದಲ್ಲಿ ಸುಖ ನೀಡುವುದಕ್ಕಾಗಿ ಮತ್ತು ಅಪಾಯದಲ್ಲಿ ಧೈರ್ಯ ನೀಡುವುದಕ್ಕಾಗಿ ಹಾಗೂ ಲೆಕ್ಕಾಚಾರ ತಲೆಕೆಳಗಾದಾಗ ಸಮಾಧಾನಕ್ಕಾಗಿ ಅವನು ದೇವರ ಕಲ್ಪನೆಯನ್ನು ಮಾಡಿಕೊಂಡ. ಈಗಲೂ ಕಷ್ಟ ಕಾಲದಲ್ಲಿ ಜನ ಹೆಚ್ಚು ಧಾರ್ಮಿಕತೆಯನ್ನು ತೋರಿಸುವುದನ್ನು ಕಾಣಬಹುದು. ಬದುಕನ್ನು ಎದುರಿಸುವುದಕ್ಕೆ ಬೇಕಾದ ಶಕ್ತಿಯು ದೇವರು ಅಥವಾ ದೇವತೆಗಳಲ್ಲಿ ಇಟ್ಟ ಭಕ್ತಿಯಿಂದ ದೊರೆಯುವುದೆಂದು ಜನರು ಹೇಳಿರುವುದನ್ನು ಕೇಳಿರಬಹುದು. ಯಾವುದೋ ಕಷ್ಟ ಕಾಲದಲ್ಲಿ ತಾನು ನಂಬಿದ ದೇವರಲ್ಲಿ ಮಾಡಿಕೊಂಡ ಪ್ರಾರ್ಥನೆಯಿಂದ ಆ ಕಷ್ಟ ನಿವಾರಣೆಗೊಂಡಿತೆಂದು ಹಲವರು ಹೇಳುವುದನ್ನು ಕೇಳಿರಬಹುದು. ದೇವರ ಕಲ್ಪನೆಯು ಭಯ-ಹತಾಶೆಗಳ ಕಾರಣದಿಂದ ಸೃಷ್ಟಿಯಾದುದೆಂಬ ಬುದ್ಧನ ಹೇಳಿಕೆಯನ್ನು ಇವೆಲ್ಲ ಸಮರ್ಥಿಸುತ್ತವೆ. ನಮ್ಮ ಭಯಗಳ ಕಾರಣವೇನೆಂದು ತಿಳಿದುಕೊಳ್ಳುವಂತೆ, ನಮ್ಮ ಆಸೆಗಳನ್ನು ಕಡಿಮೆ ಮಾಡಿಕೊಳ್ಳುವಂತೆ ಹಾಗೂ ಧೈರ್ಯದಿಂದ ಬದಲಾಯಿಸಲಾಗದ್ದನ್ನು ಎದುರಿಸುವಂತೆ ಬುದ್ಧನು ಉಪದೇಶಿಸಿದ. ಭಯ ನಿವಾರಣೆಗೆ ಆತ ಸೂಚಿಸಿದ ಪರಿಹಾರವೆಂದರೆ, ಕುರುಡು ನಂಬಿಕೆಯಲ್ಲ. ತಾರ್ಕಿಕ ತಿಳಿವಳಿಕೆ.

ಬುದ್ಧನು ದೇವರಲ್ಲಿ ನಂಬಿಕೆ ಹೊಂದಿರದ್ದಕ್ಕೆ ಎರಡನೆಯ ಕಾರಣ, ಅದರ ಅಸ್ತಿತ್ವವನ್ನು ಸಮರ್ಥಿಸುವ ಯಾವುದೇ ಆಧಾರ ಇರುವಂತೆ ತೋರದಿರುವುದು. ದೇವರ ವಾಕ್ಯಗಳು ತಮ್ಮ ಧಾರ್ಮಿಕ ಗ್ರಂಥಗಳಲ್ಲಿ ಮಾತ್ರ ಹುದುಗಿವೆ. ಹಾಗಾಗಿ ದೇವರ ಸ್ವರೂಪವನ್ನು ತಿಳಿದುಕೊಳ್ಳುವುದು ತಮಗೆ ಮಾತ್ರ ಸಾಧ್ಯ, ಮತ್ತು ತಮ್ಮ ದೇವರು ಮಾತ್ರ ಅಸ್ತಿತ್ವದಲ್ಲಿರುವನೇ ಹೊರತು ಉಳಿದ ಧರ್ಮಗಳವಲ್ಲ ಎಂದೇ ಬಹುತೇಕ ಧರ್ಮಗಳು ಘೋಷಿಸಿಕೊಳ್ಳುವುದು. ಕೆಲವರ ಪ್ರಕಾರ ದೇವರು ಗಂಡಾದರೆ, ಮತ್ತೆ ಕೆಲವರ ಪ್ರಕಾರ ಹೆಣ್ಣು, ಮತ್ತೂ ಕೆಲವರ ಪ್ರಕಾರ ದೇವರು ಲಿಂಗರಹಿತ. ತಮ್ಮ ದೇವರು ಇರುವುದರ ಬಗ್ಗೆ ಸಾಕಷ್ಟು ಆಧಾರಗಳಿವೆಯೆಂದು ಅವರು ನಂಬುವುದಲ್ಲದೆ, ಇತರ ಮತಗಳ ಜನರು ಅವರ ದೇವರ ಅಸ್ತಿತ್ವವನ್ನು ಸಾಬೀತು ಮಾಡಲು ಕೊಡುವ ಆಧಾರಗಳ ಬಗ್ಗೆ ಅಪನಂಬಿಕೆಯಿಂದ ಹಾಸ್ಯ ಮಾಡುತ್ತಾರೆ. ಇಷ್ಟೊಂದು ಧರ್ಮಗಳು ಅನೇಕ ಶತಮಾನಗಳಿಂದ ತಮ್ಮ ದೇವರ ಅಸ್ತಿತ್ವವನ್ನು ಸಾಬೀತುಗೊಳಿಸುವ ಪ್ರಯತ್ನಗಳನ್ನು ಮಾಡುತ್ತಿದ್ದರೂ, ಇದುವರೆಗೆ ನಿಜವಾದ, ಗಟ್ಟಿಯಾದ ಹಾಗೂ ವಿವಾದಾತೀತವಾದ ಆಧಾರಗಳನ್ನು ಕೊಡಲು ಅವಕ್ಕೆ ಸಾಧ್ಯವಾಗಿಲ್ಲ. ಅಂಥ ಆಧಾರ ದೊರೆಯುವವರೆಗೂ ಬೌದ್ಧರು ತಮ್ಮ ತೀರ್ಪನ್ನು ನೀಡಲಾರರು.

ದೇವರ ಅಸ್ತಿತ್ವದಲ್ಲಿ ಬುದ್ಧನು ನಂಬಿಕೆಯನ್ನಿಡದಿರಲು ಮೂರನೆಯ ಕಾರಣವೆಂದರೆ, ನಂಬಿಕೆ ಅನವಶ್ಯಕ ಎಂಬುದಕ್ಕಾಗಿ. ವಿಶ್ವದ ಮೂಲವನ್ನು ವಿವರಿಸಲು ದೇವರಲ್ಲಿ ನಂಬಿಕೆ ಅವಶ್ಯಕ ಎಂದು ಕೆಲವರು ವಾದಿಸುತ್ತಾರೆ. ಆದರೆ ಇದು ಸರಿಯಲ್ಲ. ದೇವರ ಕಲ್ಪನೆಯ ನೆರವಿಲ್ಲದೆಯೇ ವಿಶ್ವದ ಮೂಲದ ಬಗ್ಗೆ ವಿಜ್ಞಾನವು ಮನವರಿಕೆಯಾಗುವಂಥ ವಿವರಣೆ ನೀಡಿದೆ. ಸಂತೋಷಭರಿತವೂ ಅರ್ಥಪೂರ್ಣವೂ ಆದ ಬದುಕಿಗೆ ದೇವರಲ್ಲಿನ ನಂಬಿಕೆಯು ಆವಶ್ಯಕವೆಂದು ಕೆಲವರು ಭಾವಿಸುತ್ತಾರೆ. ಇದೂ ಸರಿಯಲ್ಲವೆಂಬುದು ತಿಳಿಯುತ್ತದೆ. ಸಾಕಷ್ಟು ಸಂಖ್ಯೆಯ ಬೌದ್ಧರ ಹೊರತಾಗಿಯೂ, ಲಕ್ಷಾಂತರ ನಾಸ್ತಿಕರೂ ಮುಕ್ತಚಿಂತಕರೂ ಇದ್ದಾರಲ್ಲ, ಅವರು ದೇವರನ್ನು ನಂಬದೆಯೇ ಉಪಯುಕ್ತವೂ ಸಂತೋಷಭರಿತವೂ ಅರ್ಥಪೂರ್ಣವೂ ಆದ ಬದುಕನ್ನು ನಡೆಸುತ್ತಿದ್ದಾರಲ್ಲ. ದುರ್ಬಲನಾದ್ದರಿಂದಾಗಿ, ತನ್ನ ಪಾಡನ್ನು ತಾನು ನೋಡಿಕೊಳ್ಳುವ ಶಕ್ತಿ ಮಾನವನಿಗಿಲ್ಲ. ಆದ್ದರಿಂದ ದೇವರ ನಂಬಿಕೆ ಆವಶ್ಯಕ ಎಂಬುದು ಕೆಲವರ ವಾದ. ಮತ್ತೆ, ಇದರ ವಿರುದ್ಧವಾದುದಕ್ಕೆ ಆಧಾರಗಳಿವೆ. ಹಲವಾರು ಮಂದಿ ತಮ್ಮ ನ್ಯೂನತೆಗಳನ್ನೂ ಅರೆಕೊರೆಗಳನ್ನೂ ಮಹಾ ಕಷ್ಟಗಳನ್ನೂ ತೊಂದರೆಗಳನ್ನೂ ತಮ್ಮ ಆಂತರಿಕ ಶಕ್ತಿಯಿಂದಲೇ, ತಮ್ಮ ಪ್ರಯತ್ನಗಳಿಂದಲೇ ದೇವರಲ್ಲಿ ನಂಬಿಕೆಯಿಡದೇ ನಿವಾರಣೆ ಮಾಡಿಕೊಂಡಿದ್ದರ ಬಗ್ಗೆ ನಾವು ಕೇಳಿದ್ದೇವಲ್ಲವೇ? ಮನುಷ್ಯನ ಮುಕ್ತಿಗಾಗಿ ದೇವರು ಬೇಕು ಎಂದು ಮತ್ತೆ ಕೆಲವರು ಹೇಳುತ್ತಾರೆ. ಧಾರ್ಮಿಕ ಪರಿಕಲ್ಪನೆಯ ಮೋಕ್ಷ ಸಾಧನೆಯು ವಿಷಯದಲ್ಲಿ ಮಾತ್ರ ಈ ವಾದ ಸುಸಂಬದ್ಧವಾಗುತ್ತದೆ. ಆದರೆ ಬೌದ್ಧಧರ್ಮವು ಇಂಥ ಪರಿಕಲ್ಪನೆಯನ್ನು ಒಪ್ಪುವುದಿಲ್ಲ. ತನ್ನ ಅನುಭವವನ್ನು ಆಧರಿಸಿ ಬುದ್ಧನು ಸಾರಿದ್ದೆಂದರೆ, ಪ್ರತಿ ವ್ಯಕ್ತಿಯೂ ತನ್ನ ಮನಸ್ಸನ್ನು ಪರಿಶುದ್ಧಿಗೊಳಿಸಿಕೊಳ್ಳುವ, ಅಸೀಮ ಪ್ರೀತಿ-ಸಹಾನುಭೂತಿಗಳನ್ನು ಬೆಳೆಸಿಕೊಳ್ಳುವ, ಪರಿಪೂರ್ಣ ಜ್ಞಾನವನ್ನು ಪಡೆಯುವ ಸಾಮರ್ಥ್ಯ ಪಡೆದಿದ್ದಾನೆ ಎಂದು. ಆತ ಗಮನವನ್ನು ದೇವಲೋಕದಿಂದ ನಮ್ಮ ಹೃದಯದ ಕಡೆಗೆ ತಿರುಗಿಸುತ್ತಾನೆ ಮತ್ತು ನಮ್ಮೆಲ್ಲ ಸಮಸ್ಯೆಗಳಿಗೆ ಸ್ವಯಂಜ್ಞಾನದ ಮೂಲಕ ಪರಿಹಾರ ಕಂಡುಕೊಳ್ಳಲು ಪ್ರೋತ್ಸಾಹಿಸುತ್ತಾನೆ.

2) ದೇವಾನುದೇವತೆಗಳಿಲ್ಲದಿದ್ದರೆ ಈ ವಿಶ್ವವು ಅಸ್ತಿತ್ವಕ್ಕೆ ಬಂದುದಾದರು ಹೇಗೆ?

ಈ ಪ್ರಶ್ನೆಗೆ ಕೊಡಲು ಎಲ್ಲ ಮತಗಳೂ ಪುರಾಣ-ಕತೆಗಳನ್ನು ಅವಲಂಬಿಸುತ್ತವೆ. ಮನುಷ್ಯನಿಗೆ ತಿಳಿವಳಿಕೆಯಿರದಿದ್ದ ಪ್ರಾಚೀನ ಕಾಲದಲ್ಲಿ ಇಂತಹ ಪುರಾಣಕತೆಗಳು ಸಾಕಾಗುತ್ತಿದ್ದವು. ಆದರೆ ಭೌತಶಾಸ್ತ್ರ, ಖಗೋಳವಿಜ್ಞಾನ ಮತ್ತು ಭೂಗರ್ಭಶಾಸ್ತ್ರಗಳಿರುವ 20ನೆಯ ಶತಮಾನದಲ್ಲಿ ಈ ಪೌರಾಣಿಕತೆಯನ್ನು ವೈಜ್ಞಾನಿಕ ವಿವರಣೆಗಳು ತೊಡೆದು ಹಾಕಿವೆ. ದೇವರ ಕಲ್ಪನೆಯ ನೆರವಿಲ್ಲದೆಯೇ ವಿಜ್ಞಾನವು ವಿಶ್ವದ ಮೂಲದ ಬಗ್ಗೆ ವಿವರಣೆ ನೀಡಿದೆ.

3) ಬುದ್ಧನ ಪ್ರಕಾರ ವಿಶ್ವ ಅಸ್ತಿತ್ವಕ್ಕೆ ಬಂದುದು ಹೇಗೆ?

ಈ ವಿಷಯದ ಬಗ್ಗೆ ಬುದ್ಧ ವ್ಯಕ್ತಪಡಿಸಿದ ಅಭಿಪ್ರಾಯಗಳು ವಿಜ್ಞಾನದ ವಿವರಣೆಗೆ ತೀರ ಸಮೀಪವಾಗಿದೆ ಎಂಬುದು ತುಂಬ ಕುತೂಹಲದ ಸಂಗತಿ. ವಿಶ್ವವು ನಾಶಗೊಂಡು ಈಗಿರುವ ಸ್ವರೂಪವನ್ನು ಮರಳಿ ಪಡೆಯಲು ಅಸಂಖ್ಯಾತ ವರ್ಷಗಳು ಹಿಡಿಸಿವೆ ಎಂದು ಬುದ್ಧ ಆಗನ್ನ ಸುತ್ತದಲ್ಲಿ ವರ್ಣಿಸುತ್ತಾನೆ. ಜೀವವು ಮೊದಲು ಕಾಣಿಸಿಕೊಂಡದ್ದು ನೀರಿನ ಮೇಲೆ. ಆನಂತರ ಅಸಂಖ್ಯಾತ ವರ್ಷಗಳಲ್ಲಿ ಸರಳ ಜೀವ ಸ್ವರೂಪವು ಸಂಕೀರ್ಣ ರೂಪಗಳಾಗಿ ವಿಕಾಸಗೊಂಡವು. ಈ ಯಾವ ಪ್ರಕ್ರಿಯೆಗೂ ಆದಿಯಾಗಲೀ ಅಂತ್ಯವಾಗಲೀ ಇಲ್ಲ; ಅಲ್ಲದೆ, ಎಲ್ಲವೂ ಪ್ರಕೃತಿ ನಿಯಮಗಳಿಂದ ಮುಂದುವರಿಯುತ್ತಿವೆ.

4) ದೇವರ ಅಸ್ತಿತ್ವವನ್ನು ತೋರಿಸಲು ಯಾವುದೇ ಆಧಾರವಿಲ್ಲವೆಂದು ಹೇಳಿದಿರಿ. ಆದರೆ ಪವಾಡಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಪವಾಡಗಳು ದೇವರ ಅಸ್ತಿತ್ವಕ್ಕೆ ಇರುವ ಆಧಾರಗಳು ಎಂದು ಹಲವರು ಭಾವಿಸುತ್ತಾರೆ. ಯಾವುದೋ ರೋಗ ವಾಸಿಯಾಯಿತೆಂದು ಹೇಳಿಕೊಳ್ಳುವುದನ್ನು ಕೇಳುತ್ತೇವೆಯೇ ಹೊರತು, ಅದಕ್ಕೆ ವೈದ್ಯರ ದೃಢೀಕರಣ ಇರುವುದಿಲ್ಲ. ಮತ್ತಾರೋ ಸಂಕಷ್ಟದಿಂದ ಪಾರಾದರೆಂದು ಮತ್ತೊಬ್ಬರಿಂದ ಕೇಳುತ್ತೇವೆ, ಆದರೆ ನಡೆದುದು ಏನು ಎಂಬ ಬಗ್ಗೆ ಪ್ರತ್ಯಕ್ಷವಾಗಿ ನೋಡಿದವರನ್ನು ನಾವು ಕಾಣೆವು. ಪ್ರಾರ್ಥನೆಯಿಂದಾಗಿ ಯಾರದೋ ರೋಗ ವಾಸಿಯಾಯಿತೆಂದೋ ಅಥವಾ ದೇಹ ಪುಷ್ಟಿಗೊಂಡಿತೆಂದೋ ಕೇಳುತ್ತೇವೆ ಆದರೆ ಇವುಗಳನ್ನು ಪೃಥಕ್ಕರಿಸುವ ಎಕ್ಸ್‌ರೇ ಮುಂತಾದ ವೈದ್ಯಕೀಯ ಪ್ರಮಾಣಗಳನ್ನು ನಾವು ನೋಡುವುದಿಲ್ಲ ಇಂಥ ಹೇಳಿಕೆಗಳು, ವದಂತಿಗಳು ಹಾಗೂ ಐತಿಹ್ಯಗಳು ಗಟ್ಟಿಯಾದ ಆಧಾರಗಳಾಗಲಾರವು. ಪವಾಡಗಳ ಬಗೆಗಿನ ಆಧಾರಗಳು ಅತ್ಯಂತ ಅಪರೂಪ. ಕೆಲವು ವೇಳೆ ನಾವು ವಿವರಿಸಲಾಗದ ಸಂಗತಿಗಳೂ ಅನಿರೀಕ್ಷಿತ ಘಟನೆಗಳು ಜರುಗುವುದು ನಿಜ. ಆದರೆ ವಿವರಣೆ ನೀಡಲು ನಮಗೆ ಸಾಧ್ಯವಿಲ್ಲವೆಂಬುದೇ ದೇವರ ಅಸ್ತಿತ್ವಕ್ಕೆ ಆಧಾರವಾಗಲಾರದು. ನಮ್ಮ ತಿಳಿವಳಿಕೆ ಇನ್ನೂ ಅಪರಿಪೂರ್ಣ ಎಂಬುದನ್ನಷ್ಟೇ ಇದು ಸೂಚಿಸುತ್ತದೆ. ಆಧುನಿಕ ವೈದ್ಯವಿಜ್ಞಾನವಿನ್ನೂ ಬಾರದೆ, ರೋಗಗಳಿಗೆ ಕಾರಣ ತಿಳಿಯದಿದ್ದ ಕಾಲದಲ್ಲಿ ಜನ ರೋಗಗಳೆಂದರೆ ತಮ್ಮ ತಪ್ಪಿಗಾಗಿ ದೇವತೆಗಳು ಕೊಟ್ಟ ಶಿಕ್ಷೆ ಎಂದು ನಂಬುತ್ತಿದ್ದರು. ಈಗ ನಮಗೆ ಅವುಗಳ ಕಾರಣ ತಿಳಿದಿವೆ. ಅದಕ್ಕಾಗಿಯೇ ರೋಗಗಳಿಗೆ ಔಷಧಿಯನ್ನು ತೆಗೆದುಕೊಳ್ಳುತ್ತೇವೆ. ಸೃಷ್ಟಿಯ ಬಗೆಗಿನ ನಮ್ಮ ಜ್ಞಾನ ಇನ್ನಷ್ಟು ಪರಿಪೂರ್ಣಗೊಂಡ ಮೇಲೆ, ಈಗ ನಾವು ವಿವರಿಸಲಾಗದ ವಿಷಯಗಳನ್ನು ವಿವರಿಸುವ ಸ್ಥಿತಿಯಲ್ಲಿರುತ್ತೇವೆ. ರೋಗಗಳ ಕಾರಣವನ್ನು ನಾವೀಗ ತಿಳಿದಿದ್ದೇವಲ್ಲ, ಹಾಗೆ.

5) ಬಹಳ ಜನ ಒಂದಲ್ಲ ಒಂದು ಬಗೆಯ ದೇವರನ್ನು ನಂಬುವುದರಿಂದ, ದೇವರು ನಿಜವಾಗಿರಬಹುದಲ್ಲ?

ಅದು ಹಾಗಲ್ಲ, ಭೂಮಿ ಚಪ್ಪಟೆಯಾಗಿದೆಯೆಂದು ಒಂದು ಕಾಲದಲ್ಲಿ ಜನರೆಲ್ಲ ನಂಬಿದ್ದರು. ಆದರೆ ಅವರೆಲ್ಲರ ತಿಳಿವಳಿಕೆ ತಪ್ಪಾಗಿತ್ತು. ಯಾವುದಾದರೊಂದು ಭಾವನೆಯು ಸತ್ಯವೋ ಸುಳ್ಳೋ ಎಂದು ನಿರ್ಧರಿಸುವುದಕ್ಕೆ ನಂಬುವವರ ಸಂಖ್ಯೆ ಆಧಾರವಾಗಲಾರದು. ಒಂದು ವಿಷಯವು ನಿಜವೋ ಸುಳ್ಳೋ ಎಂದು ನಿರ್ಧರಿಸಲು ನಾವು ಅನುಸರಿಸಬೇಕಾದ ಒಂದೇ ಮಾರ್ಗವೆಂದರೆ ಆ ವಿಷಯಕ್ಕೆ ಸಂಬಂಧಿಸಿದ ವಸ್ತುಸ್ಥಿತಿಗಳನ್ನು ಪರಿಶೀಲಿಸುವುದು ಹಾಗೂ ಪರೀಕ್ಷೆಗೊಳಪಡಿಸುವುದು.

6) ಬೌದ್ಧರು ದೇವರನ್ನು ನಂಬದಿದ್ದರೆ ಮತ್ತೇನನ್ನು ನಂಬುತ್ತಾರೆ?

ಮನುಷ್ಯನಲ್ಲಿ ನಂಬಿಕೆಯಿರುವುದರಿಂದಾಗಿ ನಾವು ದೇವರನ್ನು ನಂಬುವುದಿಲ್ಲ. ಪ್ರತಿ ವ್ಯಕ್ತಿಯೂ ಅಮೂಲ್ಯ ಹಾಗೂ ಮುಖ್ಯ, ಪ್ರತಿಯೊಬ್ಬನೂ ಬುದ್ಧನಾಗಲು-ಎಂದರೆ ಪರಿಪೂರ್ಣ ಮಾನವನಾಗಿ ವಿಕಾಸಗೊಳ್ಳಲು-ಸಾಧ್ಯವಿದೆ ಎಂದು ನಾವು ಭಾವಿಸುತ್ತೇವೆ. ಮನುಷ್ಯರು ಅಜ್ಞಾನ ಮತ್ತು ಅತಾರ್ಕಿಕತೆಯನ್ನು ಮೀರಬಲ್ಲರು, ವಸ್ತುಸ್ಥಿತಿಗಳನ್ನು ಯಥಾವತ್ತಾಗಿ ಕಾಣಬಲ್ಲರು ಎಂಬುದು ನಮ್ಮ ನಂಬಿಕೆ. ದ್ವೇಷ, ಕೋಪ, ತಿರಸ್ಕಾರ ಮತ್ತು ಮಾತ್ಸರ್ಯಗಳ ಬದಲು ಪ್ರೇಮ, ಸಹನೆ, ಔದಾರ್ಯ ಹಾಗೂ ಸಹಾನುಭೂತಿಗಳನ್ನು ಬೆಳೆಸಿಕೊಳ್ಳಬಹುದು ಎಂಬುದು ನಮ್ಮ ಅಚಲ ನಂಬಿಕೆ. ಇವೆಲ್ಲವೂ ಪ್ರತಿ ವ್ಯಕ್ತಿಯ ಅಳವಿನಲ್ಲಿಯೇ ಇದೆ. ಸ್ವಪ್ರಯತ್ನ, ಸಹಬೌದ್ಧರ ಮಾರ್ಗದರ್ಶನ ಹಾಗೂ ಬೆಂಬಲ ಹಾಗೂ ಬುದ್ಧನ ಸ್ಫೂರ್ತಿಗಳಿಂದ ಇದನ್ನು ಸಾಧಿಸಿಕೊಳ್ಳಬಹುದು. ಬುದ್ಧ ಹೇಳಿದ್ದೆಂದರೆ :

"ನಮ್ಮನ್ನು ನಮ್ಮ ಹೊರತು ಬೇರಾರು ಕಾಪಾಡಲಾರರು
ಬೇರಾರು ಕಾಪಾಡಲಾರರು, ಕಾಪಾಡುವುದಿಲ್ಲ
ನಾವೇ ದಾರಿಯನ್ನು ತುಳಿಯಬೇಕು
ಆದರೆ ಬುದ್ಧರು ದಾರಿಯನ್ನು ತೋರಿಸಬಲ್ಲರು"

-ಧಮ್ಮಪದ 165

ಪುಸ್ತಕ ಬೇಕಾದಲ್ಲಿ

ಬುದ್ಧ ಜ್ಯೋತಿ ಪ್ರಕಾಶನ
ನೆರೆಗ್ಯಾತನಹಳ್ಳಿ, ಟಿ. ನರಸೀಪುರ ತಾಲ್ಲೂಕು
ಮೈಸೂರು ಜಿಲ್ಲೆ
ಇವರಿಗೆ ಬರೆದು ತರಿಸಿಕೊಳ್ಳಬಹುದು.
ಬೆಲೆ ರೂ. 30/-

ಸೃಜನಾತ್ಮಕ ಹಾಗೂ ವೈಚಾರಿಕ
ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ
ಸಂವಾದ
ಆಹ್ವಾನಿಸುತ್ತದೆ.



ಪ್ರಕಾಶಕರು/ಲೇಖಕರು ಪ್ರಕಟಿತ ಕೃತಿಯ 2 ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ, ಬೆಂಗಳೂರು - 560 091
ದೂರವಾಣಿ : 3287943 / 3281667

'SAMVADA' Kannada Monthly SEPTEMBER - 2003 RNI-KAR KAN/2002/9246 CPMG/KA/BGW-706/2003-05

ಸಾಹಿತ್ಯ ಅಕಾದೆಮಿ

ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001

ಕನ್ನಡ ಪ್ರಕಟಣೆಗಳು

ಕಾದಂಬರಿಗಳು

1) ಕಾಡಿನ ದಾವೇದಾರ ರೂ. 150/-
(ಬಂಗಾಳಿ ಮೂಲ : ಮಹಾಶ್ವೇತಾ ದೇವಿ, ಅನುವಾದ : ಜಿ. ಕುಮಾರಪ್ಪ)

2) ಉಮರಾವ್ ಜಾನ್ ಅದಾ ರೂ. 100/-
(ಉರ್ದು ಮೂಲ : ಮಿರ್ಜಾ ರುಸ್ವಾ, ಅನುವಾದ : ಶಾಂತರಸ)

3) ಹಾವಿನ ಡೊಂಕು ರೂ. 50/-
(ಸ್ವೀಡಿಷ್ ಮೂಲ : ಟೋರ್‌ಗ್ನಿ ಲಿಂಡ್‌ಗ್ರೆಯನ್)
ಅನುವಾದ : ವನಮಾಲಾ ವಿಶ್ವನಾಥ್, ಹಾನ್ಸ್ ಉ ಹೊಮ್‌ಸ್ರಮ್)

4) ಕಾರ್ಮೆಲೀನ ರೂ. 100/-
(ಕೊಂಕಣಿ ಮೂಲ : ದಾಮೋದರ ಮಾವಜೊ, ಅನುವಾದ : ಶಾ.ಮಂ. ಕೃಷ್ಣರಾಯ)

ಕಥೆಗಳು

1) ಕೊಂಕಣಿ ಕಥಾ ಸಂಗ್ರಹ ರೂ. 125/-
(ಸಂಪಾದಕ : ಚಂದ್ರಕಾಂತ ಶ್ರೇಣಿ, ಅನುವಾದ : ಶಾ.ಮಂ. ಕೃಷ್ಣರಾಯ)

2) ಒಂದು ಪೀಳಿಗೆಯ ತೆಲುಗು ಕಥೆಗಳು ರೂ. 150/-
(ಸಂಪಾದಕ : ಡಿ. ರಾಮಲಿಂಗಂ, ಅನುವಾದ : ಕುಂ. ವೀರಭದ್ರಪ್ಪ)

3) ಕೃಷ್ಣನ್ ಚಂದರ್ ಆಯ್ದ ಸಣ್ಣ ಕಥೆಗಳು ರೂ. 150/-
(ಸಂಪಾದಕ : ಗೋಪಿ ಚಂದ್ ನಾರಂಗ್, ಅನುವಾದ : ಡಿ.ಎ. ಶಂಕರ್)

4) ಮಧುರಾಂತಕಂ ರಾಜಾರಾಂ ಕಥೆಗಳು ರೂ. 150/-
(ತೆಲುಗು ಮೂಲ : ಮಧುರಾಂತಕಂ ರಾಜಾರಾಂ
ಅನುವಾದ : ಲಕ್ಷ್ಮೀಪತಿ, ಕೋಲಾರ)

5) ದಕ್ಷಿಣ ಕಾಮರೂಪದ ಒಂದು ಕಥಾನಕ ರೂ. 180/-
(ಅಸ್ಸಾಮಿ ಮೂಲ : ಇಂದಿರಾ ಗೋಸ್ವಾಮಿ,
ಅನುವಾದ : ಆರ್.ಎಲ್. ಅನಂತರಾಮಯ್ಯ)

ನಾಟಕಗಳು

1) ಯಕ್ಕೃತ್ತು ರೂ. 50/-
(ಮರಾಠಿ ಮೂಲ : ಶ್ಯಾಮ ಮನೋಹರ, ಅನುವಾದ : ವೀಣಾ ಶಾಂತೇಶ್ವರ)

2) ರವೀಂದ್ರನಾಥ್ ಟಾಗೋರ್ : ಎರಡು ನಾಟಕಗಳು ರೂ. 50/-
(ಬಂಗಾಳಿ ಮೂಲ : ರವೀಂದ್ರನಾಥ್ ಟಾಗೋರ್,
ಅನುವಾದ : ಶ್ರೀನಿವಾಸ್ ವಿ. ಸುತ್ರಾವೆ)

ಕಾವ್ಯ

1) ಆಡು ಹಾವೇ ರೂ. 80/-
(ತಮಿಳು ಮೂಲ : ಡಾ. ಕಾರ್ಲೋಸ್, ಅನುವಾದ : ಡಾ. ಬಸವರಾಜ ಕಲ್ಗುಡಿ)

2) ಶ್ರೀರಾಧಾ ರೂ. 60/-
(ಒಡಿಯಾ ಮೂಲ : ಶ್ರೀ ರಮಾಕಾಂತ ರಥ, ಅನುವಾದ : ಸಂಧ್ಯಾ ಎಸ್)

3) ಶ್ರೀ ಬಸವಣ್ಣನವರ ವಚನ ಸಂಗ್ರಹ ರೂ. 65/-
(ಸಂಪಾದಕ : ಸ.ಸ. ಮಾಳವಾಡ)

4) ಎರಡು ದಶಕದ ಕವಿತೆ ರೂ. 65/-
(ಸಂಪಾದಕ : ಜಿ.ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ)

5) ತೆಲುಗು ಕಾವ್ಯಮಾಲೆ ರೂ. 125/-
(ಸಂಪಾದಕ, ದೇವುಲಪಲ್ಲಿ ರಾಮಾನುಜರಾವ್
ಅನುವಾದ : ಗುರುಮೂರ್ತಿ ಪೆಂಡಕೂರು)

ಭಾರತೀಯ ಸಾಹಿತ್ಯ ನಿರ್ಮಾಪಕರು

1) ಗೊರೂರು ರಾಮಸ್ವಾಮಿ ಅಯ್ಯಂಗಾರ್ ರೂ. 25/-
(ಲೇಖಕರು : ಸಿ.ಜಿ. ವೆಂಕಟಯ್ಯ)

2) ಶಂಬಾ ಜೋಶಿ ರೂ. 25/-
(ಲೇಖಕರು : ಮಲ್ಲೇಪುರಂ ಜಿ. ವೆಂಕಟೇಶ್)

3) ಭೀಮಾಜಿಯಿ ರೂ. 25/-
(ಲೇಖಕರು : ಸೀತಾಕಾಂತ ಮಹಾಪಾತ್ರ, ಅನುವಾದ : ಶ್ರೀಧರ ಪಿಸ್ಸೆ)

4) ಮೋಹನ್ ರಾಕೇಶ್ ರೂ. 25/-
(ಲೇಖಕರು : ಪ್ರತಿಭಾ ಅಗರ್‌ವಾಲ್, ಅನುವಾದ : ಎಸ್. ಜಿ. ಶ್ರೀಮತಿ)

5) ಚಿಲಕಮುರ್ತಿ ಲಕ್ಷ್ಮಿನರಸಿಂಹಮ್ ರೂ. 25/-
(ಲೇಖಕರು : ವಿ.ವಿ. ಎಲ್. ನರಸಿಂಹರಾವ್, ಅನುವಾದ : ಕೆ. ಮರುಳಸಿದ್ದಪ್ಪ)

6) ಅನ್ನಮಾಚಾರ್ಯ ರೂ. 25/-
(ಲೇಖಕರು : ಅಡಪ ರಾಮಕೃಷ್ಣರಾವ್, ಅನುವಾದ : ಭಾಗ್ಯಲಕ್ಷ್ಮಿ ಪದಕಿ)

7) ಶಾಂತಿನಾಥ ದೇಸಾಯಿ ರೂ. 25/-
(ಲೇಖಕರು : ಜಿ.ಎಸ್. ಆಮೂರ್)

8) ಎಂ.ಎಸ್. ಪುಟ್ಟಣ್ಣ ರೂ. 25/-
(ಲೇಖಕರು : ಎಸ್.ಎಸ್. ಸುಜಾತ)

9) ದೇವುಡು ರೂ. 25/-
(ಲೇಖಕರು : ಡಾ. ಸಿ.ಎಸ್. ಶಿವಕುಮಾರಸ್ವಾಮಿ (ಕುಮಾರಚಲ್ಯ)

10) ಕುಮಾರವ್ಯಾಸ ರೂ. 25/-
(ಲೇಖಕರು : ಕೀರ್ತಿನಾಥ ಕುರ್ತಕೋಟಿ)

11) ಸಂ.ಶಿ. ಭೂಸನೂರಮಠ ರೂ. 25/-
(ಲೇಖಕರು : ಶಾಂತಾ ಇಮ್ರಾಪೂರ)

12) ಸೇಡಿಮಾಪು ಕೃಷ್ಣಭಟ್ಟ ರೂ. 25/-
(ಲೇಖಕರು : ಎಂ. ರಾಮಚಂದ್ರ)

13) ಅಭಿನವಗುಪ್ತ ರೂ. 75/-
(ಲೇಖಕರು : ಜಿ.ಟಿ. ದೇಶಪಾಂಡೆ, ಅನುವಾದ : ಎನ್. ಬಾಲಸುಬ್ರಹ್ಮಣ್ಯ)

ಇತರೆ

1) ಮಂದಾರ ರಾಮಾಯಣ ರೂ. 150/-
(ತುಳು ಮೂಲ : ಮಂದಾರ ಕೇಶವಭಟ್ಟ)

2) ಕಲಾಪೂರ್ಣೋದಯ ರೂ. 100/-
(ಅನುವಾದ : ಆರ್. ಶೇಷಶಾಸ್ತ್ರಿ, ಜೆ. ಸದಾನಂದಂ)

3) ನನ್ನ ಜೀವಾವಧಿಯ ಶಿಕ್ಷೆ ರೂ. 200/-
(ಮರಾಠಿ ಮೂಲ : ವಿನಾಯಕ ದಾಮೋದರ ಸಾವರಕರ
ಅನುವಾದ : ವಿರೂಪಾಕ್ಷ ಕುಲಕರ್ಣಿ)

4) ವನದೇವತೆ ರೂ. 25/-
(ಲೇಖಕರು : 'ಕಲ್ಕಿ' ಗೋಪಾಲಕೃಷ್ಣನ್, ಅನುವಾದ : ಎ. ಚಂದ್ರಮ್ಮ)

ಪ್ರತಿಗಳು ಹಾಗೂ ವಿವರಕ್ಕಾಗಿ ಸಂಪರ್ಕಿಸಿ :

ಸಾಹಿತ್ಯ ಅಕಾದೆಮಿ

ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001
ದೂರವಾಣಿ : 2245152